ಭಾನುವಾರ, ಸೆಪ್ಟೆಂಬರ್ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 259 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಏನಿದು ಮೂನ್ ಲೈಟಿಂಗ್? ಯಾಕಿದರ ಬಗ್ಗೆ ಇಷ್ಟೊಂದು ಚರ್ಚೆ?

ರೈಲ್ವೆ ಇ–ಟಿಕೆಟ್ ಅಕ್ರಮ ಜಾಲ: ಪಾಕ್ ನಂಟು? 5
ಕೇಕ್ ಕತ್ತರಿಸಿ ಆಚರಣೆ, ಅಂಗವಿಕಲರಿಗೆ ಗಾಲಿಕುರ್ಚಿ ವಿತರಣೆ, ರಕ್ತದಾನ ಶಿಬಿರ
ಕುವೆಂಪು ವಿ.ವಿ: ಚಕ್ರತೀರ್ಥ ಲೇಖನ ಸೇರ್ಪಡೆ 5
ಮೋದಿ ಜನ್ಮದಿನ: ಸಂಭ್ರಮ ಜೋರು 9

ಉತ್ತರ ಕನ್ನಡದಲ್ಲಿ ಸೂಪರ್ ಮಾರ್ಕೆಟ್‌ಗಳ ಯಶಸ್ಸು: ಸಹಕಾರ ಸಂಸ್ಥೆಗಳಿಗೆ ಆರ್ಥಿಕ ಬಲ

ವ್ಯವಹಾರ ಮೇಲೆತ್ತಿದ ಸಹಕಾರ

• ಸದಾಶಿವ ಎಂ.ಎಸ್

ಸೂಪರ್ ಮಾರ್ಕೆಟ್: ಅಂಕಿ ಅಂಶ

22 ಸಹಕಾರ ಸಂಘಗಳ ಸೂಪರ್ ಮಾರ್ಕೆಟ್‌ಗಳು	₹ 500 ಕೋಟಿ ಅಂದಾಜು ವಹಿವಾಟು	5 ಲಕ್ಷಕ್ಕೂ ಅಧಿಕ ಸೂಪರ್ ಮಾರ್ಕೆಟ್ ಗ್ರಾಹಕರು

ಕಾರವಾರ: ಸಹಕಾರ ಸಂಘಗಳ ಆವರಣದಲ್ಲಿರುವ ಅಂಗಡಿಗಳಲ್ಲಿ ಏನಿರುತ್ತವೆ? ಕಿರಾಣಿ ಉತ್ಪನ್ನಗಳು, ಗೃಹ ಬಳಕೆಯ ಒಂದೆರಡು ಉತ್ಪನ್ನಗಳಿರುವುದು ಸಾಮಾನ್ಯ. ಆದರೆ, ಉತ್ತರ ಕನ್ನಡದ ಹಲವು ಸಹಕಾರ ಸಂಘಗಳಲ್ಲಿ ಎಲ್ಲವೂ ಸಿಗುತ್ತವೆ! ‘ಎಲ್ಲವೂ ಇಲ್ಲೇ ಇವೆ’ ಎಂದು ಹೆಮ್ಮೆಯಿಂದ ಗ್ರಾಹಕರನ್ನು ಆಕರ್ಷಿಸುತ್ತಿವೆ.

ಸದಸ್ಯರಿಗೆ ಹಾಗೂ ಗ್ರಾಹಕರಿಗೆ ಒಂದೇ ಸೂರಿನಡಿ ಕಿರಾಣಿ, ಗೃಹ ಬಳಕೆಯ ಉತ್ಪನ್ನಗಳಿಂದ ಮೊದಲಾಗಿ, ಪ್ಲಾಸ್ಟಿಕ್, ಸ್ಟೀಲ್, ಹಣ್ಣು, ತರಕಾರಿ, ಔಷಧಿ, ಚಿನ್ನ– ಬೆಳ್ಳಿ ಆಭರಣಗಳು, ಕಟ್ಟಡ ನಿರ್ಮಾಣ ಸಾಮಗ್ರಿ, ಪಾದರಕ್ಷೆ, ಕೃಷಿ ಯಂತ್ರೋಪಕರಣಗಳ ತನಕ ಎಲ್ಲ ಉತ್ಪನ್ನಗಳನ್ನೂ ಇವು ಪೂರೈಕೆ ಮಾಡುತ್ತಿವೆ.

ದಶಕಕ್ಕೂ ಹಿಂದೆ ಹೊಸತನದ ವಹಿವಾಟು ಆರಂಭಿಸಿದಾಗ ಸಿಕ್ಕಿದ ಜನರ ಸ್ಪಂದನೆಯು, ಇದೀಗ ಸಹಕಾರ ಸಂಸ್ಥೆಗಳ ‘ಸೂಪರ್ ಮಾರ್ಕೆಟ್’ಗಳನ್ನು ಹಳ್ಳಿಗಳಿಗೂ ವಿಸ್ತರಿಸಲು ಪ್ರೇರೇಪಿಸಿದೆ.

ಉತ್ತರ ಕನ್ನಡದ ಘಟ್ಟದ ಮೇಲಿನ ತಾಲ್ಲೂಕುಗಳು ದುರ್ಗಮ ಬೆಟ್ಟ ಗುಡ್ಡಗಳಿಂದ ಕೂಡಿವೆ. ಸಹಕಾರ ಸಂಘಗಳ ಸದಸ್ಯರು ದಿನಬಳಕೆಯ ವಸ್ತುಗಳು, ಕೃಷಿ ಚಟುವಟಿಕೆಗಳ ಸಲಕರಣೆಗಳು ಅಥವಾ ಮತ್ತ್ಯಾವುದನ್ನೇ ತರಲು 40–50 ಕಿಲೋಮೀಟರ್ ಪ್ರಯಾಣಿಸಬೇಕಾಗುತ್ತದೆ. ಗ್ರಾಮೀಣರ ದಿನದ ದುಡಿಮೆಯೇ ವ್ಯರ್ಥವಾಗುತ್ತದೆ.

ಜನರ ಈ ಬವಣೆಯನ್ನು ತಪ್ಪಿಸಲು ಅಗತ್ಯ ವಸ್ತುಗಳನ್ನು ಆದಷ್ಟು ಸಮೀಪದಲ್ಲಿ ದೊರಕಿಸುವುದು ಸಹಕಾರ ಸಂಸ್ಥೆಗಳ ಒಂದು ಉದ್ದೇಶವಾಗಿದೆ. ಸದಸ್ಯರು ವ್ಯಯಿಸುವ ಹಣವು ಪುನಃ ಸಹಕಾರ ಸಂಘಕ್ಕೇ ಸಿಗುವಂತೆ ಮಾಡಿ, ಸಂಸ್ಥೆಯ ಹಣಕಾಸು ವಹಿವಾಟು ಬಲಗೊಳಿಸುವುದು ಮತ್ತೊಂದು ಗುರಿಯಾಗಿದೆ.

ಜಿಲ್ಲೆಯಲ್ಲಿ ಅಡಿಕೆಯೇ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ಮಾರುಕಟ್ಟೆಯಲ್ಲಿ ದರ ಆಗಾಗ ಏರಿಳಿತವಾಗುತ್ತಿರುತ್ತದೆ. ಇದರಿಂದ ಸಹಕಾರ ಸಂಸ್ಥೆಯ ಬೆಳವಣಿಗೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಕಷ್ಟವಾಗುತ್ತದೆ. ಸಂಸ್ಥೆಗೆ ಮತ್ತೊಂದು ಆರ್ಥಿಕ ಮೂಲವಾಗಿಯೂ ಸೂಪರ್ ಮಾರ್ಕೆಟ್‌ಗಳು ಕೆಲಸ ಮಾಡುತ್ತಿವೆ.

ಎಲ್ಲಿಂದಲೋ ಬಂದ ಹೂಡಿಕೆದಾರ, ಇಲ್ಲಿ ಲಾಭ ಮಾಡಿಕೊಂಡರೆ ಊರಿಗೇನು ಪ್ರಯೋಜನ ಎಂಬ ಯೋಚನೆಯೂ ಇದರ ಹಿಂದಿದೆ. ಈ ನಿಟ್ಟಿನಲ್ಲಿ ಕಾರ್ಯ ಆರಂಭ ಮಾಡಿದ ಸೂಪರ್ ಮಾರ್ಕೆಟ್ ಗಳು ಯಶಸ್ಸು ಕಂಡಿದ್ದು, ಸಹಕಾರ ಕ್ಷೇತ್ರದ ಆರ್ಥಿಕತೆಯ ಸುಸ್ಥಿರ ಅಭಿವೃದ್ಧಿಗೆ ಗಮನಾರ್ಹ ಕೊಡುಗೆಯನ್ನೇ ನೀಡುತ್ತಿವೆ.

ಹಳ್ಳಿಗಳಲ್ಲೂ ಸೂಪರ್ ಮಾರ್ಕೆಟ್‌ನ ಪರಿಕಲ್ಪನೆಯು ಗ್ರಾಮೀಣ ಗೃಹಿಣಿಯರ ವ್ಯವಹಾರ ಜ್ಞಾನಾಭಿವೃದ್ಧಿಗೂ ನೆರವಾಗಿದೆ ಎನ್ನುತ್ತಾರೆ ಶಿರಸಿಯ ಶಿರಗೋಡ ಗ್ರಾಮದ ಸವಿತಾ ಭಟ್.

‘ಕೆಲವು ವರ್ಷಗಳ ಹಿಂದೆ ದಿನಸಿ, ಕೆಲವು ದಿನಬಳಕೆ ವಸ್ತುಗಳ ಹೊರತಾಗಿ ಉಳಿದವುಗಳ ಖರೀದಿಗೆ ಹಳ್ಳಿಗರು ದೂರದ ಪಟ್ಟಣಕ್ಕೆ ಹೋಗಬೇಕಿತ್ತು. ಈಗ ಗ್ರಾಮೀಣ ಭಾಗದ ಸಹಕಾರ ಸಂಘಗಳು ಸೂಪರ್ ಮಾರ್ಕೆಟ್ ಆರಂಭಿಸಿವೆ. ಇದರಿಂದ ಹಳ್ಳಿಗಳ ಮಹಿಳೆಯರೂ ಶಾಪಿಂಗ್‌ಗೆ ಹೋಗಲು ಅನುಕೂಲವಾಗಿದೆ. ಮನೆಬಳಕೆಯ ಬಹುಪಾಲು ಸಾಮಗ್ರಿ ಇಲ್ಲಿ ಸಿಗುತ್ತಿವೆ. ಇದರಿಂದ ದೂರದ ಅಲೆದಾಟ ತಪ್ಪಿದೆ’ ಎನ್ನುತ್ತಾರೆ.

‘ಮಹಾನಗರಗಳಲ್ಲಿ ಕಾಣಸಿಗುತ್ತಿದ್ದ ಸೂಪರ್ ಮಾರ್ಕೆಟ್ ವ್ಯವಸ್ಥೆಯನ್ನು ಸಣ್ಣ ನಗರಕ್ಕೆ, ಹಳ್ಳಿಗಳಿಗೂ ಸಹಕಾರ ಸಂಘಗಳು ಪರಿಚಯಿಸಿದ್ದು ಮಾದರಿಯೇ ಸರಿ. ವಿಶೇಷವಾಗಿ ರೈತ ಕುಟುಂಬಗಳಿಗೆ ಹೊಂದಿಕೆಯಾಗುವಂತೆ ರೂಪುಗೊಂಡ ವ್ಯವಸ್ಥೆಯು ರೈತ ಮಹಿಳೆಯರಿಗೂ ಅನುಕೂಲ ಮಾಡಿಕೊಟ್ಟಿದೆ’ ಎನ್ನುತ್ತಾರೆ ಉಂಬಳಮನೆ ಗ್ರಾಮದ ರೂಪಾ ಮಂಜುನಾಥ ಹೆಗಡೆ.

ಕೋಟ್ಯಂತರ ರೂಪಾಯಿ ವಹಿವಾಟು: ಈಗ ಶಿರಸಿ, ಯಲ್ಲಾಪುರ ಮತ್ತು ಸಿದ್ದಾಪುರ ತಾಲ್ಲೂಕುಗಳ ವಿವಿಧ ಹಳ್ಳಿಗಳಲ್ಲೂ ‘ಸೂಪರ್ ಮಾರ್ಕೆಟ್’ ಹಾಗೂ ‘ಮಿನಿ ಸೂಪರ್ ಮಾರ್ಕೆಟ್’ಗಳು ತಲೆಯೆತ್ತಿವೆ.

6ನೇ ಪುಟ ನೋಡಿ
ಇನ್ನೊಂದು ಸುದ್ದಿ 6

ಶಿರಸಿಯ ತೋಟಗಾರ್ಸ್ ಕೋ ಆಪರೇಟಿವ್ ಸೇಲ್ ಸೊಸೈಟಿಯ ಸೂಪರ್ ಮಾರ್ಕೆಟ್‌ನಲ್ಲಿ ಗ್ರಾಹಕರು ಗೃಹೋಪಯೋಗಿ ಉತ್ಪನ್ನಗಳನ್ನು ಖರೀದಿಸುತ್ತಿರುವುದು

ಸಹಕಾರ ಸಂಸ್ಥೆಗಳ ಸೂಪರ್ ಮಾರ್ಕೆಟ್‌ಗಳು ಸದಸ್ಯರಿಗೆ ಅನುಕೂಲ ಮಾಡುವುದರೊಂದಿಗೆ ಸಂಸ್ಥೆಗಳ ಆರ್ಥಿಕ ಸ್ಥಿರತೆಗೂ ದೊಡ್ಡ ಕೊಡುಗೆ ನೀಡುತ್ತಿವೆ.
ರಾಮಕೃಷ್ಣ ಕಡವೆ ಅಧ್ಯಕ್ಷ, ಟಿ.ಎಸ್.ಎಸ್, ಶಿರಸಿ

ನಗದುರಹಿತ ವಹಿವಾಟು

ಸಹಕಾರ ಸಂಸ್ಥೆಗಳ ಸೂಪರ್ ಮಾರ್ಕೆಟ್‌ಗಳಲ್ಲಿ ನಗದುರಹಿತ ವಹಿವಾಟು ನಡೆಯುವುದು ವಿಶೇಷವಾಗಿದೆ. ಗ್ರಾಹಕರು ಆ ಸಂಸ್ಥೆಯ ಸದಸ್ಯರಾಗಿದ್ದರೆ, ಅವರ ವಹಿವಾಟು ಖಾತೆಯೊಂದು ಅಲ್ಲಿರುತ್ತದೆ. ಸೂಪರ್ ಮಾರ್ಕೆಟ್‌ನಿಂದ ಏನಾದರೂ ಖರೀದಿಸಿದರೆ ಅವರ ಖಾತೆಯಿಂದಲೇ ಹಣ ಕಡಿತವಾಗುತ್ತದೆ. ಕೃಷಿಕರು ಸಂಸ್ಥೆಗೆ ಉತ್ಪನ್ನಗಳನ್ನು ಮಾರಾಟ ಮಾಡಿದರೂ ಅದೇ ಮಾದರಿಯಲ್ಲಿ ಹಣದ ನೇರ ವರ್ಗಾವಣೆಯಾಗುತ್ತದೆ.

ಒಳನೋಟ
ಸಹಕಾರಿಗಳಿಗೆ ಬಲ
ಪ್ರತಿಕ್ರಿಯಿಸಿ: 9606038256
feedback@prajavani.co.in

ಭಾರತಕ್ಕೆ ಕಾಲಿಟ್ಟ ಚೀತಾ

ನಮೀಬಿಯಾದಿಂದ ಭಾರತಕ್ಕೆ ತಂದ ಎಂಟು ಚೀತಾಗಳನ್ನು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಶನಿವಾರ ಬಿಡಲಾಯಿತು. ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಚೀತಾಗಳ ಛಾಯಾಚಿತ್ರಗಳನ್ನು ಸೆರೆಹಿಡಿದರು –ಪಿಐಬಿ ಚಿತ್ರ 9

ಸಹಕಾರ ಸಚಿವ ಸೋಮಶೇಖರ್, ಬಿಎಸ್‌ವೈ ವಿರುದ್ಧ ಎಫ್‌ಐಆರ್

ಬಿಡಿಎ ವಸತಿ ಯೋಜನೆ ಗುತ್ತಿಗೆಯಲ್ಲಿ ಭ್ರಷ್ಟಾಚಾರದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಿಎ ವಸತಿ ಯೋಜನೆಯೊಂದರ ಕಾಮಗಾರಿಯ ಗುತ್ತಿಗೆ ನೀಡಲು ಗುತ್ತಿಗೆದಾರರಿಂದ ಲಂಚ ಪಡೆದ ಆರೋಪದ ಮೇಲೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ, ಅವರ ಮಗ ಹಾಗೂ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಒಂಬತ್ತು ಮಂದಿ ವಿರುದ್ಧ ಲೋಕಾಯುಕ್ತ ಪೊಲೀಸರು ಶುಕ್ರವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಯಡಿಯೂರಪ್ಪ ಅವರ ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ, ಅವರ ಮಗ ಶಶಿಧರ ಮರಡಿ, ವಿರೂಪಾಕ್ಷಪ್ಪ ಅವರ ಅಳಿಯ ಸಂಜಯ್ ಶ್ರೀ, ಗುತ್ತಿಗೆದಾರ ಚಂದ್ರಕಾಂತ್ ರಾಮಲಿಂಗಂ, ಐಎಎಸ್ ಅಧಿಕಾರಿ ಡಾ.ಜಿ.ಸಿ. ಪ್ರಕಾಶ್ ಮತ್ತು 37 ಕ್ರೆಸೆಂಟ್ ಹೋಟೆಲ್ ಮಾಲೀಕ ಕೆ.ರವಿ ಇತರ ಆರೋಪಿಗಳು. ಈ ಎಲ್ಲರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಹಾಗೂ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಕೋನದಾಸನಪುರದಲ್ಲಿ ಬಿಡಿಎ ನಿರ್ಮಿಸುತ್ತಿರುವ ಬಹುಮಹಡಿ ವಸತಿ ಸಮುಚ್ಚಯದ ಕಾಮಗಾರಿಯ ಗುತ್ತಿಗೆ ಸಂಬಂಧ ಚಂದ್ರಕಾಂತ್ ರಾಮಲಿಂಗಂ ಅವರಿಂದ ಇತರ ಆರೋಪಿಗಳು ಒಟ್ಟು ₹ 29.5 ಕೋಟಿ ಲಂಚ ಪಡೆದಿದ್ದಾರೆ ಎಂದು ಆರೋಪಿಸಿ ಕರ್ನಾಟಕ ಆ್ಯಂಟಿ ಗ್ರಾಫ್ಟ್ ಮತ್ತು ಪರಿಸರ ವೇದಿಕೆ ಅಧ್ಯಕ್ಷ ಟಿ.ಜೆ. ಅಬ್ರಹಾಂ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು. ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ವಿಶೇಷ ನ್ಯಾಯಾಲಯ ಬುಧವಾರ ಆದೇಶ ಹೊರಡಿಸಿತ್ತು.

ನ್ಯಾಯಾಲಯದ ಆದೇಶದಂತೆ ಎಫ್‌ಐಆರ್ ದಾಖಲಿಸಿರುವ ಲೋಕಾಯುಕ್ತ ಪೊಲೀಸರು, ತನಿಖೆ ಆರಂಭಿಸಿದ್ದಾರೆ. ಪ್ರಕರಣದಲ್ಲಿ ಯಡಿಯೂರಪ್ಪ ಮೊದಲನೇ, ವಿಜಯೇಂದ್ರ ಎರಡನೇ ಆರೋಪಿಗಳಾಗಿದ್ದರೆ, ಸೋಮಶೇಖರ್ ಆರನೇ ಆರೋಪಿಯಾಗಿದ್ದಾರೆ.

ಇನ್ನೊಂದು ಸುದ್ದಿ 7

ಎಸ್.ಟಿ.ಸೋಮಶೇಖರ್



ಬಿ.ಎಸ್. ಯಡಿಯೂರಪ್ಪ

ಬಿ.ವೈ. ವಿಜಯೇಂದ್ರ

ಟೆಂಡರ್ ಅಕ್ರಮದ ಆರೋಪ

₹ 567 ಕೋಟಿ ವೆಚ್ಚದಲ್ಲಿ ಬಹುಮಹಡಿ ವಸತಿ ಸಮುಚ್ಚಯ ನಿರ್ಮಾಣಕ್ಕೆ ಬಿಡಿಎ 2017ರ ಅಕ್ಟೋಬರ್‌ನಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಿಸಿತ್ತು. ಆಗ ₹ 675 ಕೋಟಿ ಮೊತ್ತಕ್ಕೆ ಚಂದ್ರಕಾಂತ್ ರಾಮಲಿಂಗಂ ಒಡೆತನದ ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿ ಬಿಡ್ ಸಲ್ಲಿಸಿತ್ತು. ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಬಿಡಿಎ ಅಧ್ಯಕ್ಷರಾಗಿದ್ದ ಸೋಮಶೇಖರ್, ತಮ್ಮ ಪ್ರಭಾವ ಬಳಸಿ ₹ 666.22 ಕೋಟಿ ಮೊತ್ತಕ್ಕೆ ಟೆಂಡರ್ ಅಂತಿಮಗೊಳಿಸಿ, ಕಾರ್ಯಾದೇಶ ನೀಡಿರುವ ಆರೋಪ ದೂರಿನಲ್ಲಿದೆ.

ನಂತರದಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ, ಅವರ ಮಗ ವಿಜಯೇಂದ್ರ, ಅವರ ಸಂಬಂಧಿಗಳು ಮತ್ತು ಐಎಎಸ್ ಅಧಿಕಾರಿ ಜಿ.ಸಿ. ಪ್ರಕಾಶ್, ಗುತ್ತಿಗೆ ಮುಂದುವರಿಸಲು ಲಂಚ ಪಡೆದಿದ್ದಾರೆ ಎಂಬ ಆರೋಪವಿದೆ. ಕೋಲ್ಕತ್ತ ವಿಳಾಸದಲ್ಲಿ ನೋಂದಣಿಯಾಗಿರುವ ಏಳು ‘ಶೆಲ್’ (ನಕಲಿ) ಕಂಪನಿಗಳ ಖಾತೆಗಳಿಂದ ಶಶಿಧರ ಮರಡಿ ಹಾಗೂ ಸಂಜಯ್ ಶ್ರೀ ಪಾಲುದಾರರಾಗಿರುವ ಬೆಲ್‌ಗ್ರಾವಿಯ ಎಂಟರ್‌ಪ್ರೈಸಸ್ ಮತ್ತು ಎಸ್‌ವಿಎಸ್ ಸ್ಟೇಟ್ಸ್ ಎಂಬ ಕಂಪನಿಗಳಿಗೆ ₹ 5.01 ಕೋಟಿ ವರ್ಗಾವಣೆಯಾಗಿರುವುದೂ ತನಿಖೆಯ ಭಾಗವಾಗಲಿದೆ.

ಸರಕುಸಾಗಣೆಯ ರಾಷ್ಟ್ರೀಯ ನೀತಿ ಬಿಡುಗಡೆ ಮಾಡಿದ ಪ್ರಧಾನಿ ಮೋದಿ

‘ಸಾಗಣೆ ವೆಚ್ಚ: ಒಂದಂಕಿ ಮಟ್ಟದ ಗುರಿ’

• ಅನ್ನಪೂರ್ಣಾ ಸಿಂಗ್

ಮುಖ್ಯಾಂಶಗಳು
- ತಡೆರಹಿತವಾಗಿ ಸರಕುಸಾಗಣೆಗೆ ಅನುಕೂಲ
- ಸದ್ಯ ಶೇ 13–14ರಷ್ಟು ಇರುವ ಸಾಗಣೆ ವೆಚ್ಚ

ನವದೆಹಲಿ: ‘ಭಾರತದ ಸರಕು ಸಾಗಣೆ ವೆಚ್ಚವು ಜಗತ್ತಿನ ಇತರ ದೇಶಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಇದ್ದು, ಅದನ್ನು ಒಂದಂಕಿ ಮಟ್ಟಕ್ಕೆ ಇಳಿಕೆ ಮಾಡಲಾಗುವುದು’ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದರು.

ಸರಕು ಸಾಗಣೆಯ ಸಂಬಂಧಿಸಿದ ರಾಷ್ಟ್ರೀಯ ನೀತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಶೇ 13–14ರಷ್ಟು ಇರುವ ಸಾಗಣೆ ವೆಚ್ಚವನ್ನು ಆದಷ್ಟು ಬೇಗ ಒಂದಂಕಿ ಮಟ್ಟಕ್ಕೆ ಇಳಿಕೆ ಮಾಡುವ ಅಗತ್ಯ ಇದೆ. ಈ ನಿಟ್ಟಿನಲ್ಲಿ ನಮಗೆ ದಕ್ಷತೆಯ ಅಗತ್ಯ ಇದೆ’ ಎಂದರು.

ಭಾರತದಲ್ಲಿ ಸರಕು ಸಾಗಣೆ ವೆಚ್ಚ ಜಿಡಿಪಿಯ ಶೇ 16ರಷ್ಟು ಇದೆ. ಇದು ಚೀನಾ (ಶೇ 10), ಅಮೆರಿಕ ಮತ್ತು ಯುರೋಪ್ (ಶೇ 8)ಗಿಂತಲೂ ಗರಿಷ್ಠ ಮಟ್ಟದ್ದಾಗಿದೆ. ವಿಶ್ವಬ್ಯಾಂಕ್‌ನ ಈಚಿನ ಅಂಕಿ–ಅಂಶಗಳ ಪ್ರಕಾರ, ಸಾಗಣೆ ವೆಚ್ಚದಲ್ಲಿ ಭಾರತವು 44ನೇ ಸ್ಥಾನದಲ್ಲಿದೆ.

ರೈಲು, ರಸ್ತೆ ಮತ್ತು ಜಲಮಾರ್ಗಗಳನ್ನು ಒಟ್ಟುಗೂಡಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ಗೋದಾಮುಗಳ ಅಭಿವೃದ್ಧಿ ಮತ್ತು ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ಅಳವಡಿಸಿಕೊಳ್ಳಲೂ ನೆರವಾಗಲಿದೆ.

‘ನಾವು ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆ ಆಗಿದ್ದೇವೆ. ರಫ್ತು ವಹಿವಾಟಿಗೆ ಸಂಬಂಧಿಸಿದಂತೆ ಭಾರತವು ಹೊಸ ಗುರಿ ನಿಗದಿಪಡಿಸುತ್ತಿದ್ದು, ಅದನ್ನು ಸಾಧಿಸಲಾಗುತ್ತಿದೆ. ಭಾರತವು ಜಾಗತಿಕ ತಯಾರಿಕಾ ಕೇಂದ್ರವಾಗಿ ಹೊರಹೊಮ್ಮುತ್ತಿದ್ದು, ಜಗತ್ತು ಇದನ್ನು ಗುರುತಿಸಿದೆ. ಈ ನೀತಿಯು ರಫ್ತು ಉದ್ದಿಮೆಗೆ ಹೊಸ ವೇಗ ನೀಡಲಿದೆ’ ಎಂದು ಮೋದಿ ಹೇಳಿದ್ದಾರೆ.

ಸರ್ಕಾರವು ಈಚೆಗಷ್ಟೇ ಡ್ರೋನ್ ನೀತಿಯಲ್ಲಿ ಕೆಲವು ಬದಲಾವಣೆಗಳನ್ನು ತಂದಿದೆ. ಇದರಿಂದಾಗಿ ಸರಕುಸಾಗಣೆ ವಲಯದಲ್ಲಿ ಹಲವು ಸಾಧ್ಯತೆಗಳು ತೆರೆದುಕೊಳ್ಳುವ ಸಾಧ್ಯತೆ ಇದೆ. ಸಾಗಣೆ ಸಮಯ ಕಡಿಮೆ ಮಾಡಲು ಮುಂಬರುವ ದಿನಗಳಲ್ಲಿ ಡ್ರೋನ್ ಬಳಸಬಹುದಾಗಿದೆ. ಉದಾಹರಣೆಗೆ ಸಮುದ್ರ ತೀರದಿಂದ ನಿರ್ದಿಷ್ಟ ಪ್ರದೇಶದಲ್ಲಿ ತಾಜಾ ಮೀನು ವಿತರಣೆಗೆ ಡ್ರೋನ್ ಬಳಸಬಹುದು ಎಂದು ಅವರು ವಿವರಿಸಿದ್ದಾರೆ.

‘ಕಲ್ಯಾಣ ಕರ್ನಾಟಕಕ್ಕೆ ₹ 5 ಸಾವಿರ ಕೋಟಿ’

ಕಲಬುರಗಿ: ‘ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಮುಂದಿನ ಬಜೆಟ್‌ನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ನೀಡುವ ಅನುದಾನವನ್ನು ₹ 3 ಸಾವಿರ ಕೋಟಿಯಿಂದ ₹ 5 ಸಾವಿರ ಕೋಟಿಗೆ ಹೆಚ್ಚಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಘೋಷಿಸಿದರು.

ಇಲ್ಲಿ ನಡೆದ ಕಲ್ಯಾಣ ಕರ್ನಾಟಕದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು, ‘ಈ ಭಾಗದ ಜನ ಗುಳೆ ಹೋಗುವುದನ್ನು ತಪ್ಪಿಸಲು ಕಲಬುರಗಿ, ವಿಜಯಪುರದಲ್ಲಿ ಶೀಘ್ರವೇ ಜವಳಿ ಪಾರ್ಕ್ ಆರಂಭಿಸಲಾಗುವುದು’ ಎಂದರು.

ಸಿ.ಎಂಗೆ ಕಪ್ಪುಬಟ್ಟೆ ಪ್ರದರ್ಶನ: ನಗರದ ಎಸ್‌ವಿಪಿ ವೃತ್ತದಲ್ಲಿ ಸಿ.ಎಂ ಅವರು ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಿರ್ಗಮಿಸುವಾಗ ತಳವಾರ ಸಮುದಾಯದ ಮುಖಂಡರು ಕಪ್ಪುಬಟ್ಟೆ ಪ್ರದರ್ಶಿಸಿದರು.

‘ತಳವಾರ ಸಮುದಾಯದವರಿಗೆ ಪರಿಶಿಷ್ಟ ಪಂಗಡ (ಎಸ್‌ಟಿ) ಪ್ರಮಾಣ ಪತ್ರ ನೀಡುತ್ತಿಲ್ಲ’ ಎಂದು ಮುಖ್ಯಮಂತ್ರಿ ಮತ್ತು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮುಜುಗರಕ್ಕೆ ಒಳಗಾದ ಸಿ.ಎಂ ಅವರು ತಕ್ಷಣವೇ ಅಲ್ಲಿಂದ ನಿರ್ಗಮಿಸಿದರು.

ಎಸ್ಸೆಸ್ಸೆಲ್ಸಿ– ಪಿಯುಗೆ ಒಂದೇ ಮಂಡಳಿ

‘ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ’ ರಚಿಸಲು ನಿರ್ಧಾರ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿನ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿರುವ ಪರೀಕ್ಷಾ ಶಾಖೆಯನ್ನು ವಿಲೀನಗೊಳಿಸಿ ‘ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ’ ಎಂಬ ಒಂದೇ ಪರೀಕ್ಷಾ ಮಂಡಳಿ ರಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಉದ್ದೇಶದಿಂದ ‘ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ–1966’ ತಿದ್ದುಪಡಿಗೆ ಮಸೂದೆ ಸಿದ್ಧವಾಗಿದೆ. ಈಗ ನಡೆಯುತ್ತಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಮಸೂದೆ ಮಂಡಿಸಲು ಸರ್ಕಾರ ತೀರ್ಮಾನಿಸಿದೆ.

ಮಂಡಳಿಗೆ ಐಎಎಸ್ ಅಧಿಕಾರಿ ಅಧ್ಯಕ್ಷ

‘ಹೊಸ ಮಂಡಳಿಯು ಪಿಯುಸಿ, ಎಸ್ಸೆಸ್ಸೆಲ್ಸಿ, ಶಾಲಾಪೂರ್ವ ಶಿಕ್ಷಣದಲ್ಲಿ ಡಿಪ್ಲೊಮಾ ಮತ್ತು ಇತರ ಸಾರ್ವಜನಿಕ ಪರೀಕ್ಷೆಗಳನ್ನು ನಡೆಸಲಿದೆ. ಸಾಕ್ಷರತಾ ಇಲಾಖೆ ನಿರ್ದೇಶಕ ಹುದ್ದೆಯನ್ನು ಮಂಡಳಿಯ ಅಧ್ಯಕ್ಷ ಹುದ್ದೆಯಾಗಿ ಮರು ನಿಗದಿಪಡಿಸಲಾಗುವುದು. ಅಲ್ಲದೆ, ಐಎಎಸ್ (ಆಯ್ಕೆ ಶ್ರೇಣಿ ಅಥವಾ ಕಿರಿಯ ಆಡಳಿತಾತ್ಮಕ ಶ್ರೇಣಿ) ಅಧಿಕಾರಿಯನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಮಂಡಳಿಯ ವಿಶೇಷ ಆಹ್ವಾನಿತರಾಗಲಿದ್ದಾರೆ’ ಎಂದು ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ವಿಮ್ಸ್‌ನಲ್ಲಿ ನಡೆಯುತ್ತಿರುವ ‘ಗದ್ದುಗೆ ಗುದ್ದಾಟ’

ಗುಂಪುಗಾರಿಕೆಗೆ ಬಡ ಜೀವಗಳು ಬಲಿ?

• ಹೊನಕೆರೆ ನಂಜುಂಡೇಗೌಡ

ಪ್ರಜಾವಾಣಿ ವಿಶೇಷ

ಬಳ್ಳಾರಿ: ‘ಇಲ್ಲಿನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿನ (ವಿಮ್ಸ್) ಗುಂಪುಗಾರಿಕೆಗೆ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದ ಬಡವರ ಜೀವಗಳು ಬಲಿ ಆಗಿರಬಹುದು’ ಎಂಬ ಬಲವಾದ ಅನುಮಾನ ವ್ಯಕ್ತವಾಗಿದೆ.

‘ವಿಮ್ಸ್‌ನಲ್ಲಿ ವಿದ್ಯುತ್, ಜನರೇಟರ್ ಕೈಕೊಟ್ಟು, ಆಮ್ಲಜನಕ ಪೂರೈಸುವ ವೆಂಟಿಲೇಟರ್‌ಗಳ ಬ್ಯಾಟರಿ ಬ್ಯಾಕಪ್ ಮುಗಿದ ನಂತರ ನಡೆದ ಅವಘಡದ ಹಿಂದೆ ಕೆಲವರ ಕೈವಾಡ ಇರಬಹುದು’ ಎಂಬ ಶಂಕೆ ವೈದ್ಯಕೀಯ ಕ್ಷೇತ್ರವನ್ನು ತಲ್ಲಣಗೊಳಿಸಿದೆ.

‘ಆರ್‌ಟಿಐ ಕಾರ್ಯಕರ್ತನ ಚಿತಾವಣೆ’

‘ಬಳ್ಳಾರಿ ಭಾಗದ ಆರ್‌ಟಿಐ ಕಾರ್ಯಕರ್ತ ಎಂದು ಹೇಳಿಕೊಳ್ಳುವ ವ್ಯಕ್ತಿಯೊಬ್ಬ ವಿಮ್ಸ್ ಮೇಲೆ ನಿಯಂತ್ರಣ ಸಾಧಿಸಲು ಕೆಲ ವೈದ್ಯರು, ಸಿಬ್ಬಂದಿ ಜತೆಗೂಡಿ ಪಿತೂರಿ ಮಾಡುತ್ತಿದ್ದಾನೆ’ ಎಂಬ ಸಂಗತಿ ಜಿಲ್ಲಾಡಳಿತದ ಗಮನಕ್ಕೆ ಬಂದಿದೆ.

‘ವೈದ್ಯರೊಬ್ಬರಿಗೆ ವಿಮ್ಸ್ ನಿರ್ದೇಶಕರ ಹುದ್ದೆ ಕೊಡಿಸಲು ಲಾಬಿ ಮಾಡಿದ್ದ. ಅದು ಆಗಲಿಲ್ಲ. ಮುಖಭಂಗ ಅನುಭವಿಸಿದ ಬಳಿಕ ಸಂಸ್ಥೆಯಲ್ಲಿ ಸಮಸ್ಯೆ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾನೆ. ವಿಮ್ಸ್‌ನ ಕೆಲವು ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿ ಈತನ ಮನೆಯಲ್ಲಿ ಸಭೆ ಸೇರುತ್ತಾರೆ’ ಎಂದು ವಿಮ್ಸ್ ನಿರ್ದೇಶಕರು ಜಿಲ್ಲಾಡಳಿತಕ್ಕೆ ನೀಡಿರುವ ಮೌಖಿಕ ದೂರಿನಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರವಿದ್ದಾಗ ಹಿರಿಯ ರಾಜಕಾರಣಿಯೊಬ್ಬರ ಲೈಂಗಿಕ ಹಗರಣದ ವಿಡಿಯೊ ಇಟ್ಟುಕೊಂಡು ಈತ ಬ್ಲಾಕ್‌ಮೇಲ್‌ಗೂ ಯತ್ನಿಸಿದ್ದ ಎನ್ನಲಾಗಿದೆ.

‘ವಿಮ್ಸ್ ನಿರ್ದೇಶಕರ ಹುದ್ದೆಗೆ ಆಗಸ್ಟ್‌ನಲ್ಲಿ ನೇಮಕಾತಿ ನಡೆಯಿತು. ಐವರು ಆಕಾಂಕ್ಷಿಗಳಿದ್ದರು. ಸಂದರ್ಶನ ನಡೆದು ಡಾ. ಗಂಗಾಧರಗೌಡ ನೇಮಕವಾದರು. ಆಗಸ್ಟ್ 19ರಂದು ಅಧಿಕಾರ ಸ್ವೀಕರಿಸಿದರು. ನೇಮಕದ ಬಗ್ಗೆ ಅಸಮಾಧಾನಗೊಂಡಿರುವ ಕೆಲವರು ಗುಂಪುಗಾರಿಕೆ ಮಾಡುತ್ತಿದ್ದಾರೆ’ ಎಂದು ಉನ್ನತ ಮೂಲಗಳು ತಿಳಿಸಿವೆ.

ದುರ್ಘಟನೆ ಬಗ್ಗೆ ವಿಚಾರಣೆಗೆ ಶುಕ್ರವಾರ ಸಂಸ್ಥೆಗೆ ಬಂದಿದ್ದ ಬೆಂಗಳೂರು ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕಿ ಡಾ.ಸ್ಮಿತಾ ನೇತೃತ್ವದ ಸಮಿತಿ ಮುಂದೆಯೂ ಡಾ.ಗಂಗಾಧರಗೌಡ ಗುಂಪುಗಾರಿಕೆ ಕುರಿತು ಆರೋಪಿಸಿದ್ದಾರೆ. ‘ಭೂಮಿಯೊಳಗಿನ ವಿದ್ಯುತ್ ಕೇಬಲ್ ಸ್ಫೋಟಿಸಿದ್ದರ ಹಿಂದೆ ಪಿತೂರಿ ಇರಬಹುದು. ಸಮಿತಿ ಸರ್ಕಾರಕ್ಕೆ ಸಲ್ಲಿಸುವ ವರದಿಯಲ್ಲಿ ಈ ಅಂಶವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು’ ಎಂದೂ ಸಂಸ್ಥೆಯ ನಿರ್ದೇಶಕರು ಮನವಿ ಮಾಡಿದ್ದಾಗಿ ಮೂಲಗಳು ಸ್ಪಷ್ಟಪಡಿಸಿವೆ.

6ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಇಂದು ಉಚಿತ ಆರೋಗ್ಯ ತಪಾಸಣೆ

ರಾಜರಾಜೇಶ್ವರಿ ನಗರ: ಸಪ್ತಗಿರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ರಾಜರಾಜೇಶ್ವರಿನಗರ ವಿಧಾನಸಭಾ ಕಾಂಗ್ರೆಸ್ ಸಮಿತಿ ವತಿಯಿಂದ ಸೆ.18ರಂದು ಉಲ್ಲಾಳು ಮುಖ್ಯರಸ್ತೆಯ ಮಂಗಳೂರು ಪಿಯು ಕಾಲೇಜು ಆವರಣದಲ್ಲಿ ಬೃಹತ್ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ 97409 99993ಗೆ ಸಂಪರ್ಕಿಸಬಹುದು.

ಲೇಖಕಿಯರ ಸಂಘ: ಇಂದು ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ಚುನಾವಣೆ ನಡೆಯಲಿದ್ದು, ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಎನ್.ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಹಾಲಿ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್, ಲೇಖಕಿ ಎಚ್. ಎಲ್. ಪುಷ್ಪಾ ಹಾಗೂ ಕಥೆಗಾರ್ತಿ ಶೈಲಜಾ ಸುರೇಶ್ ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ. ಈಗಾಗಲೇ ಹೊರ ಜಿಲ್ಲೆಗಳಿಂದ ಅಂಚೆ ಮತದಾನ ನಡೆದಿದೆ. ಭಾನುವಾರ ಬೆಂಗಳೂರಿನಲ್ಲಿ ಮಾತ್ರ ಮತದಾನ ನಡೆಯಲಿದ್ದು, ಸಂಜೆ ಫಲಿತಾಂಶ ಘೋಷಣೆ ಆಗಲಿದೆ.

ಸಂಘದ 1,330 ಸದಸ್ಯರಲ್ಲಿ 1,295 ಮಂದಿ ಮತದಾನದ ಅರ್ಹತೆ ಹೊಂದಿದ್ದಾರೆ. ಇವರಲ್ಲಿ 650 ಮಂದಿ ಬೆಂಗಳೂರಿಗರೇ ಆಗಿದ್ದಾರೆ. ಚುನಾವಣೆಯಲ್ಲಿ ವಿಜೇತರಾದವರು ಮೂರು ವರ್ಷಗಳು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಎ. ರವೀಂದ್ರ ಅಭಿಮತ

ದೇಶದ ವೈವಿಧ್ಯತೆ ಕಾಪಾಡುವುದೇ ಸವಾಲು

ಪ್ರಜಾವಾಣಿ ವಾರ್ತೆ



'ಡಿಸ್ಕವರಿಂಗ್ ನ್ಯೂ ಇಂಡಿಯಾ' ಪುಸ್ತಕವನ್ನು ನ್ಯಾ.ಎಂ.ಎನ್. ವೆಂಕಟಾಚಲಯ್ಯ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. ಪ್ರಿಯಾಂಕಾ ಮಾಥುರ್, ರಾಜ್ ಸಿಂಗ್, ಚಿರಂಜೀವಿ ಸಿಂಗ್, ಎ. ರವೀಂದ್ರ ಮತ್ತು ಜೈನ್ ವಿಶ್ವವಿದ್ಯಾಲಯದ ಪ್ರೊ.ಆರ್.ಎನ್. ಅಯ್ಯಂಗಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: 'ನಮ್ಮ ದೇಶವು ವಿವಿಧತೆಯಲ್ಲಿ ಏಕತೆ ಹೊಂದಿದೆ. ಇದನ್ನು ಕಾಪಾಡಿಕೊಳ್ಳುವ ಜತೆಗೆ ಸಮಾಜದಲ್ಲಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಭ್ರಾತೃತ್ವ ಭಾವದಲ್ಲಿ ಸಾಗಬೇಕು' ಎಂದು ನಿವೃತ್ತ ಐಎಎಸ್ ಅಧಿಕಾರಿ ಎ. ರವೀಂದ್ರ ತಿಳಿಸಿದರು.

ಜೈನ್ ಯೂನಿವರ್ಸಿಟಿ ಪ್ರೆಸ್ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರ ಹಾಗೂ ಪ್ರಿಯಾಂಕಾ ಮಾಥುರ್ ಸಂಪಾದಕತ್ವದ 'ಡಿಸ್ಕವರಿಂಗ್ ನ್ಯೂ ಇಂಡಿಯಾ' ಪುಸ್ತಕ ಬಿಡುಗಡೆಯಾಯಿತು.

'ನೆಹರೂ ಅವರ 'ದಿ ಡಿಸ್ಕವರಿ ಆಫ್ ಇಂಡಿಯಾ' ಪುಸ್ತಕ 1946ರಲ್ಲಿ ಪ್ರಕಟಗೊಂಡಿತ್ತು. ಅದರಲ್ಲಿ ಅವರು ತಮ್ಮ ಕಲ್ಪನೆಯ ಭಾರತದ ಬಗ್ಗೆ ವಿವರಿಸಿದ್ದರು. 75 ವರ್ಷಗಳಲ್ಲಿ ದೇಶ ಸಾಕಷ್ಟು ಪ್ರಗತಿ ಹೊಂದಿದೆ. ವಿವಿಧ ಭಾಷೆಗಳನ್ನು ಮಾತನಾಡುವ, ವಿಭಿನ್ನ ನಂಬಿಕೆಗಳನ್ನು ಪ್ರತಿಪಾದಿಸುವ, ವಿವಿಧ ಜಾತಿಗಳ ಹಾಗೂ ವೈವಿಧ್ಯಮಯ ಸಂಸ್ಕೃತಿಗಳನ್ನು ಪ್ರತಿನಿಧಿಸುವ ಜನರು ಈ ದೇಶದಲ್ಲಿ ಮಾತ್ರ ಕಾಣಲು ಸಾಧ್ಯ. ಅಮೆರಿಕ, ಯುರೋಪ್ ದೇಶಗಳಿಗಿಂತ ಈ ದೇಶ ಹೆಚ್ಚು ವೈವಿಧ್ಯತೆ ಹೊಂದಿದೆ. ನಮ್ಮ ಧರ್ಮ, ತತ್ವಶಾಸ್ತ್ರ, ಕಲೆ, ಸಾಹಿತ್ಯವು ಉನ್ನತ ಜ್ಞಾನ, ಆಧ್ಯಾತ್ಮಿಕ ಮೌಲ್ಯಗಳ ಅನ್ವೇಷಣೆಯಾಗಿದೆ' ಎಂದು ಹೇಳಿದರು.

'ಈ ಪುಸ್ತಕದಲ್ಲಿ ನಾಲ್ಕು ವಿಭಾಗಗಳಿದ್ದು, ಮೊದಲನೆ ವಿಭಾಗದಲ್ಲಿ ಧರ್ಮದ ಬಗ್ಗೆ ಹೇಳಲಾಗಿದೆ. ಎರಡನೇ ವಿಭಾಗದಲ್ಲಿ ಶೈಕ್ಷಣಿಕ ಸವಾಲುಗಳು, ರಾಷ್ಟ್ರೀಯ ಶಿಕ್ಷಣ ನೀತಿ, ಮೂರನೇ ವಿಭಾಗದಲ್ಲಿ ಲಿಂಗ ಅಸಮಾನತೆ, ನಾಲ್ಕನೇ ವಿಭಾಗದಲ್ಲಿ ಯುವ ಜನರು ರಾಷ್ಟ್ರಕ್ಕೆ ನೀಡಬೇಕಾದ ಕೊಡುಗೆಗಳ ಬಗ್ಗೆ ಹೇಳಲಾಗಿದೆ' ಎಂದರು.

ವಿಜ್ಞಾನದ ಕೊಡುಗೆ: ಸುಪ್ರೀಂಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, '17ನೇ ಶತಮಾನದಲ್ಲಿ ನಡೆದ ಘಟನೆ ಹಾಗೂ ಆವಿಷ್ಕಾರಗಳು ಹೊಸತನಕ್ಕೆ ಅವಕಾಶ ಕಲ್ಪಿಸಿದವು. ಇಂದಿನ ಆಧುನಿಕ ಮನಸ್ಥಿತಿಯೂ 17ನೇ ಶತಮಾನದ ವಿಜ್ಞಾನದ ಕೊಡುಗೆ. ದೇಶದಲ್ಲಿ ಬೇರೆ ಬೇರೆ ಧರ್ಮಗಳಿದ್ದರೂ ಅವುಗಳು ಸಾರಿದ ತತ್ವ ಸಂದೇಶಗಳು ಮಾತ್ರ ಒಂದೇ ಆಗಿವೆ' ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್, 'ಬಸವಣ್ಣ ಅವರು 'ದಯವೇ ಧರ್ಮದ ಮೂಲವಯ್ಯ' ಎಂದು ಹೇಳಿದ್ದರು. ಇದನ್ನೇ ವಿವಿಧ ಧರ್ಮದ ಮಹಾತ್ಮರು ಹೇಳಿದ್ದಾರೆ' ಎಂದರು

ಜೈನ್ ವಿಶ್ವವಿದ್ಯಾಲಯದ ಕುಲಪತಿ ರಾಜ್ ಸಿಂಗ್, 'ಸ್ವಾತಂತ್ರ್ಯ ದೊರೆತ 75 ವರ್ಷಗಳಲ್ಲಿ ದೇಶ ಸಾಕಷ್ಟು ಬದಲಾಗಿದೆ. ಅಭಿವೃದ್ಧಿ ಹೊಂದಿದ ಭಾರತವನ್ನು ನೋಡುತ್ತಿದ್ದೇವೆ. ಜಗತ್ತಿಗೆ ನಾಯಕತ್ವದ ಸ್ಥಾನದಲ್ಲಿ ಭಾರತ ನಿಂತಿದೆ. ಈ ದೇಶದಲ್ಲಿ ಎಲ್ಲ ಕಡೆ ಎಲ್ಲ ವಿಷಯಗಳ ಬಗ್ಗೆ ಮಾತನಾಡುವ ಸ್ವಾತಂತ್ರ್ಯ ಇದೆ. ಈ ಅವಕಾಶ ಬೇರೆ ದೇಶಗಳಲ್ಲಿ ಸಿಗುವುದಿಲ್ಲ' ಎಂದು ಹೇಳಿದರು.

ಪುಸ್ತಕ ಪರಿಚಯ

ಪುಸ್ತಕ: 'ಡಿಸ್ಕವರಿಂಗ್ ನ್ಯೂ ಇಂಡಿಯಾ'
ಸಂಪಾದಕರು: ಎ. ರವೀಂದ್ರ, ಪ್ರಿಯಾಂಕಾ ಮಾಥುರ್
ಪುಟಗಳು: 298
ಬೆಲೆ: ₹ 400
ಪ್ರಕಾಶನ: ಜೈನ್ ಯೂನಿವರ್ಸಿಟಿ ಪ್ರೆಸ್

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿ ನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ತಿದ್ದುಪಡಿ

ಈ ದಿನ ಪತ್ರಿಕೆಯಲ್ಲಿ ದಿನಾಂಕ: 17.09.2022ರಂದು ಪ್ರಕಟವಾದ ಸಂ: ಬಿಐಎಎಪಿಎ/ಟಿಪಿ/ಭೂಉಬ/44/2022–23/1267 ದಿನಾಂಕ:16.09.2022 ಸಂಖ್ಯೆಯ ಬದಲಾವಣೆ ಕೋರಿರುವ ಭೂ ಉಪಯೋಗ ಕಾಲಂನಲ್ಲಿ **ವಸತಿ** ಎಂಬುದರ ಬದಲಾಗಿ **ವಾಣಿಜ್ಯ** ಎಂದು ಓದಿಕೊಳ್ಳುವುದು. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ನಗರ ಮತ್ತು ಗ್ರಾಮಾಂತರ
ವಾಸಾಸಂಇ/ವಾಪ್ರ/ಜಿಎ/2257/2022–23 ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,

---

ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.
ಆಡಳಿತ ಕಛೇರಿ : 73/1, ಗಾಂಧಿಬಜಾರ್ ಮುಖ್ಯರಸ್ತೆ, ಬೆಂಗಳೂರು–560004.
ದೂರವಾಣಿ: 080–22421998, 26619955, 26618093, 2607778.

48ನೇ ವಾರ್ಷಿಕ ಸಾಮಾನ್ಯ ವರ್ಚ್ಯುಯಲ್ ಸಭೆ
ದಿನಾಂಕ: 18.09.2022 ರಂದು ಬೆಳಿಗ್ಗೆ 10.00 ಘಂಟೆಗೆ

ಬ್ಯಾಂಕಿನ 2021–22ನೇ ಸಾಲಿನ 48ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ವರ್ಚ್ಯುಯಲ್ ಆಗಿ ಭಾನುವಾರ **ದಿನಾಂಕ: 18.09.2022 ರಂದು ಬೆಳಿಗ್ಗೆ 10.00 ಘಂಟೆಗೆ** ಬ್ಯಾಂಕಿನ ಅಧ್ಯಕ್ಷರಾದ ಶ್ರೀ.ಹೆಚ್.ಸಿ.ಕೃಷ್ಣರವರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಸಭೆಯಲ್ಲಿ ಭಾಗವಹಿಸಲು ಬ್ಯಾಂಕಿನ ನಿಯತ ಸದಸ್ಯರು ಅಂದು **ಬೆಳಿಗ್ಗೆ 9.00 ಘಂಟೆಗೆ** ತೆರೆಯಲಾಗುವ ಜಾಲತಾಣ **www.dreamswebinar.com/ nationalcoopbank** ಅನ್ನು ಬಳಸಿಕೊಂಡು ತಮ್ಮ ನಿಯತ ಸದಸ್ಯತ್ವದ ಸಂಖ್ಯೆಯನ್ನು ಪಾಸ್‌ವರ್ಡ್ ಆಗಿ ನಮೂದಿಸಿ, ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

(ರಮೇಶ್.ಎಂ.ವಿ)
ಪ್ರವ್ಯವಸ್ಥಾಪಕ ನಿರ್ದೇಶಕರು.

ನೈಋತ್ಯ ರೈಲ್ವೆ Azadi Ka Amrit Mahotsav

ಓಪನ್ ಟೆಂಡರು ಸೂಚನೆ ಸಂ.: 15/SBC/22 ದಿನಾಂಕ: 12-09-2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್ ಗಳನ್ನು ಆಹ್ವಾನಿಸಿದ್ದಾರೆ,

ಕ್ರಸಂ.	ಕಾಮಗಾರಿಯ ವಿವರಗಳು	ಅಂದಾಜು ಮೌಲ್ಯ
1	**ಬೆಂಗಳೂರು ವಿಭಾಗ:** ಸಿಎಂಎಸ್ ಕ್ರಾಸಿಂಗ್‌ಗಳನ್ನು ಸ್ಥಳದಲ್ಲೇ ಆರ್‌ಡಬ್ಲ್ಯೂ–20 ಟ್ರಾನ್ಸ್‌ಲಾಮಿಕ್ ರೋಬೋಟಿಕ್ ವೆಲ್ಡಿಂಗ್ ಉಪಯೋಗಿಸಿ ಮರುಪರಿಶೀಲನೆ ಮಾಡುವುದು. ನಿರ್ವಹಣಾ ಅವಧಿಯು ಒಂದು ವರ್ಷ ಅಥವಾ 80GMT ಮರುಕಳಿಸುವ ದಿನಾಂಕದಿಂದ ಹಿಂದಿನದು ಆಗಿರುತ್ತದೆ.	ರೂ. 1,50,80,249/-
2	**ಬೆಂಗಳೂರು – ಜೋಲಾರ್‌ಪೇಟೆ ವಿಭಾಗ: ಉಪ ಕಾಮಗಾರಿ–1:** ಹಿರಿಯ ವಿಭಾಗೀಯ ಇಂಜಿನಿಯರ್/ಪೂರ್ವ/ಬೆಂಗಳೂರು ವಿಭಾಗದಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ ಒಟ್ಟು 20.859 ಕಿಮೀ ಉದ್ದದ TBR ನ ಕೆಲಸಕ್ಕೆ ಸಂಬಂಧಿಸಿದಂತೆ ಭೂಮಿಯ ಕೆಲಸ. **ಉಪ–ಕಾಮಗಾರಿ–2:** ಹಿರಿಯ ವಿಭಾಗೀಯ ಇಂಜಿನಿಯರ್ / ಪೂರ್ವ / ಬೆಂಗಳೂರು ವಿಭಾಗದ ಬಂಗಾರಪೇಟೆ – ಕೋಲಾರ ವಿಭಾಗದಲ್ಲಿ 132/200–148/500 ಎಸ್‌ಎಲ್‌ನಿಂದ ಒಟ್ಟು 16.3 ಕಿಮೀ ಉದ್ದದ ಥ್ರೂ ಬ್ಯಾಲೆಸ್ಟ್ ರಿಕೌಪ್‌ಮೆಂಟ್ ಕಾಮಗಾರಿಗೆ ಸಂಬಂಧಿಸಿದಂತೆ ಭೂಮಿಯ ಕೆಲಸ. ನಿರ್ವಹಣೆ ಅವಧಿಯು 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಯಾವುದು ನಂತರದ ಅವಧಿಯಲ್ಲಿ ಬರುತ್ತದೋ ಅದು.	ರೂ. 85,84,560/-
3	**ವೈಟ್‌ಫೀಲ್ಡ್:** ಪ್ರಸ್ತಾವನೆಯ ಪ್ರಕಾರ 1.00 ಲಕ್ಷ ಲೀ ಸಾಮರ್ಥ್ಯವುಳ್ಳ ಓವರ್ ಹೆಡ್ ಟ್ಯಾಂಕ್ (ಓಹೆಚ್‌ಟಿ) ನ ಪೂರೈಕೆ. ನಿರ್ವಹಣೆಯ ಕಾಲ: 6 ತಿಂಗಳುಗಳು.	ರೂ. 42,75,382/-
4	**ಬೆಂಗಳೂರು ವಿಭಾಗ: ಉಪ ಕಾಮಗಾರಿ–1:** ಬೆಂಗಳೂರು – ವಿಭಾಗೀಯ ಕಛೇರಿಗೆ ಬೇಕಾದ ದುರಸ್ತಿ ಕಾರ್ಯ. **ಉಪ ಕಾಮಗಾರಿ–2:** ಬೆಂಗಳೂರು – ಕೆಎಸ್‌ಆರ್ ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ 1ರ ಮೇಲೆ ಮೈಸೂರು ಎಂಡ್‌ನಲ್ಲಿ ಮೂರನೇ ಪ್ರವೇಶ ದ್ವಾರಕ್ಕೆ ಅಪ್ & ಡೌನ್ ಎಸ್ಕಲೇಟರುಗಳ ಪೂರೈಕೆ. **ಉಪ ಕಾಮಗಾರಿ–3:** ಬೆಂಗಳೂರು – ಪ್ರಸ್ತಾವನೆಯಂತೆ ಸಿಬ್ಬಂದಿ ಕಟ್ಟಡಗಳಿಗೆ (146 ನಂ.) ವಾಟರ್‌ಪ್ರೂಫಿಂಗ್ ವ್ಯವಸ್ಥೆ ಕಲ್ಪಿಸುವುದು. ನಿರ್ವಹಣೆ ಅವಧಿ 6 ತಿಂಗಳು ಅಥವಾ 1 ಮಾನ್ಸೂನ್ ಅವಧಿಗಳಲ್ಲಿ ಯಾವುದು ನಂತರದಲ್ಲಿ ಬರುತ್ತದೆಯೋ ಅದು.	ರೂ. 3,85,34,550/-
5	**ಬೆಂಗಳೂರು:** ಬೆಂಗಳೂರು ಸಿಟಿ ಯಾರ್ಡ್‌ನಲ್ಲಿ ಈಗಿರುವ ಪಿಟ್‌ಲೈನ್ 3 ಅನ್ನು ಕಿತ್ತುಹಾಕುವುದು ಮತ್ತು ಪಿಟ್‌ಲೈನ್ 3 ಅನ್ನು ಕ್ಯಾಮ್‌ಟೆಕ್ ವಿನ್ಯಾಸದೊಂದಿಗೆ ಕ್ಯಾಟ್‌ವಾಕ್‌ದೊಂದಿಗೆ ಪುನರ್‌ನಿರ್ಮಾಣ ಮಾಡುವುದು. 24 ತಿಂಗಳುಗಳ ಕಾಲಕ್ಕೆ ನಿರ್ವಹಣೆ ಮಾಡುವುದು.	ರೂ. 6,50,54,189/-
6	**ಬೆಂಗಳೂರು:** ಎಂಜಿ ಕಾಲೊನಿಯಲ್ಲಿ ಪ್ರಸ್ತುತವಾಗಿರುವ 1 ಎಂಎಲ್‌ಡಿ ಸಾಮರ್ಥ್ಯವುಳ್ಳ ವಾಟರ್ ರೀಸೈಕ್ಲಿಂಗ್ ಸ್ಥಾವರದ ಪರಿಷ್ಕರಣೆ ಮತ್ತು ವಾಟರ್ ರೀಸೈಕ್ಲಿಂಗ್ ಸ್ಥಾವರವನ್ನು 24 ತಿಂಗಳುಗಳ ಕಾಲಕ್ಕೆ ನಿರ್ವಹಣೆ ಮಾಡುವುದು.	ರೂ. 1,81,82,945/-
7	**ಬೆಂಗಳೂರು–ಸೇಲಂ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್ / ಧರ್ಮಪುರಿ ವಿಭಾಗದಲ್ಲಿ ರಸ್ತೆಯ ಮೇಲ್ಮೈನ ಸುಧಾರಣೆ ಕೆಲಸ (15 ನಂ. – ನಂ. 16, 27, 28, 36, 37, 39, 40, 52, 59, 68, 109, 132, 133, 134, 136), ಐದು ಎಲ್‌ಸಿ ನಂ. 48, 140, 141, 142, 152 ಗಳಿಗೆ ಗೇಟ್ ಲಾಡ್ಜ್‌ಗಳ ಪೂರೈಕೆ, ಮತ್ತು 10 ಶೌಚಾಲಯಗಳ ನಿರ್ಮಾಣ (ಎಲ್‌ಸಿ ಗೇಟ್ ನಂ. 36, 37, 39, 41, 45, 59, 68, 76, 82, 89 ಗಳಲ್ಲಿ). ನಿರ್ವಹಣೆಯ ಕಾಲ: 6 ತಿಂಗಳುಗಳು.	ರೂ. 71,32,059/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **06.10.2022, 15:00 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ
PUB/368/AAD/PRB/SWR/2022-23 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು
S.W.Railways | sw_rly | SWRRLY | southwesternrailway | SWRRLY

ಐಟಿಐ ನೌಕರರ ಗೃಹನಿರ್ಮಾಣ ಸಹಕಾರ ಸಂಘ ನಿ.,
ITI Employees Housing Co-operative Society Ltd.
ದೂರವಾಣಿ ನಗರ, ಬೆಂಗಳೂರು–560 016
ಉಲ್ಲೇಖ: ಐ.ಟಿ.ಐ.ಇಹೆಚ್.ಎಸ್/ಜಿ.ಬಿ.ಎಂ/04/2022–23

ಸರ್ವಸದಸ್ಯರ ತಿಳುವಳಿಕೆ ಪತ್ರ

ನಮ್ಮ ಸಹಕಾರ ಸಂಘದ 2021–2022ನೇ ಸಲಿನ 50ನೇ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 25–9–2022ರ ಭಾನುವಾರ ಬೆಳಿಗ್ಗೆ 11:00 ಘಂಟೆಯಿಂದ ವಿಡಿಯೋ ಕಾನ್ಫರೆನ್ಸ್ / ವರ್ಚುಯಲ್ ಮೀಟಿಂಗ್ ಮೂಲಕ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲು ಸಂಘದ ಅಧ್ಯಕ್ಷರಾದ **ಶ್ರೀ ಜಿ. ಎಸ್. ರಾಮಸ್ವಾಮಯ್ಯ** ನವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಗುವುದು.

–: ಕಾರ್ಯಕ್ರಮಗಳು :–

1. ಪ್ರಾರ್ಥನೆ
2. ಅಧ್ಯಕ್ಷರಿಂದ ಸ್ವಾಗತ ಭಾಷಣ
3. ದಿನಾಂಕ 23–12–2021 ರಂದು ನಡೆದ 49ನೇ ಸರ್ವಸದಸ್ಯರ ಮಹಾಸಭೆಯ ನಡವಳಿಕೆಗಳ ದೃಢೀಕರಣ
4. 2021–22 ನೇ ಸಾಲಿನ ಆಡಳಿತ ವರದಿ
5. 2021–22 ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಅಂಗೀಕಾರ
6. 2022–23 ನೇ ಸಾಲಿನ ಮುಂಗಡ ಪತ್ರದ ಅಂಗೀಕಾರ
7. ಸಂಘದ ಎಳ್ಳುಕುಂಟೆ ಬಡಾವಣೆಯಲ್ಲಿ ಬಾಕಿ ಉಳಿದಿರುವ ನಿರ್ಮಾಣ ಕೆಲಸ ಕಾರ್ಯಗಳನ್ನು ಹೊಸ ಭೂ ಅಭಿವೃದ್ಧಿದಾರರೊಂದಿಗೆ ಒಪ್ಪಂದ ಮಾಡಿಕೊಂಡು ಪೂರ್ಣಗೊಳಿಸುವ ಬಗ್ಗೆ
8. ಸಂಘದಲ್ಲಿ 100/– ರೂ. ಷೇರು ಹಣ ಹೊಂದಿರುವ ಸದಸ್ಯರನ್ನು ಕೈಬಿಟ್ಟಿರುವ ಬಗ್ಗೆ
9. ಸಂಘದ ಹೊಸ ಬಡಾವಣೆ ನಿರ್ಮಾಣ ಮಾಡುವ ಬಗ್ಗೆ
10. ಸಂಘಕ್ಕೆ ಹೊಸ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ
11. ಇತರೆ ವಿಷಯಗಳು ಸಭಾಧ್ಯಕ್ಷರ ಅಪ್ಪಣೆ ಮೇರೆಗೆ
12. ವಂದನಾರ್ಪಣೆ

ಸದಸ್ಯರು ಮಹಾಸಭೆಗಾಗಿ ಈ ಲಿಂಕನ್ನು **https://krnv.co.in/itiehbcs/** ಉಪಯೋಗಿಸಿ

ಕಾರ್ಯಕಾರಿ ಸಮಿತಿ ಆಜ್ಞಾನುಸಾರ
ಸ್ಥಳ: ಬೆಂಗಳೂರು ಸಹಿ/– **(ಶಿವಾನಂದ ಮಠಪತಿ)**
ದಿನಾಂಕ: 03–09–2022 ಮುಖ್ಯ ಕಾರ್ಯನಿರ್ವಾಹಕರು

PUBLIC WORKS DEPARTMENT
Office of the Executive Engineer,
No.1, Buildings Division, SJP Campus, Bangalore.

FT No. EE/Bld1/AE-1/19/2022-23. Date:14.09.2022

INVITATION FOR SHORT TERM TENDER (IFT)

The Executive Engineer No.1, Buildings Division, Bangalore invites tenders from eligible tenderers for the construction of works detailed in the Table below. **Name of the work: Detailed Estimate for Renovation Work at Treasury Network Management Centre, South Wing, Khanija Bhavana, Race Course Road, Bangalore.** KPWD/2022-23/BD/Work_Indent 156828. Apprx value of work: **Rs.28.66 Lakhs. E.M.D 2% : Rs.57,500/-.** Cost of the document (In Rs.) **As per e-portal.**

Calendar of Work: 1) Tender documents may be downloaded from the e-procurement portal of the Government of Karnataka **upto 21.09.2022.** 2) Tender must be submitted online through e-procurement portal on or **before 4.00 p.m. on 21.09.2022** and the opening of tenders will be as per the e-procurement portal guidelines. Further particulars can be obtained from the above office during working hours on working days or from **website:https://eproc.karnataka.gov.in**

Sd/-
Executive Engineer,
No.1, Buildings Divisions, Bengaluru.

ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
'ರಜತ ಭವನ" ನಂ. 106, ಆರ್. ವಿ. ರಸ್ತೆ, ವಿ.ವಿ.ಪುರಂ, ಬೆಂಗಳೂರು–560 004
ESTD : 1971
RBI Licence No. : UBD KA 550 P
ಫೋನ್: 080-22422461/3, 26500879, 26622462
SREE SUBRAMANYESWARA CO-OPERATIVE BANK LTD.
'Rajatha Bhavana', # 106, R. V. Road, Visveswarapuram, Bengaluru-560 004
Ph: 080-22422461, 22422463, 26500879, 26622462,
Fax: 080-41312650, E-mail: sscbank@yahoo.com, Website: www. subcobank.com

2021–2022 ನೇ ಸಾಲಿನ
ಬ್ಯಾಂಕಿನ 52ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 2021–2022 ನೇ ಸಾಲಿನ 52ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 23–09–2022ನೇ ಶುಕ್ರವಾರ ಬೆಳಿಗ್ಗೆ 10:00 ಘಂಟೆಗೆ **'ವಿಡಿಯೋ ಕಾನ್ಫರೆನ್ಸ್ ಮತ್ತು ವೆಬ್‌ಕಾಸ್ಟ್ ರಿಲೇ ಮುಖಾಂತರ"** ಏರ್ಪಡಿಸಲಾಗಿದೆ.

ಈಗಾಗಲೇ ಎಲ್ಲಾ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಗಳನ್ನು ದೃಢೀಕೃತ ಅಂಚೆ ಮೂಲಕ ಕಳುಹಿಸಲಾಗಿರುತ್ತದೆ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಈ ಪ್ರಕಟಣೆಯನ್ನು ಆಹ್ವಾನ ಪತ್ರಿಕೆಯೆಂದು ತಿಳಿದು ವರ್ಚುವಲ್ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ಸವಿನಯ ಪ್ರಾರ್ಥನೆ.

ಮಾನ್ಯ ಸದಸ್ಯರುಗಳು ದಿನಾಂಕ: 23–09–2022ರಂದು ಬೆಳಿಗ್ಗೆ 10:00 ಘಂಟೆಯಿಂದ 1:00 ಘಂಟೆಯೊಳಗೆ **www.dreamswebinar.com/sscbank** ಲಿಂಕ್ ಅನ್ನು ಉಪಯೋಗಿಸಿ ತಮ್ಮ ಸ್ಮಾರ್ಟ್ ಮೊಬೈಲ್ ಫೋನ್ / ಟ್ಯಾಬ್/ ಕಂಪ್ಯೂಟರ್ ಮುಖಾಂತರ ಲಾಗಿನ್ ಪುಟಕ್ಕೆ ಪ್ರವೇಶಿಸಿ **ತಮ್ಮ ಹೆಸರು ಹಾಗೂ ಸದಸ್ಯತ್ವ ಸಂಖ್ಯೆ ನಮೂದಿಸಿ** ಲಾಗಿನ್ ಆಗುವ ಮೂಲಕ ವರ್ಚುವಲ್ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಸದರಿ ಯಶಸ್ವಿ ಲಾಗಿನ್ ಅನ್ನು ಮಹಾಸಭೆಯ ಹಾಜರಾತಿಯೆಂದು ಪರಿಗಣಿಸಲಾಗುವುದು.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸ್ಥಳ: ಬೆಂಗಳೂರು **(ಕೆ.ಎನ್. ಕೃಷ್ಣಯ್ಯ ಶೆಟ್ಟಿ)**
ದಿನಾಂಕ: 30–07–2022 ಪ್ರಧಾನ ವ್ಯವಸ್ಥಾಪಕರು (ಪ್ರಭಾರ)

ವಿಶೇಷ ಸೂಚನೆ: ಮಹಾ ಸಭೆಯಲ್ಲಿ ಸದಸ್ಯರಿಗೆ ಖುದ್ದು ಹಾಜರಾತಿಗೆ ಅವಕಾಶವಿರುವುದಿಲ್ಲ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉಬ/49/2022–23/1288 ದಿನಾಂಕ: 17–09–2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ರಾಣಿ. ಆರ್ ಬಿನ್ ರಾಮಾಂಜಿನಪ್ಪ	ದೇವನಹಳ್ಳಿ	ವಿಜಯಪುರ	ವೆಂಕಟಗಿರಿಕೋಟೆ	65/4	0–2.12	ವ್ಯವಸಾಯ	ವಾಣಿಜ್ಯ
2		ದೇವನಹಳ್ಳಿ	ವಿಜಯಪುರ	ವೆಂಕಟಗಿರಿಕೋಟೆ	66/13	0–3.04	ವ್ಯವಸಾಯ	ವಾಣಿಜ್ಯ
3	ಶ್ರೀ ಪಿ. ನವೀನ್ ಕುಮಾರ್ ಬಿನ್ ಸಿ. ಪಿಳ್ಳವೆಂಕಟಶಾಮಪ್ಪ	ದೇವನಹಳ್ಳಿ	ವಿಜಯಪುರ	ವೆಂಕಟಗಿರಿಕೋಟೆ	65/13	0–2.04	ವ್ಯವಸಾಯ	ವಾಣಿಜ್ಯ
4		ದೇವನಹಳ್ಳಿ	ವಿಜಯಪುರ	ವೆಂಕಟಗಿರಿಕೋಟೆ	66/7	0–0.12	ವ್ಯವಸಾಯ	ವಾಣಿಜ್ಯ
5		ದೇವನಹಳ್ಳಿ	ವಿಜಯಪುರ	ವೆಂಕಟಗಿರಿಕೋಟೆ	66/12	0–05	ವ್ಯವಸಾಯ	ವಾಣಿಜ್ಯ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳಲ್ಲಿ ವ್ಯವಸಾಯ ಮಾಡಲು ಸೂಕ್ತವಾಗಿರುವುದಿಲ್ಲ ಹಾಗೂ ಪರಿಸರದಲ್ಲಿ ವಾಣಿಜ್ಯ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನುಗಳ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನುಗಳಲ್ಲಿ ವಾಣಿಜ್ಯ ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **ವ್ಯವಸಾಯ ವಲಯ** ದಿಂದ **ವಾಣಿಜ್ಯ** ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ವಾಸಾಸಂಇ/ವಾ.ಪ್ರ/2281/ಅಡ್ವಟೋರ್/2022–23 ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ನಗರದಲ್ಲಿ ಇಂದು

ಉದ್ಯೋಗ ಮೇಳ: ಅತಿಥಿಗಳು: ಡಾ.ಸಿ. ಎನ್. ಅಶ್ವತ್ಥನಾರಾಯಣ, ವಂಶಿಧರ್ ಬಾಬು, ಉದ್ಘಾಟನೆ: ಸುರೇಶ ರಾಮು, ಆಯೋಜನೆ: ಬಾಲ್ಕ್, ಸ್ಥಳ: ಓಂಸಾಯಿ ಕಾಲೇಜು, ಸುಂಕದಕಟ್ಟೆ, ಬೆಳಿಗ್ಗೆ 8

7ನೇ ಆವೃತ್ತಿಯ ಎಂಬೆಸ್ಸಿ 'ಪೆಡಲ್ ಫಾರ್ ದಿ ಪ್ಲ್ಯಾನೆಟ್': ಆಯೋಜನೆ: ಎಂಬೆಸ್ಸಿ, ಸ್ಥಳ: ಎಂಬೆಸ್ಸಿ ಮಾನ್ಯತಾ ಟೆಕ್ ಬ್ಯುಸಿನೆಸ್ ಪಾರ್ಕ್, ಸಂಜೆ 8.30

ಸುಮಾ ಮತ್ತು ಸತೀಶ್ ದಂಪತಿಯ ದಾಂಪತ್ಯದ ಬೆಳ್ಳಿ ಸಂಭ್ರಮ, ಸುಮಾ ಸತೀಶ್ ಅವರ 'ಹಾದಿಯಲ್ಲಿನ ಮುಳ್ಳುಗಳು', 'ವಚನ ಸಿರಿ' ಪುಸ್ತಕಗಳ ಬಿಡುಗಡೆ: ಎಸ್.ಜಿ. ಸಿದ್ದರಾಮಯ್ಯ, ಬೈರಮಂಗಲ ರಾಮೇಗೌಡ, ಕುಮಾರಸ್ವಾಮಿ ಬೆಜ್ಜಿಹಳ್ಳಿ, ಅಧ್ಯಕ್ಷತೆ: ಕೆ.ಎಲ್. ನಟರಾಜ್, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು, ಸ್ಥಳ: ಮಾನಂದಿ ನಂಜುಂಡಶೆಟ್ಟಿ ಸಭಾಂಗಣ, ವಿ.ವಿ.ಪುರಂ, ಬೆಳಿಗ್ಗೆ 10

ಪೊಲೀಸ್ ಸಾಹಿತ್ಯ ಸಂಭ್ರಮ–2022: ಉದ್ಘಾಟನೆ: ಆರಗ ಜ್ಞಾನೇಂದ್ರ, ಅತಿಥಿಗಳು: ನಾಗತಿಹಳ್ಳಿ ಚಂದ್ರಶೇಖರ್, ಪ್ರವೀಣ್ ಸೂದ್, ಸಿ.ಎಚ್. ಪ್ರತಾಪ್ ರೆಡ್ಡಿ, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಆಯೋಜನೆ: ಕರ್ನಾಟಕ ರಾಜ್ಯ ಪೊಲೀಸ್, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಬೆಳಿಗ್ಗೆ 10

ರಾಜ್ಯ ಮಟ್ಟದ ಹಿಂದುಳಿದ ವರ್ಗಗಳ ಅಧಿವೇಶನ: ಉದ್ಘಾಟನೆ: ಬಾಲಚಂದ್ರ ಜಾರಕಿಹೊಳಿ, ಅತಿಥಿಗಳು: ರಕ್ಷಾ ರಾಮಯ್ಯ, ಪಿ.ಆರ್. ರಮೇಶ್, ಅಧ್ಯಕ್ಷತೆ: ಎಂ. ಶ್ರೀನಿವಾಸ್ ಬಾಬು, ನಿಖಿಲ್ ಕುಮಾರ್‌ಸ್ವಾಮಿ, ಪಿ. ಗುರುಸ್ವಾಮಿ, ಆಯೋಜನೆ: ಕರ್ನಾಟಕ ಪ್ರದೇಶ ಹಿಂದುಳಿದ ವರ್ಗಗಳ ಮಹಾ ಒಕ್ಕೂಟ, ಸ್ಥಳ: ದೇವರಾಜ ಅರಸು ಭವನ, ವಸಂತನಗರ, ಬೆಳಿಗ್ಗೆ 10

ಭಕ್ತಿ ಸಮರ್ಪಣೆ: ಅತಿಥಿಗಳು: ವಿ. ಸೋಮಣ್ಣ, ಆರ್. ಅಶೋಕ, ಬಿ.ಸಿ. ನಾಗೇಶ್, ಎಸ್.ಆರ್. ವಿಶ್ವನಾಥ್, ಗೊ. ರು. ಚನ್ನಬಸಪ್ಪ, ಶಂಕರ್ ಮಹದೇವ ಬಿದರಿ, ಆಯೋಜನೆ: ತರಳಬಾಳು ಕೇಂದ್ರ ಸಮಿತಿ, ಸ್ಥಳ: ತರಳಬಾಳು ಕೇಂದ್ರ, ಆರ್. ಟಿ. ನಗರ, ಬೆಳಿಗ್ಗೆ 10.30

ಶ್ರೀಮತಿ ಎಚ್.ಎಸ್. ಅವರ 'ಅಧಿಕಾರ ಮತ್ತು ಅಧೀನತೆ ಕೇಟ್ ಮಿಲೆಟ್ ವಿಚಾರಗಳು' ಪುಸ್ತಕ ಬಿಡುಗಡೆ: ಬಸವರಾಜ ಕಲ್ಗುಡಿ, ಅತಿಥಿಗಳು: ಆರ್. ತಾರಿಣಿ ಶುಭದಾಯಿನಿ, ದು. ಸರಸ್ವತಿ, ಆಯೋಜನೆ: ಆಕಾರ ಪ್ರಕಾಶನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಬೆಂಗಳೂರು 30ನೇ ಘಟಿಕೋತ್ಸವ: ಅಧ್ಯಕ್ಷತೆ: ಉದಯ್ ಉಮೇಶ್ ಲಲಿತ್, ಅತಿಥಿಗಳು: ನಂದನ ನಿಲೇಕಣಿ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 10

ಸುವರ್ಣ ಮಹೋತ್ಸವ, 43ನೇ ಪ್ರತಿಭಾ ಪುರಸ್ಕಾರ ಸಮಾರಂಭ: ಸಾನ್ನಿಧ್ಯ: ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಆರ್. ಅಶೋಕ, ಆಯೋಜನೆ: ಕರ್ನಾಟಕ ಭೋವಿ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಜಸ್ಮಾದೇವಿ ಮಂದಿರ ಕಲ್ಯಾಣ ಮಂಟಪ, ಆಸ್ಟಿನ್‌ಟೌನ್ ಲೇಔಟ್, ಬೆಳಿಗ್ಗೆ 11

ವಿಶ್ವಮಾನವ ಸಾಂಸ್ಕೃತಿ ಪ್ರತಿಷ್ಠಾನ ದಶಮಾನೋತ್ಸವ ಸಂಭ್ರಮ, ಸಾಧಕರಿಗೆ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಆರ್.ಕೆ. ನಲ್ಲೂರು ಪ್ರಸಾದ್, ಎ.ಎಚ್. ಬಸವರಾಜು, ಅತಿಥಿಗಳು: ಜೈಜಗದೀಶ್, ಎಂ.ಪ್ರಕಾಶಮೂರ್ತಿ, ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಕಸ್ತೂರಿ ಸಭಾಂಗಣ, ಗಾಂಧಿ ಭವನ, ಶಿವಾನಂದ್ ಸರ್ಕಲ್, ಬೆಳಿಗ್ಗೆ 11

ಮಂಥನ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ತೇಜಸ್ವಿ ಸೂರ್ಯ, ಕರಿಸಿದ್ದಪ್ಪ, ಅಧ್ಯಕ್ಷತೆ: ಐ.ಎಸ್. ಪ್ರಸಾದ್, ಪ್ರಶಾಂತ್ ಪ್ರಕಾಶ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಸ್ಥಳ: ಜ್ಞಾನಜ್ಯೋತಿ ಆಡಿಟೋರಿಯಂ, ಸೆಂಟ್ರಲ್ ಕಾಲೇಜ್ ಆವರಣ, ಬೆಳಿಗ್ಗೆ 11

ಸ್ವರಾಮೃತ: ಗಾಯನ: ಲಕ್ಷ್ಮೀ ನಾಗರಾಜ್, ಇಂದು ನಾಗರಾಜ್, ಶ್ರೀಹರ್ಷ ಮೈಸೂರು, ಅತಿಥಿಗಳು: ಆರ್.ಕೆ. ಪದ್ಮನಾಭ, ತೇಜಸ್ವಿನಿ ಅನಂತಕುಮಾರ್, ಡಾ. ಸಿ. ರಾಮಚಂದ್ರ, ಯು.ಬಿ. ವೆಂಕಟೇಶ್, ಆಯೋಜನೆ: ಲಕ್ಷ್ಮೀಶ ಫೌಂಡೇಶನ್, ಸ್ಥಳ: ಆರ್. ವಿ. ಡೆಂಟಲ್ ಕಾಲೇಜ್ ಸಭಾಂಗಣ, ಜೆ.ಪಿ. ನಗರ, ಮಧ್ಯಾಹ್ನ 3.45

ಉಪನ್ಯಾಸ ಕಾರ್ಯಕ್ರಮ: ವಿಷಯ: ಆನಂದ ಕುಮಾರಸ್ವಾಮಿ: ಭಾರತದ ವಿವೇಕ, ಉಪನ್ಯಾಸಕರು: ಸೂರ್ಯಪ್ರಕಾಶ್ ಪಂಡಿತ್, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ತರಳಬಾಳು ಗ್ರಂಥಾಲಯ, ಆರ್.ಟಿ. ನಗರ, ಸಂಜೆ 4

ಸಾಧಕರಿಗೆ ಸನ್ಮಾನ, ಇಂಡಿಯಾ ಫಾರ್ ಐಎಎಸ್ ಅಪ್ಲಿಕೇಷನ್ ಬಿಡುಗಡೆ ಸಮಾರಂಭ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಕೋಟ ಶ್ರೀನಿವಾಸ ಪೂಜಾರಿ, ಮಹಾಂತೇಶ್.ಜಿ.ಕೆ., ಅಧ್ಯಕ್ಷತೆ: ಸಿ.ಎಸ್. ಕೇದಾರ್, ಆಯೋಜನೆ: ಇಂಡಿಯಾ ಫಾರ್ ಐಎಎಸ್, ಸ್ಥಳ: ತೆರಿಗೆ ಭವನ, ನಾಗರಭಾವಿ, ಸಂಜೆ 5

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಪ್ರಶಸ್ತಿ ಪ್ರದಾನ: ವಿ. ಸುನಿಲ್‌ಕುಮಾರ್, ಅಧ್ಯಕ್ಷತೆ: ಪಿ. ದಯಾನಂದ್ ಪೈ, ಅಧ್ಯಕ್ಷತೆ: ಕೆ. ಜಗದೀಶ್ ಪೈ, ಅತಿಥಿಗಳು: ವಿ. ಸದಾನಂದ ಗೌಡ, ಆಯೋಜನೆ: ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಸ್ಥಳ: ಕಾಶಿಮಠ, ಮಲ್ಲೇಶ್ವರ, ಸಂಜೆ 5

ಸಂಗೀತ ಕಾರ್ಯಕ್ರಮ: ಗಾಯನ: ಬಿ.ಎಸ್. ಆನಂದ್, ಪಿಟೀಲು: ವಿಶ್ವಜಿತ್, ಮೃದಂಗ: ಜಿ.ಎಸ್. ನಾಗರಾಜ್, ಘಟ್ಟ: ಶ್ರೀನಿಧಿ ಕೌಂಡಿನ್ಯ, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

ಪುರಂದರ ಗಾನ ಕುಸುಮ: ಗಾಯನ: ಆರ್.ಕೆ. ಪದ್ಮನಾಭ, ಪಿಟೀಲು: ಸಿ.ಎನ್. ಚಂದ್ರಶೇಖರ್, ಮೃದಂಗ: ಸಿ. ಚೆಲುವರಾಜು, ಘಟ: ರಾಘವೇಂದ್ರ ಪ್ರಕಾಶ್, ಆಯೋಜನೆ: ಪುರಂದರದಾಸ ಮೆಮೋರಿಯಲ್ ಟ್ರಸ್ಟ್, ಸ್ಥಳ: ಪುರಂದರ ಮಂಟಪ್ಪ ಇಸ್ರೊ ಲೇಔಟ್, ಸಂಜೆ 6

ಸುಯೋಧನ ನಾಟಕ ಪ್ರದರ್ಶನ: ರಚನೆ: ಎಸ್.ವಿ. ಕೃಷ್ಣ ಶರ್ಮಾ, ನಿರ್ದೇಶನ: ಶಿವು ಹೊನ್ನಿಗನಹಳ್ಳಿ, ಆಯೋಜನೆ: ಬಿಂಕ ಬಿನ್ನಾಣರು ರಂಗ ತಂಡ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6.30

ರಾಣಿ ವಿಜಯಾ ದೇವಿ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ: ಅತಿಥಿಗಳು: ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಗೀತ ಕಛೇರಿ: ಗಾಯನ: ಮಾನಸಿ ಪ್ರಸಾದ್, ವೀಣೆ: ಸುಮಾ ಸುಧೀಂದ್ರ, ಪಿಟೀಲು: ಜೋತ್ಸ್ನಾ ಶ್ರೀಕಾಂತ್, ಕೊಳಲು: ಅಮಿತ್ ನಾಡಿಗ್, ಆಯೋಜನೆ: ಏಮ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವಯ್ಯಾಲಿ ಕಾವಲ್, ಸಂಜೆ 6.30

DS MAX ISO 9001:2015 COMPANY
DR. K V SATISH, CHAIRMAN

A prosperous home is where there is an abundance of Joy, unconditional Love and endless Smiles. We create spaces to bond you and your loved ones beyond any boundaries.

Come & celebrate life at DS-Max Homes, just made for you with everything
UNLIMITED & A LIFETIME OF ASSURANCE.

Dr. K V S - Chairman, DS-MAX Properties

Our lifetime assurance include: Rental Management | Facility Management | Interiors | Modification | Upgrade | Resale*

APARTMENTS FOR SALE IN VARIOUS LOCATIONS

PRM/KA/RERA/1251/308/PR/201201/003733	PRM/KA/RERA/1251/446/PR/210312/004002	PRM/KA/RERA/1251/446/PR/110722/005059	PRM/KA/RERA/1251/309/PR/181122/002151	PRM/KA/RERA/1251/308/PR/290122/004660	PRM/KA/RERA/1251/309/PR/180120/001878	PRM/KA/RERA/1251/308/PR/280222/004739
ELECTRONIC CITY	K R PURAM	BEGUR	THANISANDRA	SARJAPURA	THANISANDRA MAIN ROAD	CHANDAPURA
NEAR BOSCH HOSA ROAD JUNCTION	NEAR GARDEN CITY UNIVERSITY	10 MINS. SILK BOARD (MADIWALA)	NEAR KNS INSTITUTE OF TECHNOLOGY	SARJAPURA - ATTIBELE ROAD	10 MINS. FROM MANYATA TECH PARK	10 MINS. NARAYANA HRUDAYALAYA
₹ 35.00 - 70.00 Lacs*	₹ 39.36 - 65.13 Lacs*	₹ 32.64 - 50.80 Lacs*	₹ 35.16 - 41.16 Lacs*	₹ 29.04 - 37.35 Lacs*	₹ 1.20 - 1.49 Crores*	₹ 27.45 - 37.20 Lacs*
2 & 3-BHK	2 & 3-BHK	2 & 3-BHK	2-BHK	2 & 3-BHK	3-BHK	2 & 3-BHK
₹ 3,500 / Sq. Ft.	₹ 3,800 / Sq. Ft.	₹ 4,000 / Sq. Ft.	READY TO OCCUPY	₹ 3,000 / Sq. Ft.	READY TO OCCUPY	₹ 3,000 / Sq. Ft.
9164 045 000	8880 438 000	8880 472 472	8880 461 461	9164 122 000	8088 779 779	8880 013 310

*Prices mentioned are base price and may vary with dimensions, floors, and availability. *Returns mentioned in the artwork are based on the price trends from various property portals over a period of time, buyers are requested to do their own research before deciding on the property. *Brand names mentioned in this advertisement are for demarcation & not for promotion. Travel time may vary with real-time traffic conditions and the route followed to reach the destination, please check your maps for precise and accurate travel time from your location. For more details/information about the projects, visit: www.rera.karnataka.gov.in

*T & C Apply

www.dsmaxproperties.com ಡಿಎಸ್ ಮ್ಯಾಕ್ಸ್

ದಾಸರಹಳ್ಳಿ ವಲಯ: ಕೈಗಾರಿಕೆಗಳತ್ತ ಕೊಳಕು; ಬಡಾವಣೆಗಳಲ್ಲಿ ಜಿನುಗುವ ನೀರು

ಕುಗ್ಗಿದ ಕಾಲುವೆಯಲ್ಲಿ ಕಲ್ಮಶ ರಾಶಿ

• ಆರ್. ಮಂಜುನಾಥ್



ಬೆಂಗಳೂರು: ದಾಸರಹಳ್ಳಿ ವಲಯದ ರಾಜಕಾಲುವೆ ಹಾಗೂ ಕೆರೆಗಳ ಒತ್ತುವರಿಯಿಂದ ಪೀಣ್ಯ ಕೈಗಾರಿಕೆ ಪ್ರದೇಶ ಅತಿ ಹೆಚ್ಚು ಸಂಕಷ್ಟಕ್ಕೆ ಒಳಗಾಗಿದೆ. ಇದರ ಜೊತೆಗೆ ಕೆರೆ ಸುತ್ತಮುತ್ತ ಇರುವ ಸಣ್ಣ ಬಡಾವಣೆಗಳಲ್ಲಿ ಮಳೆ ಬಂದಾಗ ಮನೆಗೆ ನೀರು ನುಗ್ಗಿ ಜನ ಪರದಾಡುತ್ತಾರೆ. ಕಾಲುವೆಗಳ ಒತ್ತುವರಿ ಹಾಗೂ ಹೂಳು ತುಂಬಿರುವುದರಿಂದ ಹಲವು ಬಡಾವಣೆಗಳೂ ಜಲಾವೃತವಾಗುತ್ತವೆ. ಬಿಬಿಎಂಪಿ ಗುರುತಿಸಿರುವ ನಕ್ಷೆ ಹಾಗೂ ಸಂಖ್ಯೆಗಿಂತ ಹೆಚ್ಚು ಪ್ರಮಾಣದಲ್ಲಿ ರಾಜಕಾಲುವೆ ಇಲ್ಲಿ ಒತ್ತುವರಿಯಾಗಿರುವುದು ಕಂಡುಬರುತ್ತದೆ.

ಬಾಗಲಗುಂಟೆ ಸಿದ್ದೇನಹಳ್ಳಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತನ್ನ ಬಡಾವಣೆಗಾಗಿ ಸುಮಾರು 25 ಸಾವಿರ ಚದರ ಮೀಟರ್ ರಾಜಕಾಲುವೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡಿದೆ. ಇದಲ್ಲದೆ, ಬಡಾವಣೆ, ರಸ್ತೆ, ಕೈಗಾರಿಕೆ, ಕೃಷಿ, ತೆರೆದ ಪ್ರದೇಶ, ಹಲವು ವ್ಯಕ್ತಿಗಳು ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದಾರೆ. ಜಲಮಂಡಳಿ ಕೂಡ ರಾಜಕಾಲುವೆಯಲ್ಲೇ ಬೃಹತ್ ಕೊಳವೆ ಮಾರ್ಗ ನಿರ್ಮಿಸಿರುವುದು ಈ ಭಾಗದಲ್ಲಿ ಮಳೆನೀರು ಉಕ್ಕಿಹರಿಯಲು ಮತ್ತೊಂದು ಕಾರಣ.

ತುಮಕೂರು ರಸ್ತೆಗೆ ಹೊಂದಿಕೊಂಡಂತಿರುವ ದಾಸರಹಳ್ಳಿ ಕೆರೆಯ ರಾಜಕಾಲುವೆ ಒಂದು ಭಾಗದಿಂದ ಮತ್ತೊಂದು ಬದಿಗೆ ಹರಿಯಲು ಸ್ಥಳವನ್ನೇ ಹೊಂದಿಲ್ಲ. ಮುಂದೆ 8ನೇ ಮೈಲುಗಲ್ಲು ರಸ್ತೆಯ ಸಮೀಪವೂ ರಾಜಕಾಲುವೆ ಮುಖ್ಯರಸ್ತೆಯಲ್ಲಿ ಮತ್ತೊಂದೆಡೆಗೆ ಸಂಪರ್ಕ ಕಡಿದುಕೊಂಡಿದೆ. ಹೀಗಾಗಿ ಮಳೆ ಬಂದಾಗ ರಸ್ತೆ ಜಲಾವೃತವಾಗುತ್ತದೆ.

ನೆಲಗದರನಹಳ್ಳಿ ಕೆರೆ ಭಾಗದಲ್ಲಿರುವ ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿ ರಾಜಕಾಲುವೆಯ ನೀರಿನ ಜೊತೆಗೆ ಕಸ-ಕಲ್ಮಶವೆಲ್ಲ ತುಂಬಿಕೊಳ್ಳುತ್ತದೆ. ಈ ಭಾಗದಲ್ಲಿ ಕೆಲವು ಕೈಗಾರಿಕೆಗಳಿಂದಲೂ ರಾಜಕಾಲುವೆ ಒತ್ತುವರಿಯಾಗಿದೆ. ಇನ್ನು ಈ ಭಾಗದಲ್ಲಿ ರಾಸಾಯನಿಕ ತ್ಯಾಜ್ಯವನ್ನೂ ರಾಜಕಾಲುವೆಗೆ ಹರಿಸಲಾಗುತ್ತಿದೆ. ಇದು ಅರ್ಕಾವತಿ ನದಿಯ ಹಳ್ಳವನ್ನು ಸೇರುತ್ತದೆ. ಈ ಬಗ್ಗೆ ರಾಜ್ಯ ಮಾಲಿನ್ಯ ನಿಯಂತ್ರಣ ಇಲಾಖೆ ಕ್ರಮ ಕೈಗೊಂಡಿಲ್ಲ.

ಬಾಗಲಗುಂಟೆ, ಮಲ್ಲಸಂದ್ರ ಕೆರೆಗಳನ್ನು ಬಿಬಿಎಂಪಿ ತನ್ನ ನಕ್ಷೆಯಲ್ಲಿ ಮಾಯ ಮಾಡಿದೆ. ಇದರ ಜೊತೆಯಲ್ಲಿ ಮೂರ್ನಾಲ್ಕು ಕೆರೆಗಳನ್ನು ಕಪ್ಪಾಗಿಸಿದೆ. ನೆಲಗದರನಹಳ್ಳಿ ಕೆರೆ, ದಾಸರಹಳ್ಳಿ ಕೆರೆ, ಕಮ್ಮಗೊಂಡನಹಳ್ಳಿ ಕೆರೆಗಳ ಕೆಳ, ಮೇಲ್ಭಾಗದಲ್ಲಿರುವ ಬಡಾವಣೆಗಳಲ್ಲಿ ರಾಜಕಾಲುವೆಗಳು ಇಲ್ಲದೆ, ನೀರು ಜಿನುಗುತ್ತಿರುತ್ತದೆ.

ತೆರಿಗೆ ಬೇಕು, ಸೌಕರ್ಯ ಕೊಡಲ್ಲ

‘ಪೀಣ್ಯ ಕೈಗಾರಿಕೆ ಪ್ರದೇಶಗಳಲ್ಲಿನ ಅವ್ಯವಸ್ಥೆಯಿಂದಾಗಿ ಕಳೆದ ಬಾರಿ ಮಳೆ ಬಂದಾಗ ಕೋಟ್ಯಂತರ ರೂಪಾಯಿ ಮೌಲ್ಯದ ಸಾಮಗ್ರಿಗಳು, ಕಚ್ಚಾ ವಸ್ತುಗಳಿಗೆ ಹಾನಿಯಾಗಿತ್ತು. ಈ ನಷ್ಟವನ್ನು ಯಾರೂ ತುಂಬಿಕೊಡಲಿಲ್ಲ. ಬಿಬಿಎಂಪಿಗೆ ತೆರಿಗೆ ಬೇಕು, ಸರ್ಕಾರಕ್ಕೆ ನಮ್ಮಿಂದ ಆದಾಯ ಬೇಕು. ಆದರೆ ಇಲ್ಲಿ ರಾಜಕಾಲುವೆಗಳಿಂದ ಉಕ್ಕಿ ಹರಿಯುವ ಕೊಳಕು ನೀರು, ಕಲ್ಮಶ ಹಾಗೂ ಪ್ಲಾಸ್ಟಿಕ್ ತ್ಯಾಜ್ಯಗಳು ಕೈಗಾರಿಕೆಗಳಿಗೆ ಸೇರಿಕೊಳ್ಳುವುದನ್ನು ತಪ್ಪಿಸುತ್ತಿಲ್ಲ. ಈ ಬಗ್ಗೆ ಸಾಕಷ್ಟು ಬಾರಿ ದೂರು ನೀಡಲಾಗಿದೆ’ ಎನ್ನುತ್ತಾರೆ ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿರುವ ಉದ್ಯಮಿ ಪ್ರಮೋದ್ ಬಾಳಿಗ.

ದಾಸರಹಳ್ಳಿ ವಲಯ

165	ಒಟ್ಟು ಒತ್ತುವರಿ ಸ್ಥಳ
39	ತೆರವು
126	ಬಾಕಿ ಒತ್ತುವರಿ
75,674	ಚದರ ಮೀಟರ್ ಒತ್ತುವರಿ

ಎಲ್ಲೆಲ್ಲಿ?

ಗಂಗಮ್ಮನಗುಡಿ ಪೊಲೀಸ್ ಠಾಣೆಯಿಂದ ಅಬ್ಬಿಗೆರೆ, ಚಿಕ್ಕಸಂದ್ರ, ಶೆಟ್ಟಿಹಳ್ಳಿ, ಕಮ್ಮಗೊಂಡನಹಳ್ಳಿ, ಮಲ್ಲಸಂದ್ರ, ಬಾಗಲಗುಂಟೆ, ಸಿದ್ದೇನಹಳ್ಳಿ, ದಾಸರಹಳ್ಳಿ, ಚೊಕ್ಕಸಂದ್ರ, ನಾಗಸಂದ್ರ, ನೆಲಗದರೇನಹಳ್ಳಿ, ಹೆಗ್ಗನಹಳ್ಳಿ.

ಮಳೆ ನೀರು ಇಂಗಿಸಲಿ

ರಾಜಕಾಲುವೆಗಳು ಉಕ್ಕುವುದನ್ನು ಕಡಿಮೆ ಮಾಡಲು ಸರ್ಕಾರವು ಸಾರ್ವಜನಿಕ ಪ್ರದೇಶಗಳಲ್ಲಿ ಮಳೆ ನೀರು ಸಂಗ್ರಹ ಮಾಡಬೇಕು. ಪ್ರತಿ ಪ್ರದೇಶದಲ್ಲಿ ಅತ್ಯಂತ ಕೆಳಮಟ್ಟದಲ್ಲಿ ಮಳೆ ನೀರು ಇಂಗಿಸುವ ವ್ಯವಸ್ಥೆ ಮಾಡಬೇಕು. ಕೈಗಾರಿಕೆ ಪ್ರದೇಶಗಳಲ್ಲಿ ಹೆಚ್ಚುವರಿಯಾಗಿ, ರಾಜಕಾಲುವೆಗಳಲ್ಲಿ ಪ್ರತಿ 50ರಿಂದ 100 ಮೀಟರ್‌ಗೆ ನೀರಿನ ಸೋರಿಕೆಯನ್ನು ಅನುಮತಿಸಿ ಕೆಳಭಾಗವನ್ನು ಜಲ್ಲಿಕಲ್ಲುಗಳಿಂದ ತೆರೆದಿರಬೇಕು. ಈ ಕ್ರಮಗಳು ಪ್ರವಾಹವನ್ನು ಕಡಿಮೆ ಮಾಡುವುದರ ಜೊತೆಗೆ, ಅಂತರ್ಜಲ ಮಟ್ಟವನ್ನೂ ಹೆಚ್ಚಿಸಲು ಸಹಾಯ ಮಾಡುತ್ತವೆ.

ರಾಜಕುಮಾರ್ ದುಗಾರ್, ಸ್ಥಾಪಕ, ಸಿಟಿಜನ್ ಫಾರ್ ಸಿಟಿಜನ್ಸ್

ವೆಬ್‌ಸೈಟ್‌ನಲ್ಲಿ ಪ್ರಕಟಿಸಲಿ

ಕೆರೆಗಳು ಹಾಗೂ ರಾಜಕಾಲುವೆಗಳನ್ನು ಒತ್ತುವರಿ ಮಾಡಿ, ಅದರ ಮೇಲೆ ಕಟ್ಟಡಗಳನ್ನು ಕಟ್ಟುವುದರಿಂದ ಭವಿಷ್ಯದಲ್ಲಿ ಭಾರಿ ಸಂಕಷ್ಟವಾಗುತ್ತದೆ ಎಂದು ನಾವು ಸಾಕಷ್ಟು ಬಾರಿ ಅಧಿಕಾರಿಗಳಿಗೆ ಹೇಳುತ್ತಲೇ ಬಂದಿದ್ದೇವೆ. ಆದರೆ ಅವರು ಕೇಳುತ್ತಲೇ ಇಲ್ಲ. ಅಧಿಕಾರಿಗಳಿಗೆ ಒತ್ತುವರಿ ಬಗ್ಗೆ ಗೊತ್ತಿದ್ದರೂ ಕೆಲವು ಗಿಮಿಕ್ ಮಾಡಿ ಸುಮ್ಮನಿರುತ್ತಾರೆ. ಮೂಲ ರಾಜಕಾಲುವೆಗಳ ಮಾರ್ಗ, ವಿಸ್ತೀರ್ಣ ಹಾಗೂ ಅದರ ಸಂಪೂರ್ಣ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು.

ವಿಜಯ್ ನಿಶಾಂತ್, ಪರಿಸರ ಕಾರ್ಯಕರ್ತ

ಇಂದು ಸಭೆ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ಸರ್ವ ಸದಸ್ಯರ ಸಭೆಯು ಸೆ.18ರಂದು ಕ್ವೀನ್ಸ್ ರಸ್ತೆಯ ಕೃಷಿ ತಂತ್ರಜ್ಞರ ಸಂಸ್ಥೆಯ ಸಭಾಂಗಣದಲ್ಲಿ ನಡೆಯಲಿದೆ.

ರಾಘವೇಂದ್ರ ಕೆ. ತೊಗರ್ಸಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ಸದಸ್ಯರ ಹಾಗೂ ಸಹಸದಸ್ಯರ ಪ್ರತಿಭಾವಂತ ಮಕ್ಕಳನ್ನು ಸಂಘವು ಗೌರವಿಸಲಿದೆ. ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಕಿರುತೆರೆಯ ನಟ ಸಾಗರ್ ಪಾಲ್ಗೊಳ್ಳಲಿದ್ದಾರೆ ಎಂದು ಕಾರ್ಯದರ್ಶಿ ಎಸ್. ತೇಜಸ್ವಿನಿ ತಿಳಿಸಿದ್ದಾರೆ.

WALK IN INTERVIEW

We are hiring dynamic professionals with the correct attitude for the following positions for our Jewellery showrooms at Jayanagar & Dickenson Road, Bengaluru. Best in industry packages will be offered to the right candidate.

- BRANCH MANAGER : 5+Yrs EXP
- FLOOR MANAGER : 3+Yrs EXP
- SALES EXECUTIVES : 2+Yrs EXP
- APPRAISER : 2+Yrs EXP
- BILLING EXECUTIVE : 1+Yrs EXP
- RELATIONSHIP EXECUTIVE : 1+Yrs EXP
- PANTRY ASST : 1+Yrs EXP
- HOUSE KEEPING : 1+Yrs EXP

DATE : 20, 21 Sep. 2022 (10 AM - 5.30 PM)
VENUE : AVR SWARNA MAHAL JEWELLERS
41, Dickenson Road, Bengaluru. Ph. 080 25540007

Food & accommodation will be provided to the outstation candidates.

(Candidates should appear along with updated CV & recent passport size photo)

Ph.080-25540007
9840369054
hr@avrswarnamahal.com

AVR SWARNA MAHAL JEWELLERS Purity is our Tradition

ಕೆಎಂಎಫ್‌ಗೆ ಆಂಧ್ರಪ್ರದೇಶದ ಸಚಿವೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಉಷಾ ಶ್ರೀಚರಣ್ ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಕೇಂದ್ರ ಕಚೇರಿಗೆ ಶನಿವಾರ ಭೇಟಿ ನೀಡಿ ಒಕ್ಕೂಟದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದರು.

ಕೆಎಂಎಫ್‌ನೊಂದಿಗೆ ಉತ್ತಮ ಬಾಂಧವ್ಯ ಮುಂದುರಿಸುವುದು ಮತ್ತು ಹಾಲಿನ ಸರಬರಾಜು ಕುರಿತು ಚರ್ಚಿಸುವ ಉದ್ದೇಶದಿಂದ ಅವರು ಈ ಭೇಟಿ ನೀಡಿದ್ದರು.

ಆಂಧ್ರಪ್ರದೇಶದಲ್ಲಿ ‘ವೈಎಸ್‌ಆರ್ ಸಂಪೂರ್ಣ ಪೋಷಣ ಯೋಜನೆ’ ಅಡಿಯಲ್ಲಿ ಪ್ರತಿ ತಿಂಗಳು 1 ಕೋಟಿ ಲೀಟರ್ ಹಾಲು ಸರಬರಾಜು ಮಾಡಲಾಗುತ್ತಿದೆ.

ಆಂಧ್ರಪ್ರದೇಶದಲ್ಲಿ ವೈಎಸ್‌ಆರ್ ಸಂಪೂರ್ಣ ಪೋಷಣ ಯೋಜನೆಯನ್ನು 2016ರಲ್ಲಿ ಆರಂಭಿಸಲಾಗಿದ್ದು, ತಿಂಗಳಿಗೆ 13 ಲಕ್ಷ ಲೀಟರ್ ಹಾಲು ಪೂರೈಸಲಾಗುತ್ತಿತ್ತು. ಸದ್ಯ, 1 ಕೋಟಿ ಲೀಟರ್ ಹಾಲನ್ನು ಕೆಎಂಎಫ್ ವತಿಯಿಂದ ಸರಬರಾಜು ಮಾಡಲಾಗುತ್ತಿದೆ. ಆ ರಾಜ್ಯದ 13 ಜಿಲ್ಲೆಗಳ 55,600 ಅಂಗನವಾಡಿ ಕೇಂದ್ರಗಳ 26 ಲಕ್ಷ ಫಲಾನುಭವಿಗಳು ಈ ಯೋಜನೆಯ ಲಾಭ ಪಡೆದುಕೊಳ್ಳುತ್ತಿದ್ದಾರೆ.

ಕೆಎಂಎಫ್‌ನ ನಂದಿನಿ ಯುಎಚ್‌ಟಿ ಹಾಲನ್ನು 200, 500 ಹಾಗೂ 1000 ಮಿಲಿ ಲೀಟರ್ ಟೆಟ್ರಾಪ್ಯಾಕ್ ಹಾಗೂ 200, 500 ಫ್ಲೆಕ್ಸಿ ಪೊಟ್ಟಣಗಳಲ್ಲಿ ಸರಬರಾಜು ಮಾಡಲಾಗುತ್ತಿದೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಅವರು ತಿಳಿಸಿದ್ದಾರೆ.

ಆಂಧ್ರಪ್ರದೇಶದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಉಷಾ ಶ್ರೀಚರಣ್ (ಎಡದಿಂದ ಮೂರನೆಯವರು) ಕೆಎಂಎಫ್ ಕೇಂದ್ರ ಕಚೇರಿಗೆ ಶನಿವಾರ ಭೇಟಿ ನೀಡಿದರು. ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಇದ್ದರು

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಯಲದ 2022–23ನೇ ಸಾಲಿನ ಅತಿಥಿ ಉಪನ್ಯಾಸಕರ ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿ ಸೆಪ್ಟೆಂಬರ್ 28ರ ವರೆಗೆ ವಿಸ್ತರಿಸಲಾಗಿದೆ.

ವಿಶ್ವವಿದ್ಯಾಲಯದ ಅಧಿಸೂಚನೆ ಪ್ರಕಾರ 2022 ಅಗಸ್ಟ್ 29ರಂದು ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ವಿಭಾಗಳಿಗೆ ಹಾಗೂ ಮಲ್ಲೇಶ್ವರದ ಬಹುಶಿಸ್ತೀಯ ಮಹಿಳಾ ಕಾಲೇಜಿಗೆ ಅತಿಥಿ ಉಪನ್ಯಾಸಕರ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಭೌತಿಕ ಪ್ರತಿಯನ್ನು ಸೆಪ್ಟೆಂಬರ್ 29ರೊಳಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯುತ್ ಅದಾಲತ್: 700 ದೂರು ಸ್ವೀಕಾರ

ಬೆಂಗಳೂರು: ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳಲ್ಲಿನ 86 ಹಳ್ಳಿಗಳಲ್ಲಿ ಶನಿವಾರ ನಾಲ್ಕನೇ ವಿದ್ಯುತ್ ಅದಾಲತ್ ನಡೆಯಿತು.

ಎರಡು ಸಾವಿರ ಗ್ರಾಹಕರು ಭಾಗವಹಿಸಿ, ವಿದ್ಯುತ್ ಸಂಬಂಧಿತ ಸಮಸ್ಯೆಗಳ ಕುರಿತು ಬೆಸ್ಕಾಂ ಅಧಿಕಾರಿಗಳ ಗಮನ ಸೆಳೆದರು.

ಗ್ರಾಮೀಣ ಭಾಗದ ಗ್ರಾಹಕರಿಂದ ಬೆಸ್ಕಾಂ ಅಧಿಕಾರಿಗಳು 700 ದೂರು ಸ್ವೀಕರಿಸಿದರು. ಬಹುತೇಕ ಮನವಿಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಿದರು. ಉಳಿದ ಮನವಿಗಳನ್ನು ಮುಂದಿನ ಕ್ರಮಕ್ಕಾಗಿ ಹಿರಿಯ ಅಧಿಕಾರಿಗಳಿಗೆ ರವಾನಿಸಲಾಗಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಅಸಮರ್ಪಕ ವಿದ್ಯುತ್ ಪೂರೈಕೆ, ವಾಲಿರುವ ವಿದ್ಯುತ್ ಕಂಬಗಳು, ನೀರಾವರಿ ವಿದ್ಯುತ್ ಸಂಪರ್ಕ, ಮಾಪನ, ಬಿಲ್ಲಿಂಗ್, ಟಿ.ಸಿ ಬದಲಾವಣೆಯ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕಾರ್ಯವನ್ನು ವಿದ್ಯುತ್ ಅದಾಲತ್‌ನಲ್ಲಿ ಮಾಡಲಾಗುತ್ತಿದೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಸೆ.18ರಂದು ಬೆಳಿಗ್ಗೆ 10.30ರಿಂದ ಮಧ್ಯಾಹ್ನ 3.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಪೀಣ್ಯ ಎರಡನೇ ಹಂತ, ದೊಡ್ಡಣ್ಣ ಇಂಡಸ್ಟ್ರಿಯಲ್ ಎಸ್ಟೇಟ್, ಹೆಗ್ಗನಹಳ್ಳಿ ಮುಖ್ಯ ರಸ್ತೆ, ಅಂದ್ರಹಳ್ಳಿ ಮುಖ್ಯ ರಸ್ತೆ, ಪಟೇಲ್ ಚನ್ನಪ್ಪ ಎಸ್ಟೇಟ್, ಅನ್ನಪೂರ್ಣೇಶ್ವರಿ ನಗರ, ಕಪಿಲಾ ನಗರ, ಶಾಂಭವಿ ನಗರ, ಪೀಣ್ಯ ಎರಡನೇ ಹಂತ, ಅಂದ್ರಹಳ್ಳಿ ಮುಖ್ಯ ರಸ್ತೆ, ಗೌರಿಶಂಕರ್ ರಸ್ತೆ, ಬೃಂದಾವನ ಮುಖ್ಯ ರಸ್ತೆ, ರಾಮಯ್ಯ ಕಾಲೇಜು ರಸ್ತೆ, ಗೌರಿಶಂಕರ್ ರಸ್ತೆಯ ಸುತ್ತಮುತ್ತ ಪ್ರದೇಶಗಳು.

ಜತೆಗೆ, ಜಿಗಣಿ, ಮಾದಪಟ್ಟಣ, ಬುಕ್ಕಸಾಗರ, ಹಾರಗದ್ದೆ, ಅತ್ತಿಬೆಲೆ, ಅತ್ತಿಬೆಲೆ ಕೈಗಾರಿಕ ಪ್ರದೇಶ, ಮಾಯಸಂದ್ರ ಸುತ್ತಮುತ್ತ ಪ್ರದೇಶಗಳು ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಭಾನುವಾರ • ಸೆಪ್ಟೆಂಬರ್ 18, 2022 ಪ್ರಜಾವಾಣಿ

ಅವೈಜ್ಞಾನಿಕ ಒಳಚರಂಡಿ ವ್ಯವಸ್ಥೆ • ಸರಾಗವಾಗಿ ಮಳೆ ನೀರು ಹರಿಯಲು ಅಡ್ಡಿ • ಕೆಳ ಸೇತುವೆಗಳು ಜಲಾವೃತ

ಒಂದೇ ಮಳೆಗೆ ಹೆದ್ದಾರಿಯ ಬಣ್ಣ ಬಯಲು!

• ಆರ್. ಜಿತೇಂದ್ರ

ರಾಮನಗರ: ಈಚೆಗೆ ಸುರಿದ ಒಂದೇ ಮಳೆಗೆ ಬೆಂಗಳೂರು-ಮೈಸೂರು ಹತ್ತು ಪಥದ ಹೆದ್ದಾರಿಯ ಬಣ್ಣ ಬಯಲಾಗಿದೆ. ಇಡೀ ಹೆದ್ದಾರಿ ಅಲ್ಲಲ್ಲಿ ಮುಳುಗಿತ್ತು.

ಅನೇಕ ಕೆರೆ, ಕಟ್ಟೆಗಳನ್ನು ಸೀಳಿಕೊಂಡು ಹೊಸ ಹೆದ್ದಾರಿ ಸಾಗಿದೆ. ಹೀಗೆ ಜಲಮೂಲಗಳ ಸ್ವರೂಪವನ್ನು ಅಸ್ತವ್ಯಸ್ತಗೊಳಿಸಿ ರಸ್ತೆ ನಿರ್ಮಿಸುವಾಗ ವೈಜ್ಞಾನಿಕ ಕ್ರಮಗಳನ್ನು ಅನುಸರಿಸಿಲ್ಲ. ಹೀಗಾಗಿ, ಅನೇಕ ಕಡೆ ಕೆರೆಗಳೇ ಹೆದ್ದಾರಿಗೆ ಬಂದಿವೆ, ಹೆದ್ದಾರಿಗಳೇ ಕೆರೆಗಳಾಗುತ್ತಿವೆ.

ಬೆಂಗಳೂರು ಹೊರವಲಯದಲ್ಲಿ ಹೆದ್ದಾರಿ ಕಾಮಗಾರಿಯಿಂದಾಗಿ ಸಾಕಷ್ಟು ಹಾನಿಯಾಗಿತ್ತು. ಕಣಮಿಣಕಿ ಟೋಲ್ ಬಳಿ ಕೆರೆ ನೀರು ಹೆದ್ದಾರಿಗೆ ನುಗ್ಗಿ ಪ್ರವಾಹದಂತೆ ನಿಂತಿತ್ತು. ಚನ್ನಪಟ್ಟಣ ತಾಲ್ಲೂಕಿನ ಶೆಟ್ಟಿಹಳ್ಳಿ ಕೆರೆ [illegible] ಬೈಪಾಸ್ ರಸ್ತೆ ನಿರ್ಮಿಸಿದ್ದು, ಇದರಿಂದ ಕೆರೆಯ ಹರಿವಿನ ದಿಕ್ಕೇ ಬದಲಾಗಿದೆ. ಕೋಡಿ ಪ್ರದೇಶಕ್ಕೆ ಹಾನಿಯಾಗಿ, ಮಳೆ ನೀರು ಊರೊಳಗೆ ನುಗ್ಗಿ ಅವಾಂತರ ಸೃಷ್ಟಿಸಿದೆ. ಮಂಡ್ಯ ತಾಲ್ಲೂಕಿನ ಹೊಸ ಬೂದನೂರು ಈ ಹೆದ್ದಾರಿಯ ಅಡಿಯಲ್ಲಿ ಸಂತ್ರಸ್ತ ಗ್ರಾಮ. ಮನೆ ಕಳೆದುಕೊಂಡ ನೂರಾರು ಮಂದಿ ಇದೀಗ ಕಾಮಗಾರಿ ಅವಾಂತರದಿಂದ ಕೆರೆ ನೀರು ಜಮೀನಿಗೆ ನುಗ್ಗಿ ಬೆಳೆ ನಷ್ಟವನ್ನೂ ಅನುಭವಿಸುವಂತಾಗಿದೆ. ಮಳೆ ಬರೆ ಎಳೆದಂತಾಗಿದೆ.

ಕಾಮಗಾರಿಯಿಂದಾಗಿ ಮದ್ದೂರು ಕೆರೆ ಒಡೆದಿದ್ದು, ಹೆದ್ದಾರಿಗೆ ನೀರು ಹರಿದ ಕಾರಣ ಕೆಲ ದಿನ ಈ ಭಾಗದ ಸಂಚಾರ ಮಾರ್ಗವೇ ಬದಲಾಗಿತ್ತು.

ಕಾಮಗಾರಿ ಕಿರಿಕಿರಿ: ಮದ್ದೂರು ತಾಲ್ಲೂಕಿನ ನಿಡಘಟ್ಟದಿಂದ ಮೈಸೂರಿನ ಮಣಿಪಾಲ್ ಜಂಕ್ಷನ್‌ವರೆಗೆ ಎರಡನೇ ಹಂತದ ಕಾಮಗಾರಿ ಪ್ರಗತಿಯಲ್ಲಿದ್ದು, ಕಿರಿದಾದ ಸರ್ವೀಸ್ ರಸ್ತೆಗಳಲ್ಲೇ ವಾಹನ ಸಂಚಾರಕ್ಕೆ ಸರ್ಕಸ್ ನಡೆದಿದೆ. ಈ ನಡುವೆ ಗ್ಯಾಸ್ ಪೈಪ್‌ಲೈನ್ ಕಾಮಗಾರಿಯೂ ನಡೆದಿದ್ದು, ಜನರು ಪರದಾಡುವಂತಾಗಿದೆ. ಮದ್ದೂರು ಪಟ್ಟಣದೊಳಗೆ ಎಲಿವೇಟೆಡ್ ಕಾರಿಡಾರ್ ಕಾಮಗಾರಿ ಇನ್ನೂ ನಡೆದಿದ್ದು, ಸಂಚಾರಕ್ಕೆ ಅಡಚಣೆ ಆಗಿದೆ.

ಅಂಡರ್‌ಪಾಸ್ ಅವಾಂತರ: ಹೊಸ ಹೆದ್ದಾರಿಯ 49 ಕಡೆಗಳಲ್ಲಿ ಸ್ಥಳೀಯರ ಓಡಾಟಕ್ಕೆ ಅಂಡರ್‌ಪಾಸ್ ನಿರ್ಮಿಸಲಾಗಿದೆ. ಇವುಗಳಲ್ಲಿ ಸಾಕಷ್ಟು ಕಡೆ ಮಳೆ ನೀರು ನಿಲ್ಲುತ್ತಿದೆ. ನೀರು ಸುಗಮವಾಗಿ ಹರಿದು ಹೋಗುವಂತೆ ಚರಂಡಿಗಳನ್ನು ವಿನ್ಯಾಸಗೊಳಿಸಿಲ್ಲ. ಮಳೆ ನೀರಿನ ರಭಸಕ್ಕೆ ಅಲ್ಲಲ್ಲಿ ಚರಂಡಿ ಒಡೆದಿದೆ. ಡ್ರೇನ್ ಬ್ಲಾಕ್ ಕಿತ್ತು ಹೋಗಿದೆ. ಕೆಳ ಸೇತುವೆಗಳ ಕೆರೆಗಳಾಗಿದ್ದು, ಸುತ್ತಲಿನ ಜಮೀನಿಗೂ ನೀರು ನುಗ್ಗಿದೆ. ಮೈಸೂರು ಹೊರವಲಯದಲ್ಲೂ ಕಳಸ್ತವಾಡಿಯಲ್ಲಿ ಉದ್ಘಾಟನೆಗೂ ಮುನ್ನವೇ ಅಂಡರ್‌ಪಾಸ್ ಜಲಾವೃತಗೊಳ್ಳುತ್ತಿದೆ.

ಎಕ್ಸ್‌ಪ್ರೆಸ್ ವೇ ಸುತ್ತ ತಂತಿಬೇಲಿ ಇರುವ ಕಾರಣ ಜನರು ರಸ್ತೆ ದಾಟುವಂತಿಲ್ಲ. ರಸ್ತೆಯ ಮತ್ತೊಂದು ತುದಿಗೆ ಹೋಗಬೇಕಾದರೂ ಅಂಡರ್‌ಪಾಸ್ ಬಳಸಿ ಬರಬೇಕು. ಇದರಿಂದ ಸ್ಥಳೀಯ ಜನ-ಜಾನುವಾರು ಓಡಾಟಕ್ಕೆ ತೊಂದರೆ ಆಗಿದೆ.

ಸರ್ವೀಸ್ ರಸ್ತೆ ಅಧ್ವಾನ: ಸಾಕಷ್ಟು ಕಡೆ ಸರ್ವೀಸ್ ರಸ್ತೆಗಳನ್ನು ಕಾಟಾಚಾರಕ್ಕೆ ಎಂಬಂತೆ ವಿನ್ಯಾಸಗೊಳಿಸಿದ್ದು, ಇದರಿಂದ ಸ್ಥಳೀಯ ಓಡಾಟಕ್ಕೆ ಅಡ್ಡಿಯಾಗಿದೆ. ಹೆದ್ದಾರಿ ಇಕ್ಕೆಲಗಳಲ್ಲಿ ಬೇಕಾಬಿಟ್ಟಿ ಗುಡ್ಡ ಕಡಿದಿದ್ದು, ಅಲ್ಲಲ್ಲಿ ಭೂ ಕುಸಿತ ಉಂಟಾಗಿದೆ.

ಕಳಪೆ ಗುಣಮಟ್ಟದ ಕಾಮಗಾರಿ: ಕಾಡುಮನೆ ಸಮೀಪ ಬಿಡದಿ ಬೈಪಾಸ್ ಆರಂಭದಲ್ಲೇ ರಸ್ತೆ ಮೇಲ್ಮೈ ಜಾರುತ್ತಿದ್ದು, ಇಲ್ಲಿ ಲಾರಿ ಉರುಳಿಬಿದ್ದು, ಬಸ್ ಸೇರಿದಂತೆ ಅನೇಕ ವಾಹನಗಳು ಜಖಂ ಆಗಿವೆ. ಕಾಮಗಾರಿ ಲೋಪದ ಕುರಿತು ಅಧಿಕಾರಿಗಳೇ ಒಪ್ಪಿಕೊಂಡಿದ್ದಾರೆ. ಮಳೆಯಿಂದಾಗಿ ಸರ್ವೀಸ್ ರಸ್ತೆಗೆ ಹಾನಿಯಾಗಿದ್ದು, ಅಲ್ಲಲ್ಲಿ ಕೊಚ್ಚಿ ಹೋಗಿದೆ. ಕಾಮಗಾರಿ ಗುಣಮಟ್ಟದ ಕುರಿತು ಸಾಕಷ್ಟು ಅಪಸ್ವರ ಕೇಳಿಬರುತ್ತಿದೆ.

ಇನ್ನು ಸಿಕ್ಕಲ್ಲಿ ಸೇಫ್ಟಿ ಕ್ರಿಯರ್ಸ್: ರಸ್ತೆ ಸುರಕ್ಷತೆ ಬಗ್ಗೆ ಕೇಂದ್ರ ತಂಡವು ಪರಿಶೀಲಿಸಿ ಹಲವು ನಿಣಾತ ತೋರಿದ ಮುನ್ನವೇ ಬೈಪಾಸ್‌ಗಳನ್ನು ಮುಕ್ತಗೊಳಿಸಲಾಗಿದೆ. ಕುಂಬಳಗೋಡಿನಿಂದ ಮುದಗೆರೆ ಕಡೆದ ಹದಿನೈದು ದಿನದಲ್ಲೇ ಅರಳ್ಳೂ ಹೆಚ್ಚು ಅಪಘಾತ ಸಂಭವಿಸಿದ್ದು, ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ಹೆದ್ದಾರಿಯಲ್ಲಿ ವೇಗಕ್ಕೆ ಮಿತಿ ಇಲ್ಲ. ಹೀಗಾಗಿ ವೇಗ ಹೆಚ್ಚಿದಷ್ಟೂ ಅಪಘಾತವೂ ಹೆಚ್ಚುಗುವ ಸಾಧ್ಯತೆ ಇದೆ.

ದಿಕ್ಕುತಪ್ಪುವ ಸಾಧ್ಯತೆ: ಹೊಸ ಬೈಪಾಸ್‌ಗಳಲ್ಲಿ ಪ್ರಯಾಣಿಕರಿಗೆ ತಾವು ಎಲ್ಲಿದ್ದೇವೆ ಎಂಬುದನ್ನು ಪತ್ತೆ ಹಚ್ಚುವುದೇ ಕಷ್ಟವಾಗಿದೆ. ಅಗತ್ಯಕ್ಕೆ ತಕ್ಕಂತೆ ಫಲಕಗಳನ್ನು ಹಾಕಿಲ್ಲ. ಯೂ ಟರ್ನ್‌ಗಳ ಸಂಖ್ಯೆ ತೀರ ಕಡಿಮೆ. ಪ್ರವೇಶ-ನಿರ್ಗಮನ ದ್ವಾರಗಳು ಇನ್ನೂ ವಿನ್ಯಾಸಗೊಂಡಿಲ್ಲ. ಹೀಗಾಗಿ ಪ್ರಯಾಣಿಕರು ಸರ್ವೀಸ್ ರಸ್ತೆಗೆ ಮರಳುವುದು ಕಷ್ಟ.

ಸದ್ಯ ಬೈಪಾಸ್‌ಗಳಲ್ಲಿ ವಾಹನ ಸಂಚಾರ ಆರಂಭಗೊಂಡಿದ್ದರೂ ಯಾತ್ರಿಕರಿಗೆ ಬೇಕಾದ ಮೂಲ ಸೌಕರ್ಯ ವ್ಯವಸ್ಥೆ ಇಲ್ಲ. ಮಧ್ಯೆ ಪೆಟ್ರೋಲ್ ಬಂಕ್‌ಗಳೂ ಇಲ್ಲ. ರಾತ್ರಿ ಹೊತ್ತು ಸುರಕ್ಷತೆ ಕೊರತೆಯೂ ಕಾಡುತ್ತಿದೆ.

ವನ್ಯಜೀವಿಗಳಿಗೂ ಅಡ್ಡಿ-ಆತಂಕ: ಪರಿಸರ ಸೂಕ್ಷ್ಮ ವಲಯವಾಗಿರುವ ರಾಮದೇವರ ಬೆಟ್ಟದ ಮಗ್ಗುಲಲ್ಲೇ ಹೊಸ ಬೈಪಾಸ್ ಹಾದು ಹೋಗಿದೆ. ರಾಮನಗರ ಬಳಿ ಬ್ಯಾಸ್ತಿಗಿಂದ ಅಳಿವಿನಂಚಿನಲ್ಲಿರುವ ರಣಹದ್ದುಗಳು ಬೆದರಿದ್ದು, ಹೆದ್ದಾರಿಯಲ್ಲಿ ವಾಹನ ಸಂಚಾರ ಹೆಚ್ಚಿದಂತೆ ಅವು ಗಾಸಿಯಾಗುವ ಸಾಧ್ಯತೆ ಇದೆ.

ರಾಮನಗರದ ಹಂದಿಗುಂದಿ-ಹುಲ್ಲೂರ್ ಅರಣ್ಯದ ನಡುವೆ ಹೆದ್ದಾರಿ ಹಾದು ಹೋಗಿದ್ದು, ಈ ಭಾಗದಲ್ಲಿ ಆನೆ, ಚಿರತೆ ಹಾಗೂ ಕರಡಿಗಳ ಸಂಖ್ಯೆ ಹೆಚ್ಚಿದೆ. ಈ ಭಾಗದಲ್ಲಿ ವನ್ಯಜೀವಿ ಓಡಾಟಕ್ಕೆ 60 ಮೀಟರ್ ಉದ್ದದ ಮೇಲು ಸೇತುವೆಯೊಂದನ್ನು ಕಾಟಾಚಾರಕ್ಕೆ ನಿರ್ಮಾಣ ಮಾಡಲಾಗಿದೆ. ಅದೂ ಅರಣ್ಯ ಇಲಾಖೆಯ ಬೇಡಿಕೆ ಮೇರೆಗೆ ಎಂದು ಹೇಳಲಾಗಿದೆ. ಇಲ್ಲಿ ವಾಹನಗಳೂ ಸಂಚರಿಸಲು ಅವಕಾಶ ಇರುವುದರಿಂದ ಆನೆಗಳ ಹಿಂಡು ಮುಕ್ತವಾಗಿ ಸಂಚರಿಸಲು ಸಾಧ್ಯವಿಲ್ಲ. ಮುಕ್ತ ಎಕ್ಸ್‌ಪ್ರೆಸ್ ವೇ ಸುತ್ತ 6 ಅಡಿ ಎತ್ತರದ ತಂತಿ ಬೇಲಿ ಇದ್ದು, ವನ್ಯಜೀವಿಗಳು ವಾಹನಗಳಿಗೆ ಸಿಲುಕುವ ಸಾಧ್ಯತೆ ಕಡಿಮೆ ಎನ್ನುತ್ತಾರೆ ಅಧಿಕಾರಿಗಳು.

ಬೆಂಗಳೂರು-ಮೈಸೂರು ಹೆದ್ದಾರಿ ಸವಾರಿ

ಬೈಕ್, ಆಟೊ, ಟ್ರ್ಯಾಕ್ಟರ್‌ಗೆ ನಿರ್ಬಂಧ

ಎಕ್ಸ್‌ಪ್ರೆಸ್ ವೇನಲ್ಲಿ ಆಟೊ, ಟ್ರ್ಯಾಕ್ಟರ್, ಎತ್ತಿನಗಾಡಿ, 200 ಸಿ.ಸಿ.ಗಿಂತ ಕಡಿಮೆ ಸಾಮರ್ಥ್ಯದ ಬೈಕ್‌ಗಳಿಗೆ ಪ್ರವೇಶ ನಿರ್ಬಂಧಿಸಲು ಹೆದ್ದಾರಿ ಪ್ರಾಧಿಕಾರ ಚಿಂತಿಸಿದೆ. ಇಂತಹ ವಾಹನಗಳು ಸರ್ವೀಸ್ ರಸ್ತೆಯಲ್ಲೇ ಚಲಿಸಬೇಕಾಗುತ್ತದೆ. ಹೀಗಾಗಿ ದೊಡ್ಡ ವಾಹನಗಳ ಮಾಲೀಕರಿಗಷ್ಟೇ ಅನುಕೂಲ ಆಗಲಿದೆ.

ಬೆಂಗಳೂರು-ಮೈಸೂರು ನಡುವೆ ಸಂಚರಿಸುವ ತರಹೇವಾರಿ ಬಸ್‌ಗಳನ್ನು ಹೊರತುಪಡಿಸಿ, ಪ್ರಮುಖ ನಗರಗಳ ಮೂಲಕ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಕೆಲವೊಮ್ಮೆ ಸರ್ವೀಸ್ ರಸ್ತೆ ಪ್ರಯಾಣ ಅನಿವಾರ್ಯ ಆಗಲಿದೆ. ಸ್ಥಳೀಯ ಪ್ರಯಾಣಿಕರಿಗೆ ಇದರಿಂದ ಅನನುಕೂಲ ಆಗಲಿದೆ.

ಆಗಸ್ಟ್ ಅಂತ್ಯದಲ್ಲಿ ಸುರಿದ ಭಾರಿ ಮಳೆಯಿಂದಾಗಿ ರಾಮನಗರ ತಾಲ್ಲೂಕಿನ ಸಂಗನಬಸವನದೊಡ್ಡಿ ಸಮೀಪ ಅಂಡರ್‌ಪಾಸ್‌ನಲ್ಲಿ ನಿಂತಿದ್ದ ನೀರು

ದಶಪಥ ಕಾಮಗಾರಿ ಸಂಪೂರ್ಣ ಅವೈಜ್ಞಾನಿಕವಾಗಿದೆ. ಅಂಡರ್‌ಪಾಸ್, ಸರ್ವೀಸ್ ರಸ್ತೆ ಸೇರಿದಂತೆ ಯಾವುದನ್ನೂ ಸರಿಯಾಗಿ ನಿರ್ಮಿಸಿಲ್ಲ. ಈಗ ಆಗಿರುವ ಲೋಪವನ್ನು ಸರಿಪಡಿಸಿಕೊಳ್ಳಬೇಕು
ಡಿ.ಕೆ. ಸುರೇಶ್, ಬೆಂಗಳೂರು ಗ್ರಾಮಾಂತರ ಸಂಸದ

ರಾಮಮ್ಮನ ಕೆರೆ ಬಳಿ ಹೆದ್ದಾರಿ ಅವೈಜ್ಞಾನಿಕ ಕಾಮಗಾರಿಯಿಂದಾಗಿ ನಮ್ಮ ಮನೆಗಳಿಗೆ ನೀರು ನುಗ್ಗಿದೆ. ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ನೋಡಿ ಹೋಗಿದ್ದು ಬಿಟ್ಟರೆ ಬೇರೇನು ಪರಿಹಾರ ಕಾರ್ಯ ನಡೆದಿಲ್ಲ
ಸ್ವಾಮಿ, ಶೆಟ್ಟಿಮಾರನಹಳ್ಳಿ, ಚನ್ನಪಟ್ಟಣ

ಅಂಡರ್‌ಪಾಸ್‌ಗಳಲ್ಲಿ ನೀರು ಹರಿದು ಹೋಗುವುದಕ್ಕೆ ವ್ಯವಸ್ಥೆ ಇಲ್ಲ. ಜಮೀನಿಗೆ ಹೋಗಲು ತೊಂದರೆ ಆಗಿದ್ದು, ಸಂಪರ್ಕ ರಸ್ತೆ ನಿರ್ಮಿಸುವಂತೆ ಕೋರಿದರೂ ಸ್ಪಂದನೆ ದೊರೆತಿಲ್ಲ
ಚಂದ್ರಸ್ವಾಮಿ, ರೈತ, ನಾಗನಹಳ್ಳಿ ಮೈಸೂರು

ಬೈಪಾಸ್‌ಗಳಲ್ಲಿ ಮಾಹಿತಿ ಫಲಕಗಳ ಕೊರತೆ ಇದ್ದು, ಪ್ರಯಾಣಿಕರು ದಾರಿ ತಪ್ಪುವ ಸಾಧ್ಯತೆ ಹೆಚ್ಚು. ಪ್ರತಿ ನಗರಕ್ಕೆ ತುರ್ತಾಗಿ ಪ್ರವೇಶ-ನಿರ್ಗಮನ ಸಂಪರ್ಕ ನೀಡಬೇಕು
ಶಂಕರಪ್ಪ, ಪ್ರಯಾಣಿಕ

₹ 1,201 ಕೋಟಿ ಹೆಚ್ಚುವರಿ ವೆಚ್ಚ

ಸದ್ಯ ಹಾಳಾಗಿರುವ ಚರಂಡಿ ಹಾಗೂ ಸರ್ವೀಸ್ ರಸ್ತೆಗಳ ದುರಸ್ತಿ ಜೊತೆಗೆ ಈ ಮಾರ್ಗದಲ್ಲಿನ ಪ್ರತಿ ನಗರಕ್ಕೂ ಪ್ರವೇಶ-ನಿರ್ಗಮನ ದ್ವಾರಗಳ ನಿರ್ಮಾಣಕ್ಕಾಗಿ ₹ 1,201 ಕೋಟಿ ವೆಚ್ಚದ ಯೋಜನೆಯ ಪ್ರಸ್ತಾವವನ್ನು ಹೆದ್ದಾರಿ ಪ್ರಾಧಿಕಾರವು ಸರ್ಕಾರದ ಮುಂದೆ ಇಟ್ಟಿದ್ದು, ಇನ್ನಷ್ಟೇ ಅನುಮತಿ ಸಿಗಬೇಕಿದೆ. ಬೈಪಾಸ್ ರಸ್ತೆಗಳಲ್ಲಿ ಬಿಡದಿ, ರಾಮನಗರ, ಚನ್ನಪಟ್ಟಣ, ಮಂಡ್ಯ, ಮದ್ದೂರು ಹಾಗೂ ಶ್ರೀರಂಗಪಟ್ಟಣಕ್ಕೆ ಪ್ರವೇಶ- ನಿರ್ಗಮನ ದ್ವಾರ ನೀಡಿಲ್ಲ.

ಕುಸಿದ ಮಳೆ ಕಾಲುವೆ

ಬೆಂಗಳೂರಿನ ಕುಂಬಳಗೋಡು ಬಳಿ ಮಳೆ ನೀರಿನ ರಭಸಕ್ಕೆ ಕಿತ್ತು ಹೋಗಿರುವ ಹೆದ್ದಾರಿ

ಬೆಂಗಳೂರು ನಗರದ ಕುಂಬಳಗೋಡು ಬಳಿ ಕಣಮಿಣಕಿ ಕೆರೆ ಕೋಡಿ ಹರಿದು ನೀರು ಸಾರಾಗವಾಗಿ ಹರಿದು ಹೋಗಲು ವ್ಯವಸ್ಥೆ ಇಲ್ಲದೆ ಹೊಸದಾಗಿ ನಿರ್ಮಿಸಿದ್ದ ರಸ್ತೆ ಬದಿಯ ಚರಂಡಿ ಕುಸಿದಿದೆ. ಬೆಂಗಳೂರು – ಮೈಸೂರು ದಶಪಥ ಆರಂಭವಾಗುವ ಸ್ಥಳ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಸಮೀಪ ಸದಾ ಮಳೆ ನೀರು ತುಂಬಿಕೊಳ್ಳುತ್ತದೆ. ರಸ್ತೆಯ ಮಧ್ಯೆ ಸಾಗಬೇಕಿದ್ದ ರಾಜಕಾಲುವೆ ವ್ಯವಸ್ಥೆ ಸರಿ ಇಲ್ಲ. ಹೀಗಾಗಿ ರಸ್ತೆ ಮೇಲೆ ನೀರು ನಿಲ್ಲುತ್ತದೆ. ಇನ್ನು, ವಿಶ್ವೇಶ್ವರಯ್ಯ ಬಿಡಿಎ ಬಡಾವಣೆ ಸೇರಿದಂತೆ ಹಲವು ಭಾಗದಿಂದ ಮಳೆ ನೀರು ಬಂದು ಸೇರಿಕೊಳ್ಳುವ ಕಣಮಿಣಕಿ ಕೆರೆ ಕೋಡಿಗೂ ಜಾಗವಿಲ್ಲ.

ಒಳಚರಂಡಿಯ ಛೇಂಬರ್‌ನಲ್ಲಿ ಮಳೆ ನೀರು ಹೋಗಲು ಜಾಗ ಮಾಡಿದ್ದಾರೆ. ಇತ್ತೀಚೆಗೆ ಸುರಿದ ಮಳೆಯಿಂದ ನೀರು ಹೋಗಲು ಸಾಧ್ಯವಾಗದೆ ಸ್ವಾಮಿ ನಾರಾಯಣ ಗುರುಕುಲವೂ ಸೇರಿದಂತೆ ರಸ್ತೆ ತುಂಬಿಕೊಂಡಿತ್ತು. ವಾಹನ ಸಂಚಾರ ಸಾಧ್ಯವಾಗಿರಲಿಲ್ಲ. ಬದಲಿ ರಸ್ತೆಯಲ್ಲಿ ವಾಹನಗಳು ಸಂಚರಿಸಿದ್ದವು. 'ಒಂದು ದೂರದೃಷ್ಟಿ ಇಲ್ಲದೆ ರಸ್ತೆ ನಿರ್ಮಿಸಿದರೆ ಹೀಗೇ ಆಗುತ್ತದೆ. ಮಳೆನೀರಿನ ಕಾಲುವೆಯನ್ನು ಮನೆಯ ಒಳಚರಂಡಿ ಛೇಂಬರ್ ನಂತೆ ಮಾಡಿದರೆ ನೀರು ಎಲ್ಲಿ ಹೋಗುತ್ತೆ. ಒತ್ತುವರಿಯನ್ನು ತೆರವು ಮಾಡದೆ ಕಿರಿದಾಗಿ ಕಾಲುವೆ ಮಾಡಿದ್ದರಿಂದ ರಸ್ತೆ ಮೇಲೆ ನೀರು ನಿಂತು, ಗುರುಕುಲವನ್ನೂ ಆವರಿಸಿತ್ತು. ಇದಕ್ಕೆ ಶಾಶ್ವತ ಪರಿಹಾರ ಈಗಲೇ ಕಂಡುಕೊಳ್ಳದಿದ್ದರೆ ಮತ್ತೆ ಪ್ರತಿ ಮಳೆಗಾಲದಲ್ಲೂ ಇಲ್ಲಿ ಸಮಸ್ಯೆಯಾಗುತ್ತದೆ' ಎನ್ನುತ್ತಾರೆ ಬೆಂಗಳೂರು ನಿವಾಸಿ ಟಿ.ಇ. ಶ್ರೀನಿವಾಸ್.

ಪ್ರಯಾಣಿಕರಿಗೆ ಟೋಲ್ ಹೊರೆ!

ಹೆದ್ದಾರಿ ಕಾಮಗಾರಿ ಪೂರ್ಣಗೊಂಡ ಬಳಿಕ ಬೆಂಗಳೂರು-ಮೈಸೂರು ಪ್ರಯಾಣಿಕರಿಗೆ ಟೋಲ್ ಹೊರೆ ಬೀಳುವುದು ಗ್ಯಾರಂಟಿ. ನಾಲ್ಕು ಚಕ್ರದ ವಾಹನಗಳಿಗೆ ಸರಾಸರಿ ₹200-250ರವರೆಗೂ ಟೋಲ್ ಸಂಗ್ರಹಿಸುವ ಸಾಧ್ಯತೆ ಇದೆ. ಭಾರಿ ವಾಹನಗಳಿಗೆ ಹೆಚ್ಚಿನ ಟೋಲ್ ಇರಲಿದ್ದು, ಬಸ್ ದರವೂ ಏರಿಕೆ ಆಗಲಿದೆ. ಮುಂದಿನ ವರ್ಷದಿಂದ ಟೋಲ್ ಸಂಗ್ರಹ ಆರಂಭವಾಗುವ ಸಾಧ್ಯತೆ ಇದೆ.

ಸದ್ಯ ಕಣಮಿಣಕಿ (ಕುಂಬಳಗೋಡು), ಶೇಷಗಿರಿಹಳ್ಳಿ (ವಂಡರ್‌ಲಾ ಗೇಟ್) ಹಾಗೂ ಗಣಂಗೂರು (ಶ್ರೀರಂಗಪಟ್ಟಣ) ಸಮೀಪ ಟೋಲ್ ಕೇಂದ್ರಗಳು ತಲೆ ಎತ್ತಿವೆ. ನಗುವನಹಳ್ಳಿ ಗೇಟ್ ಬಳಿ (ಶ್ರೀರಂಗಪಟ್ಟಣ-ಮೈಸೂರು ಗಡಿ) ಭಾರತ್ ಬೆಂಜ್ ಶೋರೂಮ್ ಸಮೀಪ ಮತ್ತೊಂದು ಟೋಲ್ ಕೇಂದ್ರ ಸ್ಥಾಪನೆಯಾಗುವ ಸಾಧ್ಯತೆ ಇದೆ. ಇದಲ್ಲದೆ ಮಾರ್ಗ ಮಧ್ಯದ ನಗರಗಳಲ್ಲಿ ಎಂಟ್ರಿ- ಎಕ್ಸಿಟ್ ಟೋಲ್ ಇರಲಿದ್ದು, ಪ್ರಯಾಣಿಕರು ತಾವು ಕ್ರಮಿಸಿದ ದೂರಕ್ಕೆ ತಕ್ಕಂತೆ ಟೋಲ್ ಕಟ್ಟಬೇಕಾಗುತ್ತದೆ.

ಬಿಡದಿ ಬಳಿ ಜಲಾವೃತಗೊಂಡಿದ್ದ ಟೋಲ್‌ಗೇಟ್

'ಗೋವಾ ಪಕ್ಷಾಂತರ ಹಾಸ್ಯಾಸ್ಪದ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವಾದಲ್ಲಿ ನಡೆಯುತ್ತಿರುವ ರಾಜಕೀಯ ನಾಯಕರ ಪಕ್ಷಾಂತರಗಳು ಹಾಸ್ಯಾಸ್ಪದವಾಗಿವೆ. ಆ ಮೂಲಕ, 'ಪ್ರಜಾಪ್ರಭುತ್ವದ ತಾಯಿ' ಎಂದೇ ಗುರುತಿಸಿಕೊಂಡ ನೆಲದಲ್ಲಿ ಚುನಾವಣೆ ಮತ್ತು ಅದರ ಫಲಿತಾಂಶ ಅಪ್ರಸ್ತುತವಾಗುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

'ನಾನು ಜನವರಿಯಲ್ಲಿ ದೇವಸ್ಥಾನಕ್ಕೆ ಹೋಗಿದ್ದಾಗ ಕಾಂಗ್ರೆಸ್ ತ್ಯಜಿಸದಂತೆ ದೇವರು ಆದೇಶ ಮಾಡಿದ್ದರಿಂದ ಅವರ ಆದೇಶದಂತೆ ನಡೆದುಕೊಂಡೆ. ಇತ್ತೀಚೆಗೆ ಮತ್ತೆ ದೇವಸ್ಥಾನಕ್ಕೆ ಹೋಗಿದ್ದೆ. ಈ ಬಾರಿ ದೇವರು, ನಿನಗೆ ಏನು ಒಳ್ಳೆಯದೆಂದು ಅನಿಸುತ್ತೊ ಅದನ್ನು ಮಾಡು ಎಂದು ಹೇಳಿದರು.

ಹೀಗಾಗಿ, ನಾನು ಬಿಜೆಪಿ ಸೇರಿದೆ' ಎಂಬ ಮಾಜಿ ಮುಖ್ಯಮಂತ್ರಿ ದಿಗಂಬರ್ ಕಾಮತ್ ಮಾತುಗಳಿಗೆ ಧನ್ಯವಾದ ಹೇಳಲೇಬೇಕು. ದಿಗಂಬರ ಕಾಮತ್ ಅವರು ಈ ಅನೈತಿಕ ನಡೆಗೆ ದೇವರಿಂದ ನೈತಿಕ ಪ್ರತಿಕ್ರಿಯೆ ಹೇಗೆ ಪಡೆದರು? ಅವರು ದೇವರ ಜೊತೆ ಸಂಭಾಷಣೆ ನಡೆಸಲು ಹೇಗೆ ಸಾಧ್ಯವಾಯಿತು? ದೇವಸ್ಥಾನಕ್ಕೆ ಎರಡು ಬಾರಿ ಭೇಟಿ ನೀಡಿದಾಗಲೂ ದೇವರು ಅವರಿಗೆ ಅನುಕೂಲ ಮಾಡಿಕೊಟ್ಟಿದ್ದು ಹೇಗೆ ಎನ್ನುವುದು ನನಗೆ ಅಚ್ಚರಿ ತಂದಿದೆ' ಎಂದೂ ವ್ಯಂಗ್ಯವಾಡಿದ್ದಾರೆ.

ಪ್ರಧಾನಿ ಜನ್ಮದಿನ: ಬಿಜೆಪಿ ಯುವ ಮೋರ್ಚಾ ವತಿಯಿಂದ ರಕ್ತದಾನ ಶಿಬಿರ

10,598 ಯೂನಿಟ್ ರಕ್ತ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಜನ್ಮದಿನದ ಅಂಗವಾಗಿ ಬಿಜೆಪಿ ಯುವ ಮೋರ್ಚಾ ವತಿಯಿಂದ ರಾಜ್ಯದ ಹಲವೆಡೆ ಶನಿವಾರ ಆಯೋಜಿಸಿದ್ದ ರಕ್ತದಾನ ಶಿಬಿರಗಳಲ್ಲಿ ಒಟ್ಟು 10,598 ಯೂನಿಟ್ ರಕ್ತ ಸಂಗ್ರಹಿಸಲಾಗಿದೆ.

ಕಲ್ಯಾಣ ಕರ್ನಾಟಕದ ಕೆಲವು ಭಾಗಗಳನ್ನು ಹೊರತುಪಡಿಸಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬಿಜೆಪಿ ಯುವ ಮೋರ್ಚಾ ಹಾಗೂ ಪಕ್ಷದ ಸ್ಥಳೀಯ ಘಟಕಗಳ ನೇತೃತ್ವದಲ್ಲಿ ಪ್ರಧಾನಿಯವರ ಜನ್ಮದಿನ ಆಚರಿಸಲಾಗಿದೆ. 160 ಮಂಡಲಗಳ ವ್ಯಾಪ್ತಿಯ 175 ಸ್ಥಳಗಳಲ್ಲಿ ಕಾರ್ಯಕ್ರಮ ನಡೆಸಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ರಾಜ್ಯದಾದ್ಯಂತ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ರಕ್ತದಾನದ ಜತೆಯಲ್ಲೇ ಉಚಿತವಾಗಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿತ್ತು. ಸಾವಿರಾರು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆ. ಆಸ್ಪತ್ರೆಗಳಲ್ಲಿ ಹಣ್ಣು ವಿತರಣೆ, ಅನಾಥಾಶ್ರಮ, ವಿಶೇಷ ಮಕ್ಕಳ ವಸತಿ ಶಾಲೆಗಳಲ್ಲೂ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಎಂದರು.

ಪ್ರಧಾನಿಯವರ ಜನ್ಮದಿನದ ಅಂಗವಾಗಿ ಇಲ್ಲಿನ ಬೆಂಗಳೂರಿನ ಹಲವು ಸ್ಥಳಗಳಲ್ಲಿ ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿತ್ತು. ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಪಾಲ್ಗೊಂಡಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿನ ಶೇಷಾದ್ರಿಪುರದಲ್ಲಿರುವ ಮನೋವಿಕಾಸ ಕೇಂದ್ರದಲ್ಲಿ ಮೋದಿಯವರ ಜನ್ಮದಿನ ಆಚರಣೆಯಲ್ಲಿ ಪಾಲ್ಗೊಂಡರು. ಕೇಕ್ ಕತ್ತರಿಸಿ, ಮಕ್ಕಳಿಗೆ ಹಣ್ಣು ವಿತರಿಸಿ ಸಂಭ್ರಮಿಸಿದರು.

ಗೋಕಲ್ ದಾಸ್ ಎಕ್ಸ್‌ಪರ್ಟ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶಿವರಾಮಕೃಷ್ಣ ಗಣಪತಿ ಅವರು ಕಂಪ್ಯೂಟರ್ ಪ್ರಯೋಗಾಲಯ ಉದ್ಘಾಟಿಸಿದರು. ಕೇಶವ್ ಕೆ., ಹರೀಶ್ ಎನ್‌. ಅಜಿತ್, ಅಕ್ಷತಾ, ಮಹಾಂತೇಶ್ ಬಿ. ಹಾಜರಿದ್ದರು

ಸರ್ಕಾರಿ ಪ್ರೌಢಶಾಲೆಗೆ ₹ 25 ಲಕ್ಷ ವೆಚ್ಚದ ಕಂಪ್ಯೂಟರ್ ಲ್ಯಾಬ್, ಗ್ರಂಥಾಲಯ ಕೊಡುಗೆ

ಪೀಣ್ಯ-ದಾಸರಹಳ್ಳಿ: 'ಖಾಸಗಿ ಶಾಲೆಗೆ ಕಡಿಮೆಯಾಗದಂತೆ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಈ ಸರ್ಕಾರಿ ಶಾಲೆಗೆ ಕಂಪ್ಯೂಟರ್ ಪ್ರಯೋಗಾಲಯ ಹಾಗೂ ಗ್ರಂಥಾಲಯವನ್ನು ಕೊಡುಗೆಯಾಗಿ ನೀಡುತ್ತಿದ್ದೇವೆ' ಎಂದು ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶಿವರಾಮಕೃಷ್ಣ ಗಣಪತಿ ತಿಳಿಸಿದರು.

ಬಾಗಲಗುಂಟೆಯ ಸರ್ಕಾರಿ ಪ್ರೌಢ ಶಾಲೆಗೆ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಚಾರಿಟಬಲ್ ಫೌಂಡೇಶನ್ ವತಿಯಿಂದ ₹25 ಲಕ್ಷ ವೆಚ್ಚದಲ್ಲಿ ನೀಡಲಾದ 30 ಕಂಪ್ಯೂಟರ್, ಪ್ರಾಜೆಕ್ಟ್ ಸ್ಕ್ರೀನ್, ಗ್ರಂಥಾಲಯ, ಕುಡಿಯುವ ನೀರಿನ ಘಟಕದ ಕೊಠಡಿ ಉದ್ಘಾಟಿಸಿದರು.

'ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡುವ ದೂರದ ಜಿಲ್ಲೆಯ ವಲಸೆ ಕಾರ್ಮಿಕರ ಮಕ್ಕಳು ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅವರು ಸಹ ಗುಣಮಟ್ಟದ ಶಿಕ್ಷಣ ಪಡೆದು ಉನ್ನತ ಮಟ್ಟಕ್ಕೆ ಏರಬೇಕು' ಎಂದು ತಿಳಿಸಿದರು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ ಸಂಸ್ಥೆಯ ಉಪಾಧ್ಯಕ್ಷ ಮೊಹಿದೀನ್, 'ಆಧುನಿಕ ಯುಗದಲ್ಲಿ ಕಂಪ್ಯೂಟರ್ ಆಧಾರಿತ ಶಿಕ್ಷಣವು ಪ್ರಮುಖ' ಎಂದರು.

ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮುಖ್ಯ ಶಿಕ್ಷಕ ವೇಣುಗೋಪಾಲ್, ಶಿಕ್ಷಕಿ ಲತಾ ಜಿ., ಕೇಶವ್ ಕೆ., ಹರೀಶ್ ಎನ್., ಅಜಿತ್, ಅಕ್ಷತಾ, ಮಹಾಂತೇಶ್, ಶಾರದಾ ಹಾಜರಿದ್ದರು.

ಸಂಘಕ್ಕೆ ಆಯ್ಕೆ

ಎಚ್. ಕೃಷ್ಣಪ್ಪ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ನೌಕರರ ಸಾಲ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಚ್. ಕೃಷ್ಣಪ್ಪ ಆಯ್ಕೆಯಾಗಿದ್ದಾರೆ. ಸಂಘದ ಚುನಾವಣೆಯಲ್ಲಿ ಕಾರ್ಯಕಾರಿ ಮಂಡಳಿ ಸದಸ್ಯರಾದ ಎಚ್. ಕೃಷ್ಣಪ್ಪ ಬಹುಮತದಿಂದ ಆಯ್ಕೆಯಾಗಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ವಾರ್ತೆ

ಎಸ್. ಸೂರ್ಯ ನಾರಾಯಣ ರಾವ್

ಬೆಂಗಳೂರು: ಕೋಲಾರ ಜಿಲ್ಲೆ ಶ್ರೀನಿವಾಸಪುರದ ಮಾಜಿ ಶ್ಯಾನುಭೋಗರಾದ ಎಸ್. ಸೂರ್ಯ ನಾರಾಯಣ ರಾವ್ (91) ಶನಿವಾರ ನಿಧನರಾದರು. ಅವರಿಗೆ ವಕೀಲ ಎಚ್. ನಟರಾಜ ಶರ್ಮಾ ಸೇರಿದಂತೆ ಮೂವರು ಪುತ್ರರು ಇದ್ದಾರೆ. ಅಂತ್ಯಕ್ರಿಯೆಯೂ ಚಾಮರಾಜಪೇಟೆಯ ಸ್ಮಶಾನದಲ್ಲಿ ಶನಿವಾರ ನೆರವೇರಿತು.

ಪಿಇಎಸ್ ವಿವಿ ಹೊರತಂದ 'ಕಥಾ ಲೋಕ' ಪುಸ್ತಕ ಬಿಡುಗಡೆ

ಸೌಹಾರ್ದ ಶಿಕ್ಷಣ ಇಂದಿನ ಅಗತ್ಯ: ಗೆಹಲೋತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಸಮಾನತೆ-ಸೌಹಾರ್ದ ಕಾಪಾಡುವ, ನೈತಿಕ ಪ್ರಜ್ಞೆ ಮೂಡಿಸುವ ಶಿಕ್ಷಣದ ಅವಶ್ಯ ಇದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಯೋಗದಲ್ಲಿ ಪಿಇಎಸ್ ವಿಶ್ವವಿದ್ಯಾಲಯ ಶಾಲಾ ವಿದ್ಯಾರ್ಥಿಗಳಿಗೆ ರೂಪಿಸಿದ ಕನ್ನಡ ನೈತಿಕ ಕಥೆಗಳ ಸಂಕಲನ 'ಕಥಾ ಲೋಕ' ಪುಸ್ತಕವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಆಧುನಿಕ ಜ್ಞಾನವನ್ನು ಮೌಲ್ಯಗಳೊಂದಿಗೆ ಬೆಸೆಯುವ, ಧರ್ಮ, ಸಂಸ್ಕೃತಿ, ರಾಷ್ಟ್ರದ ಏಕತೆ, ಸಮಗ್ರತೆ ಕಾಪಾಡುವ ಮನೋಭಾವದ ಶಿಕ್ಷಣವನ್ನು ಶಾಲೆಗಳಲ್ಲಿ ಕಲಿಸಬೇಕಿದೆ. ಮಕ್ಕಳ ಶೈಕ್ಷಣಿಕ ಬುನಾದಿ ಗಟ್ಟಿಯಾಗಿದ್ದರೆ ಉನ್ನತ ಜ್ಞಾನ ಸಂಪಾದಿಸಿ, ಭವಿಷ್ಯದಲ್ಲಿ ಅತ್ಯುನ್ನತ ಸಾಧನೆ ಮಾಡಲು ಸಾಧ್ಯವಾಗಲಿದೆ ಎಂದರು.

ಮನೆಯ ತಳಪಾಯ ಭದ್ರವಾಗಿದ್ದರೆ ಮನೆ ದೀರ್ಘಕಾಲ ಬಾಳಿಕೆಗೆ ಬರುತ್ತದೆ. ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆತರೆ ಭವಿಷ್ಯ ಉಜ್ವಲವಾಗಲಿದೆ. ನೈತಿಕ ಕಥೆಗಳು ಮಕ್ಕಳ ಜೀವನಕ್ಕೆ ಅತ್ಯವಶ್ಯ. ಮಕ್ಕಳ ಅಡಿಪಾಯ ಬಲಪಡಿಸುವ ಜತೆಗೆ, ಸಾಂಸ್ಕೃತಿಕ, ಭಾವನಾತ್ಮಕ ಬೆಳವಣಿಗೆಗೂ ಸಹಕಾರಿ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮಕ್ಕಳ ಭವಿಷ್ಯವನ್ನು ಉಜ್ವಲ ಹಾಗೂ ಸುರಕ್ಷಿತವಾಗಿಸಲಿದೆ ಎಂದರು.

ಶಿಕ್ಷಣ ಸುಧಾರಣಾ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ, 'ಕಥಾ ಲೋಕ' ಪುಸ್ತಕ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ಸಂಗ್ರಹಿಸಲಾಗಿದೆ. ಈ ಪುಸ್ತಕದ ಅಧ್ಯಯನ ಮಕ್ಕಳಲ್ಲಿ ನೈತಿಕತೆ, ದೇಶಭಕ್ತಿ ಬೆಳೆಸುತ್ತದೆ. ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಭಾರತೀಯ ಕಥಾ ಪರಂಪರೆಗೆ ಜನಪದೀಯ ಕೊಡುಗೆ ಅಪಾರ. ಇಂದಿನ ತಾಂತ್ರಿಕ ಯುಗದಲ್ಲಿ ಕತೆ ಹೇಳುವ ಕಲೆ ಮಾಯವಾಗಿದೆ. ಇಂತಹ ಸಮಯದಲ್ಲಿ ಕಥಾಲೋಕ ಹೊಸ ಮನ್ವಂತರಕ್ಕೆ ನಾಂದಿ ಹಾಡಿದೆ ಎಂದರು.

ಶಾಸಕ ಬಿ.ಎಸ್.ಯಡಿಯೂರಪ್ಪ, ಪಿಇಎಸ್ ವಿವಿ ಕುಲಪತಿ ಜೆ. ಸೂರ್ಯ ಪ್ರಸಾದ್, ಕುಲಸಚಿವ ಡಾ.ಕೆ.ಎಸ್. ಶ್ರೀಧರ, ಪ್ರೊ.ವಿ.ಕೃಷ್ಣ ಉಪಸ್ಥಿತರಿದ್ದರು.



ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಕಥಾ ಲೋಕ' ಪುಸ್ತಕವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಶುಕ್ರವಾರ ಬಿಡುಗಡೆ ಮಾಡಿದರು. ಸಾಹಿತಿ ಚಂದ್ರಶೇಖರ ಕಂಬಾರ, ಶಾಸಕ ಬಿ.ಎಸ್‌ಯಡಿಯೂರಪ್ಪ, ಶಿಕ್ಷಣ ಸುಧಾರಣಾ ಸಲಹೆಗಾರ ಪ್ರೊ.ಎಂ.ಆರ್ ದೊರೆಸ್ವಾಮಿ ಇದ್ದಾರೆ.

ಸುದ್ದಿ 2 ನಿಮಿಷ

ಸಾಹಿತ್ಯ ಸಮ್ಮೇಳನ: ಕನಕ-ಸರ್ವಜ್ಞ-ಶರೀಫರ ಗೋಷ್ಠಿ

ಬೆಂಗಳೂರು: ಹಾವೇರಿಯು ಕನಕ-ಸರ್ವಜ್ಞ-ಶರೀಫರ ಪುಣ್ಯಭೂಮಿ ಆಗಿರುವುದರಿಂದ ಅವರ ಕುರಿತ ವಿಶೇಷ ಗೋಷ್ಠಿಯೊಂದಿಗೆ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಾರಂಭಿಸಲು ತೀರ್ಮಾನಿಸಲಾಗಿದೆ.

2022ರ ನ.11, 12 ಮತ್ತು 13ರಂದು ಹಾವೇರಿಯಲ್ಲಿ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಸಮ್ಮೇಳನದ ಗೋಷ್ಠಿಗಳಿಗೆ ವಿಷಯ ಹಾಗೂ ಸಂಪನ್ಮೂಲ ವ್ಯಕ್ತಿಗಳ ಆಯ್ಕೆಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ನಗರದಲ್ಲಿ ಶನಿವಾರ ಪ್ರಥಮ ಸಭೆ ನಡೆಸಿತು. ಸ್ವಾತಂತ್ರ್ಯ ಹೋರಾಟದಲ್ಲಿ ಹಾವೇರಿಯ ಪಾತ್ರ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡ ಸಾಹಿತ್ಯದ ಪಾತ್ರ, ಹೈದರಾಬಾದ್ ಕರ್ನಾಟಕದ ವಿಮೋಚನಾ ಹೋರಾಟ ನಡೆದ ದಾರಿ, ಗಡಿ ಕರ್ನಾಟಕ ಸಮಸ್ಯೆಗಳು ಮತ್ತು ಪರಿಹಾರ, ಅನುವಾದ ಸಾಹಿತ್ಯ-ಇದರಲ್ಲಿ ಕನ್ನಡ ಭಾಷೆಯಿಂದ ಇತರ ಭಾಷೆ ಹಾಗೂ ಇತರ ಭಾಷೆಗಳಿಂದ ಕನ್ನಡಕ್ಕೆ ಕೊಡುಗೆ, ಹಾವೇರಿ ಜಿಲ್ಲಾ ದರ್ಶನ, ಕನ್ನಡದ ಅಸ್ಮಿತೆಯ ಸವಾಲುಗಳು, ಮಾಧ್ಯಮ ಮತ್ತು ಹೊಸ ಆವಿಷ್ಕಾರಗಳು, ಕೋವಿಡ್ ತಂದ ಆವಿಷ್ಕಾರ, ರಾಷ್ಟ್ರೀಯ ಶಿಕ್ಷಣ ನೀತಿಯ ಅರಿವು ಮತ್ತು ಅನುಷ್ಠಾನ, ಕನ್ನಡ ಸಾಹಿತ್ಯಕ್ಕೆ ಯುವಸ್ಪಂದನ ಸೇರಿ ವಿವಿಧ ವಿಷಯಗಳನ್ನು ಗೋಷ್ಠಿಯಲ್ಲಿ ಸೇರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಮ್ಮೇಳನದ ಗೋಷ್ಠಿಗಳ ಮಹತ್ವ ಹೆಚ್ಚಿಸಲು ಪ್ರಧಾನ ವೇದಿಕೆಯ ಜೊತೆಗಿನ ಉಳಿದ ವೇದಿಕೆಗಳನ್ನು ಸಮಾನಾಂತರ ವೇದಿಕೆ ಎನ್ನದೆ, ಮೂರೂ ವೇದಿಕೆಗಳಿಗೂ ಸಮಾನ ಮಹತ್ವ ನೀಡಬೇಕು. ವೇದಿಕೆ-1, ವೇದಿಕೆ-2 ಮತ್ತು ವೇದಿಕೆ-3 ಎಂದು ಸಂಬೋಧಿಸಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಕೇಶವಮೂರ್ತಿಗೆ 'ಸಾಮಾ ಜೀವಮಾನ ಪುರಸ್ಕಾರ'

ಬೆಂಗಳೂರು:ಶ್ರೀ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್ ನೀಡುವ 'ಸಾಮಾ ಜೀವಮಾನ ಪುರಸ್ಕಾರ'ಕ್ಕೆ ಗಮಕ ಕಲಾವಿದ ಹೊಸಹಳ್ಳಿ ಕೇಶವಮೂರ್ತಿ ಆಯ್ಕೆಯಾಗಿದ್ದಾರೆ.

ಸಂಸ್ಥೆಯು ತನ್ನ 14ನೇ ವಾರ್ಷಿಕೋತ್ಸವದ ಪ್ರಯುಕ್ತ ವಿವಿಧ ಪುರಸ್ಕಾರಗಳನ್ನು ಘೋಷಿಸಿದೆ. 'ಸಾಮ ಪುರಸ್ಕಾರ'ಕ್ಕೆ ಸಂಗೀತ ವಿದ್ವಾಂಸರಾದ ವಿದ್ವಾನ್ ಡಿ. ಬಾಲಕೃಷ್ಣ ಹಾಗೂ ವಿದ್ವಾನ್ ಟಿ.ಎಸ್. ಚಂದ್ರಶೇಖರ್ ಆಯ್ಕೆಯಾಗಿದ್ದಾರೆ. 'ಸಾಮ ಯುವ ಪುರಸ್ಕಾರ'ಕ್ಕೆ ಕಾರ್ತಿಕೇಯ ಶರ್ಮಾ, ವಿನಯ್ ಧಾರವಾಡ ಹಾಗೂ ವಿಷ್ಣು ಭಾಜನರಾಗಿದ್ದಾರೆ.

'ಸಾಮ ಬಾಲಪುರಸ್ಕಾರ'ಕ್ಕೆ ಸುದನ್ವ, ಅಚ್ಯುತ್ ಎಂ. ಆತ್ರೇಯ ಹಾಗೂ ಅನಿರ್ಬನ್ ಆಯ್ಕೆಯಾಗಿದ್ದಾರೆ. ಇದೇ 25ರಂದು ಸಂಜೆ 4 ಗಂಟೆಗೆ ಜಯನಗರದ ಜಯರಾಮ ಸೇವಾ ಮಂಡಳಿಯಲ್ಲಿ ಸಂಸ್ಥೆಯು ತನ್ನ ವಾರ್ಷಿಕೋತ್ಸವ ಸಮಾರಂಭ ಹಮ್ಮಿಕೊಂಡಿದ್ದು, ವಿವಿಧ ಪುರಸ್ಕಾರಗಳನ್ನು ಪ್ರದಾನ ಮಾಡಲಾಗುತ್ತದೆ. ಈ ಸಮಾರಂಭದಲ್ಲಿ ಸಂಸ್ಕೃತ ವಿದ್ವಾಂಸರಾದ ಗಣಪತಿ ಹೆಗಡೆ ಹಾಗೂ ವಿದ್ವಾನ್ ಜಗದೀಶ್ ಶರ್ಮಾ ಸಂಪ ಅವರನ್ನು ಸನ್ಮಾನಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಚಿತ್ರಾವಳಿ

ಬೆಂಗಳೂರಿನಲ್ಲಿ ನಡೆದ ಆಭರಣಗಳ ಪ್ರದರ್ಶನ ಕಾರ್ಯಕ್ರಮದಲ್ಲಿ ಆಭರಣಗಳ ಕ್ಷೇತ್ರದಲ್ಲಿ ಅತಿ ಹೆಚ್ಚು ಉದ್ಯೋಗ ಸೃಷ್ಟಿಸಿದ್ದಕ್ಕಾಗಿ 'ಪ್ರೈಡ್ ಆಫ್ ಇಂಡಿಯಾ ಅವಾರ್ಡ್' ಅನ್ನು ಮಲಬಾರ್ ಗೋಲ್ಡ್ ಹಾಗೂ ಡೈಮಂಡ್‌ನ ಕರ್ನಾಟಕ ಪ್ರಾಂತ್ಯದ ಮುಖ್ಯಸ್ಥ ಫಿಲ್ಸೋರ್ ಬಾಬು ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಸ್ವೀಕರಿಸಿದರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಶನಿವಾರ ನಗರದಲ್ಲಿ ಆಯೋಜಿಸಿದ್ದ ವಿಶ್ವಕರ್ಮ ಜಯಂತ್ಯುತ್ಸವದಲ್ಲಿ ನೀಲಕಂಠ ಸ್ವಾಮೀಜಿ ಪುಷ್ಪಾರ್ಚನೆ ಮಾಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಅನಿತಾ ಲಕ್ಷ್ಮಿ ಇದ್ದರು

ನಗರದ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಆಯೋಜಿಸಿರುವ ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವಕ್ಕೆ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಶುಕ್ರವಾರ ಚಾಲನೆ ನೀಡಿದರು.

ಫೋಟೊ ಜರ್ನಲಿಸ್ಟ್ ಅಸೋಸಿಯೇಷನ್, ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಬಿಜೆಪಿ ಮಾಧ್ಯಮ ಪ್ರಕೋಷ್ಠ ಮತ್ತು ಬೆಂಗಳೂರು ವೈದ್ಯಕೀಯ ಪ್ರಕೋಷ್ಠ ವತಿಯಿಂದ ಆರೋಗ್ಯ ತಪಾಸಣ ಶಿಬಿರ ಶನಿವಾರ ಆಯೋಜಿಸಲಾಗಿತ್ತು. ಪ್ರೆಸ್‌ಕ್ಲಬ್ ಸದಸ್ಯರು ಮತ್ತು ಅವರ ಕುಟುಂಬದವರು ಆರೋಗ್ಯ ತಪಾಸಣೆ ಮಾಡಿಕೊಂಡರು.

ಸಮಸ್ಯೆಗಳಲ್ಲಿ ಮುಳುಗಿರುವ ಜನ: ಚೇತರಿಕೆಗೆ ಪರದಾಟ

ನೆರೆ ಇಳಿದಿದೆ, ಬರೆ ಬಿದ್ದಿದೆ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಅತಿಥಿಯಂತೆ ಬಂದಿದ್ದ ನೆರೆ, ಹಲವು ಸವಾಲುಗಳನ್ನು ಬಿಟ್ಟು ಹೋಗಿದೆ. ನೀರಿನಿಂದ ಮೇಲೆದ್ದಿದ್ದರೂ ಜನ ಸಮಸ್ಯೆಗಳಲ್ಲಿ ಮುಳುಗಿದ್ದಾರೆ. ನೆರೆ ಇಳಿದರೂ ಅದರಿಂದ ಬಿದ್ದಿರುವ ಬರೆ(ಆರ್ಥಿಕ ಹೊರೆ) ನಿವಾಸಿಗಳನ್ನು ಕಂಗಾಲಾಗಿಸಿದೆ.

ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಸಾಮಾನ್ಯವಾಗಿ ನೆಲ ಮಾಳಿಗೆಯನ್ನು ವಾಹನ ನಿಲುಗಡೆ ಸೀಮಿತ ಮಾಡಲಾಗುತ್ತದೆ. ಇಡೀ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ, ಜನರೇಟರ್, ಲಿಫ್ಟ್, ಭದ್ರತಾ ಸಿಬ್ಬಂದಿಯ ಕೊಠಡಿಗಳು ಇರುತ್ತವೆ. ಮಹದೇವಪುರ ಸುತ್ತಮುತ್ತ ಪ್ರದೇಶದಲ್ಲಿ ಬಹುತೇಕ ಅಪಾರ್ಟ್‌ಮೆಂಟ್ ಸಮುಚ್ಚಯಗಳ ನೆಲ ಮಾಳಿಗೆಯನ್ನು ಈ ಬಾರಿಯ ನೆರೆ ಆವರಿಸಿಕೊಂಡಿತ್ತು.

ವೈಟ್‌ಫೀಲ್ಡ್ ಸಮೀಪದ ಬೆಳತೂರು ಕಾಡುಗೋಡಿ ಸಮೀಪದ ಎಂಬಿಆರ್ ಸುವೆ, ಸರೋಜ್ ಡ್ಯಾಫೋಡಿಲ್ಸ್, ಸರೋಜ್ ಟುಲಿಪ್ಸ್, ಎಂಆರ್‌ಎಸ್ ಸಿಲಿಕಾನ್ ಸ್ಪ್ರಿಂಗ್, ಎಸ್‌ಎಲ್‌ಎಸ್ ಸಿಲಿಕಾನ್ ಸ್ಪ್ರಿಂಗ್, ನಾರ್ಯ 5 ಎಲಿಮೆಂಟ್ಸ್, ಕೀರ್ತಿ ನಿವಾಸ, ಕೀರ್ತಿ ಹೈಟ್ಸ್, ಜೀವನ್ ಎಕ್ಸೋಟಿಕ್, ಪ್ರಜ್ಞಾ ಮತ್ತು ಸುತ್ತಮುತ್ತಲ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ನುಗ್ಗಿದ್ದ ನೀರು ಸಾಕಷ್ಟು ಸಮಸ್ಯೆಗಳನ್ನು ಬಿಟ್ಟು ಹೋಗಿದೆ.

ವಿದ್ಯುತ್ ಸಂಪರ್ಕದ ಯುನಿಟ್, ಜನರೇಟರ್, ಲಿಫ್ಟ್ ಎಲ್ಲವೂ ಹದಗೆಟ್ಟು ಹೋಗಿವೆ. ಮನೆ ತೊರೆದು ಹೋಟೆಲ್ ರೂಮ್‌ಗಳನ್ನು ಸೇರಿಕೊಂಡಿದ್ದ ನಿವಾಸಿಗಳು, ಈಗ ಮನೆಗಳಿಗೆ ವಾಪಸ್ ಆಗಿದ್ದಾರೆ. ಒಂದೊಂದು ಕಟ್ಟಡದಲ್ಲೂ ₹2 ಲಕ್ಷಕ್ಕೂ ಹೆಚ್ಚು ಖರ್ಚು ಮಾಡಿ ವಿದ್ಯುತ್ ಯುನಿಟ್ ಬದಲಾವಣೆ ಮಾಡಿಸುತ್ತಿದ್ದಾರೆ. ಜನರೇಟರ್, ಲಿಫ್ಟ್ ದುರಸ್ತಿ ಕಾರ್ಯವೂ ನಡೆಯುತ್ತಿದೆ.

ನೀರಿನಲ್ಲಿ ಮುಳುಗಿದ್ದ ಕಾರು ಹಾಳಾಗಿರುವುದು

–ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ವಾಹನಗಳು ಗುಜರಿಗೆ

'ನೆಲ ಮಾಳಿಗೆಯಲ್ಲಿದ್ದ ವಾಹನಗಳು ಒಂದು ವಾರ ನೀರಿನಲ್ಲೇ ಮುಳುಗಿದ್ದರಿಂದ ದುರಸ್ತಿ ಕಷ್ಟವಾಗಿದೆ. ಕೆಲ ವಾಹನಗಳು ಗುಜರಿಗೆ ಸೇರುವಷ್ಟು ಹಾಳಾಗಿವೆ' ಎಂದು ನಿವಾಸಿಗಳು ಹೇಳಿದರು.

'ಕೆಲ ವಾಹನಗಳ ಎಂಜಿನ್ ಸೀಜ್ ಆಗಿವೆ. 10ಕ್ಕೂ ಹೆಚ್ಚು ಕಾರುಗಳು, 40ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು ಹಾಳಾಗಿವೆ. ಹುಂಡೈ ಕಂಪನಿಯ ಸ್ಯಾಂಟ್ರೊ ಕಾರೊಂದನ್ನು ₹20 ಸಾವಿರಕ್ಕೆ ಮಾರಾಟ ಮಾಡಲಾಗಿದೆ. ದುರಸ್ತಿಗೆ ಹೋದರೆ ಪ್ರತಿ ಕಾರಿಗೆ ಕನಿಷ್ಠ ₹1 ಲಕ್ಷ ಬೇಕಾಗುತ್ತದೆ. ಹಣ ಹೊಂದಿಸಲು ಸಾಧ್ಯವಾಗದೆ ಕೆಲವರು ಇನ್ನೂ ಹಾಗೇ ನಿಲ್ಲಿಸಿದ್ದಾರೆ' ಎಂದು ಎಂಬಿಆರ್ ಸುವೆ ಅಪಾರ್ಟ್‌ಮೆಂಟ್‌ನ ಮಧು ತಿಳಿಸಿದರು.

'ಕೆಲವು ಕೊಳವೆ ಬಾವಿಗಳಲ್ಲಿ ಕಲುಷಿತ ನೀರು ಬರುತ್ತಿದ್ದು, ಸಮಸ್ಯೆಯನ್ನು ವಾರ್ಡ್ ಸಮಿತಿ ಸಭೆಯಲ್ಲಿ ವಿವರಿಸಿದ್ದೇವೆ. ಸರಿಪಡಿಸಬೇಕೆಂದು ಮನವಿ ಸಲ್ಲಿಸಿದ್ದೇವೆ' ಎಂದು ವಿವರಿಸಿದರು.

ಕಾಡುತ್ತಿರುವ ಅನಾರೋಗ್ಯ

'ನೆರೆ ಇಳಿದ ಬಳಿಕ ಸಾಕಷ್ಟು ಸವಾಲುಗಳನ್ನು ಜನ ಎದುರಿಸುತ್ತಿದ್ದು, ಬಹುತೇಕರು ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ಪ್ರತಿ ಮನೆಯಲ್ಲೂ ಜ್ವರದಿಂದ ಬಳಲುವ ಜನ ಇದ್ದಾರೆ' ಎಂದು ನಿವಾಸಿಗಳು ತಿಳಿಸಿದರು.

ಮನೆಗಳಿಗೆ ನೀರು ನುಗ್ಗದೇ ಇದ್ದರೂ ಶೌಚಾಲಯಗಳನ್ನು ಬಳಸುವ ಸ್ಥಿತಿ ಇರಲಿಲ್ಲ. ಶೌಚಾಲಯದಿಂದ ಮನೆಗಳಿಗೆ ನೀರು ಉಕ್ಕುತ್ತಿದ್ದರಿಂದ ಹೋಟೆಲ್‌ಗಳಿಗೆ ಸೇರಬೇಕಾಯಿತು ಎಂದು ಹೇಳಿದರು.

'ಹೋಟೆಲ್‌ಗಳಲ್ಲಿ ರಿಯಾಯಿತಿ ದರದಲ್ಲಿ ಕೊಠಡಿ ನೀಡುವುದಾಗಿ ಹೋಟೆಲ್‌ಗಳು ಪ್ರಕಟಿಸಿದ್ದವು. ಆದರೆ, ವಾಸ್ತವದಲ್ಲಿ ಎರಡು ಪಟ್ಟು ಹಣ ಪಡೆದರು. ನೆರೆ ನಮ್ಮ ಪಾಲಿಗೆ ಆರ್ಥಿಕ ಸಂಕಷ್ಟ ತಂದೊಡ್ಡಿದೆ' ಎಂದು ಅಳಲು ತೋಡಿಕೊಂಡರು.

'ರಸ್ತೆ ಬದಿಯ ಮಳೆ ನೀರು ಚರಂಡಿಯಲ್ಲಿ ನೀರು ಸರಾಗವಾಗಿ ಹರಿದು ಹೋಗಲು ಅವಕಾಶ ಇಲ್ಲ. ಅಲ್ಲಲ್ಲಿ ಮುಚ್ಚಿ ಹೋಗಿದೆ. ಇದರಿಂದಾಗಿ ಮಳೆ ನೀರು ನಮ್ಮ ಕಟ್ಟಡಗಳತ್ತ ನುಗ್ಗಿದೆ. ಸರಿಪಡಿಸುವ ಕೆಲಸವನ್ನು ಬಿಬಿಎಂಪಿ ಮೊದಲು ಮಾಡಬೇಕು' ಎಂದು ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನಿಸಿಕೆ

ಎಕ್ಸ್‌ಪ್ರೆಸ್ ಕ್ಲಿನಿಕ್ ದೇಶಕ್ಕೆ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದಲ್ಲಿ ನಿರ್ಮಿಸಿರುವ ಹೈಟೆಕ್ ಡಯಾಗ್ನಾಸ್ಟಿಕ್ ಸೇವೆಗಳ ಎಕ್ಸ್‌ಪ್ರೆಸ್ ಕ್ಲಿನಿಕ್, ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಎಸ್ಕಲೇಟರ್ ಸಹಿತ ಪಾದಚಾರಿ ಮಾರ್ಗವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ಮಲ್ಲೇಶ್ವರದ ಈ ಮಾದರಿ ಕ್ಲಿನಿಕ್ ದೇಶ ಮತ್ತು ರಾಜ್ಯಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟಿದೆ. ಈ ವರ್ಷ ನಗರದಲ್ಲಿ 20 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಇದೇ ಮಾದರಿಯಲ್ಲಿ ನಿರ್ಮಿಸಲಾಗುವುದು. ಮುಂದಿನ ಮೂರು ತಿಂಗಳಲ್ಲಿ ನಗರದ 243 ವಾರ್ಡ್‌ಗಳಲ್ಲೂ ನಮ್ಮ ಕ್ಲಿನಿಕ್‌ಗಳನ್ನು ಆರಂಭಿಸಲಾಗುವುದು' ಎಂದರು.

'ಜಯದೇವ ಆಸ್ಪತ್ರೆಯ ನಾಲ್ಕು ಕೇಂದ್ರಗಳನ್ನು ಬೆಂಗಳೂರು ನಗರದಲ್ಲಿ ಸ್ಥಾಪಿಸಲು ಕ್ರಮ ವಹಿಸಲಾಗಿದೆ. ಇವುಗಳ ಪೈಕಿ 50 ಹಾಸಿಗೆಗಳ ಒಂದು ಕೇಂದ್ರವು ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನಿರ್ಮಿಸಲಾಗುತ್ತಿದೆ. ಸದ್ಯದಲ್ಲೇ ಚಾಲನೆ ನೀಡಲಾಗುವುದು' ಎಂದು ಹೇಳಿದರು.

ಸಚಿವ ಅಶ್ವತ್ಥನಾರಾಯಣ ಮಾತನಾಡಿ, ಮಲ್ಲೇಶ್ವರಂ ಕ್ಷೇತ್ರದ ಎಲ್ಲ ಏಳು ವಾರ್ಡುಗಳಲ್ಲೂ ಸಮಗ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆರಂಭಿಸಲಾಗುವುದು. ಈಗಾಗಲೇ ಸುಬ್ರಹ್ಮಣ್ಯ ನಗರ ಮತ್ತು ಅರಮನೆ ನಗರಗಳಲ್ಲಿ ಇದರ ಕಾಮಗಾರಿ ನಡೆಯುತ್ತಿದೆ ಎಂದರು.

ಎಕ್ಸ್‌ಪ್ರೆಸ್ ಕ್ಲಿನಿಕ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಬಿಬಿಎಂಪಿ ವಿಶೇಷ ಆಯುಕ್ತರಾದ ದೀಪಕ್, ತ್ರಿಲೋಕ ಚಂದ್ರ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಇದ್ದರು

ಪ್ರತಿಭಟನೆಗೆ ವಿದ್ಯುತ್ ಸಂಪರ್ಕ ಕಡಿತ

ಬೆಂಗಳೂರು: ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಪ್ರತಿಭಟನಾ ಸ್ಥಳದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದು, ಹೋರಾಟಗಾರರ ಆಕ್ರೋಶಕ್ಕೆ ಕಾರಣವಾಗಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ನಿರಂತರ ಧರಣಿ ನಡೆಸುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ(ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ಅಹೋರಾತ್ರಿ ಹೋರಾಟ ನಡೆಸುತ್ತಿದೆ. ಇನ್ನೊಂದೆಡೆ ದೇವನಹಳ್ಳಿ ವಿಜಯಪುರ ರೈತರ ಹೋರಾಟ ನಡೆಯುತ್ತಿದೆ.

ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಆಕ್ರೋಶಗೊಂಡ ದಲಿತ ಸಂಘಟನೆಗಳು, ತಮಟೆ ಬಾರಿಸಿಕೊಂಡು ಬೆಸ್ಕಾಂ ಕಚೇರಿಗೇ ತೆರಳಲು ಮುಂದಾದರು. ಪೊಲೀಸ್ ಅಧಿಕಾರಿಗಳು ಮಧ್ಯ ಪ್ರವೇಶಿಸಿ ಬೆಸ್ಕಾಂ ಅಧಿಕಾರಿಗಳ ಜತೆ ಮಾತುಕತೆ ನಡೆಸಿ ಸಮಸ್ಯೆ ಪರಿಹರಿಸುವ ಭರವಸೆ ನೀಡಿದರು. ಬಳಿಕ ವಿದ್ಯುತ್ ಸಂಪರ್ಕ ಮರಳಿ ನೀಡಲಾಯಿತು.

ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ವಿದ್ಯಾರ್ಥಿಗಳಿಗೆ ಕಲಿಕಾ ಪ್ರಮಾಣ ಪತ್ರ ವಿತರಿಸಿದರು. ಆಯುಕ್ತೆ ಕೆ.ಜ್ಯೋತಿ, ನಿರ್ದೇಶಕ ಬಿ.ಎನ್. ಶ್ರೀಧರ್, ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಇದ್ದರು.

'ಮತ್ತೆ 30 ಐಟಿಐಗಳು ಮೇಲ್ದರ್ಜೆಗೆ'

ಬೆಂಗಳೂರು: ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ, ಉನ್ನತ ಕೌಶಲ ನೀಡಲು 150 ಐಟಿಐಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಇನ್ನೂ 30 ಸರ್ಕಾರಿ ಐಟಿಐಗಳನ್ನು ಪ್ರಸಕ್ತ ವರ್ಷ ಉನ್ನತೀಕರಿಸಲಾಗುವುದು ಎಂದು ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು. ಪೀಣ್ಯದ ಸರ್ಕಾರಿ ಐಟಿಐನಲ್ಲಿ ಶನಿವಾರ ಆಯೋಜಿಸಿದ್ದ ಬೆಂಗಳೂರು ನಗರ ಜಿಲ್ಲಾಮಟ್ಟದ ಪ್ರಥಮ ಘಟಿಕೋತ್ಸವದಲ್ಲಿ ಮಾತನಾಡಿದರು.

ಪ್ರಧಾನಿ ಮೋದಿ ಅವರ ಸೂಚನೆಯಂತೆ 'ವಿಶ್ವಕರ್ಮ ದಿನ'ದಂದು ದೇಶದ 14 ಸಾವಿರ ಐಟಿಐಗಳಲ್ಲಿ ಘಟಿಕೋತ್ಸವ ಆಚರಿಸಲಾಗುತ್ತಿದೆ. 2021-22ನೇ ಸಾಲಿನ ವಿದ್ಯಾರ್ಥಿಗಳಿಗೆ ಕಲಿಕಾ ಪ್ರಮಾಣಪತ್ರ ಪ್ರದಾನ ಮಾಡಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಸೇವಾ ವಲಯದ ಜತೆಗೆ, ಉತ್ಪಾದನಾ ರಂಗ ಮುಂಚೂಣಿಗೆ ಬರಬೇಕು. ಇದರಲ್ಲಿ ಐಟಿಐ ವಿದ್ಯಾರ್ಥಿಗಳ ಪಾತ್ರ ನಿರ್ಣಾಯಕವಾಗಿವೆ ಎಂದರು.

21ರಿಂದ ಬಿಬಿಎಂಪಿ ಗುತ್ತಿಗೆದಾರರ ಮುಷ್ಕರ

ಬೆಂಗಳೂರು: ಪೂರ್ಣಗೊಂಡ ಕಾಮಗಾರಿ ಬಿಲ್ ಪಾವತಿ ಪ್ರಕ್ರಿಯೆಯನ್ನು ಮತ್ತಷ್ಟು ಜಟಿಲಗೊಳಿಸಿರುವುದನ್ನು ವಿರೋಧಿಸಿ ಬಿಬಿಎಂಪಿ ಗುತ್ತಿಗೆದಾರರ ಸಂಘ ಸೆ.21ರಿಂದ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸಲು ನಿರ್ಧರಿಸಿದೆ.

'ಬಿಲ್ ಪಾವತಿಗೆ ಸಂಬಂಧಿಸಿದಂತೆ ಹಲವು ಹೊಸ ಪ್ರಕ್ರಿಯೆಗಳನ್ನು ಮುಖ್ಯ ಆಯುಕ್ತರು ಹೊರಡಿಸಿದ್ದರು. ಇದನ್ನು ಬದಲಿಸಲು ಕೋರಿ ಮೂರು ಬಾರಿ ಮನವಿ ಸಲ್ಲಿಸಿದ್ದೆವು. ಆ.30ರಂದು ನಮ್ಮೊಂದಿಗೆ ಚರ್ಚೆ ನಡೆಸಿ ಎಲ್ಲಾ ಬೇಡಿಕೆ ಈಡೇರಿಸುವ ಭರವಸೆಯನ್ನೂ ನೀಡಿದ್ದರು. ಆದರೆ, ಸೆ.14ರಂದು ಹೊರಡಿಸಿರುವ ಆದೇಶದಲ್ಲಿ ಇನ್ನಷ್ಟು ಹೊಸ ಅಂಶಗಳನ್ನು ಸೇರಿಸಿದ್ದಾರೆ. ಆದ್ದರಿಂದ ಎಲ್ಲ ಕಾಮಗಾರಿಗಳನ್ನು ನಿಲ್ಲಿಸಲು ನಿರ್ಧರಿಸಿದ್ದೇವೆ' ಎಂದು ಸಂಘದ ಅಧ್ಯಕ್ಷ ಅಂಬಿಕಾಪತಿ ತಿಳಿಸಿದರು.

ಈ ಸಂಬಂಧ ಮುಖ್ಯ ಆಯುಕ್ತರಿಗೆ ಪತ್ರವನ್ನು ಬರೆಯಲಾಗಿದೆ ಎಂದರು.

'ಗುಣಮಟ್ಟಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಜವಾಬ್ದಾರಿ ಹಾಗೂ ಹೊಣೆಗಾರಿಕೆಯನ್ನು ಬದಲಿಸಲಾಗಿದೆ. ಇದು ಗುತ್ತಿಗೆದಾರರಿಗೆ ಹೊರೆಯಾಗಿದೆ. ಜುಲೈ 30ರ ಆದೇಶದಂತೆ ಮಾರ್ಪಡಿಸಬೇಕು. ವಲಯ ಕಚೇರಿಗಳಲ್ಲಿ ಆಯಾ ಬಿಲ್ ಪಾವತಿಯನ್ನು ರದ್ದುಪಡಿಸಿ ಕೇಂದ್ರ ಕಚೇರಿಯಿಂದಲೇ ನಿರ್ವಹಿಸಬೇಕು. ಟಿವಿಸಿಸಿ ಮೂಲಕ ತಪಾಸಣೆಯನ್ನು ಕೈಬಿಡಬೇಕು. 2020ರ ಅಕ್ಟೋಬರ್‌ನಿಂದ ಈವರೆಗೆ ಬಿಲ್ ಪಾವತಿ ಬಾಕಿ ಇದ್ದು, ಕನಿಷ್ಠ 6 ತಿಂಗಳ 'ಜನರಲ್ ಎಲ್‌ಒಸಿ'ಯನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಮನವಿ ಮಾಡಿದರು.

'ಟೆಂಡರ್ ಬಿಡ್ ಡಾಕ್ಯುಮೆಂಟ್ ನಿಯಮಗಳ ಪ್ರಕಾರ ಕಾಮಗಾರಿ ನಿರ್ವಹಣಾ ಅವಧಿಯನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಬೇಕು. ಬಾಕಿ ಇರುವ ಬಿಲ್ಲುಗಳಿಗೆ ಹಾಗೂ 2022ರ ಜುಲೈ18ರವರೆಗೆ ನೀಡಿರುವ ಕಾರ್ಯಾದೇಶಗಳಿಗೆ ಶೇ 6ರಷ್ಟು ಜಿಎಸ್‌ಟಿ ವ್ಯತ್ಯಾಸದ ಮೊತ್ತವನ್ನು ಬಿಬಿಎಂಪಿ ಭರಿಸಬೇಕು' ಎಂದು ಒತ್ತಾಯಿಸಿದರು.

ಬಿಬಿಎಚ್‌ಎನಿಂದ ದ್ವಿತೀಯ ಆವೃತ್ತಿ ಕಾರ್ಯಕ್ರಮ: 12 ವಿಭಾಗಗಳಲ್ಲಿ ಪ್ರಶಸ್ತಿ

20ಕ್ಕೆ 'ಫುಡ್ ಅವಾರ್ಡ್' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ (ಬಿಬಿಎಚ್‌ಎ) ವತಿಯಿಂದ ನೀಡುವ ದ್ವಿತೀಯ ಆವೃತ್ತಿಯ 'ಫುಡ್ ಅವಾರ್ಡ್'ನ ಪ್ರದಾನ ಸಮಾರಂಭ ಇದೇ 20ರಂದು ರೆಸಿಡೆನ್ಸಿ ರಸ್ತೆಯ 'ದಿ ಚಾನ್ಸರಿ ಪೆವಿಲಿಯನ್'ನಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

'ಕೋವಿಡ್ ಸಾಂಕ್ರಾಮಿಕದಿಂದ ಕಳೆದ ಎರಡು ಸಾಲಿನಲ್ಲಿ ಪ್ರಶಸ್ತಿ ಪ್ರದಾನ ಸಾಧ್ಯವಾಗಿರಲಿಲ್ಲ. ಈ ವರ್ಷ 12 ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ' ಎಂದು ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'242 ನಾಮ ನಿರ್ದೇಶನಗಳು ಬಂದಿದ್ದವು. ಆಹಾರ ಕ್ಷೇತ್ರದಲ್ಲಿ ಪರಿಣತಿ ಹೊಂದಿದ ಮೂವರನ್ನು ಜ್ಯೂರಿಯಾಗಿ ನೇಮಿಸಲಾಗಿದೆ. ಕಾರ್ಯಕ್ರಮದಂದು ವಿಜೇತರ ಆಯ್ಕೆ ಘೋಷಿಸಲಾಗುವುದು' ಎಂದರು.

'ಗ್ರಾಹಕರ ಜತೆಗೆ ಉತ್ತಮ ಬಾಂಧವ್ಯ, ಶುಚಿತ್ವ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸೇವೆ, ಗುಣಮಟ್ಟ ಎಲ್ಲವನ್ನೂ ಪರಿಶೀಲಿಸಿ ಜ್ಯೂರಿಗಳು ಪ್ರಶಸ್ತಿ ಘೋಷಿಸಲಿದ್ದಾರೆ' ಎಂದರು.

'ಸಂಘವು ಮಾಲೀಕರು ಹಾಗೂ ಕಾರ್ಮಿಕರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ. ಬೆಂಗಳೂರಿನಲ್ಲಿ ಈಚೆಗೆ ಉಂಟಾಗಿದ್ದ ನೆರೆ ಹಾವಳಿ ವೇಳೆ ಸಂತ್ರಸ್ತರಿಗೆ ವಸತಿಗೃಹದಲ್ಲಿ ಕೊಠಡಿ ವ್ಯವಸ್ಥೆ ಕಲ್ಪಿಸಲಾಗಿತ್ತು. ರೈತರಿಗೂ ನೆರವು ನೀಡಲಾಗುತ್ತಿದೆ' ಎಂದರು.

ಸಂಯೋಜಕ ಅರುಣ್ ಅಡಿಗ ಮಾತನಾಡಿ, 'ಪಿ.ಕೆ.ಮೋಹನ್‌ಕುಮಾರ್, ನಿಮಿಶ್ ಭಾಟಿಯಾ ಹಾಗೂ ಪ್ರಿಯಾ ಅರ್ಜುನ್ ತೀರ್ಪುಗಾರರು. ಹೋಟೆಲ್‌ಗಳಿಗೆ ಖುದ್ದು ಭೇಟಿ ನೀಡುತ್ತಿದ್ದಾರೆ. ನಗರದಲ್ಲಿ 20 ಸಾವಿರ ಹೋಟೆಲ್‌ಗಳಿವೆ. ಸದಸ್ಯರಿಗೆ ಮಾತ್ರ ನಾಮನಿರ್ದೇಶನಕ್ಕೆ ಅವಕಾಶ ನೀಡಲಾಗಿತ್ತು. ಸಂಜೆ 5ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ಉಪಾಧ್ಯಕ್ಷ ಎಚ್.ಎಸ್.ಸುಬ್ರಹ್ಮಣ್ಯ ಹೊಳ್ಳ, ರಾಧಾಕೃಷ್ಣ ಅಡಿಗ, ವೀರೇಂದ್ರ ಎನ್. ಕಾಮತ್, ಎ.ಎಲ್.ರಾಕೇಶ್, ಜಿ.ಸುಧಾಕರ್ ಶೆಟ್ಟಿ ಇದ್ದರು.

'ನೈಟ್‌ಲೈಫ್'ಗೆ ಸಿಗದ ಅನುಮತಿ

ಬೆಂಗಳೂರು: 'ಹೋಟೆಲ್‌ಗಳಲ್ಲಿ ರಾತ್ರಿಯಿಡೀ ವ್ಯಾಪಾರಕ್ಕೆ ಸರ್ಕಾರವು ಅನುಮತಿ ನೀಡಿದ್ದರೂ ಪೊಲೀಸರು ಮಾತ್ರ ಅವಕಾಶ ನೀಡುತ್ತಿಲ್ಲ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ (ಬಿಬಿಎಂಎ) ಅಧ್ಯಕ್ಷ ಪಿ.ಸಿ.ರಾವ್ ದೂರಿದರು.

'ಎಂ.ಜಿ.ರಸ್ತೆ, ಶೇಷಾದ್ರಿಪುರಂ, ಮಲ್ಲೇಶ್ವರ, ವಿಕ್ಟೋರಿಯ ರಸ್ತೆ ಸೇರಿ ನಗರದ ಪ್ರಮುಖ ರಸ್ತೆಗಳಲ್ಲಿ 24X7 ವ್ಯಾಪಾರಕ್ಕೆ ಅನುಮತಿ ಕೋರಲಾಗಿತ್ತು. ಅದಕ್ಕೆ ಸರ್ಕಾರವು ಒಪ್ಪಿದೆ. ಸುರಕ್ಷತೆಯ ದೃಷ್ಟಿಯಿಂದ ರಾತ್ರಿ 1ರ ತನಕ ಮಾತ್ರ ಪೊಲೀಸರು ಅನುಮತಿ ನೀಡಿದ್ಧಾರೆ. ಆದರೆ, ಗಸ್ತು ಪೊಲೀಸರು ರಾತ್ರಿ 11ಕ್ಕೇ ಹೋಟೆಲ್ ಬಂದ್ ಮಾಡಿಸುತ್ತಿದ್ದಾರೆ' ಎಂದು ದೂರಿದರು.

'ಪ್ರಮುಖ ಸ್ಥಳಗಳಲ್ಲಿ ಗುಜರಾತ್, ಮಹಾರಾಷ್ಟ್ರಗಳಲ್ಲಿ 'ನೈಟ್‌ಲೈಫ್'ಗೆ ಅಲ್ಲಿನ ಸರ್ಕಾರ ಅವಕಾಶ ನೀಡಿದೆ. ರಾಜ್ಯದಲ್ಲೂ ಅವಕಾಶ ನೀಡಿದರೆ ಉದ್ಯಮ ಸಹ ಬೆಳೆಯಲಿದೆ' ಎಂದರು.

ನಿವೃತ್ತ ಶಿಕ್ಷಕಿಯನ್ನು ಕೊಂದು ಚಿನ್ನಾಭರಣ ದೋಚಿದ್ದ ಪ್ರಕರಣ

ಎದುರು ಮನೆಯವನೇ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಶಿಕ್ಷಕಿ ಎಸ್. ಪ್ರಸನ್ನ ಕುಮಾರಿ (68) ಅವರನ್ನು ಕೊಂದು ಚಿನ್ನಾಭರಣ ದೋಚಿದ್ದ ಪ್ರಕರಣ ಭೇದಿಸಿರುವ ವಿದ್ಯಾರಣ್ಯಪುರ ಠಾಣೆ ಪೊಲೀಸರು, ಎದುರು ಮನೆಯ ನಿವಾಸಿ ಸೇರಿದಂತೆ ಇಬ್ಬರನ್ನು ಬಂಧಿಸಿದ್ದಾರೆ.

‘ವಿದ್ಯಾರಣ್ಯಪುರದ ಅಂಬಾಭವಾನಿ ಬಡಾವಣೆಯ ಟಿ. ನಾಗೇಂದ್ರ (31) ಹಾಗೂ ಆಂಧ್ರಪ್ರದೇಶ ಅನ್ನಮಯ್ಯ ಜಿಲ್ಲೆಯ ಕೆ. ರಾಮರಾಜು ಅಲಿಯಾಸ್ ವಿಜಯ್ (28) ಬಂಧಿತರು. ಇವರಿಂದ 68 ಗ್ರಾಂ ತೂಕದ ಚಿನ್ನಾಭರಣ, ಎರಡು ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ’ ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ತಿಳಿಸಿದರು.

ಪ್ರಸನ್ನಕುಮಾರಿ

ಟಿ. ನಾಗೇಂದ್ರ

ಕೆ. ರಾಮರಾಜು

‘ವಿಜಯವಾಡದ ಪ್ರಸನ್ನಕುಮಾರಿ, ಚಿಂತಾಮಣಿ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿ ನಿವೃತ್ತರಾಗಿದ್ದರು. ವಿದ್ಯಾರಣ್ಯಪುರದ ಅಂಬಾಭವಾನಿ ಬಡಾವಣೆಯ ಬಾಡಿಗೆ ಮನೆಯಲ್ಲಿ ಒಂಟಿಯಾಗಿ ನೆಲೆಸಿದ್ದರು. ನಾಗೇಂದ್ರ ಸೇರಿದಂತೆ ಮೂವರು ಆರೋಪಿಗಳು, ಸಂಚು ರೂಪಿಸಿ ಸೆ. 8ರಂದು ಕೊಲೆ ಮಾಡಿ ಪರಾರಿಯಾಗಿದ್ದರು’ ಎಂದೂ ಹೇಳಿದರು.

ಕೈ–ಕಾಲು ಕಟ್ಟಿ ಹಾಕಿ ಕೊಲೆ: ‘ಪ್ರಸನ್ನ ಕುಮಾರಿ ಮನೆಗೆ ಹೆಚ್ಚಾಗಿ ಯಾರೂ ಬರುತ್ತಿರಲಿಲ್ಲ. ಇದನ್ನು ಗಮನಿಸಿದ್ದ ಆರೋಪಿ ನಾಗೇಂದ್ರ, ಪ್ರಸನ್ನಕುಮಾರಿ ಕೊಂದು ಚಿನ್ನಾಭರಣ ದೋಚಲು ತೀರ್ಮಾನಿಸಿದ್ದ. ಇದೇ ವಿಷಯವನ್ನು ಇತರೆ ಆರೋಪಿಗಳಿಗೆ ತಿಳಿಸಿದ್ದ. ಎಲ್ಲರೂ ಸೇರಿ ಕೊಲೆ ಮಾಡಲು ಸಜ್ಜಾಗಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಪ್ರಸನ್ನಕುಮಾರಿ ಮನೆಗೆ ಮಧ್ಯಾಹ್ನ ನುಗ್ಗಿದ್ದ ಮೂವರು ಆರೋಪಿಗಳು, ಕೈ–ಕಾಲು ಕಟ್ಟಿ ಹಾಕಿದ್ದರು. ನಂತರ, ಬಾಯಿ ಹಾಗೂ ಮೂಗನ್ನು ಬಟ್ಟೆಯಿಂದ ಮುಚ್ಚಿ ಉಸಿರುಗಟ್ಟಿಸಿ ಕೊಂದಿದ್ದರು. ಬಳಿಕ, ಪ್ರಸನ್ನಕುಮಾರಿ ಮೈ ಮೇಲಿದ್ದ ಚಿನ್ನಾಭರಣ ದೋಚಿಕೊಂಡು ಸ್ಥಳದಿಂದ ಪರಾರಿಯಾಗಿದ್ದರು.’

‘ಮೃತದೇಹ ನೋಡಿದ್ದ ನೆರೆಮನೆಯ ನಿವಾಸಿಗಳು ಠಾಣೆಗೆ ಮಾಹಿತಿ ನೀಡಿದ್ದರು. ಮನೆ ಮಾಲೀಕರು ನೀಡಿದ್ದ ದೂರಿನನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಹಾಗೂ ಸ್ಥಳೀಯ ನಿವಾಸಿಗಳು ನೀಡಿದ್ದ ಸುಳಿವು ಆಧರಿಸಿ ತನಿಖೆ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದೂ ಹೇಳಿದರು.

ಆಂಧ್ರದಲ್ಲಿ ಆಭರಣ ಅಡವಿಟ್ಟಿದ್ದ ಆರೋಪಿಗಳು: ‘ನಗರ ತೊರೆದಿದ್ದ ಆರೋಪಿಗಳು, ಆಂಧ್ರಪ್ರದೇಶದ ಅನ್ನಮಯ್ಯ ಜಿಲ್ಲೆಯ ರಾಯಚೋಟಿಗೆ ಹೋಗಿದ್ದರು. ಅಲ್ಲಿಯ ಮುತ್ತೂಟ್ ಫೈನಾನ್ಸ್ ಕಚೇರಿಯಲ್ಲಿ ಚಿನ್ನಾಭರಣ ಅಡವಿಟ್ಟು, ₹ 1.90 ಲಕ್ಷ ಪಡೆದಿದ್ದರು. ಅದೇ ಹಣವನ್ನು ಮೂವರು ಹಂಚಿಕೊಂಡಿದ್ದರು’ ಎಂದೂ ತಿಳಿಸಿದರು.

‘ಟೋಯಿಂಗ್ ಪುನರಾರಂಭದ ಪ್ರಸ್ತಾವವಿಲ್ಲ’

ಬೆಂಗಳೂರು: ನಗರದಲ್ಲಿ ವಾಹನಗಳ ಟೋಯಿಂಗ್ ವ್ಯವಸ್ಥೆಯನ್ನು ಪುನರಾರಂಭಿಸುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ‘ಬೆಂಗಳೂರಿನಲ್ಲಿ ಜನಸ್ನೇಹಿ ಮತ್ತು ಸುಗಮ ಪಾರ್ಕಿಂಗ್ ಪದ್ಧತಿ ಜಾರಿಗೊಳಿಸಲು ಸರ್ಕಾರ ಯೋಚಿಸಿದೆ. ಅದಕ್ಕೆ ಪೂರಕವಾಗಿ ಅಧಿಕಾರಿಗಳು ಹಾಗೂ ತಜ್ಞರ ಜತೆ ಚರ್ಚಿಸಲಾಗಿದೆ. ಅವರ ಸಲಹೆ ಪಡೆದು ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು. ಮುಖ್ಯಮಂತ್ರಿ ಅವರೊಂದಿಗೂ ಚರ್ಚಿಸಲಾಗಿದೆ. ಟೋಯಿಂಗ್ ಸಂಬಂಧಿಸಿದಂತೆ ಯಾವುದೇ ತೀರ್ಮಾನ ಅಂತಿಮವಾಗಿಲ್ಲ’ ಎಂದು ಹೇಳಿದ್ದಾರೆ.

‘ಹಿಂದಿನ ವ್ಯವಸ್ಥೆ ವಿರುದ್ಧ ಜನ ಆಕ್ರೋಶ ವ್ಯಕ್ತಪಡಿಸಿದ್ದರು. ಮತ್ತೆ ಅದೇ ವ್ಯವಸ್ಥೆ ಜಾರಿಗೊಳಿಸಲು ಸಾಧ್ಯವಿಲ್ಲ’ ಎಂದಿದ್ದಾರೆ.

ಡ್ರಗ್ಸ್: ಆರೋಪಿಯ ₹1.60 ಕೋಟಿ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟ ಪ್ರಕರಣದಲ್ಲಿ ಭಾಗಿಯಾಗುತ್ತಿದ್ದ ಆರೋಪಿ ಮೃತ್ಯುಂಜಯ ಅಲಿಯಾಸ್ ಜಯಣ್ಣ (53) ಎಂಬುವರು ಗಳಿಸಿದ್ದ ₹ 1.60 ಕೋಟಿ ಮೌಲ್ಯದ ಆಸ್ತಿಯನ್ನು ಸಿಸಿಬಿ ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

‘ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಜೋಡಿಪುರದ ಮೃತ್ಯುಂಜಯ, 2007ರಿಂದಲೇ ಗಾಂಜಾ ಹಾಗೂ ಹಶೀಷ್ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ. ಎನ್‌ಡಿಪಿಎಸ್ ಕಾಯ್ದೆಯಡಿ ಈತನ ವಿರುದ್ಧ 9 ಪ್ರಕರಣಗಳು ದಾಖಲಾಗಿದ್ದವು’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.


ಮೃತ್ಯುಂಜಯ

‘ಡ್ರಗ್ಸ್ ಮಾರಾಟದಿಂದಲೇ ಆರೋಪಿ, ಸಾಕಷ್ಟು ಪ್ರಮಾಣದಲ್ಲಿ ಆಸ್ತಿ ಸಂಪಾದಿಸಿದ್ದ. ಈತನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಸಂಬಂಧ ಚೆನ್ನೈನ ಸಕ್ಷಮ ಪ್ರಾಧಿಕಾರ ಇತ್ತೀಚೆಗೆ ಆದೇಶ ಹೊರಡಿಸಿತ್ತು. ಇದರನ್ವಯ ಕ್ರಮ ಕೈಗೊಂಡು ₹ 1.60 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ’ ಎಂದೂ ತಿಳಿಸಿದರು.

‘ಹೊಸಕೋಟೆ ಪಟ್ಟಣದಲ್ಲಿರುವ ನಿವೇಶನ, ಕೋಲಾರ ಜಿಲ್ಲೆಯ ಜೋಡಿಪುರ ಹಾಗೂ ಕಂಬಿಪುರದಲ್ಲಿರುವ ಜಮೀನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ವಿವಿಧ ಬ್ಯಾಂಕ್‌ಗಳಲ್ಲಿರುವ 6 ಖಾತೆಗಳನ್ನು ಜಪ್ತಿ ಮಾಡಲಾಗಿದೆ’ ಎಂದೂ ಹೇಳಿದರು.

₹5 ಕೋಟಿ ಅಕ್ರಮ ವಹಿವಾಟು: ‘ಆರೋಪಿ ಮೃತ್ಯುಂಜಯ, ಪತ್ನಿ ಭಾಗಮ್ಮ ಹೆಸರಿನಲ್ಲಿ ₹ 5 ಕೋಟಿ ವಹಿವಾಟು ನಡೆಸಿದ್ದಾನೆ. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ತೆರಿಗೆಗಳನ್ನು ಸರ್ಕಾರಕ್ಕೆ ತುಂಬಿಲ್ಲ. ಇದೊಂದು ಅಕ್ರಮ ವಹಿವಾಟು ಎಂಬುದು ತಿಳಿದಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದೂ ತಿಳಿಸಿದರು.

ಅಪರಾಧ ಸುದ್ದಿಗಳು

ಪೊಲೀಸರ ಸೋಗಿನಲ್ಲಿ ಅಪಹರಣ: ಐವರು ವಶಕ್ಕೆ

ಬೆಂಗಳೂರು: ಹೈದರಾಬಾದ್ ಪೊಲೀಸರ ಸೋಗಿನಲ್ಲಿ ವ್ಯಕ್ತಿಯೊಬ್ಬರನ್ನು ಅಪಹರಣ ಮಾಡಿ ಹಣ ದೋಚಿದ್ದ ಆರೋಪದಡಿ ಐವರು ಆರೋಪಿಗಳನ್ನು ಬ್ಯಾಟರಾಯನಪುರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ನಗರದ ನಿವಾಸಿ ವಸಂತ್ ಎಂಬುವವರನ್ನು ಇತ್ತೀಚೆಗೆ ಅಪಹರಣ ಮಾಡಲಾಗಿತ್ತು. ಈ ಸಂಬಂಧ ಆರೋಪಿಗಳಾದ ಪ್ರಸಾದ್, ಸಿದ್ಧಾರ್ಥ್, ನಾಗು, ಕಿರಣ ಹಾಗೂ ಬಾನು ಎಂಬುವವರನ್ನು ಹೈದರಾಬಾದ್‌ನಲ್ಲಿ ವಶಕ್ಕೆ ಪಡೆಯಲಾಗಿದೆ. ಇವರ ಬಳಿ ನಗದು ಹಾಗೂ ಪೊಲೀಸರ ಹೆಸರಿನ ನಕಲಿ ಗುರುತಿನ ಚೀಟಿಗಳು ಸಿಕ್ಕಿವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಜಮೀನು ಮಾರಾಟದ ಹೆಸರಿನಲ್ಲಿ ವಸಂತ್ ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ಮಾತುಕತೆಗಾಗಿ ದೇವನಹಳ್ಳಿ ಬಳಿ ಕರೆಸಿದ್ದರು. ನಂತರ, ಪೊಲೀಸರ ಸೋಗಿನಲ್ಲಿ ಅಪಹರಿಸಿಕೊಂಡು ಹೈದರಾಬಾದ್‌ಗೆ ಕರೆದೊಯ್ದಿದ್ದರು. ಕೊಲೆ ಬೆದರಿಕೆಯೊಡ್ಡಿ ಲಕ್ಷಾಂತರ ರೂಪಾಯಿ ಪಡೆದುಕೊಂಡು ಬಿಟ್ಟು ಕಳುಹಿಸಿದ್ದರು. ಈ ಬಗ್ಗೆ ವಸಂತ್ ದೂರು ನೀಡಿದ್ದರು’ ಎಂದೂ ಹೇಳಿವೆ.

ನಗರದಲ್ಲಿ ದ್ವಿಚಕ್ರ ವಾಹನ ಕದ್ದು, ತಮಿಳುನಾಡಿನಲ್ಲಿ ಮಾರಾಟ

ಬೆಂಗಳೂರು: ನಗರದಲ್ಲಿ ದ್ವಿಚಕ್ರ ವಾಹನಗಳನ್ನು ಕದ್ದು, ತಮಿಳುನಾಡಿನಲ್ಲಿ ಮಾರುತ್ತಿದ್ದ ಆರೋಪದಡಿ ಆರು ಮಂದಿಯನ್ನು ಆಗ್ನೇಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

‘ಕೋರಮಂಗಲ ಹಾಗೂ ಬಂಡೇಪಾಳ್ಯ ಠಾಣೆ ಪೊಲೀಸರು ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ₹ 30 ಲಕ್ಷ ಮೌಲ್ಯದ 38 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತಮಿಳುನಾಡಿನ ಹೊಸೂರಿನ ಆರೋಪಿಗಳು, ಆಗಾಗ ನಗರಕ್ಕೆ ಬರುತ್ತಿದ್ದರು. ಸಾರ್ವಜನಿಕ ಸ್ಥಳ ಹಾಗೂ ಮನೆಗಳ ಮುಂದೆ ನಿಲ್ಲಿಸುತ್ತಿದ್ದ ವಾಹನಗಳನ್ನು ಲಾಕ್ ಮುರಿದು ಕದ್ದೊಯ್ಯುತ್ತಿದ್ದರು. ನೋಂದಣಿ ಫಲಕಗಳನ್ನು ಬದಲಾಯಿಸಿ ತಮಿಳುನಾಡಿನ ಹಲವು ಹಳ್ಳಿಗಳಲ್ಲಿ ಮಾರುತ್ತಿದ್ದರು.’

‘ವಾಹನ ಮಾರಾಟದಿಂದ ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದ ಆರೋಪಿಗಳು, ಐಷಾರಾಮಿ ಜೀವನ ನಡೆಸುತ್ತಿದ್ದರು. ಹಣ ಖಾಲಿಯಾಗುತ್ತಿದ್ದಂತೆ, ಪುನಃ ಕೃತ್ಯ ಎಸಗುತ್ತಿದ್ದರು. ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್, ಹುಳಿಮಾವು, ಬೊಮ್ಮನಹಳ್ಳಿ, ಆನೇಕಲ್, ಬಂಡೇಪಾಳ್ಯ ಸೇರಿದಂತೆ ವಿವಿಧ ಠಾಣೆಗಳ ವ್ಯಾಪ್ತಿಯಲ್ಲೂ ಆರೋಪಿಗಳು ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಡ್ರಗ್ಸ್: ಆರೋಪಿಗೆ 1 ವರ್ಷ ಜೈಲು

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟವನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿ ಸುನೀಲ್ ಅಲಿಯಾಸ್ ಕುಟ್ಟಿ ಪಿಲ್ಲಿ (29) ಎಂಬುವವರನ್ನು ‘ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಾಣಿಕೆ ತಡೆ (ಪಿಐಟಿ–ಎನ್‌ಡಿಪಿಎಸ್)’ ಕಾಯ್ದೆಯಡಿ ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ.

‘ಆರೋಪಿ ಸುನೀಲ್, ಯುವ ಜನತೆಯನ್ನು ಮಾದಕ ವ್ಯಸನಿಗಳಾಗಿಸುತ್ತಿದ್ದ. ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿದ್ದ. ಈತನ ವಿರುದ್ಧ ನಗರದ ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣಗಳು ದಾಖಲಾಗಿದ್ದವು’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಸುನೀಲ್‌ನನ್ನು ಪಿಐಟಿ–ಎನ್‌ಡಿಪಿಎಸ್ ಕಾಯ್ದೆಯಡಿ ಬಂಧಿಸಲು ಕೋರಿ ಕಮಿಷನರ್ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಇದಕ್ಕೆ ಒಪ್ಪಿಗೆ ನೀಡಿರುವ ಕಮಿಷನರ್, ತಮ್ಮ ಅಧಿಕಾರ ಚಲಾಯಿಸಿ ಆರೋಪಿಯನ್ನು ಒಂದು ವರ್ಷ ಜೈಲಿನಲ್ಲಿಡಲು ಆದೇಶಿಸಿದ್ದಾರೆ. ಸದ್ಯ ಆತ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾನೆ’ ಎಂದು ತಿಳಿಸಿದರು.

ವಿದೇಶಿ ಕರೆನ್ಸಿ ಕಳ್ಳ ಸಾಗಣೆ: ಆರೋಪಿ ಸೆರೆ

ದೇವನಹಳ್ಳಿ: ವಾಯು ಗುಪ್ತಚರ ದಳದ ಖಚಿತ ಆಧಾರದ ಮೇಲೆ ದುಬೈನಿಂದ ಅಕ್ರಮವಾಗಿ ವಿದೇಶಿ ಹಣ ಕಳ್ಳ ಸಾಗಣೆ ಮಾಡುತ್ತಿದ್ದ ಪ್ರಯಾಣಿಕನೊಬ್ಬನನ್ನು ಬೆಂಗಳೂರು ಕಸ್ಟಮ್ಸ್ ಅಧಿಕಾರಿಗಳು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ. ಬಂಧಿತನಿಂದ 45,000 ಅಮೆರಿಕನ್ ಡಾಲರ್ ಹಾಗೂ 185 ಯುಎಇ ಕರೆನ್ಸಿ ವಶಕ್ಕೆ ಪಡೆದಿದ್ದು. ಇದರ ಮೌಲ್ಯ ₹35,45,385. ಎಂದು ಅಂದಾಜಿಸಲಾಗಿದೆ. ಬಂಧಿತನ ವಿರುದ್ಧ ಪ್ರಕರಣ ದಾಖಲಾಗಿದೆ.

‘ಸಂತ್ರಸ್ತ ಮಕ್ಕಳ ಮೇಲೆ ಮಾನಸಿಕ ಒತ್ತಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂತ್ರಸ್ತ ಮಕ್ಕಳ ಮೇಲೆ ಮಾನಸಿಕ ಒತ್ತಡ ಹೇರುತ್ತಿರುವುದು ಯಾವ ಕಾರಣಕ್ಕೂ ಒಪ್ಪುವ ವಿಚಾರ ಅಲ್ಲ’ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ ಹೇಳಿದೆ.

‘ಮುರುಘಾ ಮಠದ ಶಿವಮೂರ್ತಿ ಸ್ವಾಮೀಜಿ ಮೇಲೆ ಲೈಂಗಿಕ ಕಿರುಕುಳದ ಆರೋಪ ತನಿಖೆ ಹಂತದಲ್ಲಿದೆ. ಚಿತ್ರದುರ್ಗದ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಲಾಗಿದೆ. ಆದರೆ, ಇತ್ತೀಚೆಗೆ ಕೇಳಿ ಬರುತ್ತಿರುವ ಸಂಗತಿಗಳು ಕಳವಳಕಾರಿ. ಆ ಮಕ್ಕಳನ್ನು ಅತ್ಯಂತ ಕಾಳಜಿಯಿಂದ ಮತ್ತು ಅವರಿಗೆ ಅಗತ್ಯವಿರುವ ಕೌನ್ಸಿಲಿಂಗ್ ಮುಂತಾದ ಸಾಂತ್ವನದ ಸೌಲಭ್ಯ ಒದಗಿಸಿ ಭರವಸೆ ಮೂಡಿಸುವ ರೀತಿಯ ವಾತಾವರಣ ಒದಗಿಸುವುದು ಮಕ್ಕಳ ಕಲ್ಯಾಣ ಸಮಿತಿಯ ಕರ್ತವ್ಯ. ಆದರೆ, ಮಕ್ಕಳ ಕಲ್ಯಾಣ ಸಮಿತಿ ಅದಕ್ಕೆ ವ್ಯತಿರಿಕ್ತವಾಗಿದ್ದು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂಬ ಆರೋಪ ಕೇಳಿಬರುತ್ತಿದೆ’ ಎಂದು ಸಮಿತಿ ಆತಂಕ ವ್ಯಕ್ತಪಡಿಸಿದೆ.

‘ಮಕ್ಕಳ ಪರ ವಕೀಲರಿಗೂ ಮಕ್ಕಳನ್ನು ಭೇಟಿ ಮಾಡಲು ಅವಕಾಶ ನೀಡುತ್ತಿಲ್ಲ. ಮಕ್ಕಳು ಮಾನಸಿಕವಾಗಿ ಅಸ್ವಸ್ಥರಾಗಿದ್ದಾರೆ. ಅವರನ್ನು ನಿಮ್ಹಾನ್ಸ್‌ಗೆ ಕಳಿಸಲಾಗುವುದು ಎಂದು ಹೇಳುತ್ತಿರುವುದು ಆಘಾತಕಾರಿ. ಒಡನಾಡಿ ಸಂಸ್ಥೆಯು ಮಕ್ಕಳನ್ನು ಕಲ್ಯಾಣ ಸಮಿತಿಗೆ ಒಪ್ಪಿಸುವಾಗ ದೈಹಿಕ, ಮಾನಸಿಕವಾಗಿ ಚೆನ್ನಾಗಿಯೇ ಇದ್ದವರು. ಈ ಅಲ್ಪ ಅವಧಿಯಲ್ಲಿಯೇ ಮಾನಸಿಕವಾಗಿ ಅನಾರೋಗ್ಯಕ್ಕೆ ತುತ್ತಾಗಿರುವುದು ಒಳಗೆ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಅನುಮಾನ ಹುಟ್ಟಿಸುತ್ತಿದೆ’ ಎಂದು ಮೀನಾಕ್ಷಿ ಬಾಳಿ ಆತಂಕ ವ್ಯಕ್ತಪಡಿಸಿದ್ದಾರೆ.

ಸಿ.ಎ ನಿವೇಶನ ಮಾರಾಟ: 11 ವರ್ಷವಾದರೂ ನಿರ್ಮಾಣವಾಗದ ಶಾಲೆ

ನಿಯಮವಿದ್ದರೂ ಕ್ರಮ ಕೈಗೊಳ್ಳದ ಬಿಡಿಎ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ಕ್ಷೇತ್ರದ ಶಾಸಕ ಎಂ.ಚಂದ್ರಪ್ಪ ಅವರಿಗೆ ಬಿಡಿಎ ನಾಗರಿಕ ಸೌಕರ್ಯವುಳ್ಳ (ಸಿಎ) ನಿವೇಶನ ಮಾರಾಟ ಮಾಡಿರುವುದು ಬೆಳಕಿಗೆ ಬಂದ ಬೆನ್ನಲ್ಲೇ ಸರ್ಕಾರವು ಬಿಡಿಎ ಸಿಎ ನಿವೇಶನಗಳ ಹಂಚಿಕೆ ನಿಯಮ 1989ಕ್ಕೆ ತಂದಿರುವ ತಿದ್ದುಪಡಿಯ ಲೋಪಗಳು ಗೋಚರಿಸಿವೆ.

‘ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್‌ನ 26,253 ಚದರ ಅಡಿ ನಿವೇಶನವನ್ನು ಟ್ರಸ್ಟ್‌ಗೆ 2011ರಲ್ಲಿ ಗುತ್ತಿಗೆ ಆಧಾರದಲ್ಲಿ ನೀಡಲಾಗಿತ್ತು. ಶಾಲೆ ನಿರ್ಮಿಸುವುದಾಗಿ ಹೇಳಿ ಚಂದ್ರಪ್ಪ ಅವರು ನಿವೇಶನ ಪಡೆದಿದ್ದರು. 11 ವರ್ಷ ಕಳೆದರೂ ಶಾಲೆ ನಿರ್ಮಾಣ ಆಗಿರಲಿಲ್ಲ. ಕಳೆದ ವರ್ಷ ಅದೇ ಟ್ರಸ್ಟ್‌ಗೆ ನಿವೇಶನ ಮಾರಾಟ ಮಾಡುವ ನಿರ್ಧಾರ ಕೈಗೊಂಡಿದ್ದು, ನಿವೇಶನ ಹಂಚಿಕೆಯ ಉದ್ದೇಶ ವಿಫಲವಾದಂತಾಗಿದೆ. ನಿಯಮದಂತೆ 2 ವರ್ಷಗಳ ಅವಧಿಯಲ್ಲಿ ಮಂಜೂರು ಮಾಡಿದ ಉದ್ದೇಶಕ್ಕೆ ನಿವೇಶನ ಬಳಸದಿದ್ದರೆ ಅಂತಹ ನಿವೇಶನವನ್ನು ವಾಪಸ್ ಪಡೆಯುವ ಅಧಿಕಾರ ಬಿಡಿಎಗೆ ಇದೆ’ ಎನ್ನುತ್ತವೆ ಮೂಲಗಳು.

ಎಂ.ಚಂದ್ರಪ್ಪ

ಕೆಂಗೇರಿ ಉಪನಗರದಲ್ಲಿ ಬಿಡಿಎ ಸಿಎ ನಿವೇಶನವನ್ನು ದೇವರಾಜ ಅರಸು ಎಜ್ಯುಕೇಷನ್ ಸೊಸೈಟಿಗೆ ಶಾಲೆ ನಿರ್ಮಿಸಲು 2011ರಲ್ಲಿ 30 ವರ್ಷಗಳ ಅವಧಿಗೆ ಗುತ್ತಿಗೆ ಕೊಡಲಾಗಿತ್ತು. ಒಂದು ವರ್ಷ ಮೊದಲು ಅದೇ ನಿವೇಶನವನ್ನು ಬಿಬಿಎಂಪಿಗೆ ಶಾಲೆ ನಿರ್ಮಾಣಕ್ಕೆ ಬಿಡಿಎ ಮಂಜೂರು ಮಾಡಿತ್ತು. ಬಿಬಿಎಂಪಿ ಶಾಲೆ ನಿರ್ಮಿಸದಿರುವ ಕಾರಣ ನಿವೇಶನ ವಾಪಸ್ ಪಡೆಯಲಾಗಿತ್ತು. 11 ವರ್ಷವಾದರೂ ದೇವರಾಜ ಅರಸು ಎಜುಕೇಷನ್ ಸೊಸೈಟಿ ಶಾಲೆ ನಿರ್ಮಿಸಿಲ್ಲ. ಬಿಡಿಎ ಸಹ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬುದು ಗೊತ್ತಾಗಿದೆ.

ಜತೆಗೆ ಸರ್ಕಾರ ಲಿಖಿತ ಆದೇಶವಿಲ್ಲದೇ ₹10 ಕೋಟಿಗೆ ಆ ನಿವೇಶನ ಮಾರಾಟ ಮಾಡಿರುವುದು ಸಂಶಯ ಮೂಡಿಸಿದೆ.

‘ಟ್ರಸ್ಟ್‌ನಲ್ಲಿ ಸೂಕ್ತ ಅನುದಾನವಿಲ್ಲದ ಕಾರಣಕ್ಕೆ ಶಾಲೆ ನಿರ್ಮಿಸಲು ಕಾಲಾವಕಾಶ ಕೇಳಲಾಗಿದೆ. ಇದೇ ಟ್ರಸ್ಟ್ ಚಿತ್ರದುರ್ಗದಲ್ಲಿ ನಡೆಸುತ್ತಿರುವ ಶಾಲೆಯಲ್ಲಿ 5 ಸಾವಿರ ಮಕ್ಕಳು ಕಲಿಯುತ್ತಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೆ ಒಳ್ಳೆಯದಾಗಲಿ ಎಂಬ ಉದ್ದೇಶದಿಂದ ಬೆಂಗಳೂರಿನಲ್ಲಿ ಶಾಲೆ ನಿರ್ಮಿಸಲು ಮುಂದಾಗಿದ್ದೆವು. ಯಾವ ಅಕ್ರಮವನ್ನೂ ಮಾಡಿಲ್ಲ’ ಎಂದು ಚಂದ್ರಪ್ಪ ಪ್ರತಿಕ್ರಿಯಿಸಿದ್ದಾರೆ.

ಲೋಕಾಯುಕ್ತಕ್ಕೆ ದೂರು ನೀಡಿದ ಆಪ್

ಬೆಂಗಳೂರು: ಬಿಬಿಎಂಪಿ ಕನ್ನಡ ಶಾಲೆಗೆ ಮೀಸಲಾಗಿದ್ದ ಬಿಡಿಎ ನಿವೇಶನವನ್ನು ಅಕ್ರಮವಾಗಿ ಶಾಸಕರಿಗೆ ಮಾರಾಟ ಮಾಡಿದ ಆರೋಪದ ಮೇಲೆ ಬಿಡಿಎ ಆಯುಕ್ತರಾಗಿದ್ದ ಮೂವರು, ಹಾಲಿ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಮತ್ತು ಹೊಳಲ್ಕೆರೆ ಶಾಸಕ ಎಂ. ಚಂದ್ರಪ್ಪ ವಿರುದ್ಧ ಆಮ್ ಆದ್ಮಿ ಪಕ್ಷದ ಮುಖಂಡ ಕೆ. ಮಥಾಯಿ ಲೋಕಾಯುಕ್ತರಿಗೆ ಶನಿವಾರ ದೂರು ಸಲ್ಲಿಸಿದ್ದಾರೆ.

‘ಬಿಬಿಎಂಪಿ ಕನ್ನಡ ಶಾಲೆಗೆ ಮಂಜೂರಾಗಿದ್ದ ನಿವೇಶವನ್ನು ಶಾಸಕ ಚಂದ್ರಪ್ಪ ಸುಳ್ಳು ಮಾಹಿತಿ ನೀಡಿ ಗುತ್ತಿಗೆಗೆ ಪಡೆದುಕೊಂಡಿದ್ದರು. ₹ 50 ಕೋಟಿ ಮೌಲ್ಯದ ನಿವೇಶನವನ್ನು ₹ 10 ಕೋಟಿಗೆ ಶಾಸಕರಿಗೆ ಮಾರಾಟ ಮಾಡಲು ನಿರ್ಧರಿಸಲಾಗಿದೆ. ಶಾಸಕರು ಪ್ರಭಾವ ಬಳಸಿ ಅಕ್ರಮ ಎಸಗಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಬಿಡಿಎ ಆಯುಕ್ತರಾಗಿದ್ದ ಎಂ.ಬಿ. ರಾಜೇಶ್ ಗೌಡ, ಸುಬೀರ್ ಹರಿಸಿಂಗ್ ಮತ್ತು ಭರತ್ ಲಾಲ್ ಮೀನಾ ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂದು ಮಥಾಯಿ ದೂರಿದ್ದಾರೆ. ಈ ಎಲ್ಲರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರನ್ನು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಪಠ್ಯ ಸಮಿತಿ ಗಮನಕ್ಕೆ ತಾರದೇ ಸೇರ್ಪಡೆ • ಸಮಿತಿ ಸಭೆಯಲ್ಲಿ ವಾಗ್ವಾದ, ಎಳೆದಾಟ

ಕುವೆಂಪು ವಿ.ವಿ: ಚಕ್ರತೀರ್ಥ ಲೇಖನ ಸೇರ್ಪಡೆ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ರೋಹಿತ್ ಚಕ್ರತೀರ್ಥ ಬರೆದ ಲೇಖನವೊಂದನ್ನು ಪಠ್ಯಪುಸ್ತಕ ಸಮಿತಿಯಲ್ಲಿ ಚರ್ಚೆಯನ್ನೇ ನಡೆಸದೇ ಕುವೆಂಪು ವಿಶ್ವವಿದ್ಯಾಲಯದ ಬಿಸಿಪಿ ಪದವಿಯ ಪಠ್ಯಕ್ಕೆ ಸೇರಿಸಿರುವುದು ಈಗ ತಕರಾರಿಗೆ ಕಾರಣವಾಗಿದೆ.

ವಿಶ್ವವಿದ್ಯಾಲಯದ ವ್ಯಾಪ್ತಿಯ ಪದವಿ ಕಾಲೇಜುಗಳ ಪಠ್ಯಗಳನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪಠ್ಯಕ್ರಮದಂತೆ ಪರಿಷ್ಕರಣೆ ಮಾಡಲಾಗುತ್ತಿದೆ. ಕನ್ನಡ ಭಾಷಾ ವಿಷಯದ ಪಠ್ಯದ ತಂತ್ರಜ್ಞಾನ ವಿಭಾಗದಲ್ಲಿ 'ಕೃತಕ ಬುದ್ಧಿವಂತಿಕೆ; ಭವಿಷ್ಯ ತಂತ್ರಜ್ಞಾನದ ಹೆಜ್ಜೆಗಳು' ಲೇಖನದ ಲೇಖಕರ ಹೆಸರು ರೋಹಿತ್ ಬೆಂಗಳೂರು ಎಂದು ಇದೆ.

ಪಠ್ಯಪುಸ್ತಕ ಸಮಿತಿಯಲ್ಲಿ ಈ ಬಗ್ಗೆ ಚರ್ಚೆ ನಡೆದಾಗ, 'ಇದು ರೋಹಿತ್ ಚಕ್ರತೀರ್ಥ ಅವರ ಲೇಖನ. ಅವರ ಪೂರ್ಣ ಹೆಸರನ್ನು ಮರೆಮಾಚಿ ಮೋಸ ಮಾಡಲಾಗಿದೆ' ಎಂದು ಕೆಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು. ಸಭೆಯಲ್ಲಿ ಮಾತಿಗೆ ಮಾತು ಬೆಳೆದು, ಸದಸ್ಯರು ಪರಸ್ಪರ ಎಳೆದಾಡಿಕೊಂಡರು ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಸದಸ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಈ ಲೇಖನ ರೋಹಿತ್ ಚಕ್ರತೀರ್ಥ ಸಂಪಾದಕತ್ವದ 'ಸೂತ್ರ' ಪತ್ರಿಕೆಯ 2021ರ ಆಗಸ್ಟ್ ಸಂಚಿಕೆಯಲ್ಲಿ ಪ್ರಕಟವಾಗಿದೆ. ಪತ್ರಿಕೆಯಲ್ಲಿ ಲೇಖಕರ ಹೆಸರು 'ತತ್ವಬೋಧ' ಎಂದಿದೆ. ಆದರೆ, ಕುವೆಂಪು ವಿಶ್ವವಿದ್ಯಾಲಯದ ಪಠ್ಯಪುಸ್ತಕದಲ್ಲಿ ರೋಹಿತ್ ಹೆಸರು ನಮೂದಿಸಲಾಗಿದೆ. ಇದು ಚಕ್ರತೀರ್ಥರ ಲೇಖನ. ಅರ್ಧ ಹೆಸರು ಬಳಸಿಕೊಂಡು ಸದಸ್ಯರ ಗಮನಕ್ಕೆ ತಾರದೇ ಪುಸ್ತಕದಲ್ಲಿ ತುರುಕಲಾಗಿದೆ' ಎನ್ನುವುದು ಸಮಿತಿಯ ಸದಸ್ಯರ ಆರೋಪ.

'ರೋಹಿತ್ ಚಕ್ರತೀರ್ಥ ಅವರ 'ಸೂತ್ರ' ಪತ್ರಿಕೆಯಿಂದ ಲೇಖನ ತೆಗೆದುಕೊಳ್ಳಲಾಗಿದೆ. ಅಲ್ಲಿ ಲೇಖಕರ ಹೆಸರು 'ತತ್ವಬೋಧ' ಎಂದಿದೆ. ಲೇಖನ ಬಳಕೆಗೆ ಪತ್ರಿಕೆಯ ಸಂಪಾದಕೀಯ ಬಳಗ ಅನುಮತಿ ನೀಡಿದಾಗ 'ರೋಹಿತ್ ಬೆಂಗಳೂರು' ಎಂದು ಹಾಕುವಂತೆ ಸೂಚಿಸಿತ್ತು. ಹಾಗಾಗಿ, ಅದನ್ನು ಸೂಚಿಸಿದ ಹೆಸರಲ್ಲೇ ಬಳಸಲಾಗಿದೆ' ಎನ್ನುತ್ತಾರೆ ಕನ್ನಡ ಭಾಷಾ ಪಠ್ಯಪುಸ್ತಕ ಸಮಿತಿಯ ಸಂಚಾಲಕ ಎಚ್.ಎಸ್.ರಘುನಾಥ.

ಮೀನಾ ಕಂದಸ್ವಾಮಿ ಕವಿತೆ ಕೊಕ್: ಪದವಿ ಕಾಲೇಜುಗಳ 'ಇಂಗ್ಲಿಷ್' ಪಠ್ಯದಲ್ಲಿ ಅಳವಡಿಸಿದ್ದ ದಲಿತ ಕವಯತ್ರಿ, ತಮಿಳುನಾಡು ಅಣ್ಣಾಮಲೈ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಮೀನಾ ಕಂದಸ್ವಾಮಿ ಅವರ ಕವಿತೆಗೆ ಸಮಿತಿಯ ಕೆಲ ಸದಸ್ಯರು ವಿರೋಧ ವ್ಯಕ್ತಪಡಿಸಿದ್ದು, ಕವಿತೆಯನ್ನು ಇಂಗ್ಲಿಷ್ ಭಾಷಾ ಪಠ್ಯದಿಂದ ಕೈಬಿಡಲಾಗಿದೆ.

ಗೋಳ್ವಲ್ಕರ್ ಲೇಖನಕ್ಕೂ ಆಕ್ಷೇಪ

ರಾಜ್ಯಶಾಸ್ತ್ರ ಸ್ನಾತಕೋತ್ತರ ವಿಭಾಗದಲ್ಲಿನ ಆಧುನಿಕ ಭಾರತದ ರಾಜಕೀಯ ಚಿಂತನೆ ಪುಸ್ತಕದಲ್ಲಿ ಅಳವಡಿಸಿರುವ ಎಂ.ಎಸ್. ಗೋಳ್ವಲ್ಕರ್ ಮತ್ತು ಆರ್‌ಎಸ್‌ಎಸ್ ಕುರಿತ ಲೇಖನ, 'ಸೆಕ್ಯುಲರ್ ವಾದದ ಚರ್ಚೆ' ವಿಭಾಗದಲ್ಲಿನ ಆರ್‌ಎಸ್‌ಎಸ್ ಚಿಂತಕ ಪ್ರೊ.ಬಾಲಗಂಗಾಧರ್ ಅವರ ಲೇಖನಕ್ಕೂ ವಿರೋಧ ವ್ಯಕ್ತವಾಗಿದೆ.

ಸ್ನಾತಕೋತ್ತರ ಅಧ್ಯಯನ ಮಂಡಳಿಯಲ್ಲಿದ್ದ ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮುಜಾಫರ್ ಅಸ್ಸಾದಿ ಅವರು ಬರಹಗಳ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಗೋಳ್ವಲ್ಕರ್, ಆರ್‌ಎಸ್‌ಎಸ್ ಕುರಿತ ಬರಹ ಹೊಸದಾಗಿ ಸೇರಿಸಿಲ್ಲ. ಹಲವು ವರ್ಷಗಳಿಂದ ಬೋಧಿಸಲಾಗುತ್ತಿದೆ. ವಿವಾದ ಅನಗತ್ಯ. ವಿರೋಧ ವ್ಯಕ್ತಪಡಿಸಿದವರಿಗೆ ಸೂಕ್ತ ವಿವರಣೆ ನೀಡಲಾಗಿದೆ' ಎನ್ನುತ್ತಾರೆ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಎ.ಷಣ್ಮುಖ.

ಎಸ್ಸೆಸ್ಸೆಲ್ಸಿ– ಪಿಯುಗೆ ಒಂದೇ ಮಂಡಳಿ

ಒಂದನೇ ಪುಟದಿಂದ...

ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿ (ಎನ್‌ಇಪಿ)–2020 ಅನ್ವಯ 'ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ'ಯ ಹೆಸರನ್ನು 'ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ' ಎಂದು ಮರು ನಾಮಕರಣ ಮಾಡಬೇಕಾಗಿದೆ ಎಂದೂ ಮಸೂದೆ ಪ್ರಸ್ತಾಪಿಸಿದೆ. ಪ್ರಸ್ತಾವಿತ ತಿದ್ದುಪಡಿ ಪ್ರಕಾರ ಈಗಿರುವ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಹೊಸ ಸ್ವರೂಪ ಪಡೆಯಲಿದ್ದು, ಇದರಿಂದ ವಾರ್ಷಿಕ ಸುಮಾರು ₹2 ಲಕ್ಷದಷ್ಟು ಹೆಚ್ಚುವರಿಯಾಗಿ ವೆಚ್ಚ ತಗಲಲಿದೆ.

'ಮಂಡಳಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪಿಯು ಶಿಕ್ಷಣ ಇಲಾಖೆಯಿಂದ ಜಂಟಿ ನಿರ್ದೇಶಕ ಶ್ರೇಣಿಗಿಂತ ಕೆಳಗಿನವರಲ್ಲದ, ತಲಾ ಒಬ್ಬರಂತೆ ನಿರ್ದೇಶಕರು ಮತ್ತು ಕಾರ್ಯದರ್ಶಿಗಳು ಇರಲಿದ್ದಾರೆ. ಎಸ್ಸೆಸ್ಸೆಲ್ಸಿ ಮತ್ತು ಇತರ ಪರೀಕ್ಷೆಗಳು ಹಾಗೂ ಪಿಯು ಪರೀಕ್ಷೆಗಳಿಗೆ ಪ್ರತ್ಯೇಕ ನಿರ್ದೇಶಕರು, ಉಪಾಧ್ಯಕ್ಷರು ಇರಲಿದ್ದಾರೆ. ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದು, ವಿತರಣೆ, ರಹಸ್ಯ ಕಾಪಾಡುವುದು ಸಂಬಂಧಿಸಿದಂತೆ ಆಯಾ ಪರೀಕ್ಷಾ ನಿರ್ದೇಶಕರಿಗೆ (ಕಾರ್ಯದರ್ಶಿ) ವಿಶೇಷಾಧಿಕಾರ ನೀಡಲಾಗಿದೆ. ಈ ಸಂಬಂಧದಲ್ಲಿ ಮಂಡಳಿಯ ಸದಸ್ಯರಾಗಲಿ, ಇತರ ಅಧಿಕಾರಿಗಳಿಗೆ ಮಧ್ಯಪ್ರವೇಶಿಸಲು ಅವಕಾಶ ಇಲ್ಲ' ಎಂದು ಶಾಲಾ ಶಿಕ್ಷಣ ಇಲಾಖೆಯ ಮೂಲಗಳು ಹೇಳಿವೆ.

'ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ನೇತೃತ್ವದಲ್ಲಿ ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮತ್ತು ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಒಂದೇ ಪರೀಕ್ಷಾ ಮಂಡಳಿ ರಚಿಸುವ ಮತ್ತು ಅದರ ಸ್ವರೂಪದ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿದೆ.

ರೈಲ್ವೆ ಇ–ಟಿಕೆಟ್ ಅಕ್ರಮ ಜಾಲ: ಪಾಕ್ ನಂಟು?

'ಕಿಂಗ್' ಸಾಫ್ಟ್‌ವೇರ್ ಖರೀದಿಸಿ ಕೃತ್ಯ • ಮೌಲ್ವಿ ಸೇರಿ ನಾಲ್ವರನ್ನು ಬಂಧಿಸಿದ ಆರ್‌ಪಿಎಫ್

• ಸಂತೋಷ ಜಿಗಳಿಕೊಪ್ಪ

ಬಂಧಿತ ಆರೋಪಿಗಳು (ಕುಳಿತವರು) ಹಾಗೂ ರೈಲ್ವೆ ಪೊಲೀಸರ ತಂಡ

ಬೆಂಗಳೂರು: ಹಲವು ವರ್ಷಗಳಿಂದ ಅಕ್ರಮವಾಗಿ ರೈಲ್ವೆ ಇ–ಟಿಕೆಟ್ ಕಾಯ್ದಿರಿಸಿ ಇಲಾಖೆಗೆ ವಂಚಿಸುತ್ತಿದ್ದ ಜಾಲ ಭೇದಿಸಿರುವ ರೈಲ್ವೆ ರಕ್ಷಣಾ ಪಡೆಯ (ಆರ್‌ಪಿಎಫ್) ಪೊಲೀಸರು, ಮೌಲ್ವಿ ಸೇರಿದಂತೆ ನಾಲ್ವರನ್ನು ಬಂಧಿಸಿದ್ದಾರೆ. ಕೃತ್ಯದಲ್ಲಿ ಪಾಕಿಸ್ತಾನ ವ್ಯಕ್ತಿಗಳ ಕೈವಾಡವಿರುವ ಶಂಕೆ ವ್ಯಕ್ತವಾಗಿದ್ದು, ಈ ಆಯಾಮದಲ್ಲಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

'ಗೋರಿಪಾಳ್ಯದ ಮಾಮೂರ್ ಮಸೀದಿಯ ಮೌಲ್ವಿ ನದೀಮ್ ಅಖ್ತರ್ ಸಿದ್ಧಿಕ್ (35), ಪಾದರಾಯನಪುರದ ಸೈಯದ್ ಮೊಹಮ್ಮದ್ ಜುನೇದ್ (30), ಯಶವಂತಪುರದ ಸಂತೋಷ್ (35) ಹಾಗೂ ಮತ್ತೀಕೆರೆಯ ಪಿ. ವೆಂಕಟೇಶ್ (37) ಬಂಧಿತರು. ಇವರಿಂದ ಮೊಬೈಲ್ ಹಾಗೂ ಇ–ಟಿಕೆಟ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಆರ್‌ಪಿಎಫ್ ಮೂಲಗಳು ಹೇಳಿವೆ.

'ಸಿದ್ಧಿಕ್ ಹಾಗೂ ಜುನೇದ್, ಜಾಲದ ಸೂತ್ರಧಾರಿಗಳು. ಸಂತೋಷ್ ಹಾಗೂ ವೆಂಕಟೇಶ್, ಗ್ರಾಹಕರನ್ನು ಪರಿಚಯಿಸಿಕೊಡುವ ಏಜೆಂಟರಾಗಿದ್ದರು. ನಾಲ್ವರು ಸೇರಿಕೊಂಡು ಇ–ಟಿಕೆಟ್ ಕಾಯ್ದಿರಿಸುತ್ತಿದ್ದರು. ಈ ಕೃತ್ಯದಿಂದ ರೈಲ್ವೆ ಇಲಾಖೆಗೆ ಅಪಾರ ನಷ್ಟವಾಗಿತ್ತು' ಎಂದೂ ತಿಳಿಸಿವೆ.

8ನೇ ವಯಸ್ಸಿಗೆ ಬಿಹಾರ ತೊರೆದಿದ್ದ: 'ಆರೋಪಿ ಸಿದ್ಧಿಕ್, ಬಿಹಾರದವ. 8ನೇ ವಯಸ್ಸಿನಲ್ಲಿ ಪೋಷಕರ ಜೊತೆ ಬೆಳಗಾವಿಗೆ ಬಂದಿದ್ದ. ಅಲ್ಲಿಯೇ ಮದರಸಾದಲ್ಲಿ ಶಿಕ್ಷಣ ಪಡೆದಿದ್ದ. ಕೆಲ ವರ್ಷಗಳ ಹಿಂದೆಯಷ್ಟೇ ಬೆಂಗಳೂರಿಗೆ ಬಂದು, ಮಾಮೂರ್ ಮಸೀದಿಯಲ್ಲಿ ಮೌಲ್ವಿ ಆಗಿ ಕೆಲಸ ಆರಂಭಿಸಿದ್ದ. ಮಕ್ಕಳಿಗೆ ಕುರಾನ್ ಪಾಠ ಮಾಡುತ್ತಿದ್ದ.'

'ಇನ್ನೊಬ್ಬ ಆರೋಪಿ ಜುನೇದ್, ಹೊಸ ಗುಡ್ಡದಹಳ್ಳಿ ಕುವೆಂಪುನಗರದ ಪೈಪ್‌ಲೈನ್ ರಸ್ತೆಯಲ್ಲಿ 'ಅರ್ಫತ್ ಎಂಟರ್‌ಪ್ರೈಸಸ್' ಮಳಿಗೆ ನಡೆಸುತ್ತಿದ್ದ. ಸಿದ್ಧಿಕ್ ನೀಡುತ್ತಿದ್ದ 'ಯೂಸರ್ ಐಡಿ'ಗಳನ್ನು ಬಳಸಿಕೊಂಡು ಟಿಕೆಟ್ ಕಾಯ್ದಿರಿಸುತ್ತಿದ್ದ. ಪ್ರತಿ ಟಿಕೆಟ್‌ನ ದರ ಹಾಗೂ ಹೆಚ್ಚುವರಿಯಾಗಿ ₹ 500 ಪಡೆಯುತ್ತಿದ್ದ. ಇದರಲ್ಲಿ ಸಿದ್ಧಿಕ್‌ಗೆ ಪಾಲು ಕೊಡುತ್ತಿದ್ದ. ಯಶವಂತಪುರದಲ್ಲಿ ಎಸ್‌ಎಲ್‌ವಿ ಟೂರ್ಸ್ ಆ್ಯಂಡ್ ಟ್ರಾವೆಲ್ಸ್ ಏಜೆನ್ಸಿ ನಡೆಸುತ್ತಿದ್ದ ಸಂತೋಷ್, ವ್ಯವಹಾರದಲ್ಲಿ ನಷ್ಟವಾಗಿ ಮಳಿಗೆ ಮುಚ್ಚಿದ್ದ. ಇನ್ನೊಬ್ಬ ಆರೋಪಿ ಪಿ. ವೆಂಕಟೇಶ್ ಜೊತೆ ಸೇರಿ 'ಟ್ರಾವೆಲ್ ವರ್ಲ್ಡ್' ಏಜೆನ್ಸಿ ಆರಂಭಿಸಿದ್ದ. ಇವರಿಬ್ಬರೂ ಇ–ಟಿಕೆಟ್ ಮಾರಾಟದಲ್ಲಿ ತೊಡಗಿದ್ದರು.'

'ಕಿಂಗ್' ಸಾಫ್ಟ್‌ವೇರ್ ಖರೀದಿ: 'ಆರೋಪಿ ಸಿದ್ಧಿಕ್, ಆಗಾಗ ಬಿಹಾರ ಹಾಗೂ ಇತರೆ ನಗರಗಳಿಗೆ ಹೋಗಿ ಬರುತ್ತಿದ್ದ. ಈ ವೇಳೆ ಪ್ರಯಾಣಕ್ಕೆ ರೈಲ್ವೆ ಟಿಕೆಟ್ ಸಿಗುತ್ತಿರಲಿಲ್ಲ. ರೈಲ್ವೆ ಟಿಕೆಟ್ ಕಾಯ್ದಿರಿಸುವುದು ಹೇಗೆ ? ಎಂಬುದನ್ನು ತಿಳಿಯಲು ಯೂಟ್ಯೂಬ್‌ನಲ್ಲಿ ಹುಡುಕಾಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೊರ ದೇಶದ ವ್ಯಕ್ತಿಯೊಬ್ಬ ಅಭಿವೃದ್ಧಿಪಡಿಸಿದ್ದ 'ಕಿಂಗ್' ಸಾಫ್ಟ್‌ವೇರ್ ಬಗ್ಗೆ ಸಿದ್ಧಿಕ್ ತಿಳಿದುಕೊಂಡಿದ್ದ. ವ್ಯಕ್ತಿಯನ್ನು ಸಂಪರ್ಕಿಸಿದ್ದ ಸಿದ್ದಿಕ್, ಆತನಿಗೆ ಹಣ ನೀಡಿ 'ಎನಿಡೆಸ್ಕ್' ಮೂಲಕ ಸಾಫ್ಟ್‌ವೇರ್ ಖರೀದಿಸಿದ್ದ. ಅದೇ ಸಾಫ್ಟ್‌ವೇರ್ ಬಳಸಿ, ನಾನಾ ಹೆಸರಿನ ಯೂಸರ್ ಐಡಿಗಳನ್ನು ಸೃಷ್ಟಿಸುತ್ತಿದ್ದ. ಕೋವಿಡ್ ಸಂದರ್ಭದಲ್ಲಿ ಮಸೀದಿ ಬಳಿಯೇ ಅಕ್ರಮವಾಗಿ 'ಈಸಿ ಟ್ರಿಪ್' ಏಜೆನ್ಸಿ ತೆರೆದು ಇ–ಟಿಕೆಟ್ ಕಾಯ್ದಿರಿಸಿ ಹಣ ಸಂಪಾದಿಸಿದ್ದ.'

'ಹೆಚ್ಚು ಹಣ ಬರುತ್ತಿದ್ದಂತೆ ಸಿದ್ಧಿಕ್, ಯೂಸರ್ ಐಡಿಗಳನ್ನು ಸೃಷ್ಟಿಸಿ ಜುನೇದ್ ಹಾಗೂ ಇತರರಿಗೆ ನೀಡಿದ್ದ. ಎಲ್ಲರೂ ಸೇರಿ ಹೆಚ್ಚಿನ ಪ್ರಮಾಣದಲ್ಲಿ ಇ–ಟಿಕೆಟ್ ಕಾಯ್ದಿರಿಸುತ್ತಿದ್ದರು. ಸೈಬರ್ ವಿಭಾಗಕ್ಕೆ ಸಿಕ್ಕ ಸುಳಿವು ಆಧರಿಸಿ ಜಂಟಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ.'

'ಎಸ್‌ಬಿಐ, ಐಸಿಐಸಿಐ ಹಾಗೂ ಇತರೆ ಬ್ಯಾಂಕ್ ಶಾಖೆಗಳಲ್ಲಿರುವ ಆರೋಪಿಗಳ ಖಾತೆಗಳ ವಿವರ ಸಂಗ್ರಹಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಸಿಕ್ಕಿ ಬೀಳುತ್ತಿದ್ದಂತೆ ಯೂಸರ್ ಐಡಿ ಬ್ಲಾಕ್'

'ಆರೋಪಿ ಸಿದ್ಧಿಕ್, ನೂರಕ್ಕೂ ಹೆಚ್ಚು ಯೂಸರ್ ಐಡಿಗಳನ್ನು ಸೃಷ್ಟಿಸಿದ್ದ. ಯೂಸರ್ ಐಡಿಗಳ ಪಟ್ಟಿ ಸಿದ್ಧಪಡಿಸಿ ಪರಿಶೀಲಿಸಲಾಯಿತು. ಆದರೆ, ಎಲ್ಲ ಐಡಿಗಳು ಬ್ಲಾಕ್ ಆಗಿದ್ದವು. ಆರೋಪಿಗಳು ಸಿಕ್ಕಿಬೀಳುತ್ತಿದ್ದಂತೆ ಐಡಿಗಳನ್ನು ಬ್ಲಾಕ್ ಮಾಡಲಾಗಿದ್ದು, ಇದರ ಹಿಂದೆ ಮತ್ತಷ್ಟು ಮಂದಿ ಶಾಮೀಲಾಗಿರುವ ಅನುಮಾನವಿದೆ' ಎಂದು ಆರ್‌ಪಿಎಫ್ ಮೂಲಗಳು ಹೇಳಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.46	14,687	8,907
ಹಾರಂಗಿ	2,859	2,857.90	1,487	1,800
ಕಬಿನಿ	2,284	2,282.96	3,633	3,250
ಹೇಮಾವತಿ	2,922	2,921.80	8,435	10,055
ಲಿಂಗನಮಕ್ಕಿ	1,819	1,816.65	8,469	7,042
ಸೂಪಾ (ಮೀ)	564	553.58	10,484	-
ಮಾಣಿ	594	590.02	767	-
ತುಂಗಭದ್ರಾ	1,633	1,632.70	28,130	41,360
ಮಲಪ್ರಭಾ	2079.5	2,079.50	3,794	3,794
ಘಟಪ್ರಭಾ	2175	2,174.50	8,104	4,555
ಭದ್ರಾ	186	184.9	5,974	4770
ಆಲಮಟ್ಟಿ (ಮೀ)	519.6	519.34	1,44,000	1,20,000
ನಾರಾಯಣಪುರ (ಮೀ)	492.25	491.35	1,39,000	1,46,500

* ನೆಲಮಟ್ಟದಿಂದ

ಪ್ರತಿಭಟನೆ 20ಕ್ಕೆ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದಿಂದ ಸೆ. 20ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಟೆಂಡರ್ ವಾ ಬಹಿರಂಗ ಹರಾಜು

ವಲಯ ಕೃಷಿ ಸಂಶೋಧನಾ ಕೇಂದ್ರ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–65 ಇಲ್ಲಿ ದಿನಾಂಕ: 21–09–2022 ರಂದು ಬುಧವಾರ ಬೆಳಿಗ್ಗೆ 10–30 ಗಂಟೆಗೆ 2022–23ನೇ ಸಾಲಿನ ಸಪೋಟ ಫಸಲನ್ನು ನಿರ್ದಿಷ್ಟ ಅವಧಿಗೆ ಟೆಂಡರ್ ಹಾಗೂ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಹಿರಿಯ ಕ್ಷೇತ್ರ ಅಧೀಕ್ಷಕರು, ವ.ಕೃ.ಸಂ.ಕೇ., ಗಾ.ಕೃ.ವಿ.ಕೇ. ದೂರವಾಣಿ ಸಂಖ್ಯೆ: 9449864251 ಇಲ್ಲಿ ಸಂಪರ್ಕಿಸಿ.

PUBLIC NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) ESCORT_CON ESCORTSDIG
YOM – 2018
UNReg No – 4H32051820154

2) Mah MMJEETO
YOM – 2019
Reg No – KA51AF4190
Min Reserve Price –164400/-

3) CB_MARUTI SUPER CARRY
YOM – 2019
Reg No – KA02AH2773

4) CB_EICHER_PRO_2059XP
YOM – 2022
Reg No –KA05AL1590

5) PIAGGIO_GR
YOM – 2020
Reg No – KA51AF9299

6) PIAGGIO_GR
YOM – 2020
Reg No – KA51AF9304

7) PIAGGIO_GR
YOM – 2020
Reg No – KA51AF9295

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. from 18.09.2022

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD.,
22, MG ROAD, BANGALORE
KARNATAKA – 560001
OR
Contact: Pradeep. S
Kotak Mahindra Bank Ltd.
Contact / 080 - 61564249

ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಕೋಶ) ಹಾಗೂ ಶಿಸ್ತು ಪ್ರಾಧಿಕಾರಿಯವರ ಕಛೇರಿ,
ನಂ. 221, 2ನೇ ಮಹಡಿ, ವಿಕಾಸಸೌಧ, ಬೆಂಗಳೂರು. ದೂ. : 080–22034628/29
ಸಂಖ್ಯೆ : ಸಿ.ಆ.ಸು.ಇ.6 ಆ.ಕೋ.ವಿ/2022 ದಿನಾಂಕ : 16–09–2022

ತಿಳುವಳಿಕೆ ಪತ್ರ

ಶ್ರೀ. ವಿ. ನರೇಶ್ ಕುಮಾರ್, ದಲಾಯತ್, ಕರ್ನಾಟಕ ಸರ್ಕಾರ ಸಚಿವಾಲಯ ಆದ ನಿಮ್ಮ ವಿರುದ್ಧ ಅನಧಿಕೃತ ಗೈರು ಹಾಜರಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳು 1957 ರ ನಿಯಮ 11 ರಡಿ ದಿನಾಂಕ : 11–07–2022 ರಂದು ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಗಿದ್ದು, ಸಂಬಂಧಿಸಿದ ನೋಟೀಸ್‌ನ್ನು ಖುದ್ದಾಗಿ ಆರ್.ಪಿ.ಎ.ಡಿ. ಮೂಲಕ ಪೊಲೀಸ್ ಠಾಣೆ ಮೂಲಕ ಮತ್ತು ಬಿಬಿಎಂಪಿ ವಲಯ ಕಛೇರಿಗಳ ಮೂಲಕ ಜಾರಿ ಮಾಡಲು ಪ್ರಯತ್ನಿಸಿದರೂ ಸದರಿ ನೋಟೀಸ್ಸು ಸ್ವೀಕೃತವಾಗದೇ ಹಿಂತಿರುಗಿರುತ್ತದೆ. ಆದ್ದರಿಂದ ಈ ವಿಚಾರಣೆಗೆ ಸಂಬಂಧಿಸಿದಂತೆ ಮೂರು ದಿನಗಳೊಳಗೆ ಮೇಲ್ಕಂಡ ಕಛೇರಿಗೆ ಹಾಜರಾಗಿ ಸದರಿ ನೋಟೀಸ್‌ನ್ನು ಸ್ವೀಕರಿಸುವಂತೆ ನಿಮಗೆ ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

ಸಹಿ/– ಸಿ. ನಾಗರತ್ನ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಕೋಶ) ಹಾಗೂ ಶಿಸ್ತು ಪ್ರಾಧಿಕಾರಿ.
ವಾಸಾಇ/ಬೆಂ.ನ./2266/ಮಣಿಪಾಲ್/2022–23

SAINIK SCHOOL KODAGU
(Under Ministry of Defence, Govt. of India)
PO Kudige Dist: Kodagu, Karnataka PIN: 571232

RECRUITMENT NOTIFICATION

Applications are invited for various vacancies at Sainik School Kodagu and the details are as follows:-

Sl. No.	Name of the Post	No. of Posts Type of Post	Age as on 01 DEC 2022	Category
1	TGT-English	01 (Regular)	21-35 Years	Unreserved
2	TGT-Hindi	01 (Contractual)	21-40 Years	ST
3	Craft Instructor	01 (Contractual)	21-35 Years	Unreserved
4	Band Master	01 (Contractual)	21-35 Years	Unreserved
5	Office Superintendent	01 (Contractual)	18-50 Years	Unreserved

How to Apply. For detailed Notification including reservation criteria, salary and Application Form, visit School website **www.sainikschoolkodagu.edu.in** from **18 Sep 2022 (Sunday)**. The School administration reserves the right to cancel any or all vacancies due to administrative reasons. Last date of receipt of filled in applications is **15 Oct 2022 (Saturday).**

PRINCIPAL

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರವರ ಕಾರ್ಯಾಲಯ,
ಜಲಮಂಡಳಿ ಆವರಣ, ಸರ್. ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ - 580001
ದೂರವಾಣಿ:0836-2447090 ಇಮೇಲ್: kwbcen@gmail.com

ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಈಡೇರಿಸುವ ಸಂಸ್ಥೆ/ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆಳಕಂಡ (ದ್ವಿ ಲಕೋಟೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ.
ಶರಾವತಿ ನದಿಯ ಮೂಲದಿಂದ ಹೊನ್ನಾವರ ಪಟ್ಟಣ ಹಾಗೂ ಮಾರ್ಗ ಮಧ್ಯದ 9 ಗ್ರಾಮ ಪಂಚಾಯತ್‌ಗಳಿಗೆ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಯೋಜನೆಯಡಿ ಮೂಲಸ್ಥಾವರ ಸಂಶಿ ಹತ್ತಿರ ಜಾಕ್‌ವೆಲ್‌ನಲ್ಲಿ 180 ಅಶ್ವಶಕ್ತಿ / ಸೂಕ್ತ ಅಶ್ವಶಕ್ತಿ ಡೀಪ್‌ವೆಲ್ ಟರ್ಬೈನ್ ಪಂಪ್‌ಸೆಟ್‌ಗಳನ್ನು ಹಾಗೂ ಇನ್ನಿತರ ಉಪಕರಣಗಳನ್ನು ಸರಬರಾಜು, ಅಳವಡಿಸಿ, ವಿದ್ಯುದ್ದೀಕರಣ, ಪರೀಕ್ಷಿಸಿ ಮತ್ತು ಚಾಲನೆಗೊಳಿಸುವ ಕಾಮಗಾರಿಯ ಟೆಂಡರ್. WORK INDENT No:KUWSDB/2022-23/EL/WORK_INDENT3219, ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು. ಹೆಚ್ಚಿನ ವಿವರಗಳಿಗಾಗಿ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ದಯವಿಟ್ಟು ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.
ವಾಸಾಸಂಇ/ಧಾ/ದಿಶಾ/578/2022–23

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಚಿತ್ರದುರ್ಗ
Pho: 08194-234488 Email:-eerdwsd.chd@gmail.com
ಸಂ.ಕಾಇಂ/ಗ್ರಾಕುನೀ&ನೈಚಿ/ಚಿದು/ಟೆಂಡರ್/ಪಿ.ಎಂ.ಸಿ./ಕಿ.ಇಂ/2022–23
ದಿನಾಂಕ: 02.09.2022

ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)2ನೇ ಕರೆ
(ಇ–ಪ್ರಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರಿಂದ, ಈ ವಿಭಾಗ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ ಕಾರ್ಯಕ್ರಮದಡಿ ಅನುಮೋದನೆಯಾಗಿರುವ ಬಹುಗ್ರಾಮ ಯೋಜನೆಯಡಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸರ್ವಿಸ್ (PMC) ಟೆಂಡರ್ ಅನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸುವ ಕಡೇ ದಿನಾಂಕ: 20.09.2022 ಸಂಜೆ 4.00 ರವರೆಗೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08194–234488 ಇ–ಮೇಲ್ ವಿಳಾಸ :eerdwsd.chd@gmail.com ಹಾಗೂ ವೆಬ್‌ಸೈಟ್ http://eproc.karnataka.gov.in ಪಡೆಯಬಹುದಾಗಿದೆ.

DIPR/CTA/MCA/594/2022-23 ಸಹಿ/– ಕಾರ್ಯಪಾಲಕ ಅಭಿಯಂತರರು

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/13/2022–23 ದಿನಾಂಕ: 16–09–2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

2021–22 ನೇ ಸಾಲಿನ JJM ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **26–09–2022 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು
ವಾಸಾಸಂಇ/ವಾ.ಪ್ರ/2271/ಅಡ್ವರ್ಟೋರ್/2022–23

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಸಿಂದಗಿ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2022–23 ನೇ ಸಾಲಿಗೆ ಶಿಶು ಅಭಿವೃದ್ಧಿ ಯೋಜನೆ ಸಿಂದಗಿ ಉಗ್ರಾಣಕ್ಕೆ ಎಫ್.ಸಿ.ಐ ದಿಂದ ಪಡಿತರ ಅಕ್ಕಿ ಗೋಧಿ ಎತ್ತುವಳಿ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ವೆಬ್‌ಸೈಟ್ ನಂಬರ www.eproc.karnataka.gov.in ಆಗಿರುತ್ತದೆ. ಸದರ ಟೆಂಡರದಲ್ಲಿ ವಿಜಯಪುರ ಜಿಲ್ಲೆಯ ವ್ಯಾಪ್ತಿಯ ಮಹಿಳಾ ಮಂಡಳಿ/ ಸ್ವಸಹಾಯ ಗುಂಪು/ ಗ್ರಾಮ ಸಮುದಾಯ ಮಾತ್ರ ಭಾಗವಹಿಸಬಹುದಾಗಿರುತ್ತದೆ. **ಟೆಂಡರ್ ಅಂದಾಜು ಮೊತ್ತ ರೂ. 8,00,000/– ಹಾಗೂ ಟೆಂಡರ್ ಇ.ಎಂ.ಡಿ ಮೊತ್ತ ರೂ. 20,000/–** ಟೆಂಡರ್ ಸಲ್ಲಿಸುವ ವಿವರ ಕೆಳಗಿನಂತಿರುತ್ತದೆ.
1) 'ಇ–ಪ್ರೊಕ್ಯೂರ್‌ಮೆಂಟ್' ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ **ದಿನಾಂಕ:12.09.2022** ರಿಂದ **11.10.2022** ಸಂಜೆ 5.30 ಗಂಟೆಯವರೆಗೆ. 2)ಟೆಕ್ನಿಕಲ್ ಬಿಡ್‌ನ್ನು ತೆರೆಯುವ **ದಿನಾಂಕ:13.10.2022** ಬೆಳಿಗ್ಗೆ 11.00 ಗಂಟೆಗೆ. 3)ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 15.10.2022** ಸಾಯಂಕಾಲ 4.00 ಗಂಟೆಗೆ. 4)**ಟೆಂಡರ್ ತೆರೆಯುವ ಸ್ಥಳ:** ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ರೈತ ಭವನ, ಎ.ಪಿ.ಎಂ.ಸಿ, ಸಿಂದಗಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08371–292783.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಶಿಶು ಅಭಿವೃದ್ಧಿ ಯೋಜನೆ, ಸಿಂದಗಿ
ವಾಸಾಸಂಇ/ವಿಜಯಪುರ/417/ಎಂಸಿಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, (ಯೋಜನೆ ಕೇಂದ್ರ),
ಅನೆಕ್ಸ್ ಕಟ್ಟಡ–2, ಎನ್.ಆರ್. ಚೌಕ, ಬೆಂಗಳೂರು–560 002.
ಸಂಖ್ಯೆ:ಕಾಪಾಅ/ಯೋಕೇ-2/ಟೆಂಡರ್/03/2022-23 ದಿನಾಂಕ: 17-09-2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–2, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ. ಗಳಲ್ಲಿ)	ಇಎಂಡಿ ಮೊತ್ತ (ಲಕ್ಷ ರೂ. ಗಳಲ್ಲಿ)
1.	ಬನ್ನಪ್ಪ ಪಾರ್ಕ್, ಮೋತಿನಗರ, ಚಾಮರಾಜಪೇಟೆ, ಕಸ್ತೂರಿಬಾನಗರ ಮತ್ತು ವಿಜಯನಗರ, ಬೆಂಗಳೂರಿನಲ್ಲಿರುವ ಬಿಬಿಎಂಪಿ ಶಾಲೆಗಳು ಮತ್ತು ಪಿಯು ಕಾಲೇಜು ಕಟ್ಟಡಗಳಿಗೆ ಹೊಸ ಮತ್ತು ಹೆಚ್ಚುವರಿ ಮಹಡಿಗಳ ನಿರ್ಮಾಣ.	998.00	14.97 ಲಕ್ಷ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಒಂದು ಲಕ್ಷ ರೂ ಮತ್ತು ಉಳಿದ ಮೊತ್ತ ಬಿಡ್ ಡಾಕ್ಯುಮೆಂಟನಲ್ಲಿ ನಿರ್ದಿಷ್ಟಪಡಿಸಲಾಗಿದೆ)

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 19-09-2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವ ಬಿಡ್ ಸಭೆಯನ್ನು ಮುಖ್ಯ ಅಭಿಯಂತರವರ ಕಛೇರಿ, ಯೋಜನೆ ಕೇಂದ್ರ–2 ಇಲ್ಲಿ ದಿನಾಂಕ: 26-09-2022 ರಂದು ಸಂಜೆ 4:00 ಗಂಟೆಗೆ ನಡೆಸಲಾಗುವುದು. 3) ಟೆಂಡರ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 28-09-2022ರ ಸಂಜೆ 5:30 ಗಂಟೆಯೊಳಗೆ. 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 30-09-2022ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ದಿನದಂದು ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ ವೆಬ್‌ಸೈಟ್‌ಗೆ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–2, ಬೃಬೆಂಮಪಾ.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯಿತಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
ದೂರವಾಣಿ ಸಂಖ್ಯೆ:08262–220936 Email : zpedckm@rediffmail.com
ಟೆಂಡರ್ ಪ್ರಕಟಣೆ ಸಂಖ್ಯೆ : ಸಅ/06/2022–23 ದಿನಾಂಕ : 15.09.2022

–: ಟೆಂಡರ್ ಪ್ರಕಟಣೆ :–

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಕಡೂರು, ಕೊಪ್ಪ, ಮುಡಿಗೆರೆ, ನ.ರಾ.ಪುರ ಮತ್ತು ಅಜ್ಜಂಪುರ: ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್, ಅಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಟ ಮೊತ್ತ ರೂ.100.00 ಲಕ್ಷಗಳು ಮತ್ತು ಕನಿಷ್ಠ ಮೊತ್ತ ರೂ.4.00 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KW–1, 2 & 3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಡೌನ್ ಲೋಡ್ ಮಾಡಿದ. ಡಾಕ್ಯೂಮೆಂಟ್‌ಗಳನ್ನು ದಿನಾಂಕ:15.09.2022 ರಿಂದ ದಿನಾಂಕ:29.09.2022 ರವರೆಗೆ ಸಂಜೆ 5.00 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ: 01.10.2022 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:10.10.2022 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು www.eproc karnataka.gov.in ನಲ್ಲಿ ಓದಿಕೊಳ್ಳುವುದು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:21–22JJM TENDER:2022–23/1591
ದಿನಾಂಕ:17–09–2022.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:04/2022–23
(ದ್ವಿ–ಲಕೋಟೆ ಪದ್ಧತಿ) – (e-procurement portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆ ಮದ್ದೂರು ಹಾಗೂ ಶ್ರೀರಂಗಪಟ್ಟಣ ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ **ರೂ.333.55 ಲಕ್ಷಗಳು.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:29.09.2022 ಸಂಜೆ:5:30 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:30.09.2022 ಸಂಜೆ:05:35 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ:07.10.2022, ಬೆಳಿಗ್ಗೆ :11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232–222363.

ಸಹಿ/–ಕಾರ್ಯಪಾಲಕ ಇಂಜಿನಿಯರರು, ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.
ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/342/2022–23

ಕರ್ನಾಟಕ ಸರ್ಕಾರದ ಸಚಿವಾಲಯ
ಆರ್ಥಿಕ ಇಲಾಖೆ
ವಿಧಾನ ಸೌಧ, ಬೆಂಗಳೂರು 560 001.
ಸಂಖ್ಯೆ: ಆಇ 03 ಬಿಎಂಬಿ 2022 ದಿನಾಂಕ: 17.09.2022

ಪತ್ರಿಕಾ ಪ್ರಕಟಣೆ

1. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: **ಎಫ್.ಡಿ. 01 ಬಿಎಂಬಿ 2018, ದಿನಾಂಕ: 12ನೇ ಅಕ್ಟೋಬರ್, 2018** ನಿಬಂಧನೆಯ ಮೇರೆಗೆ ಹೊರಡಿಸಲಾದ **8.48% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2022, (Karnataka SDL 2022) ದಿನಾಂಕ: 16ನೇ ಅಕ್ಟೋಬರ್ 2022** ದಿನಾಂಕವೂ ಸೇರಿ ಅವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: 17ನೇ ಅಕ್ಟೋಬರ್ 2022 ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **17ನೇ ಅಕ್ಟೋಬರ್ 2022 ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.**

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007 ಉಪ ನಿಬಂಧನೆ 24(2) ಮತ್ತು 24(3) ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ–ಬ್ಯಾಂಕಿಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ/ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, **8.48% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2022, (Karnataka SDL 2022)** ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ".

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/–
(ಡಾ.ಏಕ್‌ರೂಪ್ ಕೌರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ
ವಾ.ಸಾ.ಸಂ.ಇ/ವಾಪ್ರ/2274/ಆಕಾರ್/22–23

ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು
ಬೆಳಗುಂಬ ರಸ್ತೆ, ತುಮಕೂರು–572103. ಫ್ಯಾಕ್ಸ್ : 0816–2255761 ದೂರವಾಣಿ : 2272280 email: tudatmk@yahoo.co.in Website: tuda.co.in
ಸಂಖ್ಯೆ: ಟಿಯುಡಿಎ/ಯೋಶಾ/ಭೂ.ಉ.ಬ/24/2022–23 ದಿನಾಂಕ:12.09.2022

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ) ರನ್ವಯ)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕಾ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ, ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದ್ದರೆ ಈ ಪ್ರಕಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ, ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾಯೋಜನೆ ಯಂತೆ ಭೂ ಉಪಯೋಗ	ಕೋರಿರುವ ಭೂ ಉಪಯೋಗ
1	ಎನ್.ಆರ್.ವಿಶ್ವರಾಧ್ಯ ಬಿನ್ ಎನ್.ರುದ್ರಯ್ಯ	ತುಮಕೂರು	ತುಮಕೂರು ಕಸಬಾ	ತುಮಕೂರು ಅಮಾನಿಕೆರೆ	6/2	00ಎ–07ಗುಂಟೆ	ಕೈಗಾರಿಕಾ	ವಸತಿ

ಷರಾ : ಪ್ರಶ್ನಿತ ಜಮೀನುಗಳಿಗೆ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಉತ್ತಮ ದರದಲ್ಲಿ ನಿವೇಶನಗಳನ್ನು ನೀಡುವ ಮತ್ತು ಸುತ್ತ ಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುವುದರಿಂದ ಯೋಜನಾ ಬದ್ಧ ಬೆಳವಣಿಗೆಗೆ ಪೂರಕವಾಗುವುದಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ.

DIPR/TUM516/MCA/2022-23 ಸಹಿ/– ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

ಅಡಿಕೆ ಕೊಯ್ಲು, ಔಷಧ ಸಿಂಪಡಣೆಗೆ ತಂಡ, ಮನೆಗಳಿಗೆ ಇಂಟರ್‌ನೆಟ್ ಸಂಪರ್ಕ

ಹೊಸತನಕ್ಕೆ ತೆರೆದ ಸಹಕಾರ ರಂಗ

ಪ್ರಜಾವಾಣಿ ವಾರ್ತೆ

ಕಾರವಾರ: ಉತ್ತರ ಕನ್ನಡದ ಹಲವು ಸಹಕಾರ ಸಂಸ್ಥೆಗಳು ಸಾಂಪ್ರದಾಯಿಕ ವ್ಯವಹಾರ ಪದ್ಧತಿಯೊಂದಿಗೆ ಹೊಸತನವನ್ನೂ ಅಳವಡಿಸಿಕೊಳ್ಳುತ್ತಿವೆ. ಅಡಿಕೆ ಕೊಯ್ಲು ಹಾಗೂ ಔಷಧ ಸಿಂಪಡಣೆಗೆ ಪರಿಚಯಿಸಲಾದ 'ಕಾರ್ಬನ್ ದೋಟಿ', ಸದಸ್ಯರ ಮನೆಗಳಿಗೆ ವೇಗದ ಇಂಟರ್‌ನೆಟ್ ಸಂಪರ್ಕ ನೀಡಲು 'ಎಫ್.ಟಿ.ಟಿ.ಎಚ್' ಸೌಲಭ್ಯ, ಸಂಘದ ಸದಸ್ಯರಿಗೆ ವಿಮೆ, ಮೃತಪಟ್ಟರೆ ಕುಟುಂಬಕ್ಕೆ ಪರಿಹಾರ ವಿತರಣೆಯಂಥ ಕಾರ್ಯಕ್ರಮಗಳನ್ನೂ ಜಾರಿ ಮಾಡಿವೆ.

ಸಿದ್ದಾಪುರ ತಾಲ್ಲೂಕಿನ ನಾಣಿಕಟ್ಟಾ (ತ್ಯಾಗಲಿ) ಸೇವಾ ಸಹಕಾರ ಸಂಘ ಅಂಥ ಪ್ರಯತ್ನಗಳಲ್ಲಿ ಯಶಸ್ಸು ಕಂಡಿದೆ. 'ಕಾರ್ಬನ್ ದೋಟಿಯನ್ನು ರಾಜ್ಯಕ್ಕೇ ಮೊದಲು ಪರಿಚಯಿಸಿದ್ದು ನಮ್ಮ ಸಂಸ್ಥೆಯೆಂಬ ಹೆಮ್ಮೆಯಿದೆ' ಎಂದು ಸಂಘದ ಅಧ್ಯಕ್ಷ ಎಸ್.ಬಿ.ಹೆಗಡೆ ಹೇಳುತ್ತಾರೆ.

'ದೋಟಿಯನ್ನು ಪರಿಚಯಿಸಿದ್ದು ಮಾತ್ರವಲ್ಲ, ಅಡಿಕೆ ಕೊಯ್ಲು, ಔಷಧ ಸಿಂಪಡಣೆಗೆ ಕಾರ್ಮಿಕರ ತಂಡವನ್ನೂ ಕಟ್ಟಿದ್ದೇವೆ. ಸಂಘದ ಸದಸ್ಯ ಕೃಷಿಕರು ನಮಗೆ ಕರೆ ಮಾಡಿ ತಿಳಿಸಿದಾಗ ನಿಗದಿತ ದಿನದಂದು ಅವರ ತೋಟದಲ್ಲಿ ನಮ್ಮ ತಂಡವಿರುತ್ತದೆ. ಔಷಧ ಸಿಂಪಡಿಸಲು ಪಂಪ್, ದೋಟಿಯನ್ನೂ ತರುತ್ತೇವೆ' ಎಂದು ಅವರು ವಿವರಿಸುತ್ತಾರೆ.

'ತಂಡದ ಯುವ ಸದಸ್ಯರಿಗೆ ಸಂಘದಿಂದಲೇ ತರಬೇತಿಯನ್ನೂ ನೀಡಿ ಪರಿಣತರನ್ನಾಗಿ ಮಾಡಿದ್ದೇವೆ. ಇಂಥ ಕೌಶಲಯುಕ್ತ ಕೆಲಸಗಳನ್ನು ಮಾಡಲು ಯುವಕರು ಮುಂದೆ ಬರುತ್ತಿಲ್ಲ ಎಂಬ ಆತಂಕವನ್ನು ತಕ್ಕಮಟ್ಟಿಗೆ ನಿವಾರಿಸಿದ್ದೇವೆ. ಅಲ್ಲದೇ ಅಡಿಕೆ ಬೆಳೆಗಾರರ ಉತ್ಪನ್ನಗಳನ್ನು ಉಳಿಸುವುದು ಹಾಗೂ ಜಮೀನು ಪಾಳು ಬೀಳುವುದನ್ನು ತಪ್ಪಿಸಲು ಸಾಧ್ಯವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ರೈತರಿಗೆ ಮಾನಸಿಕ ಒತ್ತಡ ಕಡಿಮೆ ಮಾಡಲು ಸಹಕಾರಿಯಾಗಿದೆ' ಎಂದು ದೃಢವಾಗಿ ಹೇಳುತ್ತಾರೆ.

ಎಫ್.ಟಿ.ಟಿ.ಎಚ್ ಸಂಪರ್ಕ: ಮಲೆನಾಡಿನ ಅಡಿಕೆ ಬೆಳೆಗಾರರ ಬಹುತೇಕ ಕುಟುಂಬಗಳ ವಿದ್ಯಾವಂತ ಯುವಕರು ದೂರದ ನಗರಗಳಲ್ಲಿ ಉದ್ಯೋಗದಲ್ಲಿದ್ದಾರೆ. ಕೋವಿಡ್ ಲಾಕ್‌ಡೌನ್ ಜಾರಿಯಾದಾಗ ಅವರೆಲ್ಲ ಊರಿಗೆ ಮರಳಿದ್ದರು. ಮನೆಯಿಂದಲೇ ಕೆಲಸ ಮಾಡುವಂತೆ ಕಂಪನಿಗಳಿಂದ ಸೂಚನೆಯೂ ಬಂತು. ಆದರೆ, ಹಳ್ಳಿಗಾಡಿನಲ್ಲಿ ಕಾಡಿನ ನಡುವೆ ಇಂಟರ್‌ನೆಟ್ ಸಂಪರ್ಕ ಇರದೇ ಕಂಗಾಲಾಗಿದ್ದರು. ಆಗ ನಾಣಿಕಟ್ಟಾ ಸೇವಾ ಸಹಕಾರ ಸಂಘ ನೆರವಿಗೆ ಬಂತು.

'ನಮ್ಮ ಸೊಸೈಟಿಯ ಪರಿಧಿಯೊಳಗಿರುವ ಸದಸ್ಯರ 180 ಮನೆಗಳಿಗೆ ತಲಾ ₹ 5,500ರಂತೆ ಶುಲ್ಕ ಪಡೆದು ಎಫ್.ಟಿ.ಟಿ.ಎಚ್ ಇಂಟರ್‌ನೆಟ್ ಸಂಪರ್ಕ ನೀಡಲು ನೆರವಾಗಿದ್ದೇವೆ. ನಮ್ಮ ವ್ಯಾಪ್ತಿಯಿಂದ ಹೊರಗಿನ ಮನೆಗಳಿಗೆ ಕೇಬಲ್ ಶುಲ್ಕವನ್ನು ಪಡೆದು ಸಂಪರ್ಕ ಒದಗಿಸಿದ್ದೇವೆ' ಎಂದು ಎಸ್.ಬಿ.ಹೆಗಡೆ ವಿವರಿಸುತ್ತಾರೆ.

ಶಿರಸಿ ತಾಲ್ಲೂಕಿನ ಹುಳಗೋಳ ಸಹಕಾರ ಸಂಘ ಕೂಡ ಗ್ರಾಮೀಣ ಕೃಷಿಕರ ಬದುಕಿಗೆ ಬೇಕಾದ ಉತ್ಪನ್ನಗಳನ್ನು ಒಂದೇ ಕಡೆ ಲಭಿಸುವಂತೆ ವ್ಯವಸ್ಥೆ ಮಾಡಿದೆ.

ಸಂಘದ ಸದಸ್ಯರ ಕುಟುಂಬದಲ್ಲಿ ಯಾರಾದರೂ ಮೃತಪಟ್ಟರೆ 'ಮಹಾಪ್ರಸ್ಥಾನ ನಿಧಿ' ಮೂಲಕ ₹ 10 ಸಾವಿರ ಪರಿಹಾರ ನೀಡುವ ಯೋಜನೆಯನ್ನು ಆರಂಭಿಸಿತ್ತು. ಕೋವಿಡ್ ಸಂದರ್ಭದಲ್ಲಿ ದಿನಸಿ, ದಿನಬಳಕೆ ಸಾಮಗ್ರಿ ಸೇರಿದಂತೆ ಅಗತ್ಯ ಸೌಕರ್ಯಗಳನ್ನು ಮನೆ ಬಾಗಿಲಿಗೆ ತಲುಪಿಸುವ ಕೆಲಸವೂ ಆಗಿದೆ.

ವಿದ್ಯುತ್, ದೂರವಾಣಿ, ವಾಹನ ವಿಮೆ ಮುಂತಾದ ಖರ್ಚುಗಳನ್ನು ರೈತರು ಸಹಕಾರ ಸಂಸ್ಥೆಯ ಮೂಲಕ ಭರಿಸಲು ಅವಕಾಶವಿದೆ. ಆಯಾ ರೈತರ ಖಾತೆಗೆ ಖರ್ಚು ಹಾಕಿ ಅವರಿಗೆ ಸೇರಿದ ಬಿಲ್‌ಗಳನ್ನು ಸಂಸ್ಥೆಯೇ ಭರಿಸುತ್ತಿದೆ.

'ನಮ್ಮ ಸಂಸ್ಥೆಗೆ 800 ಸದಸ್ಯರಿದ್ದಾರೆ. ಕಿರಾಣಿಗೆ 720 ಗ್ರಾಹಕರಿದ್ದಾರೆ. ಕಿರಾಣಿಯೊಂದಿಗೇ ಪಶು ಆಹಾರ, ನೀರಾವರಿ ಸಲಕರಣೆಗಳು, ಸಿಮೆಂಟ್, ಕೀಟನಾಶಕಗಳು, ರಸಗೊಬ್ಬರ, ಕಬ್ಬಿಣವನ್ನು ಮಾರಾಟ ಮಾಡುತ್ತಿದ್ದೇವೆ. ವಾರಕ್ಕೆ ಎರಡು ದಿನ ಹಣ್ಣು, ತರಕಾರಿ ಲಭಿಸುತ್ತದೆ. ಬಟ್ಟೆಯೂ ಮಾರಾಟವಾಗುತ್ತಿದೆ. ಪೆಟ್ರೋಲ್ ಮತ್ತು ಔಷಧಿ ಹೊರತಾಗಿ ಮತ್ತೆಲ್ಲವನ್ನೂ ಪೂರೈಕೆ ಮಾಡುತ್ತಿರುವ ಸಂತೃಪ್ತಿಯಿದೆ. ಭೈರುಂಬೆ, ಬೆಳಲೆ ಮತ್ತು ತಾರಗೋಡು ಶಾಖೆಗಳಿಂದ ವರ್ಷಕ್ಕೆ ₹ 7.43 ಕೋಟಿಯಷ್ಟು ವಹಿವಾಟು ಆಗಿದೆ' ಎಂದು ಸಂಘದ ಅಧ್ಯಕ್ಷ ಜಿ.ಎಂ.ಹೆಗಡೆ ಹೇಳುತ್ತಾರೆ.

ದೃಢವಾದ ನಂಬಿಕೆ: 'ಇಂದಿನ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಶುದ್ಧ ಮತ್ತು ಕಲಬೆರಕೆಯನ್ನು ಗುರುತಿಸಲು ಗ್ರಾಹಕರಿಗೂ ಗೊಂದಲಗಳಿವೆ. ಆದರೆ, ಸಹಕಾರ ಸಂಸ್ಥೆಗಳು ರೈತರಿಂದಲೇ ಖರೀದಿಸಿದ ಉತ್ಪನ್ನಗಳನ್ನು ಸೂಕ್ತ ರೀತಿಯಲ್ಲಿ ಸಂಸ್ಕರಿಸಿ ಪುನಃ ಅವರಿಗೇ ಮಾರಾಟ ಮಾಡುತ್ತವೆ. ಇದರಿಂದ ಗುಣಮಟ್ಟದ ಉತ್ಪನ್ನಗಳು ದೊರೆತು ಸಹಕಾರ ರಂಗದ ಮೇಲಿನ ನಂಬಿಕೆ ದೃಢವಾಗುತ್ತಿದೆ' ಎನ್ನುತ್ತಾರೆ ಉತ್ತರ ಕನ್ನಡ ಜಿಲ್ಲಾ ಸಾವಯವ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷ ವಿಶ್ವೇಶ್ವರ ಭಟ್. ಅವರು ಶಿರಸಿಯ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರ ಸಂಘದ ಮಾರುಕಟ್ಟೆ ಸಲಹೆಗಾರರಾಗಿಯೂ ಕೆಲಸ ಮಾಡುತ್ತಿದ್ದಾರೆ.

ನಿರ್ವಹಣೆಗೆ ಸಮಸ್ಯೆ: 'ಕಡಿಮೆ ಅವಧಿ ಹೊಂದಿರುವ ಉತ್ಪನ್ನಗಳನ್ನು (ಎಫ್.ಎಂ.ಸಿ.ಜಿ) ಹಾಳಾಗದಂತೆ ರಕ್ಷಿಸಿಡುವುದೇ ದೊಡ್ಡ ಸವಾಲು. ಹಾಗಾಗಿ ಎಪಿಎಂಸಿ ಮೂಲಕ ಶೀತಲೀಕರಣ ಘಟಕದ ವ್ಯವಸ್ಥೆ ಮಾಡಿದರೆ ಒಳಿತು. ಜಿಲ್ಲೆಯಲ್ಲಿ ಸಂಸ್ಕರಣಾ ಘಟಕಗಳು ಇನ್ನಷ್ಟು ಬೇಕು' ಎಂದು ಅಭಿಪ್ರಾಯಪಡುತ್ತಾರೆ.

ಸೂಪರ್ ಮಾರ್ಕೆಟ್‌ಗಳು ಹೆಚ್ಚಾಗಿರುವ ಕಾರಣ, ಗ್ರಾಮೀಣ ಜನರ 'ಖರೀದಿಯ ಒಲವು'ವೂ ಬದಲಾಗುತ್ತಿದೆ. ಸಹಕಾರ ಸಂಘಗಳು ಬ್ರ್ಯಾಂಡ್ ಆಗಿ ಬೆಳೆಯುತ್ತಿವೆ. ಬೆಂಗಳೂರಿನಿಂದ ಊರಿಗೆ ಬಂದವರು, ಅವರ ಸಂಬಂಧಿಕರು ಪುನಃ ಹೋಗುವಾಗ ಇಲ್ಲಿನ ಸೂಪರ್ ಮಾರ್ಕೆಟ್‌ಗಳಿಂದ ಅಗತ್ಯ ವಸ್ತುಗಳನ್ನು ವಾಹನಗಳಲ್ಲಿ ತೆಗೆದುಕೊಂಡು ಹೋಗುವುದು ಸಾಮಾನ್ಯವಾಗಿದೆ.

'ರೈತರು ಎಷ್ಟು ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳನ್ನು ತಂದರೂ ನಾವು ಖರೀದಿಸುತ್ತೇವೆ. ಖರೀದಿ ಮತ್ತು ನಾವು ಅದನ್ನು ಮಾರಾಟ ಮಾಡುವ ದರಪಟ್ಟಿಯನ್ನು ಸೂಪರ್ ಮಾರ್ಕೆಟ್‌ನಲ್ಲಿ ಅಳವಡಿಸಿದ್ದೇವೆ. ಎಲೆಕ್ಟ್ರಾನಿಕ್ ತೂಕದ ಯಂತ್ರಗಳಿವೆ. ಹಾಗಾಗಿ ಪಾರದರ್ಶಕತೆಯನ್ನು ಚಾಚೂ ತಪ್ಪದೇ ಪಾಲಿಸಲಾಗುತ್ತಿದೆ' ಎನ್ನುತ್ತಾರೆ ಅವರು.

'ಕದಂಬ ಸಹಕಾರ ಸಂಘದಲ್ಲಿ ಷೇರುದಾರ ಸದಸ್ಯರು 1,200 ಮಂದಿಯಿದ್ದರೆ, ಉತ್ಪನ್ನಗಳನ್ನು ಮಾರಾಟ ಮಾಡುವ ಸದಸ್ಯರು 5,000 ಇದ್ದಾರೆ. ಕಳೆದ ವರ್ಷ ₹ 48 ಕೋಟಿ ಮೌಲ್ಯದ ಅಡಿಕೆ ವಹಿವಾಟಾಗಿದೆ. ಸೂಪರ್ ಮಾರ್ಕೆಟ್‌ನಲ್ಲಿ ತಿಂಗಳಿಗೆ ಸರಾಸರಿ ₹ 25 ಲಕ್ಷದ ವ್ಯವಹಾರ ನಡೆಯುತ್ತದೆ' ಎಂದು ವಿವರಿಸುತ್ತಾರೆ.

ಸಹಕಾರ ಸಂಸ್ಥೆಗಳು ಸೂಪರ್ ಮಾರ್ಕೆಟ್ ಆರಂಭಿಸಿದಾಗ ಕೆಲವು ವರ್ತಕರಿಂದ ಆರಂಭಿಕ ವಿರೋಧ, ಆಕ್ಷೇಪಗಳು ವ್ಯಕ್ತವಾದವು. ಆದರೆ, ಅವುಗಳನ್ನು ಎದುರಿಸಿ ನಿಂತು ತಾನೂ ಬೆಳೆಯುತ್ತ ಸದಸ್ಯರಿಗೂ ಅನುಕೂಲ ಮಾಡಿಕೊಡುವಲ್ಲಿ ಉತ್ತರ ಕನ್ನಡದ ಸಹಕಾರ ರಂಗ ಯಶಸ್ವಿಯಾಗಿದೆ.

ಪೂರಕ ಮಾಹಿತಿ: ರವೀಂದ್ರ ಭಟ್ಟ, ಗಣಪತಿ ಹೆಗಡೆ, ವಿಜಯ್ ಜೋಶಿ.

ಸಿದ್ದಾಪುರ ತಾಲ್ಲೂಕಿನ ನಾಣಿಕಟ್ಟಾ (ತ್ಯಾಗಲಿ) ಸೇವಾ ಸಹಕಾರ ಸಂಘದ ತಂಡದವರು 'ಕಾರ್ಬನ್ ದೋಟಿ'ಯೊಂದಿಗೆ ಸದಸ್ಯ ರೈತರ ತೋಟಕ್ಕೆ ತೆರಳಲು ಸಿದ್ಧರಾಗಿರುವುದು

ಸಂಘದ ಕಾರ್ಯ ವ್ಯಾಪ್ತಿ ವಿಸ್ತರಿಸಿದ್ದರಿಂದ ದೂರದ ಮಾರುಕಟ್ಟೆಗೆ ಹೋಗಿ ಬರುವ ಸಮಯ, ಶ್ರಮ ಉಳಿತಾಯವಾಗಿದೆ. ವಯಸ್ಸಾದವರಿಗೆ, ಮಹಿಳೆಯರಿಗೆ ಅನುಕೂಲವಾಗಿದೆ.

ಜಿ.ಎಂ.ಹೆಗಡೆ, ಅಧ್ಯಕ್ಷ ಹುಳಗೋಳ ಸಹಕಾರ ಸಂಘ

ಸಹಕಾರ ಸಂಘವು ಕೃಷಿ ಚಟುವಟಿಕೆಗೆ ಮಾತ್ರವಲ್ಲದೇ ರೈತರಿಗೆ ಪ್ರತಿ ಹಂತದಲ್ಲೂ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ, ಕಷ್ಟ ಕಾಲದಲ್ಲಿ ನೆರವಾಗುತ್ತಿದೆ.

ಅನಂತ ಎಸ್.ಭಟ್ಟ
ಸದಸ್ಯ ಹುಳಗೋಳ ಸೇವಾ ಸಹಕಾರ ಸಂಘ

ದಶಕದ ಹಿಂದೆ ಮಾರುಕಟ್ಟೆಯಲ್ಲಿ ಅಡಿಕೆ ಮಾರಾಟ ಮಾಡಿ, ಅಗತ್ಯ ವಸ್ತುಗಳ ಖರೀದಿಗೆ ಪೇಟೆಯ ತುಂಬ ಸುತ್ತಾಡಬೇಕಿತ್ತು. ಹಣ ಕಳೆವಿನ ಆತಂಕವಿತ್ತು. ಈಗ ಅದು ತಪ್ಪಿದೆ.

ಮಹಾಬಲೇಶ್ವರ ವಿ.ಭಟ್ಟ
ಕೊಡೆಮನೆ ಟಿ.ಎಸ್.ಎಸ್. ಸಂಸ್ಥೆಯ ಗ್ರಾಹಕ

ಶಿರಸಿ ತಾಲ್ಲೂಕಿನ ಹುಳಗೋಳ ಸಹಕಾರ ಸಂಘದಲ್ಲಿ ವಿವಿಧ ವಸ್ತುಗಳನ್ನು ಜೋಡಿಸಿಟ್ಟಿರುವುದು

'ಒಂದೇ ಸಂಸ್ಥೆ ಬೆಳೆಯುವುದಲ್ಲ'

'ಬೃಹದಾಗಿ ಬೆಳೆದಿರುವ ಸಹಕಾರ ಸಂಸ್ಥೆಯು ನೇರವಾಗಿ ರೈತರಿಂದ ಕೃಷಿ ಉತ್ಪನ್ನಗಳನ್ನು ಖರೀದಿಸಿ ತಾನೊಂದೇ ಬೆಳೆಯುವಂಥ ವ್ಯವಸ್ಥೆ ಬೇರೆ ಜಿಲ್ಲೆಗಳಲ್ಲಿದೆ. ಆದರೆ, ಇದರಿಂದ ಸಣ್ಣ ಸಹಕಾರ ಸಂಸ್ಥೆಗಳಿಗೆ ದೊಡ್ಡ ಆರ್ಥಿಕ ಹೊಡೆತ ಬೀಳುತ್ತಿದೆ. ಅದರ ಬದಲು, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ವಹಿವಾಟು ಹೆಚ್ಚಿ ಅವು ಅಭಿವೃದ್ಧಿಯಾದವು. ಅಲ್ಲಿ ಸಹಕಾರ ಸಂಸ್ಥೆಗಳ ಅಸ್ತಿತ್ವವೇ ಹೋಗುವಂಥ ಸ್ಥಿತಿಯಿದೆ. ಆದರೆ, ಉತ್ತರ ಕನ್ನಡದಲ್ಲಿ ಪರಿಸ್ಥಿತಿ ಹಾಗಿಲ್ಲ' ಎನ್ನುತ್ತಾರೆ ಉತ್ತರ ಕನ್ನಡ ಜಿಲ್ಲಾ ಸಾವಯವ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷ ವಿಶ್ವೇಶ್ವರ ಭಟ್.

'ಆಯಾ ಭಾಗದ ಸಹಕಾರ ಸಂಸ್ಥೆಗಳ ಮೂಲಕವೇ ಎಲ್ಲ ಖರೀದಿ ನಡೆಯುತ್ತದೆ. ಇದರಿಂದ ಸಂಸ್ಥೆಗಳು ತಾವಾಗೇ ಬೆಳೆಯುತ್ತವೆ' ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಸಹಕಾರ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿರುವ ದಕ್ಷಿಣ ಕನ್ನಡದ ಸುಳ್ಯ, ಪುತ್ತೂರು ತಾಲ್ಲೂಕುಗಳ ಕೆಲವೆಡೆ ಸಣ್ಣ ಪ್ರಮಾಣದಲ್ಲಿ ಇದೇ ಮಾದರಿಯ ವಹಿವಾಟು ನಡೆಯುತ್ತಿದೆ.

ವ್ಯವಹಾರ ಮೇಲೆತ್ತಿದ ಸಹಕಾರ

ಒಂದನೇ ಪುಟದಿಂದ

ವರ್ಷಕ್ಕೆ ಅಂದಾಜು ₹ 450 ಕೋಟಿಯಿಂದ ₹ 500 ಕೋಟಿಗಳ ವಹಿ ವಾಟು ನಡೆಸುತ್ತಿವೆ. ಹತ್ತಾರು ಕೋಟಿ ರೂಪಾಯಿಗಳ ಲಾಭ ಕಂಡುಕೊಂಡು ಅದರ ಪ್ರಯೋಜನವನ್ನು ಸದಸ್ಯರಿಗೆ ವಿವಿಧ ಕಾರ್ಯಕ್ರಮಗಳ ಮೂಲಕ ವರ್ಗಾಯಿಸುತ್ತಿವೆ. 'ನಮ್ಮ ಸಂಘದ ಕೃಷಿ ಮತ್ತು ಕಿರಾಣಿ ಸೂಪರ್ ಮಾರ್ಕೆಟ್ ಮೂಲಕ ಕಳೆದ ವರ್ಷ ₹ 275 ಕೋಟಿ ವ್ಯವಹಾರವಾಗಿದೆ. ಸಹಕಾರ ತತ್ವದಲ್ಲಿ ನಡೆಯುವ ಕಾರಣ ಸಂಸ್ಥೆಗೆ ಲಾಭಾಂಶ ಸ್ವಲ್ಪ ಕಡಿಮೆಯಿದೆ. ಆದರೆ, ಇದರಿಂದ ಗ್ರಾಹಕರಿಗೆ ಹೆಚ್ಚು ಪ್ರಯೋಜನವಾಗುತ್ತದೆ. ಅವರಿಗೆ ವರ್ಷದ ಒಟ್ಟು ಖರೀದಿ ಮೊತ್ತದ ಮೇಲೆ ಶೇ 2.5ರಷ್ಟು ರಿಯಾಯಿತಿ ಇದೆ. ಈ ರೀತಿ ಸಂಸ್ಥೆ ವರ್ಷಕ್ಕೆ ಹಂಚಿಕೆ ಮಾಡುವ ಮೊತ್ತವೇ ಸುಮಾರು ₹ 70 ಲಕ್ಷವಾಗುತ್ತದೆ' ಎಂದು ಶಿರಸಿಯ ತೋಟಗಾರ್ಸ್ ಕೋ ಆಪರೇಟಿವ್ ಸೇಲ್ ಸೊಸೈಟಿಯ (ಟಿ.ಎಸ್.ಎಸ್) ಅಧ್ಯಕ್ಷ ರಾಮಕೃಷ್ಣ ಕಡವೆ ವಿವರಿಸುತ್ತಾರೆ.

'ಈಗ ಸಂಸ್ಥೆಯಲ್ಲಿ 45 ಸಾವಿರ ಕೃಷಿಕ ಸದಸ್ಯರಿದ್ದಾರೆ. ಇನ್ನು, ರೈತರ ಹೊರತಾಗಿ ಶಿರಸಿ ತಾಲ್ಲೂಕಿನಿಂದಲೇ ಒಂದು ಲಕ್ಷಕ್ಕೂ ಅಧಿಕ ಗ್ರಾಹಕರು, ಉಳಿದ ತಾಲ್ಲೂಕುಗಳನ್ನು ಒಟ್ಟುಗೂಡಿಸಿದರೆ ಎರಡು ಲಕ್ಷಕ್ಕೂ ಹೆಚ್ಚು ಗ್ರಾಹಕರಿದ್ದಾರೆ' ಎಂದು ಹೇಳುತ್ತಾರೆ.

'ಟಿ.ಎಸ್.ಎಸ್ ಸಂಸ್ಥೆಯು ಶಿರಸಿಯಲ್ಲಿ 2011ರ ಏಪ್ರಿಲ್‌ನಲ್ಲಿ ಮೊದಲ ಸೂಪರ್ ಮಾರ್ಕೆಟ್ ತೆರೆಯಿತು. ಅಂದಿನಿಂದ ಸಿಕ್ಕಿರುವ ಯಶಸ್ಸನ್ನು ಆಧರಿಸಿ ಹಂತಹಂತವಾಗಿ ವಿಸ್ತರಣೆ ಮಾಡುತ್ತಿದ್ದೇವೆ' ಎನ್ನುತ್ತಾರೆ ಅವರು.

ಹಳ್ಳಿಗಳಲ್ಲೂ ಶಾಖೆಗಳು: ಉತ್ತರ ಕನ್ನಡದಲ್ಲಿ ಸಹಕಾರ ಸಂಸ್ಥೆಗಳ ಸೂಪರ್ ಮಾರ್ಕೆಟ್‌ಗಳಲ್ಲಿ ನಡೆಯುವ ವ್ಯವಹಾರದಲ್ಲಿ ಟಿ.ಎಸ್.ಎಸ್ ಮುಂಚೂಣಿಯಲ್ಲಿದೆ. ಶಿರಸಿಯಲ್ಲಿ ಪ್ರಮುಖ ವಹಿವಾಟು ಕೇಂದ್ರ ಹೊಂದಿದ್ದು, ನಗರದಲ್ಲೇ ಎರಡು ಸೂಪರ್ ಮಾರ್ಕೆಟ್‌ಗಳನ್ನು ನಡೆಸುತ್ತಿದೆ. ಸಿದ್ದಾಪುರ, ಮುಂಡಗೋಡ, ಯಲ್ಲಾಪುರದಲ್ಲಿ ಶಾಖೆಗಳಿವೆ.

ಶಿರಸಿಯ ಹುಲೇಕಲ್ ಸೇವಾ ಸಹಕಾರ ಸಂಘದ ಜೊತೆಯಾಗಿ ಮಿನಿ ಸೂಪರ್ ಮಾರ್ಕೆಟ್, ಸಾಲ್ಕಣಿ, ದಾಸನಕೊಪ್ಪ, ಕೊರ್ಲಕಟ್ಟ, ಸಿದ್ದಾಪುರದ ಕೊರ್ಲಕೈ, ಶಿವಮೊಗ್ಗ ಜಿಲ್ಲೆ ಸೊರಬದ ನಿಸ್ರಾಣಿಯಲ್ಲಿ, ಬಾಡದಲ್ಲಿ ಸಹಭಾಗಿತ್ವದಲ್ಲಿ ಹಾಗೂ ಸಾಗರದ ಹೆಗ್ಗೋಡಿನಲ್ಲಿ ಕೂಡ ಶಾಖೆಗಳನ್ನು ಹೊಂದಿದೆ.

ಶಿರಸಿಯ ಕದಂಬ ಸೌಹಾರ್ದ ಮಾರ್ಕೆಟಿಂಗ್ ಸಹಕಾರ ಸಂಸ್ಥೆಯು ಹಲವು ವರ್ಷಗಳ ಹಿಂದೆಯೇ ಸಾವಯವ ಉತ್ಪನ್ನ, ಮಸಾಲೆ ಪದಾರ್ಥಗಳ ಮಾರಾಟದ ಮಳಿಗೆ ತೆರೆದಿದೆ. ಇಲ್ಲಿ ಸಾವಯವ ಉತ್ಪನ್ನಗಳ ಖರೀದಿ ಜತೆಗೆ ಅವುಗಳ ಮೌಲ್ಯವರ್ಧನೆ ಮಾಡಿ ಮಾರಾಟ ಮಾಡಲಾಗುತ್ತಿದೆ. ಈಚೆಗೆ ಉತ್ತರ ಕನ್ನಡ ಜಿಲ್ಲಾ ಸಾವಯವ ಒಕ್ಕೂಟ ಆರಂಭಿಸಲಾಗಿದ್ದು, ಅಲ್ಲಿಯೂ ಸಾವಯವ ತಿನಿಸು, ಉತ್ಪನ್ನಗಳ ವಹಿವಾಟು ಇದೆ.

ಇದೇ ಮಾದರಿಯಲ್ಲಿ ಶಿರಸಿಯ ಟಿ.ಎಂ.ಎಸ್. ಸಂಸ್ಥೆಯು 2021ರಲ್ಲಿ ಸೂಪರ್ ಮಾರ್ಕೆಟ್ ಆರಂಭಿಸಿದೆ. ಗ್ರಾಮೀಣ ಪ್ರದೇಶವಾದ ಭೈರುಂಬೆಯಲ್ಲಿ ಹುಳಗೋಳ ಸೇವಾ ಸಹಕಾರ ಸಂಘವು ರೈತರಿಗೆ ದಿನಸಿ, ಕೃಷಿ ಉಪಕರಣ ಸೇರಿದಂತೆ ಅಗತ್ಯ ಬಳಕೆ ವಸ್ತುಗಳನ್ನು ಸಂಸ್ಥೆಯ ಆವರಣದಲ್ಲೇ ಒದಗಿಸುತ್ತಿದೆ. ವಾನಳ್ಳಿ, ಸೋಂದಾ, ಹೆಗಡೆಕಟ್ಟಾ ಮುಂತಾದೆಡೆ ಕೂಡ ಸಹಕಾರ ಸಂಸ್ಥೆಗಳು ಇಂತಹ ಪ್ರಯೋಗಗಳಲ್ಲಿ ಯಶಸ್ವಿಯಾಗಿವೆ.

ಶಿರಸಿಯಿಂದ 40 ಕಿಲೋಮೀಟರ್ ದೂರದ ಮತ್ತಿಘಟ್ಟದಲ್ಲಿ ಮುಂಡಗನಮನೆ ಸೇವಾ ಸಹಕಾರ ಸಂಘ ಕೂಡ ಸೂಪರ್ ಮಾರ್ಕೆಟ್ ಮಾದರಿಯಲ್ಲೇ ಕಿರಾಣಿ ವಿಭಾಗ ಆರಂಭಿಸಿ ಹಲವು ವರ್ಷಗಳೇ ಕಳೆದವು. ಈ ಸಂಸ್ಥೆಯು ದೇವನಳ್ಳಿ, ಬೆಣಗಾಂವದಲ್ಲಿ ಶಾಖೆಗಳನ್ನು ಹೊಂದಿದೆ.

ರೈತರಿಂದಲೇ ಖರೀದಿ: ಸೂಪರ್ ಮಾರ್ಕೆಟ್‌ಗಳಲ್ಲಿ ಮಾರಾಟಕ್ಕೆ ಬೇಕಾದ ವಿವಿಧ ಬೇಳೆಕಾಳು, ತರಕಾರಿ, ಹಣ್ಣು ಮುಂತಾದವುಗಳನ್ನು ಅವು ಬೆಳೆಯುವ ಪ್ರದೇಶದಿಂದ, ನೇರವಾಗಿ ರೈತರಿಂದಲೇ ಖರೀದಿಸಲಾಗುತ್ತಿದೆ. ಬಳಿಕ ಅವುಗಳನ್ನು ವರ್ಗೀಕರಿಸಿ, ಸಂಸ್ಕರಿಸಿ ಪ್ಯಾಕೆಟ್‌ಗಳಲ್ಲಿ ತುಂಬಿ ಸಹಕಾರ ಸಂಸ್ಥೆಗಳ 'ಬ್ರ್ಯಾಂಡ್' ಮೂಲಕ ಗ್ರಾಹಕರಿಗೆ ತಲುಪಿಸಲಾಗುತ್ತಿದೆ. ಇದರಿಂದ ಮಧ್ಯವರ್ತಿಗಳ ಹಾವಳಿ ತಪ್ಪಿದ್ದು, ಅಷ್ಟರ ಮಟ್ಟಿಗೆ ಆರ್ಥಿಕ ಹೊರೆಯು ಸಂಸ್ಥೆಗಳು ಮತ್ತು ಸದಸ್ಯರ ಮೇಲಿನಿಂದ ಇಳಿಕೆಯಾಗಿದೆ ಎನ್ನುತ್ತಾರೆ ಸಹಕಾರ ಧುರೀಣರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಗುರುರಾಜ್ ಪೂಜಾರಿ
ವೈಟ್‌ಲಿಫ್ಟರ್, ಕಾಮನ್ ವೆಲ್ತ್ ಗೇಮ್ಸ್‌ನಲ್ಲಿ ಕಂಚಿನ ಪದಕ ವಿಜೇತ
ಭಲೇ ಗುರು...
ಸೆಲೆಬ್ರಿಟಿ LIVE
ಬೆಳಿಗ್ಗೆ 11 ಗಂಟೆಗೆ
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಗುಂಪುಗಾರಿಕೆಗೆ ಬಡ ಜೀವಗಳು ಬಲಿ?

ಒಂದನೇ ಪುಟದಿಂದ

ಈ ಬಗ್ಗೆ ಜಿಲ್ಲಾಡಳಿತಕ್ಕೂ ಡಾ.ಗೌಡ ಮೌಖಿಕ ದೂರು ಕೊಟ್ಟಿದ್ದಾರೆ. 'ವಿದ್ಯುತ್ ವಾಹಕಗಳ (ತಂತಿ) ಜೋಡಣೆ ಲೋಪದಿಂದ ಕೇಬಲ್ ಸ್ಫೋಟಿಸಿದೆ ಎಂಬ ಅಭಿಪ್ರಾಯವನ್ನು ಜೆಸ್ಕಾಂನ ಕೆಲವು ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ' ಎಂದೂ ಅವರು ವಿವರಿಸಿದ್ದಾರೆ.

'ನಿರ್ದೇಶಕರ ಹುದ್ದೆ ವಂಚಿತ ಅಭ್ಯರ್ಥಿ ಜತೆ ಮಾಜಿ ನಿರ್ದೇಶಕ, ಸಂಸ್ಥೆ ಆಡಳಿತ ವಿಭಾಗದ ಕೆಲವು ಅಧಿಕಾರಿಗಳು, ಲೆಕ್ಕಪತ್ರ ವಿಭಾಗದ ಸಿಬ್ಬಂದಿ ಸೇರಿ ಸಂಸ್ಥೆಯಲ್ಲಿ ಗೊಂದಲ ಸೃಷ್ಟಿಸಲು ಪ್ರಯತ್ನ ಮಾಡುತ್ತಿದ್ದಾರೆ' ಎಂದು ನಿರ್ದೇಶಕರು ಜಿಲ್ಲಾಡಳಿತದ ಮುಂದೆ ಆರೋಪಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಐಸಿಯುನಲ್ಲಿ ಬುಧವಾರ (ಸೆ.14) ಬೆಳಿಗ್ಗೆ 8.20ರಲ್ಲಿ ಕರೆಂಟ್ ಹೋಯಿತು. ಜನರೇಟರ್ ಸಹ ಕೆಲಸ ಮಾಡಲಿಲ್ಲ. ಕರೆಂಟ್ ಕೈಕೊಟ್ಟ ವಿಷಯವನ್ನು ಯಾರೂ ನನ್ನ ಗಮನಕ್ಕೆ ತರಲಿಲ್ಲ. ಕರೆಂಟ್ ಕೈಕೊಟ್ಟಾಗ ಐಸಿಯುನಲ್ಲಿ ಗಂಭೀರ ಸ್ಥಿತಿಯಲ್ಲಿದ್ದ 25 ರೋಗಿಗಳಿದ್ದರು. ಐವರಿಗೆ ವೆಂಟಿಲೇಟರ್ ಅಳವಡಿಸಲಾಗಿತ್ತು. ಬಳಿಕ ರೋಗಿಗಳನ್ನು ಹೊಸದಾಗಿ ನಿರ್ಮಿಸಲಾಗಿರುವ ಶಸ್ತ್ರಚಿಕಿತ್ಸಾ ವಿಭಾಗ ಮತ್ತು ಟ್ರಾಮಾ ಕೇರ್ ಸೆಂಟರ್‌ನಲ್ಲಿರುವ ಐಸಿಯುಗೆ ಸ್ಥಳಾಂತರಿಸುವ ಪ್ರಯತ್ನ ನಡೆಯಿತು' ಎಂದು ನಿರ್ದೇಶಕರು ವಿಚಾರಣಾ ಸಮಿತಿಗೆ ತಿಳಿಸಿದ್ದು, ದಾಖಲೆ ಒದಗಿಸಿದ್ದಾರೆ.

ನೂತನ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ 80 ಹಾಸಿಗೆಗಳ ಐಸಿಯು ಮತ್ತು ಟ್ರಾಮಾ ಕೇರ್ ಸೆಂಟರ್‌ನಲ್ಲಿ 96 ಹಾಸಿಗೆಗಳ ಐಸಿಯು ಇದೆ. ಬುಧವಾರ ಸಂಭವಿಸಿದ್ದ ಅವಘಡದಲ್ಲಿ ಮೂವರು ಮೃತಪಟ್ಟಿದ್ದಾರೆ. ಅನಧಿಕೃತ ಮೂಲಗಳ ಪ್ರಕಾರ ಸತ್ತವರು ಐವರು. ಈ ಬಗ್ಗೆ ವಿಚಾರಣೆಗೆ ಸರ್ಕಾರ ಸಮಿತಿ ರಚಿಸಿದ್ದು, ಸಮಿತಿ ಶೀಘ್ರ ವರದಿ ಕೊಡಬೇಕಿದೆ.

ವಿಮ್ಸ್ ಪ್ರಕರಣ: ತಪ್ಪಿತಸ್ಥರಿದ್ದರೆ ಕ್ರಮ ಖಚಿತ– ಸಚಿವ ಸುಧಾಕರ್

ಬೆಂಗಳೂರು: 'ಬಳ್ಳಾರಿಯ ವಿಮ್ಸ್ ಆಸ್ಪತ್ರೆಯಲ್ಲಿ ರೋಗಿಗಳು ಸಾವಿಗೀಡಾದ ಘಟನೆಗೆ ಯಾರಾದರೂ ಕಾರಣವಾಗಿದ್ದರೆ ಅಂಥವರ ವಿರುದ್ಧ ಕ್ರಮ ಖಚಿತ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಬಳ್ಳಾರಿಗೆ ಭಾನುವಾರ ಭೇಟಿ ನೀಡಿ ಅಧಿಕಾರಿಗಳ ಜೊತೆ ಚರ್ಚಿಸುತ್ತೇನೆ. ಯಾವುದೇ ಅಂಶವನ್ನು ಮುಚ್ಚಿಡುವುದಿಲ್ಲ' ಎಂದರು.

'ವಿಮ್ಸ್‌ನಲ್ಲಿ ಇಬ್ಬರು ರೋಗಿಗಳು ಸಾವಿಗೀಡಾದ ಕೂಡಲೇ ಈ ವಿಚಾರಣೆಗೆ ಡಾ. ಸ್ಮಿತಾ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಈ ಸಮಿತಿ ಮಾಹಿತಿ ಸಂಗ್ರಹಿಸಿದೆ. ಎಲೆಕ್ಟ್ರಿಕ್ ಎಂಜಿನಿಯರ್‌ಗಳನ್ನು ಸ್ಥಳಕ್ಕೆ ಕರೆದೊಯ್ಯಬೇಕೆಂದು ಸಮಿತಿಯವರು ಹೇಳಿದ್ದು, ಅದಕ್ಕೂ ವ್ಯವಸ್ಥೆ ಮಾಡಲಾಗಿದೆ. ಶೀಘ್ರದಲ್ಲಿ ವರದಿ ಬರಲಿದೆ' ಎಂದರು.

'ಯಾವುದೇ ಶಾಸಕರು ಹೇಳಿದಾಕ್ಷಣ ಆಸ್ಪತ್ರೆಗೆ ನಿರ್ದೇಶಕರನ್ನು ನೇಮಿಸಲು ಸಾಧ್ಯವಿಲ್ಲ. ನಿರ್ದೇಶಕ ಸ್ಥಾನಕ್ಕೆ ನೇಮಿಸಲು ಕೆಲವು ನಿಯಮಗಳಿರುತ್ತವೆ. ಅರ್ಹರಾದವರನ್ನು ಮಾತ್ರ ನೇಮಿಸಲಾಗುತ್ತದೆ. ಕರುಣಾಕರ ರೆಡ್ಡಿ, ಸಚಿವ ಬಿ. ಶ್ರೀರಾಮುಲು, ಸಚಿವ ಆನಂದ್ ಸಿಂಗ್ ಎಲ್ಲರೂ ಬಳ್ಳಾರಿಯಲ್ಲಿದ್ದಾರೆ. ಈ ವಿಷಯದಲ್ಲಿ ರಾಜಕಾರಣ ಮಾಡುವವರ ಘನತೆಯೇ ಕಡಿಮೆಯಾಗಲಿದೆ' ಎಂದರು.

ಬೊಮ್ಮಾಯಿ–ಪಿಣರಾಯಿ ಭೇಟಿ ಇಂದು

ತಿರುವನಂತಪುರ: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭಾನುವಾರ ಬೆಂಗಳೂರಿನಲ್ಲಿ ಭೇಟಿಯಾಗಲಿದ್ದಾರೆ.

ತಲಶ್ಶೇರಿ–ಮೈಸೂರು ಹಾಗೂ ನಿಲಂಬೂರು–ನಂಜನಗೂಡು ರೈಲ್ವೆ ಯೋಜನೆಯ ಅನುಷ್ಠಾನದ ಕುರಿತು ಉಭಯ ನಾಯಕರು ಚರ್ಚಿಸುವ ನಿರೀಕ್ಷೆ ಇದೆ. ತಿರುವನಂತಪುರ–ಕಾಸರಗೋಡು ಸೆಮಿ ಹೈ–ಸ್ಪೀಡ್ ರೈಲು ಮಾರ್ಗ ಹಾಗೂ ಸಿಲ್ವರ್ ಮಾರ್ಗವನ್ನು ಮಂಗಳೂರಿನವರೆಗೂ ವಿಸ್ತರಿಸುವ ಸಂಬಂಧ ಕೇರಳ ಸರ್ಕಾರ ಪ್ರಸ್ತಾವನೆ ಸಿದ್ಧಪಡಿಸಿದ್ದು, ಈ ಕುರಿತೂ ಚರ್ಚೆ ನಡೆಸುವ ಸಾಧ್ಯತೆ ಇದೆ.

ಗುಂಡಣ್ಣ

25 ವರ್ಷಗಳ ಹಿಂದೆ
ಗುರುವಾರ, 18-9-1997

● **ಪಡಿತರ ಸಕ್ಕರೆ ಬೆಲೆ 90 ಪೈಸೆ ಏರಿಕೆ**

ನವದೆಹಲಿ, ಸೆಪ್ಟೆಂಬರ್ 17 (ಯುಎನ್‌ಐ)– ಪಡಿತರ ಸಕ್ಕರೆ ಬೆಲೆಯನ್ನು ಕೆ.ಜಿಗೆ 90 ಪೈಸೆಯಷ್ಟು ಹೆಚ್ಚಿಸಲು ಕೇಂದ್ರ ಸರ್ಕಾರ ಇಂದು ನಿರ್ಧರಿಸಿದೆ. ಸರ್ಕಾರದ ಈ ನಿರ್ಧಾರವನ್ನು ಆಹಾರ ಮತ್ತು ನಾಗರಿಕ ಪೂರೈಕೆ ಖಾತೆಯ ಸಚಿವ ರಘುವಂಶ ಪ್ರಸಾದ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿಂದು ಪ್ರಕಟಿಸಿದರು.

ಸರ್ಕಾರದ ಈ ನಿರ್ಧಾರದಿಂದ ಪಡಿತರ ಸಕ್ಕರೆ ಬೆಲೆ ₹11.40ಕ್ಕೆ ಹೆಚ್ಚಲಿದೆ.

50 ವರ್ಷಗಳ ಹಿಂದೆ
ಸೋಮವಾರ, 18-9-1972

● **ಕಾವೇರಿ ಜಲವಿವಾದ: ಒಳಸಂಚಿನ ಶಂಕೆ**

ಮೈಸೂರು, ಸೆಪ್ಟೆಂಬರ್ 17– ಕಾವೇರಿ ಜಲವಿವಾದದ ಸಂಬಂಧದಲ್ಲಿ ಸಂಬಂಧಿಸಿದ ಮೂವರು ಮುಖ್ಯಮಂತ್ರಿಗಳು ಸಭೆ ಸೇರಿ ವಿಷಯ ಸಂಗ್ರಹಣೆಗೆ ತಾಂತ್ರಿಕ ಸಮಿತಿ ನೇಮಕ ಮಾಡಿದ ಬಗ್ಗೆ ಇಂದು ಇಲ್ಲಿ ಪ್ರಸ್ತಾಪಿಸಿದ ಎಂ.ಪಿ.ಸಿ.ಸಿ. (ಸಂಸ್ಥಾ) ಅಧ್ಯಕ್ಷ ವೀರೇಂದ್ರ ಪಾಟೀಲ್ ಅವರು ಬಲವಾದ ಶಂಕೆ ವ್ಯಕ್ತಪಡಿಸಿ, 'ಏನೋ ಒಳಸಂಚು ನಡೆದಿದೆ' ಎಂದು ಆರೋಪಿಸಿದರು.

ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿ, 'ಅಹುಜ ಶಂಕಿಸಿದಂತೆ ಏನೋ ನಡೆದಿದೆ. ಅದರಿಂದಲೇ ಕಾವೇರಿ ಪಾತ್ರದ ನೀರಾವರಿ ಯೋಜನೆಗಳ ಕೆಲಸ ನಿಧಾನವಾಗಿರಬಹುದೆಂದು ಶಂಕಿಸಿ, ಅಂತಿಮವಾಗಿ ಈ ಜಲವಿವಾದವನ್ನು ಪ್ರಧಾನಿ ಇಂದಿರಾಗಾಂಧಿ ಅವರ ತೀರ್ಮಾನಕ್ಕೆ ಬಿಡುವ ಹಾಗೆ ಕಾಣುತ್ತಿದೆ' ಎಂದು ತಿಳಿಸಿದರು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ
ಭಾನುವಾರ ಸೆಪ್ಟೆಂಬರ್ 18, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಅಷ್ಟಮಿ ಗಂ. 16-34 ನಕ್ಷತ್ರ: ಮೃಗಶಿರ ಗಂ. 15-11 ಯೋಗ: ಸಿದ್ಧಿ (ಆಸ್ರಿಕ್) ಗಂ. 06-33, ಕರಣ: ಕೌಲವ ಗಂ. 16-34, ಕನ್ಯಾ ಮಾಸದ 01 ನೇ ದಿನ.
ರಾಹುಕಾಲ : ಸಾಯಂಕಾಲ 04:30 – 06:00
ಸೂರ್ಯೋದಯ : 06-23 ಸೂರ್ಯಾಸ್ತ : 06-26
ದಿನ ವಿಶೇಷ : ಗಯಾಷ್ಟಮಿ
ಮುಸ್ಲಿಂ ದಿನಾಂಕ : 21 ಸಫರ್ ಅದೃಷ್ಟ ಸಂಖ್ಯೆ : 5, 12

ಮೇಷ: ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ತೃಪ್ತಿ ಸಿಗಲಿದೆ. ವ್ಯಾಧಿಗಳಿಂದ ಗುಣಮುಖರಾಗುವಿರಿ. ಉದ್ಯೋಗದಲ್ಲಿ ಜವಾಬ್ದಾರಿಯುತವಾದ ಕಾರ್ಯವೈಖರಿಯಿಂದ ಸ್ಥಾನ-ಗೌರವಾದಿ ಸುಖ ಪ್ರಾಪ್ತಿಯಾಗಲಿದೆ.

ವೃಷಭ: ಗೃಹೋಪಕರಣ ವಸ್ತುಗಳ ಖರೀದಿಯಲ್ಲಿ ಲಾಭ. ಪಾಲುದಾರಿಕೆ ವಿಷಯದಲ್ಲಿ ನಿರ್ಲಿಪ್ತತೆಯಿಂದ ಇರುವುದು ಉತ್ತಮ. ಸುಖದ ಸಾಂಸಾರಿಕ ಜೀವನದಿಂದ ಕುಟುಂಬದ ಹಿರಿಯರಿಗೆ ಸಂತೋಷ, ನೆಮ್ಮದಿ.

ಮಿಥುನ: ಈ ದಿನ ನೀವು ಸಂಪೂರ್ಣವಾಗಿ ಚಟುವಟಿಕೆಯಿಂದ ಇರುವಿರಿ. ಧನಾರ್ಜನೆಗೆ ಯಾವುದೇ ಕೊರತೆ ಕಾಣುವುದಿಲ್ಲ. ಕುಟುಂಬದ ಸದಸ್ಯರು ಜೊತೆಗೂಡಿ ಸಂತೋಷಮಯವಾಗಿ ಕಾಲ ಕಳೆಯುವ ಅವಕಾಶ.

ಕರ್ಕಾಟಕ: ವಿದ್ಯಾರ್ಥಿಗಳು ಹೆಚ್ಚಿನ ಕಾಲ ಅಧ್ಯಯನ ಶೀಲರಾಗಿ ಇರುವುದು ಯಶಸ್ಸಿಗೆ ಅನುಕೂಲವಾಗುತ್ತದೆ. ಕಫ ಪ್ರಕೃತಿಯ ದೇಹ ಹೊಂದಿದವರು ಆರೋಗ್ಯದದ ಬಗ್ಗೆ ಜಾಗ್ರತೆವಹಿಸಿ. ಯಾರಲ್ಲಿಯೂ ಸಾಲ ತೆಗೆದುಕೊಳ್ಳಬೇಡಿ.

ಸಿಂಹ: ಈ ದಿನದ ಕೆಲಸಕ್ಕೆ ಇನ್ನೊಬ್ಬರನ್ನು ಅವಲಂಬಿಸುವುದು, ನಂಬಿ ಕೊಳ್ಳುವುದು ಸರಿಯಲ್ಲ. ಸ್ವಸಾಮರ್ಥ್ಯಕ್ಕೆ ಸರಿಯಾದ ಕೆಲಸವನ್ನು ಆರಿಸಿಕೊಳ್ಳಿರಿ. ವಾಹನಾದಿ ಯಂತ್ರಗಳಿಂದ ಧನ ಮತ್ತು ಸಮಯ ವ್ಯಯ ಸಾಧ್ಯತೆ.

ಕನ್ಯಾ: ವೃತ್ತಿ ಅಥವಾ ಕೆಲಸಗಳಲ್ಲಿ ಬದಲಾವಣೆ ಸನ್ನಿಹಿತವಾಗಲಿದೆ. ಹಾಲು ಉತ್ಪನ್ನ ಪದಾರ್ಥಗಳ ಮಾರಾಟದಿಂದ ವರಮಾನ ಹೆಚ್ಚುವುದು. ನಿಮ್ಮ ಕೆಲಸಕ್ಕೆ ದಾಯಾದಿ ವರ್ಗದವರಿಂದ ಅಪರೂಪಕ್ಕೆ ಅನುಕೂಲ ಉಂಟಾಗಲಿದೆ.

ತುಲಾ: ನಿಮ್ಮ ಕೈ ಮೀರಿದ ಕೆಲಸಗಳ ಬಗ್ಗೆ ಪುನಃ ಪುನಃ ಯೋಚಿಸುವುದು ಸರಿಯಲ್ಲ. ಕೆಲವು ಆಕಸ್ಮಿಕ ಪ್ರಯಾಣವನ್ನು ಮಾಡ ಬೇಕಾಗಬಹುದು. ನಿಮ್ಮ ಸುತ್ತಮುತ್ತಲಿನ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹವಾಗುವುದು.

ವೃಶ್ಚಿಕ: ಕಾಗದದ ವ್ಯಾಪಾರದಲ್ಲಿ ಮಂದಗತಿಯ ನಡೆ ಕಂಡರೂ ಅಭಿವೃದ್ಧಿ ಖಚಿತ. ಚಲನಚಿತ್ರ ನಿರ್ಮಾಪಕರಿಗೆ ನಿರೀಕ್ಷೆಗೂ ಮೀರಿದ ಲಾಭ. ಕಾರ್ಯಗಾರದಲ್ಲಿ ಗುಂಪಿನ ಮುಂದಾಳತ್ವದ ಜವಾಬ್ದಾರಿ ವಹಿಸಿಕೊಳ್ಳಬೇಕಾಗುವುದು.

ಧನು: ಸಂಪರ್ಕ ಮಾಧ್ಯಮ ಕ್ಷೇತ್ರದಲ್ಲಿರುವವರಿಗೆ ಉತ್ತಮ ದಿನ. ನಿಮ್ಮ ದಿಟ್ಟತನದೊಂದಿಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರ ಗಳಿಕೆ ಕಷ್ಟವೇನಲ್ಲ. ಮನೆ ಕಟ್ಟುವ ಕೆಲಸಗಳು ನಿರ್ವಿಘ್ನವಾಗಿ ಮುಂದುವರೆಯುವುದು.

ಮಕರ: ಅನಗತ್ಯ ಚಿಂತೆ, ಭಯಗಳು ದೂರಾಗಿ ನೆಮ್ಮದಿ ಹೊಂದುವಿರಿ. ಸ್ವ ಉದ್ಯೋಗಿಗಳು ಕೈ ತಪ್ಪಿ ಹೋಗಿದ್ದ ಕೆಲಸಗಳನ್ನು ಮರಳಿ ಪಡೆದುಕೊಳ್ಳುವಲ್ಲಿ ಗೆಲುವು ಕಾಣುವರು. ಕಾರ್ಮಿಕ ವರ್ಗದವರ ಬೇಡಿಕೆಗಳು ಈಡೇರಲಿದೆ.

ಕುಂಭ: ಗುಡಿ ಕೈಗಾರಿಕೆಗಳಿಗೆ ವಸ್ತು ಪ್ರದರ್ಶನ ಮಾರಾಟದಲ್ಲಿ ಬೇಡಿಕೆ ಹೆಚ್ಚುವುದು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಟಿ.ವಿ ಕಲಾವಿದರಿಗೆ ಉತ್ತಮ ದಿನ. ವ್ಯವಹಾರ ವಿಸ್ತರಣೆಗೆ ಸ್ನೇಹಿತರ ನೆರವು.

ಮೀನ: ನಿಮ್ಮ ಅನಿಶ್ಚಿತತೆಯ ಭಾವ ನಿವಾರಣೆಯಾಗುವುದು. ರಾಜಕೀಯ ಕಾರಣದಿಂದ ಪೊಲೀಸ್ ಅಧಿಕಾರಿಗಳ ವರ್ಗಾವಣೆ ಸಂಚು ನಡೆಯಬಹುದು. ಮನೋಬಲದ ಜೊತೆಯಲ್ಲಿ ಗಣೇಶನನ್ನು ಪೂಜಿಸುವುದರಿಂದ ಕಾರ್ಯಸಿದ್ಧಿ.

ಪದಬಂಧ 5083
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಸುದ್ದಿ ಸಂಗ್ರಹಕಾರ (4)
3.ಪದದಲ್ಲಿಯೇ ಪುಸ್ತಕದ ಸರ್ಗವಿದೆ (4)
5.ವರನಿಗೆ ಕೇಳಿಸಿರುವ ಧ್ವನಿ (2)
6.ಜಾಸ್ತಿ ದುಡ್ಡುಳ್ಳ ವ್ಯಕ್ತಿ (4)
8.ತಿರುಗಿದಾಗ ಕಾಣಿಸಿಕೊಂಡಿತೇ ಈ ದೆವ್ವ? (2)
9.ಲೋಲುಪನ ಕುಂದು ಇಲ್ಲಿ ಕಂಡಿದೆ (2)
10.ಹಿಡಿತದಿಂದ ಖರ್ಚು ಮಾಡುವಿಕೆ (4)
13.ನಾರಿಕೇಳ ಹಿಡಿದಿರುವ ಸ್ತ್ರೀ (2)
15.ಅತಿಯಾದ ಸಿಟ್ಟು (4)
16.ಹೂವಿನಲ್ಲಿನ ಸಿಹಿ ರಸ (4)

ಮೇಲಿಂದ ಕೆಳಕ್ಕೆ
1.ಬಾಗಿಲಿಗೆ ಸಿಕ್ಕಿಕೊಂಡಿರುವ ಲಾಂಗೂಲ (2)
2.ದಾನ ನೀಡಿದ ಅಸುರ (3)
3.ಪಣದಲ್ಲಿನ ಅಳತೆಯಿದು (4)
4.ಪ್ರಜ್ವಲಿಸುವ ಬೆಂಕಿ (3)
5.ಯುದ್ಧಭೂಮಿಯಿದು (4)
6.ಯೌವ್ವನ ಹೀಗೆ ಕಾಣಿಸುತ್ತಿದೆ (3)
7.ಈಕೆ ತೆಳ್ಳಗಿನ ಸೊಂಟದವಳು (4)
11.ನಿಷ್ಪ್ರಯೋಜಕ ಮಾತು (4)
12.ಕಬ್ಬಿಣದ ಭಾರೀ ಪೆಟ್ಟಿಗೆ (3)
13.ನಾವಿಕ ತೂರಿಸಿರುವ ಮೂಗು (3)
14.ವಾದಕನ ಬಳಿ ನಡೆಸಿರುವ ಚರ್ಚೆ (2)

1		2		■	3			4
	■		■	■		■	■	
■	5		■	■		■	■	
■		■	■	6			7	■
8		■	■		■	■	9	
■	10		11		■	■		■
12	■	■		■	■	13		■
	■	■		■	■		■	14
15				■	16			

5082ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಜೀರ್ಣ 2.ಸಾರಜನಕ
4. ಸಾಕ್ಷಾತ್ಕಾರ 6.ವದಂತಿ
7.ತಮ 9.ದಿವಾನ
11.ತಿಲ 13.ನವಣೆ
14.ಕರವಾಲ 16.ಜಗಳಗಂಟಿ
17.ಹರಕೆ

ಮೇಲಿಂದ ಕೆಳಕ್ಕೆ:
1.ಅಹಿಂಸಾವ್ರತ 2.ಸಾಣೆ
3.ನವದಂಪತಿ 5.ರಶೀದಿ
8.ಮದುವಣಿಗ 10.ನರಕ
12.ಲವಲವಿಕೆ 15.ತುಟಿ

ಸುಡೊಕು 5469

	2			5		8		
8			3		9		2	1
	4	3		1				7
	3	2				7		6
				7	2		9	
7	9				6			5
3	1		9		5		7	
	7			8		1	6	9
	6	9			1		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5468 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

₹ 12.5 ಕೋಟಿ ಲಂಚ: ವಾಟ್ಸ್ಆ್ಯಪ್ ಸಂಭಾಷಣೆ, ಬ್ಯಾಂಕ್ ದಾಖಲೆಗಳೇ ಮಹತ್ವದ ಸಾಕ್ಷ್ಯ

ಬಿಎಸ್‌ವೈ ಕುಟುಂಬ ಸುತ್ತಿಕೊಂಡ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಿಎ ವತಿಯಿಂದ ವಸತಿ ಸಮುಚ್ಚಯ ನಿರ್ಮಾಣಕ್ಕೆ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅಂತಿಮಗೊಳಿಸಿದ್ದ ಗುತ್ತಿಗೆಯನ್ನು ಮುಂದುವರಿಸುವುದಕ್ಕೆ ಒತ್ತಡ ಹೇರಿ ಬಹುಕೋಟಿ ರೂಪಾಯಿ ಲಂಚ ಪಡೆದಿರುವ ಆರೋಪ ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಅವರ ಕುಟುಂಬವನ್ನೇ ಸುತ್ತಿಕೊಂಡಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶದಂತೆ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಪ್ರಕರಣದಲ್ಲಿ ಯಡಿಯೂರಪ್ಪ ಅವರ ಕುಟುಂಬದ ಐವರು ಆರೋಪಿಗಳಾಗಿದ್ದಾರೆ. ಮಗ, ಅಳಿಯ, ಮೊಮ್ಮಗ ಮತ್ತು ಮಗಳ ಅಳಿಯನ ಹೆಸರು ಆರೋಪಿಗಳ ಸಾಲಿನಲ್ಲಿದೆ.

‘ಹಿಂದಿನ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಅಂತಿಮಗೊಳಿಸಿದ್ದ ಗುತ್ತಿಗೆ ಮುಂದುವರಿಸಲು ಯಡಿಯೂರಪ್ಪ ಹಾಗೂ ವಿಜಯೇಂದ್ರ ಅವರಿಗೆ ₹ 12 ಕೋಟಿ ಲಂಚ ನೀಡುವಂತೆ ಬಿಡಿಎ ಆಯುಕ್ತರಾಗಿದ್ದ ಜಿ.ಸಿ. ಪ್ರಕಾಶ್, ಗುತ್ತಿಗೆದಾರ ಚಂದ್ರಕಾಂತ್ ರಾಮಲಿಂಗಂ ಬಳಿ ಬೇಡಿಕೆ ಇಟ್ಟಿದ್ದರು. ಗುತ್ತಿಗೆದಾರರ ಪರವಾಗಿ 37 ಕ್ರೆಸೆಂಟ್ ಹೋಟೆಲ್ ಮಾಲೀಕ ಕೆ. ರವಿ ಅವರಿಂದ ₹ 12 ಕೋಟಿಯನ್ನು ಪಡೆದುಕೊಂಡು, ವಿಜಯೇಂದ್ರ ಅವರಿಗೆ ತಲುಪಿಸುವುದಾಗಿ ಹೇಳಿದ್ದರು. ಆದರೆ, ಆ ಹಣ ತಲುಪಿಲ್ಲ ಎಂದು ಮತ್ತೆ ತಕರಾರು ತೆಗೆದು ₹ 12.5 ಕೋಟಿಯನ್ನು ಸುಲಿಗೆ ಮಾಡಲಾಗಿತ್ತು’ ಎಂಬ ಆರೋಪ ಎಫ್‌ಐಆರ್‌ನಲ್ಲಿದೆ.

‘ಬಿಡಿಎ ಗುತ್ತಿಗೆ ಮಾತ್ರವಲ್ಲದೇ ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯ ತುಂಗಾ ನಾಲೆ ಆಧುನೀಕರಣ, ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಕಾಮಗಾರಿಗಳು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಸೇರಿದಂತೆ ಹಲವು ಇಲಾಖೆಗಳ ಕಾಮಗಾರಿಗಳನ್ನು ಕೊಡಿಸುವಂತೆ ಗುತ್ತಿಗೆದಾರರು ಯಡಿಯೂರಪ್ಪ ಅವರ ಮೊಮ್ಮಗ ಶಶಿಧರ ಮರಡಿ ಬಳಿ ವಿನಂತಿಸಿಕೊಂಡಿದ್ದರು.

ಆ ಬಳಿಕ ಲಂಚದ ಕುರಿತೂ ಚರ್ಚಿಸಿರುವುದು ವಾಟ್ಸ್ ಆ್ಯಪ್ ಸಂಭಾಷಣೆಯಲ್ಲಿದೆ’ ಎಂಬ ಉಲ್ಲೇಖವಿದೆ.

‘₹ 12.5 ಕೋಟಿ ತಲುಪಿರುವ ಕುರಿತು ಯಡಿಯೂರಪ್ಪ ಅವರ ಅಳಿಯ ವಿರೂಪಾಕ್ಷಪ್ಪ ಯಮಕನಮರಡಿ ವಾಟ್ಸ್ ಆ್ಯಪ್ ಸಂಭಾಷಣೆಯಲ್ಲಿ ಚಂದ್ರಕಾಂತ್ ರಾಮಲಿಂಗಂ ಅವರಿಗೆ ಖಚಿತಪಡಿಸಿರುವ ದಾಖಲೆ ಇದೆ’ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

ಇದೇ ಆರೋಪಗಳ ಕುರಿತು ತನಿಖೆಗೆ ಆದೇಶಿಸುವಂತೆ ಟಿ.ಜೆ. ಅಬ್ರಹಾಂ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ಸಲ್ಲಿಸಿದ್ದರು.

ದೂರನ್ನು ವಜಾಗೊಳಿಸಿ ವಿಶೇಷ ನ್ಯಾಯಾಲಯ 2021ರ ಜುಲೈ 8ರಂದು ಆದೇಶ ಹೊರಡಿಸಿತ್ತು. ಅದನ್ನು ಪ್ರಶ್ನಿಸಿ ಅಬ್ರಹಾಂ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ವಿಶೇಷ ನ್ಯಾಯಾಲಯದ ಆದೇಶವನ್ನು ರದ್ದುಗೊಳಿಸಿ ಹೈಕೋರ್ಟ್ ಇದೇ 7ರಂದು ಆದೇಶ ಹೊರಡಿಸಿತ್ತು. ಪುನಃ ವಿಚಾರಣೆ ಆರಂಭಿಸಿದ ವಿಶೇಷ ನ್ಯಾಯಾಲಯ ತನಿಖೆ ನಡೆಸುವಂತೆ ಲೋಕಾಯುಕ್ತ ಪೊಲೀಸರಿಗೆ ನಿರ್ದೇಶನ ನೀಡಿ ಬುಧವಾರ ಆದೇಶ ಹೊರಡಿಸಿತ್ತು.

ಶೆಲ್ ಕಂಪನಿಗಳ ಬಳಕೆ

ಲಂಚದ ಹಣವನ್ನು ಶಶಿಧರ ಮರಡಿ ಮತ್ತು ಸಂಜಯ್ ಶ್ರೀ ಕೋಲ್ಕತ್ತ ವಿಳಾಸದಲ್ಲಿ ನೋಂದಣಿಯಾಗಿರುವ ರಾಜ್‌ಗರಾನಾ ಸೇಲ್ಸ್ ಪ್ರೈವೇಟ್ ಲಿಮಿಟೆಡ್, ನವ್‌ಟೆಕ್ ಕ್ರಿಯೇಷನ್ಸ್ ಪ್ರೈ.ಲಿ., ಗನ್ನಾಯಕ್ ಕಮಾಡಿಟೀಸ್ ಪ್ರೈ.ಲಿ., ಜಗದಾಂಬ ಕಮೋಸೇಲ್ಸ್ ಪ್ರೈ.ಲಿ., ರಮ್ಯಾಕ್ ಡಿಸ್ಟ್ರಿಬ್ಯೂಟರ್ಸ್ ಪ್ರೈ.ಲಿ., ಶಾಕಾಂಬರಿ ಮರ್ಚಂಟ್ಸ್ ಪ್ರೈ.ಲಿ. ಮತ್ತು ಸ್ಟ್ರಾಟಜಿಕ್ ವಿಂಕೋಮ್ ಪ್ರೈ.ಲಿ. ಎಂಬ ‘ಶೆಲ್’ ಕಂಪನಿಗಳ ಖಾತೆಗೆ ಹಾಕುತ್ತಿದ್ದರು.

ಬಳಿಕ ಈ ಇಬ್ಬರೇ ಪಾಲುದಾರರಾಗಿರುವ ಬೆಲ್‌ಗ್ರಾವಿಯ ಎಂಟರ್‌ಪ್ರೈಸಸ್ ಪ್ರೈ.ಲಿ. ಮತ್ತು ವಿಎಸ್‌ಎಸ್ ಸ್ಟೇಟ್ಸ್ ಮತ್ತಿತರ ಕಂಪನಿಗಳ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ ಎಂಬುದು ಎಫ್‌ಐಆರ್‌ನಲ್ಲಿದೆ.

ಸವಾಲು ಹಾಕಿದ್ದ ಯಡಿಯೂರಪ್ಪ

ಇದೇ ಪ್ರಕರಣ 2020ರ ಸೆಪ್ಟೆಂಬರ್ 26ರಂದು ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಕೋಲಾಹಲಕ್ಕೆ ಕಾರಣವಾಗಿತ್ತು. ಪ್ರಕರಣದ ಕುರಿತು ತನಿಖೆಗೆ ಆದೇಶಿಸುವಂತೆ ವಿರೋಧ ಪಕ್ಷ ಕಾಂಗ್ರೆಸ್ ಪಟ್ಟು ಹಿಡಿದಿತ್ತು.

‘ನೀವು ಮಾಡುತ್ತಿರುವ ಆರೋಪದ ಕುರಿತು ಸಿಬಿಐ ಅಥವಾ ಲೋಕಾಯುಕ್ತಕ್ಕೆ ಹೋಗಿ. ಹೈಕೋರ್ಟ್‌ಗಾದರೂ ಹೋಗಿ ತನಿಖೆ ಮಾಡಿಸಿ. ಸತ್ಯಾಂಶವಿದ್ದರೆ ರಾಜಕೀಯ ನಿವೃತ್ತಿ ಪಡೆಯುವೆ’ ಎಂದು ಆಗ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಸವಾಲು ಹಾಕಿದ್ದರು.

ಯಾವ ಸೆಕ್ಷನ್‌ಗಳಡಿ ಪ್ರಕರಣ?

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ	
ಸೆಕ್ಷನ್ 7	ಸಾರ್ವಜನಿಕ ನೌಕರನಿಂದ ಲಂಚಕ್ಕೆ ಬೇಡಿಕೆ.
ಸೆಕ್ಷನ್ 8	ಸಾರ್ವಜನಿಕ ನೌಕರನ ಮೇಲೆ ಪ್ರಭಾವ ಬೀರಲು ಲಂಚಕ್ಕೆ ಬೇಡಿಕೆ.
ಸೆಕ್ಷನ್ 9	ಸರ್ಕಾರಿ ಅಧಿಕಾರಿಯ ಮೇಲೆ ವೈಯಕ್ತಿಕ ಪ್ರಭಾವ ಬೀರಲು ಲಂಚಕ್ಕೆ ಬೇಡಿಕೆ.
ಸೆಕ್ಷನ್ 10	ಮೇಲಿನ ಆರೋಪಗಳಿಗೆ ಶಿಕ್ಷೆಯ ಪ್ರಮಾಣ
ಸೆಕ್ಷನ್ 13	ಸಾರ್ವಜನಿಕ ನೌಕರರು ತಮ್ಮ ಕರ್ತವ್ಯ ನಿರ್ವಹಿಸಲು ಲಂಚ ಪಡೆದಿರುವುದು.
ಭಾರತೀಯ ದಂಡ ಸಂಹಿತೆ (ಐಪಿಸಿ)	
ಸೆಕ್ಷನ್ 383	ಸುಲಿಗೆ
ಸೆಕ್ಷನ್ 384	ಮೇಲಿನ ಆರೋಪಕ್ಕೆ ಮೂರು ವರ್ಷಗಳವರೆಗೆ ಜೈಲು.
ಸೆಕ್ಷನ್ 415	ಮೋಸ.
ಸೆಕ್ಷನ್ 418	ನಷ್ಟವಾಗಲಿದೆ ಎಂದು ತಿಳಿದೂ ಮೋಸ ಮಾಡುವುದು.
ಸೆಕ್ಷನ್ 420	ವಂಚನೆ.
ಸೆಕ್ಷನ್ 120ಬಿ	ಕ್ರಿಮಿನಲ್ ಒಳಸಂಚು.

ಶನಿವಾರ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಹಾಗೂ ನ್ಯಾಯಸುಧಾ ಮಂಗಲೋತ್ಸವವನ್ನು ವಿವಿಧ ಸ್ವಾಮೀಜಿಗಳು ಉದ್ಘಾಟಿಸಿದರು. ಸುಬುಧೇಂದ್ರತೀರ್ಥ ಸ್ವಾಮೀಜಿ, ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ವಿದ್ಯೇಶತೀರ್ಥ ಸ್ವಾಮೀಜಿ, ವಿಶ್ವವಲ್ಲಭತೀರ್ಥ ಸ್ವಾಮೀಜಿ, ವೇದವರ್ಧನತೀರ್ಥ ಸ್ವಾಮೀಜಿ, ಬನ್ನಂಜೆ ರಾಘವೇಂದ್ರತೀರ್ಥ ಸ್ವಾಮೀಜಿ, ಈಶಪ್ರಿಯತೀರ್ಥ ಸ್ವಾಮೀಜಿ ಇದ್ದಾರೆ

ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನದಲ್ಲಿ ಅಭಿಮತ

ಮತಾಂತರಕ್ಕೆ ಯತ್ನ; ಹಿಂದೂಗಳು ಸಂಘಟಿತರಾಗಲಿ–ಸುಬುಧೇಂದ್ರ ಶ್ರೀ

ಪ್ರಜಾವಾಣಿ ವಾರ್ತೆ

ವಿಶ್ವೇಶತೀರ್ಥ ವೇದಿಕೆ (ಹುಬ್ಬಳ್ಳಿ): ‘ಮತಾಂತರದ ಮೂಲಕ ಕೆಲವರು ಹಿಂದೂಗಳನ್ನು ಒಡೆಯಲು ಯತ್ನಿಸುತ್ತಿದ್ದು, ಎಲ್ಲರೂ ಸಂಘಟಿತರಾಗಿ ಸಮಾಜದ ರಕ್ಷಣೆಗೆ ಮುಂದಾಗಬೇಕು’ ಎಂದು ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಹೇಳಿದರು.

ಶನಿವಾರ ಇಲ್ಲಿ ಆರಂಭವಾದ ಎರಡು ದಿನದ ಅಖಿಲ ಭಾರತ ಮಾಧ್ವ ಮಹಾಮಂಡಲದ 29ನೇ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಹಾಗೂ ನ್ಯಾಯಸುಧಾ ಮಂಗಲೋತ್ಸವದಲ್ಲಿ ಅವರು ಮಾತನಾಡಿದರು.

‘ಒಂದೆಡೆ ಹಿಂದೂ ಸಮಾಜವನ್ನು ಒಡೆಯುತ್ತಿದ್ದರೆ ಮತ್ತೊಂದೆಡೆ ಇತರ ಸಂಘಟನೆಗಳು ಮಾಧ್ವ ಮತ್ತು ಹಿಂದೂ ಸಮುದಾಯದ ನಡುವೆ ಭಿನ್ನಾಭಿಪ್ರಾಯ ಮೂಡುವಂತೆ ಮಾಡುತ್ತಿವೆ. ಇದು ಮಾಧ್ವರ ಪ್ರಗತಿಗೆ ತೊಡಕಾಗುತ್ತಿದೆ. ಹೀಗಾಗಿ, ಹಿಂದೂ ಸಮಾಜ ಹಾಗೂ ಮಾಧ್ವರು ಸಂಘಟಿತರಾಗಿ ನಿಲ್ಲಬೇಕು. ಮತಾಂತರ ಗಮನದಲ್ಲಿಟ್ಟುಕೊಂಡು ನಮ್ಮ ಆಚಾರ, ವಿಚಾರ, ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಹೋಗಬೇಕು’ ಎಂದು ಅವರು ಸಲಹೆ ನೀಡಿದರು.

‘ಕೆಲಸವೇ ಪೂಜೆಯಾಗಲಿ’

ಉಡುಪಿ ಪೇಜಾವರಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, ‘ವೃತ್ತಿ ಜೀವನದಲ್ಲಿ ಮೋಸ, ವಂಚನೆ, ಕಪಟತನ ಇಲ್ಲದಿದ್ದಾಗ ಇಡುವ ಪ್ರತಿಯೊಂದು ಹೆಜ್ಜೆ ಸುವಾಸನೆ ಭರಿತ ಹೂವಾಗುತ್ತದೆ, ರಸಭರಿತ ಹಣ್ಣಾಗುತ್ತದೆ. ಮಾಡುವ ಕಾರ್ಯ ಕೆಲಸ ಎಂದುಕೊಳ್ಳದೆ ದೇವರ ಪೂಜೆ ಅಂದುಕೊಳ್ಳಬೇಕು’ ಎಂದರು.

ಲೈಂಗಿಕ ಕಿರುಕುಳ ಪ್ರಕರಣ: ಹೈಕೋರ್ಟ್ ಸಿಜೆಗೆ ಯತ್ನಾಳ ಪತ್ರ

ಪೀಠತ್ಯಾಗ: ಮುರುಘಾ ಶ್ರೀಗೆ ನಿರ್ದೇಶನ ನೀಡಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಲೈಂಗಿಕ ಕಿರುಕುಳ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ಚಿತ್ರದುರ್ಗ ಮುರುಘಾ ಮಠದ ಶರಣರಿಗೆ ಪೀಠತ್ಯಾಗ ಮಾಡಲು ನಿರ್ದೇಶಿಸಬೇಕು ಎಂದು ಕೋರಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಹಾಗೂ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮನವಿ ಮಾಡಿದ್ದಾರೆ.

ಈ ಸಂಬಂಧ ಪತ್ರ ಬರೆದಿರುವ ಅವರು, ‘ವೀರಶೈವ ಲಿಂಗಾಯತ ಸಮಾಜಕ್ಕೆ ಸೇರಿದ ಸುಪ್ರೀಂ ಅಥವಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಮಠಕ್ಕೆ ತಾತ್ಕಾಲಿಕ ಮೇಲುಸ್ತುವಾರಿ ಸಮಿತಿ ರಚನೆ ಮಾಡುವ ಮೂಲಕ ಮಠದ ದೈನಂದಿನ ಆಡಳಿತ ಸುಗಮವಾಗಿ ನಡೆಯುವಂತೆ ಕ್ರಮಕೈಗೊಳ್ಳಬೇಕು’ ಎಂದು ಕೋರಿದ್ದಾರೆ.

‘ಚಿತ್ರದುರ್ಗದ ಬೃಹನ್ಮಠವು ವಿರಕ್ತ ಪರಂಪರೆಯ ಶೂನ್ಯಪೀಠದ ಅಗ್ರಗಣ್ಯ ಮಠವಾಗಿದೆ. ಮುರುಘಾಶ್ರೀಗಳ ಕಾರಣದಿಂದಾಗಿ ವೀರಶೈವ ಲಿಂಗಾಯತ ಸಮಾಜಕ್ಕೆ ಅವಮಾನವಾಗಿದೆ. ಪ್ರಕರಣ ಕೋರ್ಟ್‌ನಲ್ಲಿದೆ. ಸ್ವಾಮೀಜಿಗಳು ಸ್ವ ಇಚ್ಛೆಯಿಂದ ಪೀಠ ತ್ಯಾಗ ಮಾಡಬೇಕು. ಇಲ್ಲದಿದ್ದರೆ ಭಕ್ತ ಸಮೂಹ ಕಾನೂನು ಬದ್ಧವಾಗಿ ಪದಚ್ಯುತಗೊಳಿಸಲು ಅವಕಾಶ ಕಲ್ಪಿಸಬೇಕು’ ಎಂದು ಯತ್ನಾಳ ಮನವಿ ಮಾಡಿದ್ದಾರೆ.

ಶರಣರು ಸದ್ಯ ಜೈಲಿನಲ್ಲಿರುವ ಕಾರಣ ಶ್ರೀಮಠದ ಸಮಸ್ತ ಆಡಳಿತ ಚಟುವಟಿಕೆ ಅಸ್ತವ್ಯಸ್ತವಾಗಿದೆ. ಈ ಸಂದಿಗ್ಧ ಸಮಯದಲ್ಲಿ ಶ್ರೀಮಠದ ಕೋಟ್ಯಂತರ ಮೊತ್ತದ ಚರ ಮತ್ತು ಸ್ಥಿರಾಸ್ತಿ ದುರುಪಯೋಗವಾಗುವ ಸಾಧ್ಯತೆ ಇದೆ ಎಂದೂ ಅನುಮಾನ ವ್ಯಕ್ತಪಡಿಸಿದ್ದಾರೆ.

ಉನ್ನತ ಮಟ್ಟದ ಮೇಲುಸ್ತುವಾರಿಗೆ ಕೂಡಲೇ ಸಮಿತಿ ನೇಮಿಸಬೇಕು, ಈ ಸಮಿತಿ ಶ್ರೀಮಠದ ದೈನಂದಿನ ಆಡಳಿತ, ಆರ್ಥಿಕ ವ್ಯವಹಾರಗಳು ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ನಿರ್ಧಾರ ಕೈಗೊಳ್ಳುವ ತಾತ್ಕಾಲಿಕ ಅಧಿಕಾರ ಹೊಂದಿರಬೇಕು. 3 ತಿಂಗಳಲ್ಲಿ ಮಠಕ್ಕೆ ಹೊಸ ಪೀಠಾಧ್ಯಕ್ಷರನ್ನು ನೇಮಿ ಸುವ ಪ್ರಕ್ರಿಯೆಯನ್ನು ಸಮಿತಿಯೇ ಮಾಡಬೇಕು ಎಂದೂ ಅವರು ಮನವಿ ಮಾಡಿದ್ದಾರೆ.

ಆದೇಶ ಕಾಯ್ದಿರಿಸಿದ ಕೋರ್ಟ್

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರ ಮೇಲೆ ನಡೆದ ಲೈಂಗಿಕ ಕಿರುಕುಳ ಪ್ರಕರಣ ಕುರಿತು ಬೆಂಗಳೂರಿನ ಕಾಟನ್‌ಪೇಟೆ ಹಾಗೂ ಮೈಸೂರಿನ ನಜರಬಾದ್ ಠಾಣೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಒದಗಿಸಲು ಕೋರಿ ಸಿಆರ್ ಪಿಸಿ ಸೆಕ್ಷನ್ 91ರ ಅಡಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿತ ಆದೇಶವನ್ನು ನ್ಯಾಯಾಲಯ ಸೆ.21ಕ್ಕೆ ಕಾಯ್ದಿರಿಸಿದೆ.

ಪ್ರಕರಣದ ನಾಲ್ಕನೇ ಆರೋಪಿ ಪರಮಶಿವಯ್ಯ ಹಾಗೂ ಐದನೇ ಆರೋಪಿ ಗಂಗಾಧರಯ್ಯ ಪರವಾಗಿ ಹಾಜರಾಗಿದ್ದ ಹೈಕೋರ್ಟ್ ವಕೀಲ ಸಿ.ಎಚ್.ಹನುಮಂತರಾಯ ಈ ಅರ್ಜಿ ಸಲ್ಲಿಸಿದ್ದರು. ಸರ್ಕಾರಿ ವಕೀಲರಾದ ಕೆ.ಬಿ.ನಾಗವೇಣಿ ಶನಿವಾರ ತಕರಾರು ಸಲ್ಲಿಸಿದ್ದರು. ವಾದ, ಪ್ರತಿವಾದ ಆಲಿಸಿದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಕೆ.ಕೋಮಲಾ ಅವರು ಆದೇಶವನ್ನು ಕಾಯ್ದಿರಿಸಿದರು.

ಅತಿಥಿ ಶಿಕ್ಷಕರ ಗೌರವಧನ; ₹ 175.05 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಶಿಕ್ಷಕರಿಗೆ ಗೌರವಧನ ನೀಡಲು ಸರ್ಕಾರ ₹ 175.05 ಕೋಟಿ ಬಿಡುಗಡೆ ಮಾಡಿದೆ.

ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗೆ 2022–23ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಬಿಡುಗಡೆಯಾದ ಅನುದಾನವನ್ನು ವಿಳಂಬ ಮಾಡದಂತೆ ತಾಲ್ಲೂಕು ಪಂಚಾಯಿತಿಗಳ ಮೂಲಕ ತಕ್ಷಣ ಬಳಕೆ ಮಾಡಿಕೊಳ್ಳಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಪ್ರಾಥಮಿಕ ಶಾಲೆಗಳ 27 ಸಾವಿರ ಅತಿಥಿ ಶಿಕ್ಷಕರಿಗೆ ₹ 135.66 ಕೋಟಿ, ಪ್ರೌಢಶಾಲೆಗಳ 5,159 ಅತಿಥಿ ಶಿಕ್ಷಕರಿಗೆ ₹ 39.39 ಕೋಟಿ ನೀಡುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು.

ಭಾರತ ಒಗ್ಗೂಡಿಸಿ ಯಾತ್ರೆಗೆ ಪ್ರಿಯಾಂಕಾ, ಇನ್ನೂ ಖಚಿತ ಆಗಿಲ್ಲ: ಡಿ.ಕೆ. ಶಿವಕುಮಾರ್

ಬೆಂಗಳೂರು: ‘ಪಕ್ಷ ಹಮ್ಮಿಕೊಂಡಿರುವ ಭಾರತ ಒಗ್ಗೂಡಿಸಿ ಯಾತ್ರೆ ರಾಜ್ಯ ದಲ್ಲಿ ಸಾಗುವ ಸಂದರ್ಭದಲ್ಲಿ ಪ್ರಿಯಾಂಕಾ ಗಾಂಧಿ ಅವರು ಭಾಗವಹಿಸುವ ಬಗ್ಗೆ ಇನ್ನೂ ಖಚಿತ ಆಗಿಲ್ಲ. ಬಹು ತೇಕ ರಾಷ್ಟ್ರೀಯ ನಾಯಕರು ಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, ‘ಯಾತ್ರೆಗೆ ಎಲ್ಲ ಸಿದ್ಧತೆ ಮಾಡಲಾಗುತ್ತಿದೆ. ಪಕ್ಷದ ಶಾಸಕರ ನೇತೃತ್ವದಲ್ಲಿ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಬಳ್ಳಾರಿಯಲ್ಲಿ ನಡೆಯಲಿರುವ ಬೃಹತ್ ಸಮಾವೇಶದ ಜವಾಬ್ದಾರಿಯನ್ನು ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ನೇತೃತ್ವದ ಸಮಿತಿಗೆ ವಹಿಸಲಾಗಿದೆ. ಮಹಿಳೆಯರ ಸಂಘಟನೆಗೆ ಐದಾರು ತಂಡಗಳನ್ನೂ ರಚಿಸಲಾಗಿದೆ’ ಎಂದರು.

ಶುಕ್ರವಾರ ನಡೆದ ಸಭೆಯಲ್ಲಿ ಮಾತನಾಡುವ ವೇಳೆ ಬೇರೆಯವರು ಸಹಕಾರ ನೀಡುತ್ತಿಲ್ಲ ಎಂದು ಭಾವನೆ ವ್ಯಕ್ತಪಡಿಸಿದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ನನಗೆ ಅಸಹಕಾರದ ನೋವಿಲ್ಲ. ಸರ್ಕಾರ ಅಧಿವೇಶನ ಕರೆದಾಗ ಕೇವಲ ವಿರೋಧ ಪಕ್ಷದ ನಾಯಕರೇ ಎಲ್ಲವನ್ನೂ ಮಾಡಲು ಆಗುವುದಿಲ್ಲ. ಅವರಿಗೆ ನಾನು ಸೇರಿದಂತೆ 69 ಶಾಸಕರ ಸಹಕಾರ ಇರಬೇಕು’ ಎಂದರು.

‘ಸರ್ಕಾರದ ಸಾಧನೆ, ಕಾರ್ಯಕ್ರಮ ಮಾಡಿದಾಗ ಎಷ್ಟು ಜನ ಸಚಿವರು ಹೋಗಿದ್ದರು? ಏನಾಯಿತು? ಯಡಿಯೂರಪ್ಪ ಅವರ ಭಾಷಣ ಮುಗಿದ ನಂತರ ಎಲ್ಲರೂ ಖಾಲಿ ಆದರು. ಇದರ ಬಗ್ಗೆ ಯಾಕೆ ಮಾತನಾಡುವುದಿಲ್ಲ? ಅದನ್ನು ಅಸಹಕಾರ ಚಳವಳಿ ಎನ್ನುತ್ತೀರಾ’ ಎಂದು ಮರುಪ್ರಶ್ನೆ ಕೇಳಿದರು.

ಇಡಿ ವಿಚಾರಣೆಗೆ ಹಾಜರಾಗುತ್ತೀರಾ ಎಂದು ಕೇಳಿದಾಗ, ‘ಮೊದಲ ಬಾರಿಗೆ ಇ.ಡಿ ನೋಟಿಸ್ ಬಂದಿದೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರ್ಕಾರ, ನಾನು ಅಕ್ರಮವಾಗಿ ಆಸ್ತಿ ಗಳಿಸಿದ್ದೇನೆಂದು ಪ್ರಕರಣವನ್ನು ಸಿಬಿಐಗೆ ವಹಿಸಿತ್ತು. ಅದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಹಾಕಿದ್ದೇನೆ. ಇ.ಡಿಯವರು ಯಾವ ಕಾರಣಕ್ಕೆ ಕರೆದಿದ್ದಾರೊ ಗೊತ್ತಿಲ್ಲ. ದೆಹಲಿಗೆ ಹೋಗಿ ವಿಚಾರಣೆ ಎದುರಿಸುತ್ತೇನೆ. ಅಧಿವೇಶನ ಕಾರಣದಿಂದ ವಿಚಾರಣೆಯಿಂದ ವಿನಾಯಿತಿ ಕೇಳಿದರೆ ನಾನು ಪಲಾಯನ ಮಾಡಿದಂತಾಗುತ್ತದೆ’ ಎಂದರು.

ಶೋಭಾಯಾತ್ರೆ

ಚಿತ್ರದುರ್ಗದಲ್ಲಿ ಹಿಂದೂ ಮಹಾಗಣಪತಿಯ ವಿಸರ್ಜನಾ ಮಹೋತ್ಸವದ ಅಂಗವಾಗಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ಶನಿವಾರ ಹಮ್ಮಿಕೊಂಡಿದ್ದ ಶೋಭಾಯಾತ್ರೆಯಲ್ಲಿ ಮದಕರಿ ನಾಯಕನ ವೃತ್ತದ ಬಳಿ ಮೂರ್ತಿಗೆ ಕ್ರೇನ್ ಮೂಲಕ ಹೂವಿನ ಮಳೆ ಸುರಿಸಿದ ಭಕ್ತರು ಪ್ರಜಾವಾಣಿ ಚಿತ್ರ: ವಿ.ಚಂದ್ರಪ್ಪ

‘ಹೊಸದಾಗಿ ಕೆಪಿಎಸ್ ಆರಂಭಿಸುವುದಿಲ್ಲ’

ಬೆಳಗಾವಿ: ‘ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (ಕೆಪಿಎಸ್) ಆಂಗ್ಲ ಮಾಧ್ಯಮ ಶಿಕ್ಷಕರನ್ನು ನೇಮಿಸುವವರೆಗೆ ಹೊಸದಾಗಿ ಕೆಪಿಎಸ್, ಸರ್ಕಾರಿ ಇಂಗ್ಲಿಷ್ ಮಾಧ್ಯಮ ಶಾಲೆ ಆರಂಭಿಸುವುದಿಲ್ಲ’ ಎಂದು ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ ಸ್ಪಷ್ಟಪಡಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್ಯದಲ್ಲಿ 276 ಕೆಪಿಎಸ್‌ಗಳಿವೆ. ಮತ್ತೆ ಕೆಪಿಎಸ್, ಆಂಗ್ಲ ಮಾಧ್ಯಮ ಶಾಲೆ ಆರಂಭಿಸಿದರೆ ಭಾಷಾ ಶಿಕ್ಷಕರ ಕೊರತೆ ಎದುರಾಗುತ್ತದೆ. ಅಂತಹ ಪ್ರಯತ್ನಕ್ಕೆ ಮುಂದಾಗುವುದಿಲ್ಲ. ಶೀಘ್ರ ಆಂಗ್ಲ ಮಾಧ್ಯಮ ಶಿಕ್ಷಕರ ನೇಮಕಾತಿ ನಡೆಸುತ್ತೇವೆ. ಅಂಗನವಾಡಿ ಕೇಂದ್ರಗಳನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯೊಂದಿಗೆ ವಿಲೀನಗೊಳಿಸುತ್ತಿಲ್ಲ’ ಎಂದೂ ಹೇಳಿದರು.

ಪ್ರಶಾಂತ್ ಕಿಶೋರ್ ಬಿಜೆಪಿ ಪರ ಕೆಲಸ: ಆರೋಪ

ಪಟ್ನಾ(ಪಿಟಿಐ): ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅವರು ಬಿಜೆಪಿಗಾಗಿ ಕಾರ್ಯನಿರ್ವಹಿಸುತ್ತಿದ್ದು, ಬಿಹಾರದಲ್ಲಿ ಬಿಜೆಪಿಗೆ ಭದ್ರ ನೆಲೆ ಸ್ಥಾಪಿಸುವ ಪಿತೂರಿಯ ಭಾಗವಾಗಿ ಕೆಲಸ ಮಾಡುತ್ತಿದ್ದಾರೆ. ಇಂಥವರಿಗೆ ನಾವು ಯಾವುದೇ ‘ಆಫರ್’ ಕೊಟ್ಟಿಲ್ಲ ಎಂದು ಜೆಡಿಯು ಅಧ್ಯಕ್ಷ ರಾಜೀವ್ ರಂಜನ್ ಸಿಂಗ್ ಶನಿವಾರ ಆರೋಪಿಸಿದರು.

‘ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ‘ಆಫರ್’ ಅನ್ನು ತಿರಸ್ಕರಿಸಿದ್ದಾಗಿ ಕಿಶೋರ್ ಹೇಳಿಕೊಂಡಿದ್ದಾರೆ. ಆದರೆ ಚುನಾವಣಾ ಅಭಿಯಾನದ ವ್ಯವಸ್ಥಾಪಕ ರಾಜಕೀಯ ಕಾರ್ಯಕರ್ತನಾಗಲು ಸಾಧ್ಯವಿಲ್ಲ. ಆತ ವ್ಯವಹಾರಸ್ಥನಾಗಿದ್ದು ಮಾರುಕಟ್ಟೆಯ ತಂತ್ರಗಳನ್ನು ಅವಲಂಬಿಸಿರುತ್ತಾನೆ’ ಎಂದು ಸಿಂಗ್ ಪ್ರತಿಪಾದಿಸಿದರು.

‘ಪ್ರಶಾಂತ್ ಕಿಶೋರ್ ಬಿಜೆಪಿ ಪರ ಕೆಲಸ ಮಾಡುತ್ತಿರುವುದು ನಮಗೆ ಗೊತ್ತಿದೆ. ಇತ್ತೀಚೆಗೆ ಬಿಜೆಪಿಯ ಏಜೆಂಟ್ ಒಬ್ಬರು ಸಿಕ್ಕಿಬಿದ್ದಿದ್ದರು’ ಎಂದು ಜೆಡಿಯುನ ಮಾಜಿ ರಾಷ್ಟ್ರೀಯ ಅಧ್ಯಕ್ಷ ಆರ್‌ಸಿಪಿ ಸಿಂಗ್ ಅವರನ್ನು ಉಲ್ಲೇಖಿಸಿ ಅವರು ದೂರಿದರು.

ವಿದ್ಯಾರ್ಥಿಗಳ ರಕ್ಷಣೆಗೆ ಏರ್‌ಗನ್ ಹಿಡಿದ ವ್ಯಕ್ತಿ, ಪ್ರಕರಣ ದಾಖಲು

ಕಾಸರಗೋಡು: ಬೀದಿನಾಯಿಗಳ ಉಪಟಳದಿಂದ ಬೇಸತ್ತು ಶಾಲಾ ಮಕ್ಕಳಿಗೆ ರಕ್ಷಣೆ ನೀಡಲು ಜಿಲ್ಲೆಯ ಬೇಕಲದ ಹದಾದ್ ನಗರದ ಟಿ.ಜಮೀರ್ ಏರ್‌ಗನ್ ಹಿಡಿದು ಸಾಗಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಇತ್ತ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.

ಕೇರಳದಾದ್ಯಂತ ಬೀದಿನಾಯಿಗಳ ಹಾವಳಿ ಹೆಚ್ಚುತ್ತಿದೆ. ಏತನ್ಮಧ್ಯೆ, ಮದರಸಾಕ್ಕೆ ತೆರಳುತ್ತಿದ್ದ 13 ವಿದ್ಯಾರ್ಥಿಗಳಿಗೆ ಏರ್‌ಗನ್ ಹಿಡಿದು ಜಮೀರ್ ರಕ್ಷಣೆ ನೀಡುತ್ತಿರುವ ದೃಶ್ಯದ ವಿಡಿಯೊ ಸಾಕಷ್ಟು ಹಂಚಿಕೆಯಾಗಿತ್ತು.

ಕೆಲವು ದಿನಗಳ ಹಿಂದೆ ಮದರಸಾಕ್ಕೆ ತೆರಳುತ್ತಿದ್ದ 8 ವರ್ಷದ ಬಾಲಕನಿಗೆ ಬೀದಿ ನಾಯಿ ಕಚ್ಚಿದೆ ಎಂದು ವಿಡಿಯೊದಲ್ಲಿ ತಿಳಿಸಲಾಗಿದೆ. ವಿಡಿಯೊ ವೈರಲ್ ಆದ ಒಂದು ದಿನದ ಬಳಿಕ ಜಮೀರ್ ವಿರುದ್ಧ ಪೊಲೀಸರು ಸ್ವಯಂ ಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಏರ್‌ಗನ್‌ನಿಂದ ನಾಯಿಗಳನ್ನು ಕೊಲ್ಲಲಾಗದು. ಅದರಿಂದ ಹೊಡೆದು ಯಾವುದೇ ನಾಯಿಯನ್ನು ಗಾಯಗೊಳಿಸಿಲ್ಲ. ಕೇವಲ ಮಕ್ಕಳನ್ನು ರಕ್ಷಿಸುವ ದೃಷ್ಟಿಯಿಂದ ಏರ್‌ಗನ್ ಹಿಡಿದುಕೊಂಡು ಹೋಗಿದ್ದೇನೆ’ ಎಂದು ಜಮೀರ್ ಸ್ಪಷ್ಟನೆ ನೀಡಿದ್ದಾರೆ.

ವಿದ್ಯಾರ್ಥಿಗಳ ಗುಂಪಿನ ಮುಂದೆ ಏರ್‌ಗನ್ ಹಿಡಿದು ಸಾಗುತ್ತಿರುವ ಅವರು, ಯಾವುದೇ ನಾಯಿ ತಮ್ಮ ಮೇಲೆ ದಾಳಿ ನಡೆಸಿದರೆ ಶೂಟ್ ಮಾಡುವುದಾಗಿ ಹೇಳುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಮದರಸಾಕ್ಕೆ ತೆರಳುತ್ತಿದ್ದ ಮಕ್ಕಳಿಗೆ ಏರ್‌ಗನ್ ಹಿಡಿದು ಬೆಂಗಾವಲು ನೀಡುತ್ತಿರುವ ಟಿ.ಜಮೀರ್

ಶೇ 40 ಕಮಿಷನ್: ಎಂಜಿನಿಯರ್‌ಗಳ ಕಾರ್ಯವೈಖರಿಗೆ ತರಾಟೆ

ಮೈಸೂರು: ‘ಎಂಜಿನಿಯರ್‌ಗಳು ಸರಿಯಾಗಿ ಕೆಲಸ ನಿರ್ವಹಿಸಿದ್ದರೆ ಸರ್ಕಾರದ ವಿರುದ್ಧ ಶೇ 40ರಷ್ಟು ಕಮಿಷನ್ ದೂರು ಬರುತ್ತಿತ್ತಾ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಶನಿವಾರ ಪ್ರಶ್ನಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ತ್ರೈಮಾಸಿಕ ಕೆಡಿಪಿ ಸಭೆ ಅಧ್ಯಕ್ಷತೆ ವಹಿಸಿದ್ದ ಅವರು ‘ಎಂಜಿನಿಯರ್‌ಗಳು ಸರಿ ಇದ್ದಿದ್ದರೆ, ಗುತ್ತಿಗೆದಾರರು ದೂರು ಕೊಡುತ್ತಿರಲಿಲ್ಲ. ಸರ್ಕಾರದ ವಿರುದ್ಧ ಬಹಿರಂಗವಾಗಿ ಮಾತನಾಡುವ ಧೈರ್ಯವನ್ನೂ ಯಾರೂ ತೋರುತ್ತಿರಲಿಲ್ಲ. ನಿಮ್ಮಿಂದಾಗಿ ನಾವು ಮಾತು ಕೇಳಬೇಕಾಗಿದೆ’ ಎಂದು ತರಾಟೆಗೆ ತೆಗೆದುಕೊಂಡರು.

‘ಸರಿಯಾಗಿ ಅಂದಾಜು ಪಟ್ಟಿ ಸಿದ್ಧಪಡಿಸಿದ್ದರೆ, ಗುತ್ತಿಗೆದಾರರನ್ನು ಬಿಗಿಯಾಗಿಟ್ಟುಕೊಂಡು ಕೆಲಸ ತೆಗೆದಿದ್ದರೆ, ಫಾಲೋಅಪ್ ಮಾಡಿದ್ದಿದ್ದರೆ ಬಹಿರಂಗವಾಗಿ ಕಮಿಷನ್ ಆರೋಪ ಮಾಡುತ್ತಿದ್ದರೇ?’ ಸಣ್ಣನೀರಾವರಿ ಇಲಾಖೆಯವರು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ’ ಎಂದರು.

‘₹ 5 ಲಕ್ಷ ಪರಿಹಾರ ದೊರೆಯಲೆಂದು, ಮಳೆಯಿಂದ ಭಾಗಶಃ ಬಿದ್ದಿದ್ದ ಮನೆಗಳನ್ನು ಸಂಪೂರ್ಣ ಬೀಳಿಸುವಂತೆ ಕೆಲವು ಶಾಸಕರೇ ಹೇಳುತ್ತಿರುವುದು ಗಮನಕ್ಕೆ ಬಂದಿದೆ. ಇದು ಸರಿಯಲ್ಲ. ಅರ್ಹ ಫಲಾನುಭವಿಗಳಿಗೆ ಪರಿಹಾರ ತಪ್ಪದಂತೆ ನೋಡಿಕೊಳ್ಳಬೇಕು. ಪರಿಹಾರವು ಅನರ್ಹರ ಅಥವಾ ಅಕ್ರಮವಾಗಿ ಮನೆ ಬೀಳಿಸಿದವರ ಪಾಲಾಗದಂತೆ ನೋಡಿ ಕೊಳ್ಳಬೇಕು’ ಎಂದು ಸಚಿವರು ಸೂಚಿಸಿದರು.

ಆಕ್ಷೇಪ ವ್ಯಕ್ತಪಡಿಸಿದ ಶಾಸಕ ಕೆ.ಮಹದೇವು, ‘ಪರಿಹಾರಕ್ಕಾಗಿ ಯಾರೂ ಮನೆ ಬೀಳಿಸುವುದಿಲ್ಲ. ಮನೆ ಕಳೆದುಕೊಂಡ ಎಲ್ಲರಿಗೂ ಪರಿಹಾರ ನೀಡಬೇಕು’ ಎಂದು ಒತ್ತಾಯಿಸಿದರು.



ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1680)
ಸೋಯಾ (ರಿಫೈನ್ಡ್)	₹1170 (1170)
ಸೂರ್ಯಕಾಂತಿ (ರಿಫೈನ್ಡ್)	₹1340 (1340)
ಪಾಮೋಲಿನ್	₹930 (930)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹440
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹440

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹147
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹132

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹400-683
ದ್ವಿತಳಿ (ಬಿ.ವಿ)	₹280-878

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀ ಹೆಚ್. ರವೀಂದ್ರ ರೆಡ್ಡಿ

(ಜನನ: 16.09.1964 - ಮರಣ: 16.09.2022)

ಪ್ರೀತಿಯ ರವೀಂದ್ರ ರೆಡ್ಡಿ ರವರು ದಿ: 16.09.2022ರಂದು ದೈವಾಧೀನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ.

ಇಂದು 18.09.2022 ರಂದು ಬೆಳಗ್ಗೆ 6 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನ ಏರ್ಪಡಿಸಲಾಗಿದೆ. ಅಪರಾಹ್ನ 1.30 ಗಂಟೆಗೆ ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಲಾಗುತ್ತದೆ.

ಇಂತಿ: ದುಃಖತಪ್ತ ಹೊನ್ನಪ್ಪ ರೆಡ್ಡಿ ಮತ್ತು ಕುಟುಂಬ,
ನಂ. 48/3, ಹುಳಿಮಾವು, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು – 76. ಕರ್ನಾಟಕ.
ಮೊಬೈಲ್: 98457 33399.

ಬ್ಯಾಂಕ್‌ನಲ್ಲಿ ಸ್ಥಳೀಯ ಭಾಷೆಯಲ್ಲಿ ವ್ಯವಹಾರ: ನಿರ್ಮಲಾ ಸೂಚನೆ

ನವದೆಹಲಿ (ಪಿಟಿಐ): ಬ್ಯಾಂಕ್ ಶಾಖೆಯಲ್ಲಿ ಇರುವ ಸಿಬ್ಬಂದಿಯು ಗ್ರಾಹಕರೊಂದಿಗೆ ಸ್ಥಳೀಯ ಭಾಷೆಯಲ್ಲಿಯೇ ವ್ಯವಹರಿಸುತ್ತಿದ್ದಾರೆ ಎನ್ನುವುದನ್ನು ಖಾತರಿಪಡಿಸಿಕೊಳ್ಳುವಂತೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬ್ಯಾಂಕ್‌ಗಳಿಗೆ ಸೂಚನೆ ನೀಡಿದ್ದಾರೆ.

ಭಾರತೀಯ ಬ್ಯಾಂಕ್‌ಗಳ ಒಕ್ಕೂಟದ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ಬ್ಯಾಂಕ್‌ನ ಅಧಿಕಾರಿಗಳು ಹಿಂದಿಯಂತಹ ಹೊಸ ಭಾಷೆಯನ್ನು ಏಕೆ ಕಲಿಯಬಾರದು ಎಂದು ಪ್ರಶ್ನಿಸಿದ್ದಾರೆ. 'ಬ್ಯಾಂಕ್‌ಗಳು ನೇಮಕಾತಿ ಮಾಡಿಕೊಳ್ಳುವಾಗ ಹೆಚ್ಚು ವಿವೇಚನೆಯಿಂದ ವರ್ತಿಸಬೇಕು. ಸ್ಥಳೀಯ ಭಾಷೆ ಮಾತನಾಡಲು ಬರದೇ ಇರುವವರನ್ನು ಶಾಖೆಗಳಲ್ಲಿ ಗ್ರಾಹಕರೊಂದಿಗೆ ವ್ಯವಹರಿಸುವ ಕೆಲಸಗಳಿಗೆ ನಿಯೋಜಿಸಬಾರದು, ಅಂತಹ ಸಿಬ್ಬಂದಿಗೆ ಬೇರೆ ಕೆಲಸ ನೀಡಬೇಕು' ಎಂದಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಪುತ್ತೂರು	
ಕೋಕ	11000-26000
ಹೊಸತು	34500-47500
ಕಾರ್ಕಳ	
ಹೊಸತು	40000-47500
ಸಿದ್ದಾಪುರ	
ಬಿಳಿಗೋಟು	29699-34389
ಚಾಲಿ	38391-43309
ಕೋಕ	26669-34339
ಕೆಂಪುಗೋಟು	32111-37199
ರಾಶಿ	49799-51399
ತಟ್ಟಿಬೆಟ್ಟೆ	39199-48509
ಶಿರಸಿ	
ಬೆಟ್ಟೆ	27800-47899
ಬಿಳಿಗೋಟು	28322-37199
ಚಾಲಿ	38993-44271
ಕೆಂಪುಗೋಟು	27000-39899
ರಾಶಿ	48699-52009

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15700	15850	216.40 ಸೆಂಟ್ಸ್
ಎಸಿ	9100	8400	8700	
ಆರ್‌ಪಿ	9750	9800	9800	ಲಂಡನ್
ಆರ್‌ಸಿ	4800	4500	4725	2226 ಡಾಲರ್ಸ್

ಹಣಕಾಸು ಸಚಿವಾಲಯದ ಆರ್ಥಿಕ ಪರಿಶೀಲನಾ ವರದಿ

ಧಾನ್ಯ ದಾಸ್ತಾನು: ಎಚ್ಚರಿಕೆ ಅಗತ್ಯ

ನವದೆಹಲಿ (ಪಿಟಿಐ): ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಪ್ರಮಾಣ ಕಡಿಮೆ ಆಗಿರುವುದರಿಂದ ಕೃಷಿ ಉತ್ಪನ್ನಗಳ ದಾಸ್ತಾನು ಮತ್ತು ಬೆಲೆಯನ್ನು ಬಹಳ ಎಚ್ಚರಿಕೆಯಿಂದ ನಿರ್ವಹಣೆ ಮಾಡುವ ಅಗತ್ಯ ಇದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಶನಿವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಹೇಳಲಾಗಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಸರಕುಗಳ ದರ ಇಳಿಕೆ ಮತ್ತು ಪೂರೈಕೆ ವ್ಯವಸ್ಥೆಯಲ್ಲಿನ ಸುಧಾರಣೆ ಕಂಡುಬಂದಿದೆ. ಇವುಗಳ ಜೊತೆಗೆ ಕೇಂದ್ರ ಸರ್ಕಾರದ ಪೂರ್ವಭಾವಿ ಕ್ರಮಗಳು ಹಾಗೂ ಹಣಕಾಸು ನೀತಿ ಬಿಗಿಗೊಂಡಿರುವುದರಿಂದ ಹಣದುಬ್ಬರವು ಇಳಿಕೆ ಆಗುತ್ತಿರುವಂತೆ ಕಾಣುತ್ತಿದೆ. ಆದರೆ, ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಪ್ರಮಾಣ ಕಡಿಮೆ ಆಗಿರುವುದರಿಂದ ಹಣದುಬ್ಬರದ ವಿಷಯದಲ್ಲಿ ನೆಮ್ಮದಿಯಿಂದ ಇರುವಂತೆ ಇಲ್ಲ ಎಂದು ಸೆಪ್ಟೆಂಬರ್ ತಿಂಗಳ ಆರ್ಥಿಕ ಪರಿಶೀಲನಾ ವರದಿಯಲ್ಲಿ ತಿಳಿಸಲಾಗಿದೆ.

ದೇಶದಲ್ಲಿ ಉತ್ಪಾದನೆ ಆಗುತ್ತಿರುವ ಅಕ್ಕಿಯಲ್ಲಿ ಮುಂಗಾರು ಅವಧಿಯಲ್ಲಿ ಉತ್ಪಾದನೆ ಆಗುವ ಪ್ರಮಾಣವೇ ಶೇ 80ರಷ್ಟು ಇದೆ. ಆದರೆ, ಭತ್ತ ಬಿತ್ತನೆ ಪ್ರದೇಶದಲ್ಲಿ ಇಳಿಕೆ ಆಗಿರುವುದರಿಂದ ಈ ಬಾರಿ ಅಕ್ಕಿ ಉತ್ಪಾದನೆ 70 ಲಕ್ಷ ಟನ್‌ಗಳಷ್ಟು ಕಡಿಮೆ ಆಗುವ ಅಂದಾಜು ಮಾಡಲಾಗಿದೆ. ಗ್ರಾಹಕರ ಖರೀದಿ ಸಾಮರ್ಥ್ಯ ಸುಧಾರಿಸಿದ್ದು, ಉದ್ಯೋಗದಲ್ಲಿ ಏರಿಕೆ ಕಂಡುಬರುತ್ತಿದೆ. ಇದರಿಂದಾಗಿ ಮುಂಬರುವ ತಿಂಗಳುಗಳಲ್ಲಿ ಆರ್ಥಿಕತೆಯು ಬೆಳವಣಿಗೆಯನ್ನು ಕಾಯ್ದುಕೊಳ್ಳಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಸರ್ಕಾರ ಮಾಡುತ್ತಿರುವ ವೆಚ್ಚವು ಶೇ 35ರಷ್ಟು ಏರಿಕೆ ಕಂಡಿದೆ. ಇದರಿಂದಾಗಿ ದೇಶದಲ್ಲಿ ವಾಣಿಜ್ಯ ಚಟುವಟಿಕೆಗಳು ಹೆಚ್ಚಾಗಿವೆ. ತೆರಿಗೆ ವರಮಾನ ಸಂಗ್ರಹವೂ ಉತ್ತಮವಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮುಖ್ಯಾಂಶಗಳು

- ಗ್ರಾಹಕರ ಖರೀದಿ ಸಾಮರ್ಥ್ಯದಲ್ಲಿ ಸುಧಾರಣೆ
- ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಸರ್ಕಾರದ ವೆಚ್ಚ ಶೇ 35ರಷ್ಟು ಏರಿಕೆ

ಭತ್ತ ಬಿತ್ತನೆ ಪ್ರದೇಶದಲ್ಲಿ ಇಳಿಕೆ

ಪ್ರಸಕ್ತ ಮುಂಗಾರು ಹಂಗಾಮು ಅವಧಿಯಲ್ಲಿ ಈವರೆಗೆ 399 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬಿತ್ತನೆ ಆಗಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 4.52ರಷ್ಟು ಇಳಿಕೆ ಆಗಿದೆ.

ಕೃಷಿ ಸಚಿವಾಲಯದ ಮಾಹಿತಿಯ ಪ್ರಕಾರ, ಹಿಂದಿನ ವರ್ಷದ ಇದೇ ಅವಧಿಯಲ್ಲಿ 417.93 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬಿತ್ತನೆ ಆಗಿತ್ತು.

ಮುಂಗಾರು ಹಂಗಾಮಿನಲ್ಲಿ ಈವರೆಗೆ 1093 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಆಹಾರ ಧಾನ್ಯಗಳ ಬಿತ್ತನೆ ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 1,102 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ನಡೆದಿತ್ತು.

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-15000

ಮುಂಬೈ ಧಾರಣೆ

ಶೇಂಗಾ

17–9-2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11000-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1690)
ಒಂದು ವಾರದ ಡೆಲಿವರಿ	1685 (1685)
ಸೋಯಾ ಕಚ್ಚಾ	1127 (1120)
ಪಾಮ್ ವಾರದ ಡೆಲಿವರಿ	928 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 49,300 (49,100)

ಬೆಳ್ಳಿ ಕೆ.ಜಿ 56,450 (55,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಜಾನ್ಸನ್ ಬೇಬಿ ಪೌಡರ್ ತಯಾರಿಕಾ ಪರವಾನಗಿ ರದ್ದು

ಮುಂಬೈ (ಪಿಟಿಐ): ಜಾನ್ಸನ್ ಆ್ಯಂಡ್ ಜಾನ್ಸನ್ ಪ್ರೈವೇಟ್ ಲಿಮಿಟೆಡ್‌ನ ಬೇಬಿ ಪೌಡರ್ ತಯಾರಿಕೆಯ ಪರವಾನಗಿಯನ್ನು ಮಹಾರಾಷ್ಟ್ರದ ಆಹಾರ ಮತ್ತು ಔಷಧ ಆಡಳಿತವು (ಎಫ್‌ಡಿಎ) ರದ್ದು ಮಾಡಿದೆ.

ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಈ ಕ್ರಮ ಕೈಗೊಂಡಿದೆ. ಮುಂಬೈನ ಮುಲುಂಡ್‌ನಲ್ಲಿ ಕಂಪನಿಯು ತಯಾರಿಕಾ ಘಟಕ ಹೊಂದಿದೆ.

ಕಂಪನಿಯ ಬೇಬಿ ಪೌಡರ್, ನವಜಾತ ಶಿಶುಗಳ ಚರ್ಮದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂದು ಎಫ್‌ಡಿಎ ಪ್ರಕಟಣೆಯಲ್ಲಿ ತಿಳಿಸಿದೆ. ಕೋಲ್ಕತ್ತ ಮೂಲದ ಸೆಂಟ್ರಲ್ ಡ್ರಗ್ಸ್ ಲ್ಯಾಬೊರೇಟರೀಸ್ ವರದಿಯನ್ನು ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅದು ಹೇಳಿದೆ.

ಗುಣಮಟ್ಟದ ಪರೀಕ್ಷೆ ನಡೆಸಲು ಪುಣೆ ಮತ್ತು ನಾಸಿಕ್‌ನಿಂದ ಜಾನ್ಸನ್ ಬೇಬಿ ಪೌಡರ್‌ನ ಮಾದರಿಗಳನ್ನು ತರಿಸಿಕೊಳ್ಳಲಾಗಿತ್ತು. ಸರ್ಕಾರದ ಔಷಧ ಪರೀಕ್ಷಕರ ಪ್ರಕಾರ, ಬೇಬಿ ಪೌಡರ್‌ನ ಮಾದರಿಗಳು, ನವಜಾತ ಶಿಶುಗಳ ಚರ್ಮಕ್ಕೆ ಹೊಂದಿಕೆ ಆಗುವ ಗುಣಮಟ್ಟವನ್ನು ಹೊಂದಿಲ್ಲ. ಹೀಗಾಗಿ, ಡ್ರಗ್ಸ್ ಕಾಸ್ಮೆಟಿಕ್ಸ್ ಆ್ಯಕ್ಟ್ –1940 ಮತ್ತು ನಿಯಮಗಳ ಪ್ರಕಾರ, ಕಂಪನಿಗೆ ಷೋಕಾಸ್ ನೋಟಿಸ್ ನೀಡಲಾಗಿದ್ದು, ಮಾರುಕಟ್ಟೆಯಲ್ಲಿ ಇರುವ ಬೇಬಿ ಪೌಡರ್‌ಗಳ ದಾಸ್ತಾನನ್ನು ಹಿಂದಕ್ಕೆ ತರಿಸಿಕೊಳ್ಳುವಂತೆ ಸೂಚನೆಯನ್ನೂ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸರ್ಕಾರದ ಔಷಧ ಪರೀಕ್ಷಕರ ವರದಿಯಲ್ಲಿರುವ ಅಂಶಗಳನ್ನು ಕಂಪನಿ ಅಲ್ಲಗಳೆದಿದ್ದು, ಕೋರ್ಟ್ ಮೆಟ್ಟಿಲೇರಿದೆ. ವರದಿಯನ್ನು ಸೆಂಟ್ರಲ್ ಡ್ರಗ್ಸ್ ಲ್ಯಾಬೊರೇಟರಿಗೆ ಕಳುಹಿಸುವುದಾಗಿ ಹೇಳಿದೆ ಎಂದು ಎಫ್‌ಡಿಎ ಮಾಹಿತಿ ನೀಡಿದೆ.

ಎಫ್‌ಐಐ: ₹4,565 ಕೋಟಿ ಹಿಂತೆಗೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಆರ್ಥಿಕ ಹಿಂಜರಿತದ ಭೀತಿ ಮತ್ತು ಬಡ್ಡಿದರ ಇನ್ನಷ್ಟು ಹೆಚ್ಚಾಗುವ ಆತಂಕದಿಂದಾಗಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಪಿಐ) ಬಂಡವಾಳ ಹಿಂತೆಗೆತಕ್ಕೆ ಗಮನ ಹರಿಸಿದ್ದಾರೆ.

ಶುಕ್ರವಾರಕ್ಕೆ ಕೊನೆಗೊಂಡ ವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,565 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಅದಕ್ಕೂ ಮೊದಲು, ಸೆಪ್ಟೆಂಬರ್ 1 ರಿಂದ 9ರವರೆಗಿನ ವಹಿವಾಟು ಅವಧಿಯಲ್ಲಿ ಒಟ್ಟಾರೆ ₹7,450 ಕೋಟಿ ಮೌಲ್ಯದ ಷೇರುಗಳನ್ನು ಹೂಡಿಕೆದಾರರು ಖರೀದಿಸಿದ್ದರು.

ವಾರದ ವಹಿವಾಟು ಇಳಿಕೆ: ವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆಯ ಸೂಚ್ಯಂಕ 952 ಅಂಶ ಇಳಿಕೆ ಕಂಡಿದೆ. ಇದರಿಂದಾಗಿ ಷೇರುಪೇಟೆಯ ಬಂಡವಾಳ ಮೌಲ್ಯವು ₹3.35 ಲಕ್ಷ ಕೋಟಿಯಷ್ಟು ಕರಗಿದ್ದು, ಒಟ್ಟು ಮೌಲ್ಯವು ₹279.68 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ಲೈಂಗಿಕ ಕಿರುಕುಳ ಸಂತ್ರಸ್ತೆ ಸಾವು

ಲಖೀಂಪುರ ಖೇರಿ ಉದ್ವಿಗ್ನ

ಲಖೀಂಪುರ ಖೇರಿ, ಉತ್ತರ ಪ್ರದೇಶ (ಪಿಟಿಐ): ಲೈಂಗಿಕ ದೌರ್ಜನ್ಯದ ಪ್ರಯತ್ನದ ವೇಳೆ ಇಬ್ಬರು ಯುವಕರು ಹರಿತವಾದ ಆಯುಧಗಳಿಂದ ಹಲ್ಲೆ ನಡೆಸಿದ ಕಾರಣ ಗಾಯಗೊಂಡಿದ್ದ ಇಪ್ಪತ್ತು ವರ್ಷದ ಮಹಿಳೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಗ್ರಾಮದಲ್ಲಿ ಕೋಮು ಉದ್ವಿಗ್ನ ಪರಿಸ್ಥಿತಿ ಉಂಟಾಗಿದ್ದು, ಸಂತ್ರಸ್ತೆ ಮೇಲೆ ಇಬ್ಬರು ಮುಸ್ಲಿಂ ಯುವಕರು ಹರಿತವಾದ ಆಯುಧಗಳಿಂದ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಜಿಲ್ಲಾ ಕೇಂದ್ರದಿಂದ ಸುಮಾರು 50 ಕಿಮೀ ದೂರದಲ್ಲಿರುವ ಭೀರಾ ಪ್ರದೇಶದ ತನ್ನ ಮನೆಯಲ್ಲಿ ಸಂತ್ರಸ್ತ ಮಹಿಳೆ ಶುಕ್ರವಾರ ಸಾವಿಗೀಡಾಗಿದ್ದಾಳೆ.

ಮಹಿಳೆಯ ಕುಟುಂಬ ಸದಸ್ಯರು ಶನಿವಾರ ಸಂಜೆ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಿದರು. ಮರಣೋತ್ತರ ಪರೀಕ್ಷೆಯ ವರದಿಗಾಗಿ ಕಾಯಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಹಿಳೆ ಸಾವಿನ ಬಳಿಕ, ಪೊಲೀಸರು ಮೂಲ ಎಫ್‌ಐಆರ್‌ಗೆ ಶಿಕ್ಷಾರ್ಹ ನರಹತ್ಯೆಯ ಆರೋಪಗಳನ್ನು ಸೇರಿಸಿದ್ದಾರೆ. ಮಹಿಳೆಗೆ ಕಿರುಕುಳ ನೀಡಲಾಗಿದೆ ಎಂದು ಆರೋಪಿಸಿ ಕುಟುಂಬದವರು ನೀಡಿದ ದೂರಿಗೆ ಮನ್ನಣೆ ನೀಡದ ಪೊಲೀಸ್ ಔಟ್‌ಪೋಸ್ಟ್ ಉಸ್ತುವಾರಿಯನ್ನು ಅಮಾನತು ಮಾಡಲಾಗಿದೆ.

'ಮಹಿಳೆ ಸಾವಿಗೆ ಸಂಬಂಧಿಸಿದಂತೆ ಪೊಲೀಸ್ ತನಿಖೆ ನಡೆಸಲಾಗಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಿ, ಪ್ರಕರಣ ದಾಖಲಿಸಲಾಗಿದೆ' ಎಂದು ಖೇರಿ ಪೊಲೀಸ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕುಟುಂಬ ಸದಸ್ಯರು ಆರೋಪಿಸಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ನೋಡಿದ ನಂತರ ಎಫ್‌ಐಆರ್‌ನಲ್ಲಿನ 'ಅಸ್ಪಷ್ಟತೆ' ಬಗ್ಗೆ ಗೊತ್ತಾಗಿದೆ.

ಪ್ರಕರಣದ ತನಿಖೆಯನ್ನು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕುಮಾರ್ ಸಿಂಗ್ ಅವರಿಗೆ ವಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತೇಜಸ್ವಿ ಜಾಮೀನು ರದ್ದತಿಗೆ ಮನವಿ

ನವದೆಹಲಿ (ಪಿಟಿಐ): ಭಾರತೀಯ ರೈಲ್ವೆ ಕೇಟರಿಂಗ್ ಹಾಗೂ ಪ್ರವಾಸೋದ್ಯಮ ನಿಗಮಕ್ಕೆ (ಐಆರ್‌ಸಿಟಿಸಿ) ಸಂಬಂಧಿಸಿದ ಹಗರಣದಲ್ಲಿ ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್‌ಗೆ ನೀಡಿರುವ ಜಾಮೀನು ರದ್ದುಗೊಳಿಸುವಂತೆ ಕೋರಿ ಸಿಬಿಐ ಶನಿವಾರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ.

ತನಿಖಾ ಸಂಸ್ಥೆ ಸಲ್ಲಿಸಿದ ಅರ್ಜಿ ಆಧರಿಸಿ ವಿಶೇಷ ನ್ಯಾಯಾಧೀಶರಾದ ಗೀತಾಂಜಲಿ ಗೋಯಲ್ ಅವರು ಯಾದವ್ ಅವರಿಗೆ ನೋಟಿಸ್ ಜಾರಿಗೊಳಿಸಿ, ಸೆ.28ರೊಳಗೆ ಉತ್ತರ ನೀಡುವಂತೆ ಸೂಚಿಸಿದ್ದಾರೆ.

ಜಾರ್ಖಂಡ್‌ನ ಹಜಾರಿಬಾಗ್ ಜಿಲ್ಲೆಯಲ್ಲಿ ಶನಿವಾರ ಬಸ್ ಸೇತುವೆಯಿಂದ ಉರುಳಿ ಬಿದ್ದಿದ್ದು, ಘಟನೆಯಲ್ಲಿ ಆರು ಜನರು ಮೃತಪಟ್ಟಿದ್ದಾರೆ –ಪಿಟಿಐ ಚಿತ್ರ

ಮೂರು ರಾಜಧಾನಿ ವಿವಾದ 'ಸುಪ್ರೀಂ' ಮೊರೆ ಹೋದ ಆಂಧ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ಸರ್ಕಾರವು ಅಮರಾವತಿ ನಗರವನ್ನಷ್ಟೇ ರಾಜಧಾನಿಯನ್ನಾಗಿ ಅಭಿವೃದ್ಧಿಪಡಿಸಬೇಕು ಎಂದು ಹೈಕೋರ್ಟ್ ಮಾರ್ಚ್ 3ರಂದು ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಆಂಧ್ರಪ್ರದೇಶ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ವೈ.ಎಸ್.ಜಗನ್‌ಮೋಹನ್ ರೆಡ್ಡಿ ಸರ್ಕಾರವು ವಿಶಾಖಪಟ್ಟಣವನ್ನು ಆಡಳಿತಾತ್ಮಕ ರಾಜಧಾನಿ, ಕರ್ನೂಲನ್ನು ನ್ಯಾಯಾಂಗದ ರಾಜಧಾನಿ ಹಾಗೂ ಅಮರಾವತಿಯನ್ನು ಶಾಸಕಾಂಗದ ರಾಜಧಾನಿಯನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿತ್ತು. ಇದನ್ನು ಹೈಕೋರ್ಟ್ ತಿರಸ್ಕರಿಸಿತ್ತು.

ರಾಜ್ಯ ಸರ್ಕಾರದ ಪರವಾಗಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ವಕೀಲ ಮೆಹಫೂಜ್ ನಜ್ಕಿ ಅವರು,'ರಾಜಧಾನಿಯನ್ನು ನಿರ್ಧರಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ ಎಂದು ಹೈಕೋರ್ಟ್ ಹೇಳಿದೆ. ಇದು ಸಂವಿಧಾನದ ಮೂಲ ರಚನೆಯ ಉಲ್ಲಂಘನೆಯಾಗಿದೆ' ಎಂದು ಹೇಳಿದ್ದಾರೆ.

'ಸಂವಿಧಾನದ ಸಂಯುಕ್ತ ವ್ಯವಸ್ಥೆಯಡಿ ಪ್ರತಿಯೊಂದು ರಾಜ್ಯಕ್ಕೂ ತನ್ನ ರಾಜಧಾನಿಯನ್ನು ಎಲ್ಲಿ ಸ್ಥಾಪಿಸಬೇಕೆಂಬ ಅಂತರ್ಗತ ಹಕ್ಕು ಇರುತ್ತದೆ' ಎಂದು ಅರ್ಜಿಯಲ್ಲಿ ಹೇಳಿದ್ದಾರೆ.

ರಾಜಧಾನಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ ಹಾಗೂ ಎಪಿ ಡೀಸೆಂಟ್ರಲೈಸೇಷನ್ ಆ್ಯಂಡ್ ಇನ್‌ಕ್ಲೂಸಿವ್ ಡೆವಲಪ್‌ಮೆಂಟ್ ಆಫ್ ಆಲ್ ರೀಜನ್ಸ್ ಕಾಯ್ದೆ ರದ್ದುಪಡಿಸಿದ್ದನ್ನು ಪ್ರಶ್ನಿಸಿ ರೈತರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಈಶಾನ್ಯ ಭಾಗದಲ್ಲಿ ಉಕ್ರೇನ್ ಪಡೆಗಳ ಮೇಲುಗೈ

ಸೇನಾ ಬಲ ಹೆಚ್ಚಳಕ್ಕೆ ಮುಂದಾದ ರಷ್ಯಾ

ಕೀವ್ (ಎಪಿ): ದೇಶದ ಈಶಾನ್ಯ ಭಾಗದಲ್ಲಿ ಉಕ್ರೇನ್ ಪಡೆಗಳು ಮೇಲುಗೈ ಸಾಧಿಸುತ್ತಿವೆ. ಹೀಗಾಗಿ, ಉಕ್ರೇನ್‌ಗೆ ಪ್ರತಿರೋಧ ಒಡ್ಡುವ ಸಲುವಾಗಿ ತನ್ನ ಸೇನಾ ಬಲವನ್ನು ಹೆಚ್ಚಿಸಬೇಕಾದ ಒತ್ತಡದಲ್ಲಿ ರಷ್ಯಾ ಇದೆ.

ಬ್ರಿಟನ್‌ನ ರಕ್ಷಣಾ ಸಚಿವಾಲಯ ಶನಿವಾರ ಈ ಕುರಿತು ಮಾಹಿತಿ ನೀಡಿದೆ. ಹಾರ್ಕಿವ್‌ನಿಂದ 150 ಕಿ.ಮೀ. ದೂರದಲ್ಲಿರುವ ಓಸ್ಕಿಲ್ ನದಿ ಹಾಗೂ ಸ್ವಟೋವ್ ನಡುವಿನ ಪ್ರದೇಶದಲ್ಲಿ ಉಭಯ ದೇಶಗಳು ತಮ್ಮ ಪಡೆಗಳನ್ನು ನಿಯೋಜಿಸಿವೆ ಎಂದು ಸಚಿವಾಲಯ ಹೇಳಿದೆ. ರಷ್ಯಾ ಗಡಿಗೆ ಹೊಂದಿಕೊಂಡಿರುವ, ಹಾರ್ಕಿವ್‌ನ ಈಶಾನ್ಯ ಭಾಗದಲ್ಲಿ ಉಕ್ರೇನ್ ಪಡೆಗಳು ಬಹುದೊಡ್ಡ ಭೂಭಾಗವನ್ನು ಮರಳಿ ವಶಪಡಿಸಿಕೊಂಡ ಬೆನ್ನಲ್ಲೇ ಈ ಬೆಳವಣಿಗೆ ನಡೆಯುತ್ತಿದೆ ಎಂದು ರಕ್ಷಣಾ ತಜ್ಞರು ವಿಶ್ಲೇಷಿಸಿದ್ದಾರೆ.

ಓಸ್ಕಿಲ್ ನದಿ ದಾಟಿ ಮುನ್ನುಗ್ಗುತ್ತಿರುವ ಉಕ್ರೇನ್ ಪಡೆಗಳು, ರಷ್ಯಾ ಸೇನೆಗೆ ತೀವ್ರ ಪ್ರತಿಯೋಧ ಒಡ್ಡುತ್ತಿವೆ. ಒಂದು ವೇಳೆ ಉಕ್ರೇನ್ ಯೋಧರು ಆಕ್ರಮಣಕಾರಿ ಕಾರ್ಯಾಚರಣೆಯನ್ನು ಮತ್ತೆ ಆರಂಭಿಸಿದಲ್ಲಿ, ರಷ್ಯಾ ಪಡೆಗಳು ಅವರಿಗೆ ಪ್ರತಿರೋಧ ಒಡ್ಡುವಷ್ಟು ಶಕ್ತವಾಗಿಲ್ಲ ಎಂದು ವಾಷಿಂಗ್ಟನ್ ಮೂಲದ ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ವಾರ್ ಹೇಳಿದೆ.

ಉಗ್ರ ಸಾಜಿದ್ ಕಪ್ಪುಪಟ್ಟಿಗೆ: ಭಾರತ, ಅಮೆರಿಕದ ಪ್ರಸ್ತಾವಕ್ಕೆ ಚೀನಾ ತಡೆ

ವಿಶ್ವಸಂಸ್ಥೆ (ಪಿಟಿಐ): 2008ರ ಮುಂಬೈ ದಾಳಿಯ ಪ್ರಮುಖ ಆರೋಪಿ, ಪಾಕಿಸ್ತಾನದ ಲಷ್ಕರ್–ಎ–ತಯಬಾ (ಎಲ್‌ಇಟಿ) ಸಂಘಟನೆಯ ಉಗ್ರ ಸಾಜಿದ್ ಮಿರ್‌ನನ್ನು ಕಪ್ಪುಪಟ್ಟಿಗೆ ಸೇರಿಸುವ ಭಾರತ ಮತ್ತು ಅಮೆರಿಕದ ಪ್ರಸ್ತಾಪಕ್ಕೆ ಚೀನಾ ತಡೆಯೊಡ್ಡಿದೆ.

ನಾಲ್ಕು ತಿಂಗಳ ಅವಧಿಯಲ್ಲಿ ಮೂರನೇ ಬಾರಿ ಚೀನಾ ಈ ರೀತಿಯಾಗಿ ತಡೆಯೊಡ್ಡಿದೆ.

ಮಿರ್‌ನನ್ನು ಜಾಗತಿಕ ಭಯೋತ್ಪಾದಕ ಎಂಬುದಾಗಿ ಘೋಷಿಸಬೇಕು ಮತ್ತು ಆತನಿಗೆ ಸೇರಿದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಅಮೆರಿಕ ಪ್ರಸ್ತಾವ ಮಂಡಿಸಿತ್ತು. ಈ ಪ್ರಸ್ತಾವಕ್ಕೆ ಭಾರತವೂ ಬೆಂಬಲ ವ್ಯಕ್ತಪಡಿಸಿತ್ತು. ಆದರೆ, ಇತ್ತೀಚೆಗೆ ಚೀನಾ ಈ ಪ್ರಸ್ತಾಪಕ್ಕೆ ತಡೆಯೊಡ್ಡಿದೆ ಎಂದು ತಿಳಿದು ಬಂದಿದೆ.

ಮಿರ್ ಭಾರತಕ್ಕೆ ಬೇಕಾಗಿರುವ ಭಯೋತ್ಪಾದಕರಲ್ಲಿ ಒಬ್ಬನಾಗಿದ್ದು, ಮುಂಬೈ ಮೇಲಿನ ಭಯೋತ್ಪಾದನಾ ದಾಳಿಯ ಪ್ರಮುಖ ಸಂಚುಕೋರನಾಗಿದ್ದಾನೆ. ಅಮೆರಿಕವು ಈತನ ತಲೆಗೆ ₹ 40 ಲಕ್ಷ ನಗದು ಬಹುಮಾನ ಘೋಷಿಸಿದೆ.

ಲಂಡನ್‌ಗೆ ತೆರಳಿದ ರಾಷ್ಟ್ರಪತಿ ಮುರ್ಮು

ನವದೆಹಲಿ (ಪಿಟಿಐ): ಬ್ರಿಟನ್ ರಾಣಿ 2ನೇ ಎಲಿಜಬೆತ್ ಅವರ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಲಂಡನ್ನಿಗೆ ತೆರಳಿದರು.

'ರಾಣಿ ಎರಡನೇ ಎಲಿಜಬೆತ್ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳಲು ಮತ್ತು ಭಾರತ ಸರ್ಕಾರದ ಪರವಾಗಿ ಸಂತಾಪ ಸೂಚಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಲಂಡನ್‌ಗೆ ಪ್ರಯಾಣ ಬೆಳೆಸಿದರು' ಎಂದು ರಾಷ್ಟ್ರಪತಿ ಭವನ ಟ್ವೀಟ್ ಮಾಡಿದೆ.

ರಾಣಿ ಎಲಿಜಬೆತ್ ಸೆ.8ರಂದು ಮೃತಪಟ್ಟರು.

ನೇಪಾಳದಲ್ಲಿ ಭೂಕುಸಿತ: 17 ಸಾವು

ಕಠ್ಮಂಡು (ಪಿಟಿಐ): ಭಾರಿ ಮಳೆಯಿಂದಾಗಿ ನೇಪಾಳದ ಪಶ್ಚಿಮ ಭಾಗದಲ್ಲಿ ಶನಿವಾರ ಭೂಕುಸಿತ ಉಂಟಾಗಿ 17 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುದೂರ್ ಪಶ್ಚಿಮ್ ಪ್ರಾಂತ್ಯದ ಅಛಾಮ್ ಜಿಲ್ಲೆಯ ವಿವಿಧ ಭಾಗಗಳಲ್ಲಿ ಭೂಕುಸಿತ ಸಂಭವಿಸಿದೆ. ಕಳೆದ ಕೆಲ ದಿನಗಳಿಂದ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದ ಉಂಟಾದ ಪ್ರವಾಹದಿಂದ ಭಾರಿ ಹಾನಿಯಾಗಿದೆ.

'ಭೂಕುಸಿತದಿಂದ 17 ಜನರು ಮೃತಪಟ್ಟಿರುವುದು ಖಚಿತವಾಗಿದೆ. ಘಟನೆಯಲ್ಲಿ ಗಾಯಗೊಂಡಿರುವ 11 ಮಂದಿಯನ್ನು ಸುರ್ಖೇತ್ ಜಿಲ್ಲೆಯ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಮೂವರು ನಾಪತ್ತೆಯಾಗಿದ್ದಾರೆ' ಎಂದು ಹಂಗಾಮಿ ಮುಖ್ಯ ಜಿಲ್ಲಾ ಅಧಿಕಾರಿ ದೀಪೇಶ್ ರಿಜಾಲ್ ತಿಳಿಸಿದ್ದಾರೆ.

ನಾಪತ್ತೆಯಾದವರ ಪತ್ತೆಗೆ ಶೋಧ ಕಾರ್ಯಾಚರಣೆ ಮುಂದುವರಿದಿದೆ. ಗಾಯಾಳುಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಎಂದು ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

REQUIRED SENIOR accountant aged 40 for manufacturing facility. Should reside around Yeshwanthpur/ Peenya.Email - cofplanter@gmail.com. 9480237094

Manager

MANAGER/ACCOUNTANT REQUIRED to manage 50 Acres farm land . Free accommodation . salary 15000 Hoasdurgha chitradurgha 9108270569

Marketing & Sales

WANTED MARKETING Person for Automotive Inverter Batteries in Bangalore, Salary: 15000+. Contact: 9880163772

Multiple Vacancy

LOOKING FOR ASM, SR & SO for a potato chips manufacturing company. Should speak one of the local languages. Attractive Packages Offered. Multiple Positions Open. Call: 9045936322/ 6364069184 Email: techorganea@gmail.com

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Wanted

ಕೆಲಸಕ್ಕೆ ಬೇಕಾಗಿದ್ದಾರೆ S.S.L.C ಮೇಲ್ಪಟ್ಟ ಯುವಕರು, ಗೃಹಿಣಿಯರು,ಕೇಂದ್ರ ಮತ್ತು ರಾಜ್ಯ ಸರ್ಕಾರಿನೌಕರರು ನಿವೃತ್ತಿಹೊಂದಿದ ಹಿರಿಯ ನಾಗರೀಕರು ಬೇಕಾಗಿದ್ದಾರೆ. ಇಂದೇ ಸಂಪರ್ಕಿಸಿ: 9663987757 ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ.

ಬೆಂಗಳೂರಿನಲ್ಲಿ ವಯಸ್ಸಾದವರನ್ನು ರೋಗಿಗಳನ್ನು ನೋಡಿಕೊಳ್ಳಲು, ಹೋಂನರ್ಸ್‌ಗಳು ಯುವಕ/ ಯುವತಿಯರು ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟವಸತಿ 13,000/- 17,500/- ಸಂಪರ್ಕಿಸಿ: 8050679429, 8123699421.

ಶ್ರೀ ಶಕ್ತಿ ಹೆಲ್ತ್ ಕೇರ್ ನಲ್ಲಿ ಯುವಕರಿಗೆ ಹೆಲ್ಪರ್ ಕೆಲಸ ಖಾಲಿಇದೆ, ಊಟ ವಸತಿಯೊಂದಿಗೆ ತಿಂಗಳಿಗೆ 12000/-ವೇತನ ಕೊಡಲಾಗುವುದು ವಿಳಾಸ: ಶೇಷಾದ್ರಿಪುರಂ, ಬೆಂಗಳೂರು - 9019626612

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land

Out-Station

NEAR SIRA, Chickanahally, Kalambella, 1/2 KM from Highway 5 Acres Agricultural, clear title Land. Contact: 9886493574/ 9844001541

Sites

Out-Station

KHB ALLOTTED Site For Sale Measuring 1500sqft At Kadur Chikmagalur District Clear Title 12 Lakhs Contact Raghavendra 9606866368

ವ್ಯಾಪಾರ

Business Offers

Dealers And Stockists

ಡೀಲರ್‌ಗಳು ಬೇಕಾಗಿದ್ದಾರೆ ಬೈಯೋ ಚಾರ್ ಇಂಗಾಲದ ಜೈವಿಕ ಗೊಬ್ಬರ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಡೀಲರ್‌ಗಳು ಬೇಕಾಗಿದ್ದಾರೆ Phone:8310117429 factory@arstaeco.com www.arstaeco.com

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ.,
(ನೊಂ.ಜೆ.ಆರ್.ಬಿ.ಎಂಡಿ:14:2009-2010)
ನಂ.7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು– 560094. ಫೋ.ನಂ. 080–23511414/ 23411416
57ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆ
ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿಯ 2021–22ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ದಿನಾಂಕ 24–09–2022ರ ಶನಿವಾರ ಬೆಳಿಗ್ಗೆ 11–00 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಜಯರಾಮಯ್ಯ ನವರ ಅಧ್ಯಕ್ಷತೆಯಲ್ಲಿ, ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ಪೋಸ್ಟ್ ಆಫೀಸ್ ರಸ್ತೆ, ಸಂಜಯನಗರ, ಬೆಂಗಳೂರು–560094 ಈ ಆವರಣದಲ್ಲಿ ನಡೆಸಲಾಗುವುದೆಂದು ಸಂಘದ ಸದಸ್ಯರೆಲ್ಲರಿಗೂ ಈಗಾಗಲೇ ಅಂಚೆ ಮೂಲಕ ಆಹ್ವಾನ ಪತ್ರಿಕೆಯನ್ನು ಕಳುಹಿಸಿದೆ, ಆಹ್ವಾನ ಪತ್ರ ತಲುಪದೇ ಇದ್ದ ಪಕ್ಷದಲ್ಲಿ ಇದೇ ಆಹ್ವಾನ ಪತ್ರ ಎಂದು ಸದಸ್ಯರು ತಿಳಿದು, ವಾರ್ಷಿಕ ಮಹಾ ಸಭೆಗೆ ಹಾಜರಾಗಲು ಕೋರಲಾಗಿದೆ. ಸಂಘದ ಉಪನಿಯಮದ ಸಂಖ್ಯೆ 7(6)ರ ಪ್ರಕಾರ ಸಹ ಸದಸ್ಯರು ಮತ್ತು ನಾಮಮಾತ್ರ ಸದಸ್ಯರು ಮಹಾ ಸಭೆಗೆ ಹಾಜರಾಗಲು ಅವಕಾಶವಿರುವುದಿಲ್ಲ.
ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/–
(ಮಹೇಶ್. ಎಂ.ಎನ್) ಕಾರ್ಯದರ್ಶಿ
ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್‌ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್. ಬೆಂಗಳೂರು– 94.
ಸ್ಥಳ: ಬೆಂಗಳೂರು
ದಿನಾಂಕ: 18–09–2022

WEEKEND CORNER

ಟೀ ಮಾರಾಟಕ್ಕೆ
ಮೇಘಮಲೈ, ತಲೆಯಾರ್, ರಾಕ್‌ವುಡ್, ಬ್ರಿಯಾರ್ ಟೀ ಎಸ್ಟೇಟ್‌ಗಳಿಂದ ಟೀ ಪ್ಯಾಕೆಟ್ ನೇರ ಮಾರಾಟ
ಸಂಪರ್ಕಿಸಿ 8870601744 / 9487531481
WOODBRIAR GROUP
Coimbatore
Producers of Monica, Injipara, Srikundra, Pudhuthottam, Murugan, Venniar, Manalaar
Woodbriar, Sussex, Bulk Tea

ಭವಿಷ್ಯ

Astrology

★॥ಶ್ರೀಚಾಮುಂಡೇಶ್ವರಿ॥★ ಜ್ಯೋತಿಷ್ಯರು ಸ್ತ್ರೀಪುರುಷ ಪ್ರೇಮವಿಚಾರ, ಪ್ರೀತಿಯಲ್ಲಿಮೋಸ, ಆರೋಗ್ಯ, ದಾಂಪತ್ಯ, ಸಾಲಭಾದೆ, ಸಂತಾನಫಲ, ಮದುವೆ, ಇನ್ನಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. 8050061378

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವೈವಾಹಿಕ

Brides Wanted

Hindu

ವಧು ಬೇಕಾಗಿದೆ : ವಹ್ನಿಕುಲ ಕ್ಷತ್ರಿಯ ಅನುಕೂಲಸ್ಥ ವರನಿಗೆ (ವಯಸ್ಸು : 45 ವರ್ಷ) 2ನೇ ಮದುವೆಗೆ ವಧು ಬೇಕಾಗಿದೆ. ಆಸಕ್ತರು ಸಂಪರ್ಕಿಸಿ : 9845350669. ಬೆಂಗಳೂರು

Muslim

WANTED A suitable match for 33 yo MBA Sunni Muslim Boy working in MNC as a Tech Lead Father is a Sr Engineer in Govt Department Connect : (080-69074906)

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ರೈಲು/ಬಸ್ಸಿನಲ್ಲಿ ದೆಹಲಿ,ಹರಿದ್ವಾರ್ ಚಾರ್‌ಧಾಮ್ ಸಮೇತ 26.09.2022 10.10.2022 ನೇಪಾಳ,ಮುಕ್ತಿನಾಥ ಪೋಕ್ರಾ,ಲುಂಬಿನಿ 09.10.2022 12 ದಿನಗಳು. 09.11.2022 ಸೋಮನಾಥ ದ್ವಾರಕ ಓಂಕಾರೇಶ್ವರ್ ಭಾವನಗರ. 06.10.2022 ರಾಮೇಶ್ವರ ಮಧುರೈ ಕನ್ಯಾಕುಮಾರಿ ಇತ್ಯಾದಿ. (ಒಟ್ಟಿಗೆ ಹದಿನೈದು ಸೀಟು ರಿಸರ್ವ್ ಮಾಡಿದರೆ ಒಂದು ಸೀಟು ಉಚಿತ) ಸಂಪರ್ಕಿಸಿ. ಏಷ್ಯನ್ ಟ್ರಾವೆಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 26574131 9448508708

★ಶ್ರೇಯಸ್ ಟೂರ್ಸ್★ ಹಾರ್ನೋಬಿಲ್ ಫೆಸ್ಟಿವಲ್ ವಿಶೇಷ ಈಶಾನ್ಯರಾಜ್ಯಗಳ(ಸೆವೆನ್ ಸಿಸ್ಟರ್ಸ್)ಪ್ರವಾಸ 28.11.2022 12/15/21ದಿನಗಳು ಅಸ್ಸಾಂ ಮೇಘಾಲಯ,ಅರುಣಾಚಲ ನಾಗಲ್ಯಾಂಡ್,ಮಣಿಪುರ ಮಿಝೋರಾಂ,ತ್ರಿಪುರ. 24.11.2022,16.12.2022 10/21ದಿನಗಳು ತ್ರಿಪುರ ಮಿಝೋರಾಂ,ಮಣಿಪುರ ನಾಗಲ್ಯಾಂಡ್,ಅಸ್ಸಾಂ ಅರುಣಾಚಲ,ಮೇಘಾಲಯ. 8073824856 9206979202 6366322639

★ಶ್ರೇಯಸ್ ಟೂರ್ಸ್★ 08.10.2022 12ದಿನಗಳು ಅಖಂಡ ಗುಜರಾತ್‌ರಾಜ್ಯ ಪ್ರವಾಸ.12.10.2022 10ದಿನಗಳು ಅಖಂಡ ರಾಜಸ್ಥಾನ ರಾಜ್ಯ ಪ್ರವಾಸ. 01.11.2022 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ.04.11.2022 10ದಿನಗಳು ಅಖಂಡ ನೇಪಾಳರಾಷ್ಟ್ರ(ಮುಕ್ತಿನಾಥ) 25.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.8073824856 9206979202 6366322639

07.11.2022 11 ದಿನಗಳ ಕಾಶಿ,ಗಯಾ,ಅಯೋಧ್ಯ ನೈಮಿಶಾರಣ್ಯ ಬೈದ್ಯನಾಥ್ ಜ್ಯೋತಿರ್ಲಿಂಗ. Multi excel semi Sleeper coach Bus/ flightನಲ್ಲಿ 10.11.2022 16 ದಿನಗಳ ಅಷ್ಟ ಜ್ಯೋತಿರ್ಲಿಂಗಗಳು ನಾಸಿಕ್,ಶಿರಡಿ ಓಂಕಾರೇಶ್ವರ್ ಮಹಾಕಾಲೇಶ್ವರ (ಉಜ್ಜಯಿನಿ) ದ್ವಾರಕಾ,ಸೋಮನಾಥ್ ಮಾತೃಗಯಾ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್ 9342287551 8050629305

27-9-2022, 3ದಿನಗಳು, ಸಿಗಂದೂರು, ಕೊಲ್ಲೂರು, ಜೋಗಜಲಪಾತ, ಬಂಗಾರಮಕ್ಕಿ ವೀರಾಂಜನೇಯ, ಕಮಲಶಿಲೆ, ಹೊಂಬುಜಪದ್ಮಾವತಿ, ಉಡುತಡಿ ಅಕ್ಕಮಹಾದೇವಿ ಜನ್ಮಸ್ಥಳ, ಶ್ರೀಧರಾಶ್ರಮ, ವಡನಬೈಲುಪದ್ಮಾವತಿ ಇತ್ಯಾದಿ.9481433157

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135
CD Per Sqcm	Single Col	Double Col	Multi Col	
	480	450	475	

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

1947ರಲ್ಲಿಯೇ ನಿರ್ನಾಮವಾದ ಚೀತಾ ಸಂತತಿ ಬೆಳೆಸಲು ಕ್ರಮ: ನಮೀಬಿಯಾದಿಂದ ಭಾರತಕ್ಕೆ ಬಂದ 8 ಪ್ರಾಣಿಗಳು

ಚೀತಾಗಳನ್ನು ರಾಷ್ಟ್ರೀಯ ಉದ್ಯಾನಕ್ಕೆ ಬಿಟ್ಟ ಪ್ರಧಾನಿ

ಶಯೋಪುರ (ಮಧ್ಯಪ್ರದೇಶ) (ಪಿಟಿಐ): ನಮೀಬಿಯಾದಿಂದ ತರಲಾದ ಚೀತಾಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯ ಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಶನಿವಾರ ಬಿಟ್ಟರು. ಭಾರತದಲ್ಲಿ ಏಳು ದಶಕಗಳ ಹಿಂದೆಯೇ ಚೀತಾಗಳು ನಿರ್ನಾಮವಾಗಿವೆ. ದೇಶದಲ್ಲಿ ಚೀತಾಗಳ ಸಂತತಿಯನ್ನು ಬೆಳೆಸುವ ಉದ್ದೇಶದಿಂದ 'ಚೀತಾ ಯೋಜನೆ' ಅಡಿ ಈ ಚೀತಾಗಳನ್ನು ತರಲಾಗಿದೆ.

ತಮ್ಮ 72ನೇ ಹುಟ್ಟುಹಬ್ಬದ ದಿನ ಚೀತಾಗಳನ್ನು ಮೋದಿ ಅವರು ಉದ್ಯಾನದಲ್ಲಿ ಬಿಟ್ಟರು. ಅವರು ವೃತ್ತಿಪರ ಕ್ಯಾಮರಾದಲ್ಲಿ ಚೀತಾಗಳ ಚಿತ್ರಗಳನ್ನೂ ಸೆರೆ ಹಿಡಿದರು.

ಒಟ್ಟು 8 ಚೀತಾಗಳನ್ನು (ಐದು ಹೆಣ್ಣು ಮತ್ತು ಮೂರು ಗಂಡು) ನಮೀಬಿಯಾದಿಂದ ಗ್ವಾಲಿಯರ್‌ಗೆ ಬೋಯಿಂಗ್ ವಿಮಾನದಲ್ಲಿ ಶನಿವಾರ ಕರೆತರಲಾಯಿತು. ಚೀತಾಗಳನ್ನು ಕರೆತರಲು ಬೇಕಾದ ರೀತಿಯಲ್ಲಿ ವಿಮಾನವನ್ನು ಮಾರ್ಪಾಡು ಮಾಡಲಾಗಿತ್ತು. ವನ್ಯ ಮೃಗಗಳ ಅಂತರ್ ಖಂಡ ಸ್ಥಳಾಂತರದ ಮೊದಲ ಯೋಜನೆ ಇದು.

ಶನಿವಾರ ಬೆಳಿಗ್ಗೆ 8 ಗಂಟೆಯ ಸುಮಾರಿಗೆ ಚಿರತೆಗಳನ್ನು ಹೊತ್ತ ವಿಮಾನವು ಗ್ವಾಲಿಯರ್‌ಗೆ ಬಂದಿಳಿಯಿತು. ಬಳಿಕ ಅವುಗಳನ್ನು ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ಗಳಲ್ಲಿ ಕುನೊ ರಾಷ್ಟ್ರೀಯ ಉದ್ಯಾನ ಸಮೀಪದ ಪಾಲ್ಪುರಕ್ಕೆ ಕರೆತರಲಾಯಿತು. ರಾಷ್ಟ್ರೀಯ ಉದ್ಯಾನದಲ್ಲಿ ವಿಶೇಷ ವೇದಿಕೆ ಸಿದ್ಧಪಡಿಸಲಾಗಿತ್ತು. ಚೀತಾಗಳನ್ನು ಇರಿಸಿದ್ದ ಪಂಜರಗಳನ್ನು ಅದರ ಕೆಳಗೆ ಇರಿಸಲಾಗಿತ್ತು.

ಮೋದಿ ಅವರು ಪಂಜರಗಳ ಬಾಗಿಲು ತೆರೆಯುವ ಮೂಲಕ ಮೂರು ಚೀತಾಗಳನ್ನು ಉದ್ಯಾನದೊಳಕ್ಕೆ ಬಿಟ್ಟರು. ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೂರು ಚೀತಾಗಳನ್ನು ಮೋದಿ ಅವರು ಉದ್ಯಾನದೊಳಕ್ಕೆ ಬಿಟ್ಟರೆ, ಉಳಿದವುಗಳನ್ನು ಇತರ ಗಣ್ಯರು ಬಿಟ್ಟರು ಎಂದು ರಾಷ್ಟ್ರೀಯ ಉದ್ಯಾನದ ವಿಭಾಗೀಯ ಅರಣ್ಯ ಅಧಿಕಾರಿ ಪಿ.ಕೆ. ವರ್ಮಾ ಹೇಳಿದ್ದಾರೆ. ಈ ಎಲ್ಲ ಚೀತಾಗಳಿಗೆ ರೇಡಿಯೊ ಕಾಲರ್ ಅಳವಡಿಸಲಾಗಿದೆ.

ಈ ರಾಷ್ಟ್ರೀಯ ಉದ್ಯಾನವು ವಿಂಧ್ಯಾಂಚಲ ಬೆಟ್ಟಗಳ ಉತ್ತರ ಭಾಗದಲ್ಲಿದೆ. 344.68 ಚದರ ಕಿ.ಮೀ. ವಿಸ್ತೀರ್ಣ ಹೊಂದಿದೆ.

ಭಾರತದಲ್ಲಿ ಚೀತಾಗಳ ಸಂತತಿ 1947ರಲ್ಲಿಯೇ ನಾಶವಾಗಿದೆ. ಭಾರತದಲ್ಲಿದ್ದ ಕೊನೆಯ ಚೀತಾ ಈಗಿನ ಛತ್ತೀಸಗಡದ ಕೊರಿಯಾ ಜಿಲ್ಲೆಯಲ್ಲಿ ಮೃತಪಟ್ಟಿತು. ಆಗ ಛತ್ತೀಸಗಡವು ಮಧ್ಯ ಪ್ರದೇಶದ ಭಾಗವಾಗಿತ್ತು. ಚೀತಾಗಳು ನಿರ್ನಾಮವಾಗಿವೆ ಎಂದು 1952ರಲ್ಲಿ ಅಧಿಕೃತವಾಗಿ ಘೋಷಿಸಲಾಯಿತು.

ಭಾರತಕ್ಕೆ ಚೀತಾಗಳನ್ನು ತಂದ ತಂಡದ ಸದಸ್ಯರು

ಚೀತಾ ಯೋಜನೆಯ ಜಾಡು

2009	ಆಫ್ರಿಕಾದಿಂದ ಚೀತಾಗಳನ್ನು ಭಾರತಕ್ಕೆ ತರುವ ಪ್ರಸ್ತಾವ ಸಿದ್ಧ
2010	ಆಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಚೀತಾ ಯೋಜನೆಗೆ ಅನುಮತಿ ಕೊಟ್ಟರು
2010	ಆಗಿನ ಪರಿಸರ ಮತ್ತು ಅರಣ್ಯ ಸಚಿವ ಜೈರಾಮ್ ರಮೇಶ್ ಅವರು ಚೀತಾಗಳನ್ನು ನೋಡಲು ಆಫ್ರಿಕಾಕ್ಕೆ ಹೋದರು
2011	₹50 ಕೋಟಿ ಮಂಜೂರಾಯಿತು ಮತ್ತು ಅದನ್ನು ಪಾವತಿಸಲಾಯಿತು
2013	ಯೋಜನೆಗೆ ಸುಪ್ರೀಂ ಕೋರ್ಟ್ ತಡೆ ನೀಡಿತು
2020	ಸುಪ್ರೀಂ ಕೋರ್ಟ್ ತಡೆಯನ್ನು ರದ್ದುಪಡಿಸಿತು
2022	ಚೀತಾಗಳನ್ನು ಭಾರತಕ್ಕೆ ತರಲಾಯಿತು

ಚೀತಾ ತರಲು ಯಾರೂ ಯತ್ನಿಸಲಿಲ್ಲ: ಮೋದಿ

ಭಾರತದಲ್ಲಿ ಚೀತಾ ಸಂತತಿಯು ಏಳು ದಶಕದ ಹಿಂದೆಯೇ ನಿರ್ನಾಮವಾಗಿದ್ದರೂ ಬೇರೆ ದೇಶಗಳಿಂದ ಚೀತಾಗಳನ್ನು ಕರೆತರಲು ಗಂಭೀರ ಪ್ರಯತ್ನ ನಡೆಯಲೇ ಇಲ್ಲ ಎಂದು ಹೇಳುವ ಮೂಲಕ ಪ್ರಧಾನಿ ಮೋದಿ ಅವರು ಹಿಂದಿನ ಸರ್ಕಾರಗಳನ್ನು ಟೀಕಿಸಿದ್ದಾರೆ.

ಚೀತಾಗಳನ್ನು ಕರೆತರುವ ಯೋಜನೆಯು ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಗಾಗಿ ತಮ್ಮ ಸರ್ಕಾರದ ಪ್ರಯತ್ನದ ಭಾಗ ಎಂದರು.

'ಚೀತಾಗಳು ನಿರ್ನಾಮವಾಗಿವೆ ಎಂದು 1952ರಲ್ಲಿ ಘೋಷಿಸಿದ್ದು ದುರದೃಷ್ಟಕರ. ಆದರೆ, ಬೇರೆ ದೇಶಗಳಿಂದ ಅವುಗಳನ್ನು ತಂದು ಸಂತತಿ ಬೆಳೆಸುವ ಪ್ರಯತ್ನವು ಹಲವು ದಶಕಗಳಲ್ಲಿ ಆಗಲೇ ಇಲ್ಲ. ಆದರೆ, ಈಗ ಅಮೃತ ಕಾಲದಲ್ಲಿ ಚೀತಾ ಸಂತತಿಯನ್ನು ಬೆಳೆಸುವ ಸದವಕಾಶ ಬಂದಿದೆ' ಎಂದು ಮೋದಿ ಹೇಳಿದ್ದಾರೆ.

'ನಮ್ಮ ಮಿತ್ರ ರಾಷ್ಟ್ರ ನಮೀಬಿಯಾ ಮತ್ತು ಅಲ್ಲಿನ ಸರ್ಕಾರಕ್ಕೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ' ಎಂದು ಮೋದಿ ಅವರು ಹೇಳಿದರು.

ಚೀತಾಗಳು ನಮ್ಮ ಅತಿಥಿಗಳು. ಕುನೊ ರಾಷ್ಟ್ರೀಯ ಉದ್ಯಾನವನ್ನು ಅವು ತಮ್ಮ ಮನೆಯನ್ನಾಗಿ ಮಾಡಿಕೊಳ್ಳಲು ಕೆಲವು ತಿಂಗಳ ಸಮಯಾವಕಾಶವನ್ನು ಕೊಡಬೇಕು ಎಂದು ಮೋದಿ ಹೇಳಿದರು.

ಯುಪಿಎ ಅವಧಿಯಲ್ಲಿ ಯೋಜನೆ ಆರಂಭ: ಜೈರಾಮ್

ಕೋಲ್ಕತ್ತ (ಪಿಟಿಐ): 'ಕಾಂಗ್ರೆಸ್ ಪಕ್ಷವು ನಡೆಸುತ್ತಿರುವ ಭಾರತವನ್ನು ಒಗ್ಗೂಡಿಸಿ ಯಾತ್ರೆಗೆ ಸಿಕ್ಕ ಭಾರಿ ಯಶಸ್ಸಿನಿಂದ ಗಮನವನ್ನು ಬೇರೆಡೆಗೆ ಸೆಳೆಯುವುದಕ್ಕಾಗಿ ಚೀತಾಗಳನ್ನು ಉದ್ಯಾನಕ್ಕೆ ಬಿಡುವ ಕಾರ್ಯಕ್ರಮವನ್ನು ಮೋದಿ ಅವರು ನಡೆಸಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಹೇಳಿದ್ದಾರೆ.

'ಆಳ್ವಿಕೆ ಎಂಬುದು ಹಿಂದಿನ ಸರ್ಕಾರಗಳು ಮಾಡಿದ ಕೆಲಸಗಳನ್ನು ಮುಂದುವರಿಸಿಕೊಂಡು ಹೋಗುವುದು ಎಂಬುದು ಮೋದಿ ಅವರಿಗೆ ಅರ್ಥವೇ ಆಗುವುದಿಲ್ಲ ಎಂಬುದಕ್ಕೆ ಚೀತಾ ಯೋಜನೆಯು ಇತ್ತೀಚಿನ ಪುರಾವೆ. ಚೀತಾ ಯೋಜನೆಯು ಯುಪಿಎ ಅವಧಿಯಲ್ಲಿಯೇ ಆರಂಭವಾಗಿದೆ. 2010ರ ಏಪ್ರಿಲ್ 25ರಂದು ಚೀತಾ ಯೋಜನೆಗಾಗಿ ನಾನು ಕೇಪ್‌ಟೌನ್‌ಗೆ ಹೋಗಿದ್ದೆ' ಎಂದು ಜೈರಾಮ್ ನೆನಪಿಸಿಕೊಂಡಿದ್ದಾರೆ.

ಪನ್ನಾ ಮತ್ತು ಸಾರಿಸ್ಕಾ ರಾಷ್ಟ್ರೀಯ ಉದ್ಯಾನಗಳಿಗೆ ಹುಲಿಗಳ ಸ್ಥಳಾಂತರದ ಮೊದಲ ಯೋಜನೆ 2009–11ರ ಅವಧಿಯಲ್ಲಿ ನಡೆದಿತ್ತು. ಆಗ, ಇದು ಯಶಸ್ವಿ ಆಗದು ಎಂದು ಹಲವರು ಅಪಸ್ವರ ಎತ್ತಿದ್ದರು. ಆದರೆ, ಆ ಯೋಜನೆ ಯಶಸ್ವಿಯಾಗಿದೆ. ಚೀತಾ ಯೋಜನೆ ಆರಂಭ ಆದಾಗಲೂ ಇದೇ ರೀತಿಯ ಮಾತು ಕೇಳಿ ಬಂದಿತ್ತು ಎಂದು ಜೈರಾಮ್ ಹೇಳಿದ್ದಾರೆ.


ಡಾ.ಸನತ್‌ಕೃಷ್ಣ ಮುಳಿಯ

ಚೀತಾ ತಂದ ತಂಡದಲ್ಲಿ ಪುತ್ತೂರಿನ ಪಶುವೈದ್ಯ ಸನತ್

ಪ್ರಜಾವಾಣಿ ವಾರ್ತೆ

ಮಂಗಳೂರು: ನಮೀಬಿಯಾದಿಂದ ಚೀತಾಗಳನ್ನು ಭಾರತಕ್ಕೆ ತಂದ ನಿಯೋಗದಲ್ಲಿದ್ದ ಪಶುವೈದ್ಯ ಡಾ.ಸನತ್ ಕೃಷ್ಣ ಮುಳಿಯ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಮುಳಿಯದವರು. ಅವರು ನವದೆಹಲಿಯ ನ್ಯಾಷನಲ್ ಜುವಲಾಜಿಕಲ್ ಪಾರ್ಕ್‌ನಲ್ಲಿ ಸಹಾಯಕ ಪಶುವೈದ್ಯಕೀಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಭಾರತಕ್ಕೆ ಚೀತಾಗಳನ್ನು ತಂದ ಬಗ್ಗೆ ಖುಷಿ ಹಂಚಿಕೊಂಡ ಡಾ.ಸನತ್‌ಕೃಷ್ಣ ಮುಳಿಯ ಅವರ ಸಂಬಂಧಿ, ಗುತ್ತಿಗಾರು ಗ್ರಾಮದ ಕೇಶವ ಭಟ್ ಮುಳಿಯ, 'ಇದು ದೇಶಕ್ಕೆ ಹೆಮ್ಮೆಯ ಕ್ಷಣ. ಅಂತೆಯೇ ಈ ಚೀತಾಗಳನ್ನು ಕರೆತಂದ ತಂಡದಲ್ಲಿದ್ದ ಪಶುವೈದ್ಯರು ನಮ್ಮ ರಾಜ್ಯದವರು ಎಂಬುದು ಕೂಡಾ ಹೆಮ್ಮೆ ಪಡುವ ವಿಷಯ. ಬಾಲ್ಯದಿಂದಲೂ ಸನತ್‌ಕೃಷ್ಣಗೆ ವನ್ಯಜೀವಿಗಳು ಹಾಗೂ ಪ್ರಾಣಿಗಳು ಎಂದರೆ ಪಂಚಪ್ರಾಣ. ಹಾಗಾಗಿಯೇ, ತಂದೆಯವರು ಚಿನ್ನಾಭರಣಗಳ ವ್ಯಾಪಾರಿಯಾದರೂ ಸನತ್‌ಕೃಷ್ಣ ವಿಭಿನ್ನ ವೃತ್ತಿಯನ್ನು ಆರಿಸಿಕೊಂಡಿದ್ದರು' ಎಂದರು.

ಡಾ.ಸನತ್‌ಕೃಷ್ಣ ಮುಳಿಯ ಅವರು ದಿ.ಕೇಶವ ಭಟ್ ಮುಳಿಯ– ಉಷಾ ದಂಪತಿಯ ಪುತ್ರ. ಅವರ ಪತ್ನಿ ಡಾ.ಪ್ರಿಯಾಂಕಾ ಜಾಸ್ತಾ ಅವರೂ ಪಶುವೈದ್ಯೆ.

'ಸನತ್ ಕೃಷ್ಣ ಅವರು ಬೆಂಗಳೂರಿನಲ್ಲಿ ಪಶುವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಬನ್ನೇರುಘಟ್ಟ ಉದ್ಯಾನದಲ್ಲಿಯೂ ಕಾರ್ಯನಿರ್ವಹಿಸಿದ್ದರು. ಬಳಿಕ ಆಫ್ರಿಕಾದಲ್ಲಿ ಅಧ್ಯಯನ ನಡೆಸಿದ್ದಾರೆ. ಹುಲಿಗಳಿಗೆ ಹಾಗೂ ಇತರ ವನ್ಯಜೀವಿಗಳಿಗೆ ರೇಡಿಯೊ ಕಾಲರ್ ಅಳವಡಿಕೆ, ಅರಿವಳಿಕೆ ಚುಚ್ಚುಮದ್ದು ನೀಡುವಿಕೆಯೂ ಸೇರಿದಂತೆ ಅನೇಕ ಪ್ರಮುಖ ಕಾರ್ಯಯೋಜನೆಗಳಲ್ಲಿ ಹಿಂದೆಯೂ ಭಾಗವಹಿಸಿದ್ದಾರೆ' ಎಂದು ಸನತ್‌ಕೃಷ್ಣ ಅವರ ಚಿಕ್ಕಪ್ಪ ತಿಳಿಸಿದರು.

ಮೋದಿ ಜನ್ಮದಿನ: ಸಂಭ್ರಮ ಜೋರು

ಕೇಕ್ ಕತ್ತರಿಸಿ ಆಚರಣೆ, ಅಂಗವಿಕಲರಿಗೆ ಗಾಲಿಕುರ್ಚಿ ವಿತರಣೆ, ರಕ್ತದಾನ ಶಿಬಿರ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ 72ನೇ ಜನ್ಮದಿನದ ಅಂಗವಾಗಿ ದೇಶದ ಹಲವು ಕಡೆಗಳಲ್ಲಿ ಸಂಭ್ರಮಾಚರಣೆ ನಡೆಯಿತು. ಜನ್ಮದಿನ ನಿಮಿತ್ತ ವಿವಿಧ ಸೇವಾ ಚಟುವಟಿಕೆಗಳನ್ನು ಬಿಜೆಪಿ ಹಮ್ಮಿಕೊಂಡಿತ್ತು. ರಕ್ತದಾನ ಶಿಬಿರ, ಸಸಿ ನಾಟಿ, ಗಂಗಾನದಿ ಸ್ವಚ್ಛತೆ ಮೊದಲಾದ ಕಾರ್ಯಕ್ರಮಗಳು ನಡೆದವು. ರಾಷ್ಟ್ರಪತಿ ದ್ರೌಪದಿ ಮುರ್ಮು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಗೃಹಸಚಿವ ಅಮಿತ್ ಶಾ, ಬೌದ್ಧಗುರು ದಲೈಲಾಮಾ ಸೇರಿದಂತೆ ಹಲವು ಗಣ್ಯರು ಮೋದಿ ಅವರಿಗೆ ಶುಭ ಕೋರಿದರು.

ಮೋದಿ ಅವರು ತಮ್ಮ ಜನ್ಮದಿನದಂದು ನಾಲ್ಕು ಅಧಿಕೃತ ಕಾರ್ಯಕ್ರಮಗಳಲ್ಲಿ ಭಾಗಿಯಾದರು. ಪ್ರತಿ ವರ್ಷ ಸೆ.17ರಂದು ಅವರು ಗುಜರಾತ್‌ಗೆ ತೆರಳಿ ತಮ್ಮ ತಾಯಿಯನ್ನು ಭೇಟಿಯಾಗುತ್ತಿದ್ದರು. ಆದರೆ ಈ ಬಾರಿ ಅವರು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಭೇಟಿ ನೀಡಿ, ನಮೀಬಿಯಾದಿಂದ ತರಿಸಿದ್ದ ಚೀತಾಗಳನ್ನು ಕಾಡಿಗೆ ಬಿಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇದಾದ ಬಳಿಕ, ಸ್ವಸಹಾಯ ಗುಂಪಿನ ಸದಸ್ಯರ ಸಮಾವೇಶದಲ್ಲಿ ಮಾತನಾಡಿದರು.

ರಕ್ತದಾನ ಅಮೃತ ಮಹೋತ್ಸವ: ಪ್ರಧಾನಿ ಹುಟ್ಟುಹಬ್ಬದ ಅಂಗವಾಗಿ ದೇಶದಾದ್ಯಂತ 15 ದಿನಗಳ ರಕ್ತದಾನ ಅಮೃತ ಮಹೋತ್ಸವ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗಿದೆ. ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ದೆಹಲಿಯ ಸಫ್ದರ್‌ಜಂಗ್ ಆಸ್ಪತ್ರೆಯಲ್ಲಿ ರಕ್ತದಾನ ಮಾಡಿದರು. ದೇಶದಾದ್ಯಂತ 5,980 ಕೇಂದ್ರಗಳಲ್ಲಿ ರಕ್ತದಾನ ಶಿಬಿರ ನಡೆಯುತ್ತಿದೆ. 'ಮೊದಲ ದಿನವೇ ಸುಮಾರು 87 ಸಾವಿರ ಜನ ರಕ್ತದಾನ ಮಾಡಿದ್ದಾರೆ. ಇದೊಂದು ವಿಶ್ವ ದಾಖಲೆ' ಎಂದು ಮಾಂಡವೀಯ ಹೇಳಿದ್ದಾರೆ. ಅ.1ರ ವರೆಗೆ ನಡೆಯಲಿರುವ ರಕ್ತದಾನ ಅಮೃತ ಮಹೋತ್ಸವದಲ್ಲಿ ರಕ್ತದಾನ ಮಾಡಲು ಬಯಸುವವರು ಆರೋಗ್ಯ ಸೇತು ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು ಎಂದು ಅವರು ಹೇಳಿದ್ದಾರೆ.

> **ಪ್ರತೀ ವರ್ಷ ಜನ್ಮದಿನದಂದು ತಾಯಿಯ ಭೇಟಿ ಆಗುತ್ತಿದ್ದೆ. ಈ ಬಾರಿ ಮಧ್ಯಪ್ರದೇಶದ ಲಕ್ಷಾಂತರ ತಾಯಂದಿರು ನನ್ನನ್ನು ಆಶೀರ್ವದಿಸಿದ್ದಾರೆ. ಇದರಿಂದ ಅಮ್ಮ ಸಂತಸಗೊಂಡಿರುತ್ತಾರೆ**
> **ನರೇಂದ್ರ ಮೋದಿ,** ಪ್ರಧಾನಿ

ನೀರು ಸಂರಕ್ಷಣೆ ಮ್ಯೂಸಿಯಂ ಉದ್ಘಾಟನೆ: ಪ್ರಧಾನಿ ಜನ್ಮದಿನದ ಅಂಗವಾಗಿ, ನೀರು ಸಂರಕ್ಷಣೆಯ ಮಹತ್ವವನ್ನು ತಿಳಿಸುವ ವಸ್ತು ಸಂಗ್ರಹಾಲಯವನ್ನು ದೆಹಲಿಯಲ್ಲಿ ಶನಿವಾರ ಉದ್ಘಾಟಿಸಲಾಯಿತು. ಸಿಕ್ಕಿಂ ರಾಜ್ಯಪಾಲ ಗಂಗಾ ಪ್ರಸಾದ್ ಅವರು ಇಲ್ಲಿನ ಸುಲಭ್ ಇಂಟರ್‌ನ್ಯಾಷನಲ್ ಕ್ಯಾಂಪಸ್‌ನಲ್ಲಿ ನಿರ್ಮಿಸಿರುವ ಮ್ಯೂಸಿಯಂ ಉದ್ಘಾಟಿಸಿದರು. ವಿವಿಧ ಜಲಮೂಲಗಳು, ನೀರು ಸಂರಕ್ಷಣೆಯ ಸಾಂಪ್ರದಾಯಿಕ ಹಾಗೂ ಆಧುನಿಕ ವಿಧಾನಗಳು, ನೀರು ನಿರ್ವಹಣೆಯ ಉತ್ತಮ ಅಭ್ಯಾಸಗಳ ಬಗ್ಗೆ ಇಲ್ಲಿ ಮಾಹಿತಿ ನೀಡಲಾಗುತ್ತದೆ.

ಮೋದಿ ತವರು ಕ್ಷೇತ್ರದಲ್ಲಿ ಹಲವು ಕಾರ್ಯಕ್ರಮ: ಮೋದಿ ಅವರ ಜೀವನವನ್ನು ಬಿಂಬಿಸುವ ವಸ್ತುಪ್ರದರ್ಶನವನ್ನು ವಾರಾಣಸಿಯ ಶಹೀದ್ ಉದ್ಯಾನದಲ್ಲಿ ಏರ್ಪಡಿಸಲಾಗಿತ್ತು. ವಾರಾಣಸಿ ದಕ್ಷಿಣ ಕ್ಷೇತ್ರದ ಶಾಸಕ ನೀಲಕಂಠ ತಿವಾರಿ ಹಾಗೂ ಕಾರ್ಯಕರ್ತರು ಗಂಗಾ ನದಿಗೆ 51 ಲೀಟರ್ ಹಾಲಿನ ಅಭಿಷೇಕ ಮಾಡಿದರು. ಬಿಜೆಪಿ ಕಾರ್ಯಕರ್ತರು ಕಾಶಿ ವಿಶ್ವನಾಥ ಮಂದಿರದಲ್ಲಿ ಪೂಜೆ ಸಲ್ಲಿಸಿದರು. 'ನಮಾಮಿ ಗಂಗೆ' ನೌಕರರು ನಮೋ ಘಾಟ್‌ನಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಸಿದರು. ಮನೋಕಾಮನ ಸಿದ್ಧಿ ಹನುಮಾನ್ ದೇವಸ್ಥಾನದಲ್ಲಿ ಅಖಂಡ ರಾಮಾಯಣ ಪಠಣ ಹಮ್ಮಿಕೊಳ್ಳಲಾಗಿತ್ತು. ಲಡ್ಡು ಬಳಸಿ ತಯಾರಿಸಲಾಗಿದ್ದ 72 ಕೆ.ಜಿ ತೂಕದ ಕೇಕ್ ಕತ್ತರಿಸಲಾಯಿತು.



ಕಲಾವಿದೆ ಲಕ್ಷ್ಮಿ ಗೌಡ್ ಅವರು ಮುಂಬೈ ಕಡಲತೀರದಲ್ಲಿ ಮರಳುಶಿಲ್ಪ ರಚಿಸಿ ಮೋದಿ ಅವರಿಗೆ ಶುಭ ಕೋರಿದರು –ಪಿಟಿಐ ಚಿತ್ರ

ಯುವ ಕಾಂಗ್ರೆಸ್‌ನಿಂದ 'ನಿರುದ್ಯೋಗ ದಿನ'

ಯುವ ಕಾಂಗ್ರೆಸ್ ಘಟಕವು ಪ್ರಧಾನಿ ಮೋದಿ ಅವರ ಜನ್ಮದಿನವನ್ನು 'ನಿರುದ್ಯೋಗ ದಿನ'ವನ್ನಾಗಿ ದೇಶದಾದ್ಯಂತ ಶನಿವಾರ ಆಚರಿಸಿತು. ಕಪ್ಪು ಬಟ್ಟೆ ಧರಿಸಿದ್ದ ಯುವ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯ ಪಕ್ಷದ ಕಚೇರಿಯಲ್ಲಿ ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗಿದರು. ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಯುವ ಘಟಕದ ರಾಷ್ಟ್ರೀಯ ಅಧ್ಯಕ್ಷ ಶ್ರೀನಿವಾಸ್ ಬಿ.ವಿ ಅವರು, 'ಬಿಜೆಪಿ ಸರ್ಕಾರವು ಅಧಿಕಾರಕ್ಕೆ ಬಂದ ಬಳಿಕ ದೇಶದ ಜನರಿಗೆ ನಿರುದ್ಯೋಗದ ಉಡುಗೊರೆ ನೀಡಿದೆ' ಎಂದು ಆರೋಪಿಸಿದರು.

'ದೇಶದ ಶೇ 60ರಷ್ಟು ಯುವಜನರಿಗೆ ಉದ್ಯೋಗವಿಲ್ಲ. ಇದು ನಿಜಕ್ಕೂ ಗಾಬರಿ ಹುಟ್ಟಿಸುವ ಸಂಗತಿ. ಪ್ರತೀ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಪ್ರಧಾನಿ ಹೇಳಿದ್ದರು. ಅವರ ಭರವಸೆ ಪ್ರಕಾರ, ಈಗ 16 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು. ಆದರೆ, ಅಮಿತ್ ಶಾ ಅವರ ಮಗ ಜಯ್ ಶಾ ಅವರ ಉದ್ಯೋಗದ ಬಗ್ಗೆಯೇ ಅವರಿಗೆ ಹೆಚ್ಚು ಕಾಳಜಿಯಿದೆ' ಎಂದು ಹೇಳಿದರು.

ಜೈಪುರದಲ್ಲಿ ಎನ್‌ಎಸ್‌ಯುಐ ಕಾರ್ಯಕರ್ತರು ನಿರುದ್ಯೋಗ ಖಂಡಿಸಿ ಶೂ ಪಾಲಿಶ್ ಮಾಡಿ ಪ್ರತಿಭಟಿಸಿದರು. ಕೋಲ್ಕತ್ತದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ರಸ್ತೆಯಲ್ಲಿ ಪಕೋಡ ತಯಾರಿಸಿದರು.

ಜಾತಿಯ ಕಾರಣಕ್ಕೆ ಮಕ್ಕಳಿಗೆ ಮಿಠಾಯಿ ನಿರಾಕರಣೆ

ಚೆನ್ನೈ: ಅಂಗಡಿಯ ಮಾಲೀಕನೊಬ್ಬ ಜಾತಿಯ ಕಾರಣ ನೀಡಿ ನಿರ್ದಿಷ್ಟ ಸಮುದಾಯವೊಂದರ ಮಕ್ಕಳಿಗೆ ಮಿಠಾಯಿ ನೀಡಲು ನಿರಾಕರಿಸಿದ್ದು, ಈ ಸಂಬಂಧ ಪೊಲೀಸರು ಶನಿವಾರ ಇಬ್ಬರನ್ನು ಬಂಧಿಸಿದ್ದಾರೆ.

ತೆಂಕಾಸಿ ಜಿಲ್ಲೆಯ ಕೆ.ವಿ.ನಲ್ಲೂರು ಪ್ರದೇಶದಲ್ಲಿರುವ ಆದಿ ದ್ರಾವಿಡರ್ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳು ಮಿಠಾಯಿ ಹಾಗೂ ಇತರ ತಿನಿಸುಗಳನ್ನು ಕೊಳ್ಳಲು ಹತ್ತಿರದ ಅಂಗಡಿಗೆ ಹೋಗಿದ್ದರು. ಆಗ ಅಂಗಡಿ ಮಾಲೀಕ ಮಹೇಶ್ವರನ್ ಮಿಠಾಯಿ ನೀಡಲು ನಿರಾಕರಿಸಿದ್ದರು. ನೀವು ಇನ್ನೆಂದೂ ಅಂಗಡಿ ಹತ್ತಿರ ಬರಬಾರದು ಎಂದು ಮಕ್ಕಳಿಗೆ ತಾಕೀತು ಮಾಡಿದ್ದರು. ಈ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿತ್ತು. ಇದರ ಆಧಾರದಲ್ಲಿ ಪೊಲೀಸರು ಮಹೇಶ್ವರನ್ ಹಾಗೂ ಗ್ರಾಮದ ಮುಖ್ಯಸ್ಥ ರಾಮಚಂದ್ರ ಮೂರ್ತಿ ಎಂಬುವರನ್ನು ಬಂಧಿಸಿದ್ದಾರೆ. ಅಧಿಕಾರಿಗಳು ಅಂಗಡಿಗೆ ಬೀಗ ಹಾಕಿಸಿದ್ದಾರೆ.

'ಇಲ್ಲಿನ ಯಾವ ಅಂಗಡಿಯಲ್ಲೂ ನೀವು ಮಿಠಾಯಿ ಖರೀದಿಸುವಂತಿಲ್ಲ. ನಿಮಗೆ ಯಾವುದೇ ತಿನಿಸುಗಳನ್ನೂ ನೀಡಬಾರದೆಂಬ ನಿರ್ಬಂಧವಿದೆ. ನಿಮ್ಮ ಮನೆಯವರಿಗೆ ಹೋಗಿ ಹೇಳಿ. ಇಲ್ಲಿ ನಿಲ್ಲಬೇಡಿ. ಈಗ ಶಾಲೆಗೆ ಹೊರಡಿ' ಎಂದು ಅಂಗಡಿ ಮಾಲೀಕ ಹೇಳಿರುವುದು ವಿಡಿಯೊದಲ್ಲಿದೆ.

'ನಿರ್ಬಂಧ, ಯಾವ ನಿರ್ಬಂಧ' ಎಂದು ಬಾಲಕ ನೊಬ್ಬ ಮುಗ್ಧತೆಯಿಂದ ಕೇಳಿದಾಗ 'ನಿಮ್ಮ ಬೀದಿಯ ಜನರಿಗೆ ಯಾವುದೇ ಬಗೆಯ ತಿನಿಸುಗಳನ್ನು ನೀಡಬಾರ ದೆಂದು ಗ್ರಾಮದ ಸಭೆಯಲ್ಲಿ ನಿರ್ಧರಿಸಲಾಗಿದೆ. ಈಗ ಹೊರಡಿ ಎಂದು ಮಾಲೀಕ ಹೇಳಿದ ನಂತರ ಬಾಲಕರು ಬರಿಗೈಯಲ್ಲಿ ಅಲ್ಲಿಂದ ಹೊರಡುವ ದೃಶ್ಯ ವಿಡಿಯೊದಲ್ಲಿದೆ.

'ಜಾಲತಾಣಗಳಲ್ಲಿ ವಿಡಿಯೊ ಹರಿದಾಡುತ್ತಿರುವುದು ಗಮನಕ್ಕೆ ಬಂತು. ಇದರ ಆಧಾರದಲ್ಲಿ ಎಫ್‌ಐಆರ್ ದಾಖಲಿಸಿಕೊಂಡು ಇಬ್ಬರನ್ನು ಬಂಧಿಸಿದ್ದೇವೆ. ಈ ಸಂಬಂಧ ತನಿಖೆ ನಡೆಸುತ್ತಿದ್ದೇವೆ. ತಪ್ಪಿತಸ್ಥರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ತೆಂಕಾಸಿ ಜಿಲ್ಲಾ ಪೊಲೀಸ್ ಅಧಿಕಾರಿ ಹೇಳಿದ್ದಾರೆ. ತಮಿಳುನಾಡು ಸರ್ಕಾರವು ಇ.ವಿ.ಆರ್.ಪೆರಿಯಾರ್ ಅವರ ಜನ್ಮದಿನವನ್ನು (ಸೆ.17) ಸಾಮಾಜಿಕ ನ್ಯಾಯದ ದಿನವನ್ನಾಗಿ ಆಚರಿಸಿದ ಸಂದರ್ಭದಲ್ಲೇ ಈ ವಿಡಿಯೊ ಹರಿದಾಡಿದೆ. ರಾಜ್ಯದಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿರುವುದಕ್ಕೆ ಇದು ಉದಾಹರಣೆಯಾಗಿದೆ.

ಶಾಸಕ ಅಮಾನತುಲ್ಲಾ ಖಾನ್ ಆಪ್ತ ಸಹಾಯಕನ ಸೆರೆ

ನವದೆಹಲಿ: ಭ್ರಷ್ಟಾಚಾರ ವಿರೋಧಿ ದಳವು (ಎಸಿಬಿ) ದಾಳಿ ನಡೆಸಿದ ಬಳಿಕ ಆಮ್ ಆದ್ಮಿ ಪಕ್ಷದ ಶಾಸಕ ಅಮಾನತುಲ್ಲಾ ಖಾನ್ ಅವರ ಆಪ್ತ ಹಮೀದ್ ಅಲಿ ಅವರನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಅಲಿ ಅವರನ್ನು ಶಸ್ತ್ರಾಸ್ತ್ರ ಕಾಯ್ದೆ ಅಡಿಯಲ್ಲಿ ದೆಹಲಿ ಆಗ್ನೇಯ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ದೆಹಲಿ ವಕ್ಫ್ ಮಂಡಳಿಯಲ್ಲಿ ಅಕ್ರಮ ನೇಮಕಾತಿ ನಡೆದ ಆರೋಪಕ್ಕೆ ಸಂಬಂಧಿಸಿದಂತೆ ಎಸಿಬಿ ಶುಕ್ರವಾರ 4 ಸ್ಥಳಗಳಲ್ಲಿ ದಾಳಿ ನಡೆಸಿ, ಮಂಡಳಿಯ ಅಧ್ಯಕ್ಷರೂ ಆಗಿರುವ ಅಮಾನತುಲ್ಲಾ ಖಾನ್ ಅವರನ್ನು ಬಂಧಿಸಿತ್ತು.

ದಾಳಿ ವೇಳೆ ಲೈಸೆನ್ಸ್‌ರಹಿತ ಪಿಸ್ತೂಲು, ₹ 12 ಲಕ್ಷ ನಗದು ಹಾಗೂ ಕೆಲವು ಗುಂಡುಗಳನ್ನೂ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಡುರಾಂಡ್ ಕಪ್ ಫುಟ್‌ಬಾಲ್ ಫೈನಲ್ ಇಂದು: ಮುಂಬೈ ಎದುರಾಳಿ

ಬಿಎಫ್‌ಸಿಗೆ ಚೊಚ್ಚಲ ಟ್ರೋಫಿ ಕನಸು

ಕೋಲ್ಕತ್ತ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್‌ಗೆ ಮೊದಲ ಬಾರಿ ಡುರಾಂಡ್ ಕಪ್ ಟ್ರೋಫಿ ಗೆದ್ದುಕೊಡುವ ಅದಮ್ಯ ಆಸೆಯಲ್ಲಿ ಸುನಿಲ್ ಚೆಟ್ರಿ ಇದ್ದಾರೆ. ಭಾನುವಾರ ಇಲ್ಲಿ ನಡೆಯುವ ಟೂರ್ನಿಯ ಫೈನಲ್ ಹಣಾಹಣಿಯಲ್ಲಿ ಅವರ ನಾಯಕತ್ವದ ಬಿಎಫ್‌ಸಿ, ಪ್ರಬಲ ಮುಂಬೈ ಸಿಟಿ ಎಫ್‌ಸಿ ಎದುರು ಕಣಕ್ಕಿಳಿಯಲಿದೆ.

38 ವರ್ಷದ ಚೆಟ್ರಿ ಅವರ ಟ್ರೋಫಿಗಳ ಗುಚ್ಛದಲ್ಲಿ ಡುರಾಂಡ್ ಕಪ್ ಮಾತ್ರ ಇಲ್ಲ. ಬಿಎಫ್‌ಸಿಯದ್ದೂ ಇದೇ ಸ್ಥಿತಿ. 2013ರಲ್ಲಿ ಅಸ್ತಿತ್ವಕ್ಕೆ ಬಂದ ತಂಡಕ್ಕೆ ಪ್ರಮುಖ ಪ್ರಶಸ್ತಿಗಳೂ ದಕ್ಕಿದ್ದರೂ ಡುರಾಂಡ್ ಕಪ್ ಮಾತ್ರ ಗೆಲ್ಲಲಾಗಿಲ್ಲ ಎಂಬ ಕೊರಗು ಇದೆ.

2018–19ರ ಸಾಲಿನ ಇಂಡಿಯನ್ ಸೂಪರ್ ಲೀಗ್ ಚಾಂಪಿಯನ್ ಆಗಿರುವ ಬಿಎಫ್‌ಸಿ, ದೇಶಿ ಫುಟ್‌ಬಾಲ್‌ನ ಪ್ರಮುಖ ಆರು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ.

ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಎದುರಾಳಿ ಹೈದರಾಬಾದ್ ಎಫ್‌ಸಿಯ ಒಡೆಯ್ ಒನ್ಯೆಂದಿಯಾ ನೀಡಿದ 'ಉಡುಗೊರೆ' ಗೋಲಿನಿಂದ ಗೆದ್ದ ಬಿಎಫ್‌ಸಿ ಫೈನಲ್‌ಗೇರಿತ್ತು. ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಮುಂಬೈ, ಮೊಹಮ್ಮಡನ್ ಸ್ಪೋರ್ಟಿಂಗ್ ತಂಡವನ್ನು ಪರಾಭವಗೊಳಿಸಿತ್ತು.

ಚೆಟ್ರಿ, ಜೇವಿಯರ್ ಹೆರ್ನಾಂಡೆಜ್, ರಾಯ್‌ಕೃಷ್ಣ ಬೆಂಗಳೂರು ತಂಡದ ಶಕ್ತಿಯಾಗಿದ್ದಾರೆ. ಸೆನೆಗಲ್ ಡಿಫೆಂಡರ್ ಮೌರ್ಟದಾ ಫಾಲ್ ಅವರಿಂದ ಮುಂಬೈ ತಂಡದ ಬಲ ವೃದ್ಧಿಸಿದೆ. ಟೂರ್ನಿಯಲ್ಲಿ ಅತಿ ಹೆಚ್ಚು ಗೋಲು ಗಳಿಸಿರುವ ಲಲ್ಲಿಯಾಂಜುವಾಲ ಚಾಂಗ್ಟೆ (ಏಳು) ಕೂಡ ತಂಡಕ್ಕೆ ಗೆಲುವಿನ ಉಡುಗೊರೆ ನೀಡಲು ಸಜ್ಜಾಗಿದ್ದಾರೆ. ಹೀಗಾಗಿ ಉಭಯ ತಂಡಗಳ ಮಧ್ಯೆ ಜಿದ್ದಾಜಿದ್ದಿ ಪೈಪೋಟಿ ನಿರೀಕ್ಷಿಸಲಾಗಿದೆ.

ಪಂದ್ಯ ಆರಂಭ: ಸಂಜೆ 6 ಗಂಟೆ
ನೇರ ಪ್ರಸಾರ: ಸ್ಪೋರ್ಟ್ಸ್ 18

ಸುನಿಲ್ ಚೆಟ್ರಿ ಮತ್ತು ರಾಯ್‌ಕೃಷ್ಣ

ಹೈದರಾಬಾದ್ ವಿಮೋಚನಾ ದಿನ: ತೆಲಂಗಾಣ ಸರ್ಕಾರದ ವಿರುದ್ಧ ಶಾ ಟೀಕೆ

'ವೋಟ್ ಬ್ಯಾಂಕ್‌ನಿಂದಾಗಿ ಆಚರಣೆಗೆ ನಿರಾಸಕ್ತಿ'

ಹೈದರಾಬಾದ್ (ಪಿಟಿಐ): 'ರಾಜ್ಯ ಸರ್ಕಾರದ ವೋಟ್ ಬ್ಯಾಂಕ್ ರಾಜಕಾರಣದಿಂದಾಗಿ ಇಷ್ಟು ವರ್ಷ ತೆಲಂಗಾಣದಲ್ಲಿ 'ಹೈದರಾಬಾದ್ ವಿಮೋಚನಾ ದಿನ' ಕಾರ್ಯಕ್ರಮವನ್ನು ಅಧಿಕೃತವಾಗಿ ಆಚರಿಸಿರಲಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಟೀಕಿಸಿದರು.

ಈಗ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದಿಂದಲೇ ಆಚರಿಸುವ ನಿರ್ಧಾರಕ್ಕಾಗಿ ನಾನು ಪ್ರಧಾನಿ ಅವರನ್ನು ಅಭಿನಂದಿಸುತ್ತೇನೆ ಎಂದು ಶಾ ಇಲ್ಲಿ ಹೇಳಿದರು. ಕೇಂದ್ರ ಸರ್ಕಾರವು ಸಿಕಂದರಾಬಾದ್‌ನಲ್ಲಿ ಆಯೋಜಿಸಿದ್ದ ವಿಮೋಚನಾ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಮೋಚನಾ ದಿನ ಹಿನ್ನೆಲೆಯಲ್ಲಿ ಕಲ್ಯಾಣ ಕರ್ನಾಟಕ, ತೆಲಂಗಾಣ ಮತ್ತು ಮರಾಠವಾಡ ಭಾಗದ ಜನರಿಗೆ ಶಾ ಶುಭ ಕೋರಿದರು. ಈ ಭಾಗದ ಜನರು 'ಭಾರತದ ಒಕ್ಕೂಟಕ್ಕೆ ಸೇರ್ಪಡೆ ವೇಳೆ ರಜಾಕಾರ್‌ರ ದಬ್ಬಾಳಿಕೆಯನ್ನು ಧೈರ್ಯದಿಂದ ಎದುರಿಸಿದರು' ಎಂದರು.

ರಾಜ್ಯ ಸರ್ಕಾರದಿಂದಲೇ ಈ ದಿನವನ್ನು ಆಚರಿಸಬೇಕು ಎಂಬ ಬೇಡಿಕೆಗಳಿದ್ದರೂ ಸ್ವಾತಂತ್ರ್ಯ ಬಂದು 75 ವರ್ಷವಾದರೂ ಇದು ಆಗಿರಲಿಲ್ಲ. ಸ್ಥಳೀಯವಾಗಿ ಅಧಿಕಾರದಲ್ಲಿದ್ದವರ ವೋಟ್‌ಬ್ಯಾಂಕ್ ರಾಜಕಾರಣವೇ ಇದಕ್ಕೆ ಕಾರಣ ಎಂದು ಆರೋಪಿಸಿದರು. ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಅವರನ್ನೂ ಪರೋಕ್ಷವಾಗಿ ಉಲ್ಲೇಖಿಸಿದ ಗೃಹ ಸಚಿವರು, 'ಚುನಾವಣೆಯ ಸಂದರ್ಭದಲ್ಲಿ ಅನೇಕರು ಈ ಬಗ್ಗೆ ಭರವಸೆಯನ್ನು ನೀಡಿದ್ದರು. ಆದರೆ, ಅಧಿಕಾರಕ್ಕೆ ಬಂದಾಗ ಮರೆತರು' ಎಂದರು.

ಈ ವರ್ಷ ರಾಜ್ಯ ಸರ್ಕಾರವು ಈ ದಿನವನ್ನು ಆಚರಿಸುತ್ತಿದೆ. ಆದರೆ, ವಿಮೋಚನಾ ದಿನ ಎಂದು ಹೇಳುತ್ತಿಲ್ಲ. ಇದಕ್ಕೆ ಅವರಿಗಿನ್ನೂ ರಜಾಕಾರ್ ಕುರಿತು ಇರುವ ಭೀತಿಯೇ ಕಾರಣ ಎಂದು ವ್ಯಂಗ್ಯವಾಡಿದರು.

ಇದೇ ಸಂದರ್ಭದಲ್ಲಿ ಶಾ ಅವರು, ಹೈದರಾಬಾದ್ ವಿಮೋಚನೆ ಹೋರಾಟದಲ್ಲಿ ಭಾಗವಹಿಸಿದ್ದ ಕೊಮ್ರಂ ಭೀಮ್, ರಾಮ್‌ಜೀ ಗೊಂಡ್, ಸ್ವಾಮಿ ರಮಾನಂದ ತೀರ್ಥ, ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್, ಎಂ.ಚೆನ್ನಾರೆಡ್ಡಿ ಸೇರಿದಂತೆ ಹಲವು ಮುಖಂಡರಿಗೆ ನಮನ ಸಲ್ಲಿಸಿದರು.

ಶಾ ಬೆಂಗಾವಲು ಪಡೆ ವಾಹನಕ್ಕೆ ಅಡ್ಡಿ: ಆತಂಕ

ಹೈದರಾಬಾದ್: ಬಿಜೆಪಿ ನಾಯಕರ ಸಭೆಯಲ್ಲಿ ಪಾಲ್ಗೊಳ್ಳಲು ಶನಿವಾರ ಹೊರಟಿದ್ದ ಗೃಹ ಸಚಿವ ಅಮಿತ್ ಶಾ ಅವರ ಬೆಂಗಾವಲು ಪಡೆಯ ವಾಹನಕ್ಕೆ, ಹೋಟೆಲ್‌ನ ಪ್ರವೇಶ ದ್ವಾರದಲ್ಲಿಯೇ ಕಾರೊಂದು ಅಡ್ಡವಾಗಿ ನಿಂತಿದ್ದರಿಂದ ಕೆಲಕಾಲ ಆತಂಕ ಎದುರಾಗಿತ್ತು.

ಸಭೆ ನಿಗದಿಯಾಗಿದ್ದ ಇಲ್ಲಿನ ಬೇಗಂಪೇಟೆಯ ಹೆರಿಟೇಜ್ ಹೋಟೆಲ್‌ನ ಪ್ರವೇಶ ದ್ವಾರದಲ್ಲಿ ಕೆಂಪು ಕಾರೊಂದು ನಿಂತಿದ್ದರಿಂದ, ಗೃಹ ಸಚಿವರ ವಾಹನದ ಸುಗಮ ಪ್ರವೇಶಕ್ಕೆ ಅಡ್ಡಿ ಎದುರಾಗಿತ್ತು. ಕೂಡಲೇ ಗೃಹ ಸಚಿವರ ಭದ್ರತಾ ಪಡೆಯ ಕಮಾಂಡೊಗಳು ಕಾರು ತೆರವುಗೊಳಿಸುವಂತೆ ಚಾಲಕನಿಗೆ ಸೂಚಿಸಿದರು. ಚಾಲಕ ಕಾರನ್ನು ತೆರವುಗೊಳಿಸಲು ವಿಳಂಬ ಮಾಡಿದ್ದರಿಂದ, ಕಾರಿನ ಹಿಂಬದಿಯ ಗಾಜನ್ನು ಪುಡಿಗೊಳಿಸಲಾಯಿತು.

ಈ ಕಾರಿನಲ್ಲಿದ್ದ ಚಾಲಕನನ್ನು ಟಿಆರ್‌ಎಸ್ ಕಾರ್ಯಕರ್ತ ಗೋಸುಲ ಶ್ರೀನಿವಾಸ್ ಎಂದು ಸುದ್ದಿ ಸಂಸ್ಥೆಗಳು ಗುರುತಿಸಿವೆ. ಈ ಘಟನೆಗೆ ಆಕ್ರೋಶ ವ್ಯಕ್ತಪಡಿಸಿರುವ ತೆಲಂಗಾಣದ ಬಿಜೆಪಿ ನಾಯಕರು, ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಸರ್ಕಾರವು ವಿವಿಐಪಿಗಳಿಗೆ ಸಮರ್ಪಕ ಭದ್ರತಾ ವ್ಯವಸ್ಥೆ ಕಲ್ಪಿಸುವಲ್ಲಿ ನಿರ್ಲಕ್ಷ್ಯ ತೋರುತ್ತಿದೆ ಎಂದು ಆರೋಪಿಸಿದ್ದಾರೆ.

'ಸಮರ್ಪಕವಾದ ಭದ್ರತೆ ಒದಗಿಸುವ ಯೋಜನೆ ರೂಪಿಸುವ ಬದಲಿಗೆ ಟಿಆರ್‌ಎಸ್ ಸರ್ಕಾರವು ಭದ್ರತಾ ಲೋಪಗಳನ್ನು ಎಸಗುವ ಯೋಜನೆ ರೂಪಿಸುವುದರಲ್ಲಿಯೇ ತೊಡಗಿದೆ. ಎರಡು ವಾರಗಳಲ್ಲಿ ಈ ರೀತಿಯ ಭದ್ರತಾ ಲೋಪ ಎದುರಾಗಿರುವುದು ಎರಡನೇ ಬಾರಿ' ಎಂದು ತೆಲಂಗಾಣ ಬಿಜೆಪಿ ಟ್ವೀಟ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದೆ.

'ಇದೊಂದು ಆಕಸ್ಮಿಕವಾಗಿ ಸಂಭವಿಸಿದ ಘಟನೆ' ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಇತ್ತೀಚೆಗೆ ಹೈದರಾಬಾದ್‌ಗೆ ಭೇಟಿ ನೀಡಿದ್ದಾಗಲೂ ಇದೇ ರೀತಿ ಭದ್ರತಾ ಲೋಪ ಎದುರಾಗಿತ್ತು.

ಮತಾಂಧರ ಬಲವರ್ಧನೆ ದೇಶಕ್ಕೆ ಅಪಾಯಕಾರಿ: ತೆಲಂಗಾಣ ಮುಖ್ಯಮಂತ್ರಿ ಚಂದ್ರಶೇಖರ್ ರಾವ್

ಹೈದರಾಬಾದ್ (ಪಿಟಿಐ): ಕೋಮುಶಕ್ತಿಗಳು ಧಾರ್ಮಿಕ ಮತಾಂಧರು ತೆಲಂಗಾಣ ಸೇರಿ ದೇಶದಲ್ಲಿ ಹೆಚ್ಚುತ್ತಿದ್ದು, ದೇಶಕ್ಕೆ ಅಪಾಯಕಾರಿಯಾದುದಾಗಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರರಾವ್ ಇಲ್ಲಿ ಹೇಳಿದರು.

ತೆಲಂಗಾಣ ರಾಷ್ಟ್ರೀಯ ಏಕತಾ ದಿನ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಧಾರ್ಮಿಕ ಮತಾಂಧತೆ ಹೆಚ್ಚಿದಷ್ಟೂ ಮನುಷ್ಯ ಸಂಬಂಧಗಳು ಹಾಳಾಗುತ್ತವೆ' ಎಂದು ಎಚ್ಚರಿಸಿದರು.

ತಮ್ಮ ಹಿತಾಸಕ್ತಿ ಸಾಧನೆಗಾಗಿ ಧಾರ್ಮಿಕ ಮತಾಂಧರು ಸಾಮಾಜಿಕ ಬಾಂಧವ್ಯಕ್ಕೆ ಧಕ್ಕೆ ತರುತ್ತಾರೆ. ಜನರ ನಡುವೆ ದ್ವೇಷ ಬೆಳೆಸುತ್ತಾರೆ. ಹೀಗೆ ಜನರನ್ನು ಇಬ್ಭಾಗವಾಗಿಸುವುದು ಎಂದಿಗೂ ಸಮರ್ಥನೀಯವಲ್ಲ ಎಂದು ಹೇಳಿದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 'ಹೈದರಾಬಾದ್ ವಿಮೋಚನಾ ದಿನ'ದ ಕಾರ್ಯಕ್ರಮದಲ್ಲಿ ಪರೇಡ್ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿ ಮಾತನಾಡಿದ ಬೆನ್ನಲ್ಲೇ ಮುಖ್ಯಮಂತ್ರಿ ಈ ಮಾತು ಹೇಳಿದರು.

ಪೋಷಾಕಿಗೆ ಆಕ್ಷೇಪ: ಪಾಕ್ ಪತ್ರಕರ್ತನಿಗೆ ಛೀಮಾರಿ

ಕರಾಚಿ (ಪಿಟಿಐ): ಪಾಕಿಸ್ತಾನ ಮಹಿಳಾ ಫುಟ್‌ಬಾಲ್ ತಂಡದ ಆಟಗಾರ್ತಿಯರ ಪೋಷಾಕಿನ ಕುರಿತು ಪ್ರಶ್ನಿಸಿದ್ದ ಪತ್ರಕರ್ತನಿಗೆ ಛೀಮಾರಿ ಹಾಕಲಾಗಿದೆ.

ಕಠ್ಮಂಡುವಿನಲ್ಲಿ ನಡೆಯುತ್ತಿರುವ ಎಸ್‌ಎಎಫ್‌ಎಫ್ ಚಾಂಪಿಯನ್‌ಷಿಪ್‌ನಲ್ಲಿ ಮಾಲ್ಡೀವ್ಸ್ ತಂಡದ ವಿರುದ್ಧ 7 ಗೋಲುಗಳ ಅಂತರದಲ್ಲಿ ಪಾಕಿಸ್ತಾನ ವನಿತೆಯರು ಜಯ ಗಳಿಸಿದ್ದಾರೆ. ದೀರ್ಘಾವಧಿ ಬಳಿಕ ಪಾಕ್ ತಂಡ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಪಾಲ್ಗೊಂಡಿದ್ದು, ಇದು ಎಂಟು ವರ್ಷಗಳ ಬಳಿಕ ಸಿಕ್ಕ ಮೊದಲ ಜಯವಾಗಿದೆ.

ಪಂದ್ಯದ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಪಾಕಿಸ್ತಾನ ವನಿತೆಯರ ತಂಡದ ಮುಖ್ಯಸ್ಥ, ತರಬೇತುದಾರ ಮತ್ತು ಅಧಿಕಾರಿಗಳನ್ನು ಪತ್ರಕರ್ತ ಪ್ರಶ್ನಿಸಿದ್ದರು.

'ನಾವು ಇಸ್ಲಾಮಿಕ್ ರಾಷ್ಟ್ರವಾಗಿರುವ ಪಾಕಿಸ್ತಾನಕ್ಕೆ ಸೇರಿದವರು ಎಂಬುದು ನಿಮಗೆ ಗೊತ್ತಿದೆ. ಈ ಹುಡುಗಿಯರು ಯಾಕೆ ಚಡ್ಡಿ ಧರಿಸಿ ಆಟವಾಡುತ್ತಿದ್ದಾರೆ? ಯಾಕೆ ಲೆಗಿನ್ಸ್ ಧರಿಸಿಲ್ಲ?' ಎಂದು ವರದಿಗಾರ ಪ್ರಶ್ನಿಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. 7 ಗೋಲುಗಳ ಪೈಕಿ 4 ಗೋಲುಗಳನ್ನು ದಾಖಲಿಸಿದ ನಾದಿಯಾ ಖಾನ್ ಅವರನ್ನು ಹಾಗೂ 8 ವರ್ಷಗಳಲ್ಲಿ ಮೊದಲ ಜಯ ತಂದುಕೊಟ್ಟ ಪಾಕಿಸ್ತಾನ ವನಿತೆಯರ ಸಾಧನೆಯ ಬಗ್ಗೆ ಮಾತನಾಡುವುದನ್ನು ಬಿಟ್ಟು ಅವರ ಪೋಷಾಕಿನ ಬಗ್ಗೆ ಪ್ರಶ್ನಿಸಿದ್ದರ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಪ್ರಶ್ನೆಯನ್ನು ಉಪೇಕ್ಷಿಸಿದ ತಂಡದ ತರಬೇತುದಾರ ಅದೀಲ್ ರಿಜ್ಕಿ, ಎಲ್ಲರೂ ಪ್ರಗತಿಶೀಲರಾಗಿರಬೇಕು ಎಂದು ಸಲಹೆ ನೀಡಿದ್ದಾರೆ.

ಎಐಎಫ್‌ಎಫ್: ಪ್ರಭಾಕರನ್ ನೇಮಕ ಪ್ರಶ್ನಿಸಿದ ಭುಟಿಯಾ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಕಾರ್ಯದರ್ಶಿಯಾಗಿ ಶಾಜಿ ಪ್ರಭಾಕರನ್ ಅವರ ನೇಮಕವನ್ನು ದಿಗ್ಗಜ ಆಟಗಾರ ಬೈಚುಂಗ್ ಭುಟಿಯಾ ಪ್ರಶ್ನಿಸಿದ್ದಾರೆ.

'ಎಐಎಫ್‌ಎಫ್ ಚುನಾವಣೆಯಲ್ಲಿ ಅವರಿಗೂ ಮತದಾನದ ಹಕ್ಕು ಇತ್ತು. ಒಬ್ಬ ಮತದಾರನನ್ನು ವೇತನ ಪಡೆಯುವ ಹುದ್ದೆಗೆ ನೇಮಕ ಮಾಡುವುದರ ಮೂಲಕ ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಲಾಗಿದೆ' ಎಂದು ಟೀಕಿಸಿದ್ದಾರೆ.

ಸೆ.2 ರಂದು ನಡೆದಿದ್ದ ಚುನಾವಣೆಯಲ್ಲಿ ಶಾಜಿ ಅವರು ದೆಹಲಿ ಫುಟ್‌ಬಾಲ್ ಸಂಸ್ಥೆಯ ಪ್ರತಿನಿಧಿಯಾಗಿದ್ದುಕೊಂಡು ಮತ ಚಲಾಯಿಸಿದ್ದರು. ಭುಟಿಯಾ ಅವರನ್ನು ಮಣಿಸಿದ್ದ ಕಲ್ಯಾಣ್ ಚೌಬೆ, ಎಐಎಫ್‌ಎಫ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಅದರ ಬೆನ್ನಲ್ಲೇ ಚೌಬೆ, ಶಾಜಿ ಅವರನ್ನು ಫೆಡರೇಷನ್‌ನ ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದರು.

ಸೆ.6 ರಂದು ಅಧಿಕಾರ ವಹಿಸಿದ್ದ ಶಾಜಿ, ಅದಕ್ಕೂ ಮುನ್ನಾದಿನ ದೆಹಲಿ ಫುಟ್‌ಬಾಲ್ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಅವರನ್ನು ಗೌರವ ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದರೆ ನಾನು ವಿರೋಧಿಸುತ್ತಿರಲಿಲ್ಲ. ಆದರೆ ವೇತನ ಪಡೆಯುವ ಹುದ್ದೆಗೆ ನೇಮಕ ಮಾಡಿರುವುದು ತಪ್ಪು. ಇಲ್ಲಿ 'ಕೊಡು ಕೊಳ್ಳುವಿಕೆ' ನಡೆದಿರುವ ಅನುಮಾನ ಮೂಡಿದೆ' ಎಂದು ಆರೋಪಿಸಿದ್ದಾರೆ.

'ನಾನು ಎತ್ತಿರುವ ಈ ವಿಷಯವನ್ನು ಸೋಮವಾರ ನಡೆಯುವ ಎಐಎಫ್‌ಎಫ್ ಕಾರ್ಯಕಾರಿ ಸಮಿತಿ ಸಭೆಯ ಅಜೆಂಡಾದಲ್ಲಿ ಸೇರಿಸಬೇಕು' ಎಂದು ಮನವಿ ಮಾಡಿದ್ದಾರೆ.

ಆರೋಪ ಅಲ್ಲಗಳೆದ ಶಾಜಿ: ಭುಟಿಯಾ ಅವರ ಆರೋಪವನ್ನು ಶಾಜಿ ಪ್ರಭಾಕರನ್ ಅಲ್ಲಗಳೆದಿದ್ದು, ದೇಶದಲ್ಲಿ ಫುಟ್‌ಬಾಲ್ ಬೆಳವಣಿಗೆಗೆ ಶ್ರಮಿಸಬೇಕೆಂಬ ಒಳ್ಳೆಯ ಉದ್ದೇಶದಿಂದ ಕಾರ್ಯದರ್ಶಿ ಹುದ್ದೆ ಸ್ವೀಕರಿಸಿದ್ದೇನೆ. ಇಲ್ಲಿ ಯಾವುದೇ 'ಕೊಡು ಕೊಳ್ಳುವಿಕೆ' ನಡೆದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ರೇಸ್: ನಟರಾಜ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ನ್ಯಾಷನಲ್ ರ‍್ಯಾಲಿ ಸ್ಪ್ರಿಂಟ್ ಚಾಂಪಿಯನ್‌ಶಿಪ್ –2022ರ ದಕ್ಷಿಣ ವಲಯ ವಿಭಾಗದಲ್ಲಿ ಕರ್ನಾಟಕದ ನಟರಾಜ್ ಚಾಂಪಿಯನ್ ಆಗಿದ್ದಾರೆ.

ಬೆಂಗಳೂರಿನ ಹೊರವಲಯದ ದೇವನಹಳ್ಳಿಯಲ್ಲಿರುವ ಟ್ರೈಬಲ್ ಕೆಫೆಯಲ್ಲಿ ಶನಿವಾರ ನಡೆದ ರೇಸ್‌ನಲ್ಲಿ ನಟರಾಜ್ ಮೊದಲ ಸ್ಥಾನ ಪಡೆದರು. ರೋಚಕತೆಯಿಂದ ಕೂಡಿದ್ದ ರೇಸ್‌ನಲ್ಲಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಚಾಲಕರು ಪಾಲ್ಗೊಂಡಿದ್ದರು. ಕರ್ನಾಟಕದ ಅಗ್ರ ರೇಸರ್‌ಗಳಲ್ಲಿ ಒಬ್ಬರಾದ ಇ.ರಾಜೇಂದ್ರ 2ನೇ ಸ್ಥಾನ ಹಾಗೂ ಸ್ಯಾಮುಯಲ್ ಜೇಕಬ್ 3ನೇ ಸ್ಥಾನ ಗಳಿಸಿದರು.

600 ಸಿ.ಸಿ ವರೆಗಿನ ಸಾಮರ್ಥ್ಯದ ಬೈಕ್‌ಗಳ ರೇಸ್‌ನಲ್ಲಿ ರಾಜೇಂದ್ರ ಮೊದಲ ಸ್ಥಾನ ಪಡೆದರೆ, ನಟರಾಜ್ 2ನೇ ಸ್ಥಾನ ಗಳಿಸಿದರು. ಸ್ಯಾಮುಯಲ್ 3ನೇ ಸ್ಥಾನ ಗಳಿಸಿದರು. ಈ ವಿಭಾಗದಲ್ಲಿ ಒಟ್ಟು 22 ಸ್ಪರ್ಧಿಗಳು ಪಾಲ್ಗೊಂಡಿದ್ದರು. ವಿವಿಧ ವಿಭಾಗಗಳಲ್ಲಿ 100ಕ್ಕೂ ಹೆಚ್ಚು ಸ್ಪರ್ಧಿಗಳು ಕಣಕ್ಕಿಳಿದಿದ್ದರು. ವಿವಿಧ ವಲಯಗಳಲ್ಲಿ ನಡೆಯುವ ರೇಸ್‌ಗಳಲ್ಲಿ ಗೆದ್ದವರು ಗೋವಾದಲ್ಲಿ ನಡೆಯುವ ಫೈನಲ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

ನಟರಾಜ್

ಗ್ರಾಮೀಣ ಭಾಗದಲ್ಲೂ ಡಿಜಿಟಲ್ ಕ್ರಾಂತಿ 11

ಗಡಿ ಮೀರಿ ಹರಿದ ನದಿ 12

ಸ್ತ್ರೀಯ ಜ್ಯೋತಿ ಬೆಳಗಿದ ಸಾವಿತ್ರಿಬಾಯಿ 13

ಮೂನ್ ಲೈಟಿಂಗ್

ಬೆಳದಿಂಗಳ ಉದ್ಯೋಗವೋ? ಉದ್ಯೋಗದಾತರಿಗೆ ಬಗೆದ ದ್ರೋಹವೋ?

ಕಲೆ: ಪ್ರಕಾಶ್ ಶೆಟ್ಟಿ

ಶ್ರೀಹರ್ಷ ಸಾಲಿಮಠ

ಐ.ಟಿ. ದೈತ್ಯ ಇನ್ಫೊಸಿಸ್ ಇತ್ತೀಚೆಗೆ ತನ್ನಲ್ಲಿ ಕೆಲಸ ಮಾಡುವವರಿಗೆಲ್ಲ ಒಂದು ಇಮೇಲ್ ಕಳಿಸಿ ತನ್ನ ಯಾವುದೇ ಕೆಲಸಗಾರರು ಬೇರೆಲ್ಲೂ ಕೆಲಸ ಮಾಡಬಾರದೆಂದೂ ಒಂದು ವೇಳೆ ಹಾಗೆ ಕೆಲಸ ಮಾಡಿದಲ್ಲಿ, ಯಾವುದೇ ಮುಲಾಜಿಲ್ಲದೇ ಅವರನ್ನು ಕೆಲಸದಿಂದ ತೆಗೆದುಹಾಕಲಾಗುವುದೆಂದೂ ಎಚ್ಚರಿಕೆ ನೀಡಿತು. ಇದೊಂದು ಇಮೇಲ್ ಐ.ಟಿ. ವಲಯದಲ್ಲಿ ಹೊಸದೊಂದು ಚರ್ಚೆಗೆ ನಾಂದಿ ಹಾಡಿದೆ.

ಇನ್ಫೊಸಿಸ್‌ನ ಜೊತೆ ದನಿಗೂಡಿಸಿರುವ ಇನ್ನೂ ಅನೇಕ ಕಂಪನಿಗಳು ತಮ್ಮಲ್ಲಿ ಕೆಲಸದಲ್ಲಿ ಇದ್ದುಕೊಂಡು ಬೇರೆ ಕಂಪನಿಗಳಲ್ಲಿ ಉದ್ಯೋಗ ಕೈಗೊಳ್ಳುವುದಕ್ಕೆ ವಿರೋಧ ವ್ಯಕ್ತಪಡಿಸಿವೆ. ವಿಪ್ರೊ ಕಂಪನಿಯ ಚೇರ್‌ಮನ್ ರಿಷದ್ ಪ್ರೇಮ್‌ಜಿ ಅವರಂತೂ ಒಂದು ಹೆಜ್ಜೆ ಮುಂದೆ ಹೋಗಿ ಈ ರೀತಿ ಬೇರೆಡೆಗೆ ಕೆಲಸ ಮಾಡುವುದು ಮಹಾಮೋಸ ಅಂತ ಟ್ವೀಟ್ ಮಾಡಿದ್ದಾರೆ. ದೈತ್ಯರು ಹೀಗೆ ತಮ್ಮ ಉದ್ಯೋಗಿಗಳ ಮೇಲೆ ಮುಗಿಬೀಳುತ್ತಿರುವಾಗ ಆಹಾರ ಬಟವಾಡೆ ಕಂಪನಿ ಸ್ವಿಗ್ಗಿ ತನ್ನ ಕಂಪನಿಯ ಉದ್ಯೋಗಿಗಳು ತನ್ನಲ್ಲಿ ಕೆಲಸ ಮುಗಿದ ಮೇಲೆ ಬೇರೆಡೆ ಉದ್ಯೋಗ ಕೈಗೊಳ್ಳಲು ಸ್ವತಂತ್ರರು ಅಂತ ಅಧಿಕೃತ ಪ್ರಕಟಣೆ ನೀಡಿದೆ. ಇವೆಲ್ಲ ಚರ್ಚೆ ಬೆಳವಣಿಗೆಗಳ ಮೂಲಕ 'ಮೂನ್ ಲೈಟಿಂಗ್' ಅಥವಾ 'ಬೆಳದಿಂಗಳ ಉದ್ಯೋಗ' ಎಂಬ ಹೊಸ ಹೆಸರು ವ್ಯಾಪಕವಾಗಿ ಚಾಲ್ತಿಗೆ ಬಂದಿದೆ.

> ಉದ್ಯೋಗಿಗಳು ತಮ್ಮ ಅಧಿಕೃತ ಉದ್ಯೋಗದ ಸಮಯ ಮುಗಿದ ನಂತರ ಹೆಚ್ಚುವರಿ ಸಂಪಾದನೆಗಾಗಿ ಅಥವಾ ಆತ್ಮತೃಪ್ತಿಗಾಗಿ ಬೇರೆ ಬೇರೆ ಉದ್ಯೋಗಗಳನ್ನು ಕೈಗೊಳ್ಳುವುದೇ ಮೂನ್ ಲೈಟಿಂಗ್. ಆದರೆ, ದೈತ್ಯ ಐ.ಟಿ. ಕಂಪನಿಗಳು ಈಗ ಮೂನ್ ಲೈಟಿಂಗ್ ವಿರುದ್ಧ ದೊಡ್ಡದಾಗಿ ಧ್ವನಿ ಎತ್ತಿವೆಯಲ್ಲ, ಯಾಕೋ?

ಏನಿದು ಮೂನ್ ಲೈಟಿಂಗ್?

ಮೂನ್ ಲೈಟಿಂಗ್ ಎಂದರೆ ಉದ್ಯೋಗಿಗಳು ತಮ್ಮ ಅಧಿಕೃತ ಉದ್ಯೋಗದ ಸಮಯ ಮುಗಿದ ನಂತರ ಹೆಚ್ಚುವರಿ ಸಂಪಾದನೆಗಾಗಿ ಅಥವಾ ಆತ್ಮತೃಪ್ತಿಗಾಗಿ ಬೇರೆ ಬೇರೆ ಉದ್ಯೋಗಗಳನ್ನು ಕೈಗೊಳ್ಳುವುದು. ಬಹುತೇಕ ಇಂತಹ ಉದ್ಯೋಗಗಳನ್ನು ರಾತ್ರಿ ಅಥವಾ ವಾರಾಂತ್ಯಗಳಲ್ಲಿ ಕೈಗೊಳ್ಳುವ ಕಾರಣ ಇದನ್ನು ಮೂನ್ ಲೈಟಿಂಗ್ ಅಂತ ಕರೆಯಲಾಗುತ್ತದೆ.

ಮೂನ್ ಲೈಟಿಂಗ್ ಇತ್ತೀಚೆಗೆ ಬಂದದ್ದಲ್ಲ. ದಶಕಗಳ ಹಿಂದಿನಿಂದಲೂ ಕಾಲೇಜಿನಲ್ಲಿ ಪಾಠ ಮಾಡಿಬರುವ ಶಿಕ್ಷಕರು ಮತ್ತು ಉಪನ್ಯಾಸಕರು, ನಿತ್ಯ ಬೆಳಿಗ್ಗೆ, ಸಂಜೆ ಹಾಗೂ ವಾರಾಂತ್ಯಗಳಂದು ಮಕ್ಕಳಿಗೆ ಟ್ಯೂಷನ್ ಹೇಳಿಕೊಡುತ್ತಾರೆ. ವೈದ್ಯರು ಆಸ್ಪತ್ರೆಯ ಕೆಲಸ ಮುಗಿದ ಮೇಲೆ ತಮ್ಮ ಮನೆಗಳಲ್ಲೇ ರೋಗಿಗಳನ್ನು ಪರೀಕ್ಷಿಸುತ್ತಾರೆ. ನನಗೆ ಗೊತ್ತಿರುವ ಬ್ಯಾಂಕ್ ಮ್ಯಾನೇಜರ್ ಒಬ್ಬರು ಬ್ಯಾಂಕ್ ಅವಧಿಯ ನಂತರ ತಮ್ಮ ಹೆಂಡತಿಯ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದರು. ಐ.ಟಿ. ಉದ್ಯಮ ಪ್ರಸಿದ್ಧಿಗೆ ಬಂದ ನಂತರ ಉದ್ಯೋಗಿಗಳು ವಾರಾಂತ್ಯದಲ್ಲಿ ಹವ್ಯಾಸಿ ಮತ್ತು ವೃತ್ತಿಪರ ಫೋಟೊಗ್ರಫಿ ಮಾಡುವುದು, ಕೋಡಿಂಗ್ ಕ್ಲಾಸ್‌ಗಳನ್ನು ತೆಗೆದುಕೊಳ್ಳುವುದು ಸಹ ರೂಢಿಯಾಗಿದೆ. ನನ್ನ ಸಹೋದ್ಯೋಗಿಯೊಬ್ಬ ಸಂಜೆಗಳಲ್ಲಿ ಮೊಬೈಲ್ ರಿಪೇರಿಯನ್ನೂ ಮಾಡುತ್ತಿದ್ದ!

ವ್ಯಾಪಕವಾಗುತ್ತಿರುವುದು ಏಕೆ?

ಕೊರೊನಾ ನಂತರದ ಕಾಲಘಟ್ಟದಲ್ಲಿ ಪ್ರಪಂಚದಾದ್ಯಂತ ಐ.ಟಿ. ಕಾರ್ಯ ವೈಖರಿಯಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬಂದವು. ಎರಡೂವರೆ ವರ್ಷಗಳ ಕಾಲ ಸತತ ಮನೆಯಲ್ಲಿ ಕೂತು ಕೆಲಸ ಮಾಡುವ ಸವಲತ್ತು ಒದಗಿ ಬಂದಾಗ ಐ.ಟಿ. ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ದಿನವಹಿ ತಮಗಾಗಿ ಸಾಕಷ್ಟು ಸಮಯ ಉಳಿತಾಯವಾಗತೊಡಗಿತು. ಆಫೀಸಿಗೆ ಪ್ರಯಾಣಿಸಲು ವಿನಿಯೋಗಿಸುತ್ತಿದ್ದ ಎರಡು ತಾಸುಗಳ ಕಾಲ ಪ್ರಯಾಣದ ಸಮಯ ಉಳಿತಾಯ, ಮಧ್ಯಾಹ್ನ ಊಟದ ಸಮಯ ಉಳಿತಾಯ, ನಡುನಡುವೆ ಬ್ರೇಕ್‌ಗಾಗಿ ಗೆಳೆಯರ ಜೊತೆ ಆಚೆ ಹೋಗುವ ಸಮಯದ ಉಳಿತಾಯ ಇತ್ಯಾದಿ. ಐ.ಟಿ. ಕಂಪನಿಗಳಲ್ಲಿ ಒಮ್ಮೊಮ್ಮೆ ದಿನಕ್ಕೆ ಹದಿನಾಲ್ಕು ತಾಸು ಕೆಲಸ ಮಾಡುವಷ್ಟು ಅತಿಯಾದ ಕೆಲಸಗಳಿದ್ದರೆ ಒಮ್ಮೊಮ್ಮೆ ದಿನದ ಕೆಲಸ ಎರಡು ತಾಸುಗಳಲ್ಲೇ ಮುಗಿದುಹೋಗುತ್ತದೆ. ಆಫೀಸಿನಲ್ಲಿ ಕೆಲಸ ಮಾಡುವಾಗಿನ ದೊಡ್ಡ ಕಿರಿಕಿರಿಯೆಂದರೆ ನಮಗೆ ಹೆಚ್ಚಿನ ಕೆಲಸ ಇಲ್ಲದಿದ್ದಾಗ್ಯೂ ಕಂಪ್ಯೂಟರ್ ಮುಂದೆ ಸುಮ್ಮನೆ ಕುಳಿತಿರಬೇಕು.

ಮನೆಯಲ್ಲಿ ಕೆಲಸ ಮಾಡುವ ಸೌಲಭ್ಯ ದೊರಕಿದಾಗಿನಿಂದ ಪ್ರಯಾಣದ ಸಮಯದ ಜೊತೆಗೆ ಸುಮ್ಮನೆ ಕುಳಿತಿರುವ ಅನುತ್ಪಾದಕ ಸಮಯದಲ್ಲಿ ಹೊಸ ಕೆಲಸಗಳನ್ನು ಮಾಡಲು ಐ.ಟಿ. ಉದ್ಯೋಗಿಗಳಿಗೆ ಅವಕಾಶಗಳನ್ನು ಒದಗಿಸಿದವು. ಇತ್ತೀಚೆಗೆ ಬೆಂಗಳೂರಿನ ಟೆಕ್ಕಿಯೊಬ್ಬ ಒಂದೇ ಬಾರಿಗೆ ಏಳು ಕಂಪನಿಗಳಲ್ಲಿ ಕೆಲಸ ಮಾಡುವ ವಿಷಯ ಸಾಕಷ್ಟು ವೈರಲ್ ಆಗಿತ್ತು. ಪ್ರಪಂಚದಾದ್ಯಂತ ತಂತ್ರಜ್ಞಾನದ ಅತಿವೇಗದ ಬೆಳವಣಿಗೆಯಿಂದ ಮತ್ತು ಈ ವಲಯದಲ್ಲಿ ಸಾಕಷ್ಟು ಬಂಡವಾಳ ಹೂಡಿಕೆ ಆಗುತ್ತಿರುವುದರಿಂದ ಸಾಫ್ಟ್‌ವೇರ್ ತಂತ್ರಜ್ಞರಿಗೆ ಬೇಡಿಕೆ ಹೆಚ್ಚಾಗುತ್ತಿದೆ ಹಾಗೂ ಬೇಡಿಕೆಗೆ ತಕ್ಕಂತೆ ನಿಪುಣರು ದೊರೆಯುತ್ತಿಲ್ಲ. ಕಂಪನಿಗಳು ಕೌಶಲ್ಯ ಹೊಂದಿರುವವರಿಗೆ ಕೇಳಿದಷ್ಟು ಹಣ ಕೊಡಲು ತಯಾರಿವೆ. ಈ ಹಣ, ತಾಸಿನ ಲೆಕ್ಕದಲ್ಲಿ ದೊರೆಯುತ್ತದೆ. ಕೆಲ ಅಂತರರಾಷ್ಟ್ರೀಯ ಕಂಪನಿಗಳು ಒಂದು ತಾಸಿಗೆ ಐದು ಸಾವಿರ ರೂಪಾಯಿವರೆಗೆ ಪಾವತಿಸುತ್ತವೆ. ಇಂತಹ ಆಕರ್ಷಕ ಸಂಬಳಗಳು ಯುವ ಟೆಕ್ಕಿಗಳನ್ನು ಹೆಚ್ಚುವರಿ ಕೆಲಸಕ್ಕಾಗಿ ಆಕರ್ಷಿಸುತ್ತವೆ.

ಮೂನ್ ಲೈಟಿಂಗ್ ಅನ್ನು ಕಂಪನಿಗಳು ಮುಖ್ಯವಾಗಿ ಮೂರು ಕಾರಣಗಳಿಗಾಗಿ ವಿರೋಧಿಸುತ್ತವೆ. ಮೊದಲನೆಯದಾಗಿ ಕಂಪನಿಯ ದತ್ತಾಂಶ, ಬೌದ್ಧಿಕ ಸ್ವತ್ತುಗಳ ಸುರಕ್ಷತೆ. ಮನೆಯಿಂದ ಕೆಲಸ ಮಾಡುವಾಗ ಕಂಪನಿಗಳಿಗೆ ತಮ್ಮ ಉದ್ಯೋಗಿಗಳ ಮೇಲಿನ ಹಿಡಿತ ತೀರಾ ಸಡಿಲವಾಗಿರುತ್ತದೆ. ಈ ಹಿಡಿತದ ಕೊರತೆಯನ್ನು ದುರುಪಯೋಗಪಡಿಸಿಕೊಂಡು ತಮ್ಮ ಆಂತರಿಕ ಸ್ವತ್ತುಗಳನ್ನು ಬೇರೆ ಕಂಪನಿಗಳಿಗೆ ಮಾರಾಟ ಮಾಡಿಬಿಟ್ಟರೆ ಏನು ಗತಿ? ಕಂಪನಿಯ ಸುರಕ್ಷತೆಯಲ್ಲದೆ ಹೆಸರಿಗೂ ಇದು ಧಕ್ಕೆ ತರುತ್ತದೆ. ತಮ್ಮ ಡೇಟಾ ಸುರಕ್ಷಿತವಾಗಿಲ್ಲ ಎಂದರೆ ಈ ಕಂಪನಿಗಳಿಗೆ ಕೆಲಸ ಔಟ್ ಸೋರ್ಸ್ ಮಾಡಲು ಬೇರೆ ಕಂಪನಿಗಳು ಹಿಂಜರಿಯುತ್ತವೆ. ಇದರಿಂದ ಆದಾಯಕ್ಕೆ ದೊಡ್ಡ ಹೊಡೆತ ಬೀಳುತ್ತದೆ.

ಎರಡನೆಯದು ಹಿತಾಸಕ್ತಿಗಳ ಸಂಘರ್ಷ. ಉದಾಹರಣೆಗೆ 'ಕ' ಎಂಬ ಕಂಪನಿ ಮಕ್ಕಳಿಗೆ ಆ್ಯನಿಮೇಷನ್ ಮುಖಾಂತರ ಗಣಿತವನ್ನು ಕಲಿಸುವ ಮೊಬೈಲ್ ಆ್ಯಪ್ ಅನ್ನು ತಯಾರಿಸುತ್ತಿದೆ ಎಂದಿಟ್ಟುಕೊಳ್ಳೋಣ. ಈ ಕಂಪನಿಯಲ್ಲಿ ಕೆಲಸ ಮಾಡುವ ಉದ್ಯೋಗಿಯು ಇದೇ ರೀತಿ ಗಣಿತ ಕಲಿಸುವ ಮತ್ತೊಂದು ಆ್ಯನಿಮೇಷನ್ ಕಂಪನಿಯಾದ 'ಟ'ಕ್ಕೂ ಸಂಜೆಯ ಸಮಯದಲ್ಲಿ ಕೆಲಸ ಮಾಡುತ್ತಿರುತ್ತಾನೆ. ಅಂದರೆ ಒಂದೇ ರೀತಿಯ ಕೆಲಸ ಮಾಡುವ ಎರಡು ಕಂಪನಿಗಳಿಗೆ ಕೆಲಸ ಮಾಡುವಾಗ ಹಿತಾಸಕ್ತಿ ಸಂಘರ್ಷ ಅಥವಾ conflict of interest ಹುಟ್ಟುತ್ತದೆ. 'ಕ' ಕಂಪನಿಯಲ್ಲಿ ಆ್ಯನಿಮೇಷನ್ ಮತ್ತು ತಂತ್ರಜ್ಞಾನದ ಚರ್ಚೆಗಳು ಸುಲಭವಾಗಿ ಎರಡೂ ಕಂಪನಿಯಲ್ಲಿ ಕೆಲಸ ಮಾಡುವ ಉದ್ಯೋಗಿಯ ಮೂಲಕ ಯಾವುದೇ ಖರ್ಚಿಲ್ಲದೇ 'ಟ' ಕಂಪನಿಗೆ ದೊರೆಯುತ್ತವೆ. 'ಕ'ದಲ್ಲಿ ಕಲಿತದ್ದನ್ನು ಉದ್ಯೋಗಿಯು ಅದೇ ಸಮಯಕ್ಕೆ 'ಟ'ದಲ್ಲೂ ಬಳಸುತ್ತಾನೆ ಅಥವಾ ತಾನೆ ಸ್ವಂತ ಕಂಪನಿ ಸ್ಥಾಪಿಸಿ ಇದೇ ರೀತಿಯ ಆ್ಯಪ್ ಅನ್ನು ತಯಾರಿಸಿದರೆ ಅದೂ ಹಿತಾಸಕ್ತಿ ಸಂಘರ್ಷವಾಗುತ್ತದೆ.

ಮೂರನೆಯದು ಉದ್ಯೋಗಿಗಳ ಸಾಮರ್ಥ್ಯ ಕುಗ್ಗುವಿಕೆ. ಉದ್ಯೋಗಿಯು ದಿನಕ್ಕೆ ಎಂಟು ತಾಸು ಕಂಪನಿಯೊಂದರಲ್ಲಿ ಕೆಲಸ ಮಾಡಿ ಉಳಿದ ಸಮಯದಲ್ಲಿ ಮತ್ತೆ ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗುವುದರಿಂದ ದೈಹಿಕ ಮತ್ತು ಮಾನಸಿಕ ದಣಿವಿನಿಂದ ಆತನ ಉತ್ಪಾದಕತೆ ಕಡಿಮೆಯಾಗುತ್ತದೆ. ಇದೂ ಕಂಪನಿಯ ಆದಾಯಕ್ಕೆ ಪೆಟ್ಟು ಕೊಡುತ್ತದೆ.

ಉದ್ಯೋಗಿಗಳ ನಿಲುವೇನು?

ವಿಪ್ರೊ ಚೇರ್‌ಮನ್ ಅವರು ಮೂನ್ ಲೈಟಿಂಗ್ ಎಂಬುದು ಮಹಾ ಮೋಸ ಎಂದು ಕರೆದಿದ್ದನ್ನು ಆಕ್ಷೇಪಿಸಿರುವ ಇನ್ಫೊಸಿಸ್‌ನ ಮಾಜಿ ನಿರ್ದೇಶಕ ಮೋಹನ್‌ದಾಸ್ ಪೈ, ಇದನ್ನು ಸಾರಾಸಗಟಾಗಿ ಮೋಸ ಎನ್ನಲು ಬರುವುದಿಲ್ಲ. ಉದ್ಯೋಗಿಗಳು ತಮ್ಮ ಬಿಡುವಿನ ಸಮಯದಲ್ಲಿ ಏನು ಮಾಡುತ್ತಾರೆ ಎಂಬುದು ಅವರಿಗೆ ಬಿಟ್ಟದ್ದು ಎಂದು ಹೇಳಿಕೆ ನೀಡಿದ್ದಾರೆ. ಇದಲ್ಲದೇ ಇತ್ತೀಚೆಗೆ ತಮ್ಮ ಹಕ್ಕುಗಳ ಕುರಿತು ಎಚ್ಚೆತ್ತುಕೊಂಡಿರುವ ಹೊಸ ತಲೆಮಾರಿನ ಟೆಕ್ಕಿಗಳು, ನಾವು ನಮ್ಮ ಜೀವನದ ದಿನದ ಎಂಟು ತಾಸುಗಳನ್ನು ಕಂಪನಿಗೆ ಬಾಡಿಗೆ ನೀಡಿ ಕೆಲಸ ಮಾಡಿ, ಸೂಕ್ತ ಮೌಲ್ಯವನ್ನು ಪಡೆಯುತ್ತೇವೆಯೇ ಹೊರತು ನಮ್ಮ ಇಡೀ ಜೀವನವನ್ನು ಅವರಿಗೆ ಬರೆದುಕೊಟ್ಟಿರುವುದಿಲ್ಲ. ಈ ಕೆಲಸ ಮುಗಿದ ಮೇಲೆ ವೈಯಕ್ತಿಕ ಜೀವನದಲ್ಲಿ ಏನೇನು ಮಾಡುತ್ತೇವೆ ಎನ್ನುವುದು ನಮಗೆ ಬಿಟ್ಟದ್ದು ಎಂಬ ನಿಲುವು ತಾಳುತ್ತಿದ್ದಾರೆ.

ಮೂನ್ ಲೈಟಿಂಗ್ ಬಗ್ಗೆ ವಿರೋಧ ವ್ಯಕ್ತಪಡಿಸುವ ಕಂಪನಿಗಳ ನಿರ್ದೇಶಕರು, ಚೇರ್‌ಮನ್‌ಗಳು ಅನೇಕ ಕಂಪನಿಗಳಿಗೆ ಸಲಹೆಗಾರರಾಗಿ, ಗೌರವ ನಿರ್ದೇಶಕರುಗಳಾಗಿ ಕೆಲಸ ಮಾಡಿ ಸಂಬಳ ಪಡೆಯುತ್ತಿರುತ್ತಾರೆ. ಅವರಿಗೆ ಇಲ್ಲದ ಬೇಲಿ ಸಾಮಾನ್ಯ ಉದ್ಯೋಗಿಗಳಿಗೆ ಏಕೆ? ಸಿರಿವಂತರಿಗೊಂದು ಬಡವರಿಗೊಂದು ನ್ಯಾಯವೇ ಎಂಬ ಪ್ರಶ್ನೆಯೂ ಕೇಳಿ ಬರುತ್ತಿದೆ. ಅಲ್ಲದೇ ಇದೇ ಕಂಪನಿಗಳು ಅಮೆರಿಕ, ಆಸ್ಟ್ರೇಲಿಯಾ ಇತ್ಯಾದಿ ದೇಶಗಳಲ್ಲಿ ಕೆಲಸ ಮಾಡುವ ಅಲ್ಲಿನ ಉದ್ಯೋಗಿಗಳಿಗೆ ಮೂನ್ ಲೈಟಿಂಗ್‌ಗೆ ಅವಕಾಶ ಕೊಡುತ್ತವೆ.

11ನೇ ಪುಟಕ್ಕೆ...

ಕಥೆ ಹೇಳುತಾದ ಕಟ್ಟಡ!

> ಕಲ್ಯಾಣ ಕರ್ನಾಟಕ ಶನಿವಾರವಷ್ಟೇ 'ವಿಮೋಚನಾ ದಿನ'ವನ್ನು ಆಚರಿಸಿದೆ. ಹೈದರಾಬಾದ್ ನಿಜಾಮರು ಆಳ್ವಿಕೆ ನಡೆಸುತ್ತಿದ್ದಾಗ ಕಲಬುರಗಿಯೂ ಆ ಸಂಸ್ಥಾನದ ಭಾಗವಾಗಿತ್ತು. ಆ ಅವಧಿಯಲ್ಲಿ ನಿರ್ಮಾಣವಾದ ಕಟ್ಟಡಗಳು ಈಗ ವಿವಿಧ ಕಚೇರಿಗಳ ತಾಣವಾಗಿ ಬದಲಾಗಿವೆ. ಆದರೆ, ಚರಿತ್ರೆಯ ಸಾಕಷ್ಟು ಕಥೆಗಳನ್ನು ಉಸುರುತ್ತಲೇ ಇವೆ, ಗೊತ್ತೆ?

ಡಾ. ರೆಹಮಾನ್ ಪಟೇಲ್

ಕಲ್ಯಾಣ ಕರ್ನಾಟಕ ಭಾಗದಲ್ಲಿ ನಿಜಾಮರ ಅವಧಿಯಲ್ಲಿ ಅರಮನೆಯಾಗಿದ್ದ ಕಟ್ಟಡಗಳೆಲ್ಲ ಈಗ ಸರ್ಕಾರಿ ಕಚೇರಿಗಳಾಗಿವೆ. ಅನನ್ಯ ವಾಸ್ತುಶೈಲಿಯನ್ನು ಬಿಂಬಿಸುವ ಇವುಗಳ ಹಿಂದೆ ಈಗಲೂ ಸ್ವಾರಸ್ಯಕರ ಕಥೆಗಳಿವೆ. ಕಲಬುರಗಿಯ ಜಿಲ್ಲಾ ಪಂಚಾಯಿತಿ ಕಚೇರಿಯೂ ಒಂದು ಕಾಲದಲ್ಲಿ ಮೀರ್ ಮೆಹಬೂಬ್ ಅಲಿ ಖಾನ್ ಅವರು ನಿರ್ಮಿಸಿದ ಅರಮನೆಯಾಗಿತ್ತು ಎಂಬುದು ಬಹುತೇಕರಿಗೆ ಗೊತ್ತೇ ಇಲ್ಲ.

ನಿಜಾಮರ ವೈಭವ ಮತ್ತು ಘನತೆಗೆ ಸಾಕ್ಷಿಯಾಗಿ ಈ ಅರಮನೆ ಈಗಲೂ ಸುಸ್ಥಿತಿಯಲ್ಲಿದೆ. ಜಿಲ್ಲಾ-ತಾಲ್ಲೂಕು ಕಚೇರಿಯಾಗಿ ಬಳಸಲಾಗುತ್ತಿದ್ದ ಈ ಅರಮನೆಯು ಕಲಬುರಗಿ ನಗರದ ಜಗತ್ ವೃತ್ತದಲ್ಲಿದೆ. ಅದನ್ನೀಗ ಸರ್ಕಾರಿ ಅತಿಥಿಗೃಹವಾಗಿ ಬಳಕೆ ಮಾಡಲಾಗುತ್ತಿದೆ.

ಇದು ಅಸಫ್ ಜಾಹಿ ರಾಜವಂಶದ ಆರಂಭಿಕ ಏಕ-ಅಂತಸ್ತಿನ ಕಟ್ಟಡವಾಗಿದೆ. ಇದು ನಿಜಾಮರ ಅರಮನೆಯಾಗಿತ್ತು. ಈ ಕಟ್ಟಡವನ್ನು 1881ರಲ್ಲಿ ಆರನೇ ನಿಜಾಮ್ ಮೀರ್ ಮೆಹಬೂಬ್ ಅಲಿ ಖಾನ್ ಬಹದ್ದೂರ್ ನಿರ್ಮಿಸಿದರು. ಇಲ್ಲಿಂದ ಐತಿಹಾಸಿಕ ಮೆಹಬೂಬ್ ಸಾಗರ್ ಮತ್ತು ಮೆಹಬೂಬ್ ಗುಲ್ಶನ್ ಗಾರ್ಡನ್ ಸ್ಪಷ್ಟವಾಗಿ ಗೋಚರಿಸುತ್ತವೆ.

ಈ ರಚನೆಯು ಬಲವಾದ ನೆಲಮಾಳಿಗೆಯ ಮೇಲೆ ಮತ್ತು ವಿಶಾಲವಾದ ವೇದಿಕೆಯ ಮೇಲೆ ನಿಂತಿದೆ. ಜಿಲ್ಲೆಯಾದ್ಯಂತ ಲಭ್ಯವಿರುವ ಕಪ್ಪು ಕಲ್ಲಿನಲ್ಲಿ ಇದನ್ನು ನಿರ್ಮಿಸಲಾಗಿದೆ. ಚಾವಣಿಯು ಕೊನೆಗೊಳ್ಳುವ ಮಧ್ಯ ಮತ್ತು ಮೇಲಿನ ಭಾಗಗಳಲ್ಲಿ ಶಹಾಬಾದ್ ಬಿಳಿ ಕಲ್ಲಿನ ಸಂಯೋಜನೆಯನ್ನು ಹೊಂದಿದೆ. ಈ ದಪ್ಪ ನಯಗೊಳಿಸಿದ ಕಲ್ಲನ್ನು ಜಿಗ್-ಜಾಗ್ ಶೈಲಿಯಲ್ಲಿ ಇರಿಸಲಾಗಿದೆ. ಪ್ರತಿ ಕೋಣೆಗಳ ನಿರ್ಮಾಣಕ್ಕೆ ಹೆಚ್ಚಾಗಿ ಸಾಗುವಾನಿ ಮರಮಟ್ಟನ್ನು ಬಳಸಲಾಗಿದೆ. ಈ ಕಟ್ಟಡ ಅರ್ಧ ವೃತ್ತಾಕಾರದ ಕಮಾನುಗಳ ಮೇಲೆ ನಿಂತಿರುವ ಎರಡು ಬೃಹತ್ ದ್ವಾರಗಳನ್ನು ಹೊಂದಿದ ದೊಡ್ಡ ತೆರೆದ ನ್ಯಾಯಾಲಯದ ಅಂಗಳವನ್ನೂ ಹೊಂದಿದೆ. ಉತ್ತರ ಭಾಗದಲ್ಲಿ ಹುಲ್ಲುಹಾಸು ಮತ್ತು ಉದ್ಯಾನವನ್ನು ಕಾಣಬಹುದು. ಸದ್ಯ ಅಲ್ಲಿ ಜಿಲ್ಲಾಧಿಕಾರಿಗಳ ಬಂಗಲೆ ಇದೆ.



ಮೀರ್ ಮೆಹಬೂಬ್ ಅಲಿ ಖಾನ್

ಗೋಥಿಕ್ ಯುರೋಪಿಯನ್ ವಾಸ್ತುಶೈಲಿಯ ಪ್ರಭಾವವನ್ನು ಇದು ಹೊಂದಿದೆ. ಕಟ್ಟಡವು ಅನೇಕ ದೊಡ್ಡ ಸಭಾಂಗಣಗಳು ಮತ್ತು ಸಣ್ಣ ಕೊಠಡಿಗಳನ್ನು ಒಳಗೊಂಡಿದೆ. ಅರಮನೆಯ ಆವರಣ ಪ್ರವೇಶಿಸಿದೊಡನೆ ಸುಂದರ ವಿಶಾಲವಾದ ಕಮಾನುಗಳುಳ್ಳ ಕಟ್ಟಡವಿದೆ. ಇದೇ ದಿವಾನ್-ಎ-ಆಮ್ ಅಥವಾ ಸಮಾ ಖಾನಾ. ಇದು ಆ ಕಾಲದಲ್ಲಿ ಜನ ತಮ್ಮ ಕುಂದು ಕೊರತೆಗಳನ್ನು ಹೇಳಿಕೊಳ್ಳಲು ಮೀಸಲಿಟ್ಟಿದ್ದ ಪ್ರದೇಶವಾಗಿತ್ತು. ಈ ಸಭಾಂಗಣವಲ್ಲದೆ ಸಣ್ಣ ವಿಶ್ರಾಂತಿ ಕೊಠಡಿ, ಅಡುಗೆ ಮನೆ ಮತ್ತು ರಾಜರ ಸ್ನಾನಗೃಹಗಳಿವೆ.

ನಾಲ್ಕು ಬದಿಗಳ ಭಾಗಗಳು ಬಹು ಕಮಾನುಗಳ ಸಾಲನ್ನು ಹೊಂದಿದ್ದು, ಅರ್ಧ ವೃತ್ತ ಮತ್ತು ಉದ್ದ ಕಮಾನುಗಳು ಗೋಥಿಕ್ ಮತ್ತು ಯುರೋಪಿಯನ್ ವಾಸ್ತುಶಿಲ್ಪದಿಂದ ಸ್ಫೂರ್ತಿ ಪಡೆದಿವೆ. ಸಿಲಿಂಡರ್ ಆಕಾರದ ಎರಡು ಗೋಪುರಗಳು ಕಟ್ಟಡದ ದಕ್ಷಿಣ ಭಾಗದಲ್ಲಿವೆ. ಈ ಗೋಪುರಗಳು ಮತ್ತು ಪ್ಯಾರಪೆಟ್ ಗೋಡೆಯು ಅರಮನೆಯಾದ್ಯಂತ ವೀಕ್ಷಿಸಲು ತೆರೆದ ಕಿಟಕಿಗಳನ್ನು ಒಳಗೊಂಡಿದೆ.

ರಚನೆಯ ಮಧ್ಯ ಭಾಗವನ್ನು ಸುಮಾರು 30 ಅಡಿ ಎತ್ತರದಲ್ಲಿ ವೆಂಟಿಲೇಟರ್‌ಗಳೊಂದಿಗೆ ನಿರ್ಮಿಸಲಾಗಿದೆ. ಕಟ್ಟಡದೊಳಗೆ ವರ್ಷವಿಡೀ ತಂಪಿರುವಂತೆ ವಿನ್ಯಾಸಗೊಳಿಸಲಾಗಿದೆ. ಕಟ್ಟಡವನ್ನು ನಿರ್ಮಿಸಿದ ವಾಸ್ತುಶಿಲ್ಪಿಯ ಹೆಸರು ತಿಳಿದಿಲ್ಲ. ಕಟ್ಟಡದ ಮುಖ್ಯದ್ವಾರದ ಮುಂದೆ ಒಂದು ಫಿರಂಗಿ ಅಳವಡಿಸಲಾಗಿದ್ದು, ಅದು ಸುಸ್ಥಿತಿಯಲ್ಲಿದೆ.

11ನೇ ಪುಟಕ್ಕೆ...

ಮೀರ್ ಮೆಹಬೂಬ್ ಅಲಿ ಖಾನ್ ಅವರ ಅರಮನೆಯ ನೋಟ

ಕಪ್ಪೆಯಿದ್ದರಷ್ಟೇ ಕಾಲ

ಹೌದು, ಎಲ್ಲಿ ಹೋದವು ಈ ಗ್ವಾಟರ್‌ಗುಟ್ಟುವ ಕಪ್ಪೆಗಳು? ಅಂಥದ್ದೊಂದು ಕುತೂಹಲದ ಬೆನ್ನು ಹತ್ತಿದ ಕೆಲವರಿಗೆ ಅಲ್ಲಲ್ಲಿ ಮರೆಯಲ್ಲಿ ಅವಿತುಕೊಂಡಿರುವ ಕಪ್ಪೆಗಳ ಲೋಕದ ಪರಿಚಯವೂ ಆಯಿತು. 'ನಿಮ್ಮ ಸಾವಾಸ ಬೇಡಾಪ್ಪಾ. ನಾವು ಹೆಂಗೋ ಬದುಕ್ತೀವಿ' ಅಂತ ಮನುಷ್ಯರ ಆವಾಸಸ್ಥಾನದಿಂದ ದೂರವಾಗಿ ತಮ್ಮ ಸಾಮ್ರಾಜ್ಯ ಕಟ್ಟಿವೆಯೇನೋ ಅನ್ನುವಂತಿತ್ತು ಕಪ್ಪೆಗಳ ಮೂಕ ಸ್ವಗತ.

ಮಲೆನಾಡು ಅಥವಾ ಬಯಲು ಸೀಮೆಯಲ್ಲಿ ಹುಟ್ಟಿ ಬೆಳೆದವರಿಗೆ ಕಪ್ಪೆಗಳು ಮತ್ತು ಅವುಗಳ ಪ್ರಭೇದಗಳು ಅಪರಿಚಿತವಲ್ಲ. ಬಣ್ಣಗಪ್ಪೆ, ಕರಿಗಪ್ಪೆ, ಮರಗಪ್ಪೆ, ಹಾರುವ ಹಸುರುಗಪ್ಪೆ ಹೀಗೆ ಹತ್ತಾರು ಹೆಸರುಗಳನ್ನು ಯಾರಾದರೂ ಹೆಸರಿಸಬಲ್ಲರು.

ತೇಜಸ್ವಿ ಅವರ ನೆನಪಿನಲ್ಲಿ ಈ ಕಪ್ಪೆಲೋಕದ ವಿರಾಟ್ ರೂಪದ ದರ್ಶನವಾದದ್ದು ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ. 'ಪರಿಸರ' ನಿಸರ್ಗ ಸಂರಕ್ಷಣಾ ಸಂಸ್ಥೆಯು ಈ ಪ್ರದರ್ಶನವನ್ನು ಏರ್ಪಡಿಸಿದೆ. ವಿಶ್ವದಲ್ಲಿ ಅಂದಾಜು 7,491 ಕಪ್ಪೆ ಪ್ರಭೇದಗಳಿವೆ. ಭಾರತದಲ್ಲಿ ಇವುಗಳ ಸಂಖ್ಯೆ ಅಂದಾಜು 406. ಪಶ್ಚಿಮಘಟ್ಟದಲ್ಲಿ ಇವುಗಳ ಸಂಖ್ಯೆ ಅಂದಾಜು 253 ಆಗಿದ್ದರೆ, ಕರ್ನಾಟಕದಲ್ಲಿ ಅಂದಾಜು 91 ಇರಬಹುದು. ಒಟ್ಟಾರೆ ಪಶ್ಚಿಮ ಘಟ್ಟ ಹಾಗೂ ನಮ್ಮ ನಾಡಿನಲ್ಲಿರುವ ಅಂದಾಜು 250ಕ್ಕೂ ಹೆಚ್ಚು ಪ್ರಭೇದದ ಕಪ್ಪೆಗಳು ಗಂಡಾಂತರ ಎದುರಿಸುತ್ತಿವೆ. 'ತೇಜಸ್ವಿ ಜೀವಲೋಕ-10, ಕಪ್ಪೆ ಲೋಕ' ಛಾಯಾಚಿತ್ರ, ಸಾಕ್ಷ್ಯಚಿತ್ರ ಪ್ರದರ್ಶನ ಅದನ್ನು ಎತ್ತಿ ತೋರಿಸುತ್ತಿದೆ.

1983ರ ಅವಧಿಯಲ್ಲಿ ಭಾರತದಿಂದ 10 ಸಾವಿರ ಟನ್ ಕಪ್ಪೆ ಕಾಲು ರಫ್ತಾಗಿದ್ದುದು, ಕಪ್ಪೆ ಕೊಂದು ಕಾಲು ರಾಶಿ ಹಾಕಿದ್ದು... ಇತ್ಯಾದಿ ಹಲವಾರು ಕಪ್ಪೆ ಹತ್ಯಾಕಾಂಡದ ಕಥನಗಳು ಇಲ್ಲಿ ದಾಖಲಾಗಿವೆ. ನೆನಪಿಡಿ: ಕಪ್ಪೆಗಷ್ಟೇ ಅಲ್ಲ, ಕಪ್ಪೆಯಿದ್ದರಷ್ಟೇ ಜೀವ ಸಂಕುಲಕ್ಕೂ ಒಳ್ಳೆಯ ಕಾಲ ಎಂಬುದನ್ನು ಈ ಪ್ರದರ್ಶನ ಮತ್ತೆ ಮತ್ತೆ ಒತ್ತಿ ಹೇಳುತ್ತಿದೆ.

ಡಿಜಿಟಲ್ 'ಬಲ'ದ ಜ್ಞಾನ ದೀವಿಗೆಯನ್ನು ಹಿಡಿದು ಹೊರಟರೆ ಗ್ರಾಮ ಭಾರತದಲ್ಲಿ ಹೇಗೆಲ್ಲ ಬದಲಾವಣೆ ತರಬಹುದು ಎನ್ನುವುದಕ್ಕೆ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಹಳ್ಳಿಗಳೇ ಸಾಕ್ಷಿ. ಡಿಜಿಟಲ್ ನೆರವಿನಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಕೆಲಸ ಮಾಡುತ್ತಿರುವ ಚೆರಿಷ್ ಟ್ರಸ್ಟ್‌ನ ಯಶೋಗಾಥೆ ಇಲ್ಲಿದೆ...

ಉತ್ತರಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಮುಂಡವಾಡ ಗ್ರಾಮದಲ್ಲಿ ಶಾಲು ಸಿದ್ಧಪಡಿಸುವ ಕಾಯಕದಲ್ಲಿ ಮಹಿಳೆಯರ ತಂಡ

ಪ್ರಜಾವಾಣಿ ಚಿತ್ರಗಳು: ಬಿ.ಎಂ.ಕೇದಾರನಾಥ

ಗ್ರಾಮೀಣ ಭಾಗದಲ್ಲೂ ಡಿಜಿಟಲ್ ಕ್ರಾಂತಿ

ಇ.ಎಸ್. ಸುಧೀಂದ್ರ ಪ್ರಸಾದ್

ನೋಟ-1

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಕಂಪ್ಯೂಟರ್ ಪ್ರೋಗ್ರಾಮ್ ಮೂಲಕ ತಮ್ಮದೇ ಆದ ಗೇಮ್ ಸಿದ್ಧಪಡಿಸುತ್ತಾರೆ. ಮೈಕ್ರೊಪ್ರೊಸೆಸರ್ ಬಳಸಿ ಎಲ್‌ಇಡಿ ಬಲ್ಬ್‌ಗಳನ್ನು ತಮ್ಮಿಷ್ಟದಂತೆ ಹೊತ್ತಿಸುತ್ತಾರೆ ಮತ್ತು ಕುಣಿಸುತ್ತಾರೆ. ಅದರೊಂದಿಗೆ ಆಡುತ್ತಲೇ ಡಿಜಿಟಲ್ ಶಿಕ್ಷಣವನ್ನೂ ಪಡೆಯುತ್ತಾರೆ. ಇಷ್ಟೇ ಅಲ್ಲ, ಅರಳು ಹುರಿದಂತೆ ಇಂಗ್ಲಿಷ್ ಮಾತನಾಡುತ್ತಾರೆ. ಯಾವುದೇ ಪಟ್ಟಣದ ಇಂಗ್ಲಿಷ್ ಮಾಧ್ಯಮ ಶಾಲೆ ಮಕ್ಕಳಿಗೂ ಬಿಟ್ಟುಕೊಡದಂತೆ ನಿರರ್ಗಳವಾಗಿ ಭಾಷಣ ಮಾಡುತ್ತಾರೆ.

ನೋಟ-2

ಮುಂಡವಾಡ ಬ್ರ್ಯಾಂಡ್‌ನ ಶಾಲನ್ನು ಇಲ್ಲಿನ ಮಹಿಳೆಯರ ಗುಂಪು ಸಿದ್ಧಪಡಿಸುತ್ತದೆ. ಇದಕ್ಕೆ ದೇಶ, ವಿದೇಶಗಳಲ್ಲಿ ಭಾರಿ ಬೇಡಿಕೆ ಬರುತ್ತದೆ. ಇಲ್ಲಿನ ರೈತ ಮಹಿಳೆಯರು ಬೆಳೆಸುವ ಕಬ್ಬಿನ ಸಸಿಗಳಿಗೆ ಆನ್‌ಲೈನ್ ಮೂಲಕ ದೊಡ್ಡ ಮಾರುಕಟ್ಟೆ ಸೃಷ್ಟಿಯಾಗುತ್ತದೆ. ಮಹಿಳೆಯರ ತಂಡ ಸಿದ್ಧಪಡಿಸುವ ಉಪ್ಪಿನಕಾಯಿ, ಚಟ್ನಿಪುಡಿ, ಶೇಂಗಾ ಉಂಡೆಗೆ ಮೇಳಗಳಲ್ಲಿ ಎಲ್ಲಿಲ್ಲದ ಬೇಡಿಕೆ ಗಿಟ್ಟಿಸುತ್ತದೆ.

ಕ್ರಿಸ್ಟಿನಾ ಘೋಷ್

ಮೇಲಿನ ಈ ಎರಡೂ ನೋಟಗಳು ಕಾಣಸಿಗುವುದು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ. ಈ ಬದಲಾವಣೆಗೆ ಕಾರಣವಾಗಿರುವುದು ಚೆರಿಷ್ ಟ್ರಸ್ಟ್.

2011ರಲ್ಲಿ ಕಾರ್ಯಾರಂಭ ಮಾಡಿದ ಈ ಚೆರಿಷ್, ಈಗ ಹಳಿಯಾಳ ತಾಲ್ಲೂಕಿನಲ್ಲಿ ಜನಜನಿತ. ಗ್ರಾಮೀಣ ಹಾಗೂ ಸೌಲಭ್ಯ ವಂಚಿತ ಮಕ್ಕಳಿಗೆ ಡಿಜಿಟಲ್ ನೆರವಿನಿಂದ ಗುಣಮಟ್ಟದ ಶಿಕ್ಷಣವನ್ನು ಈ ಸಂಸ್ಥೆ ನೀಡುತ್ತಿದೆ. ಇದರೊಂದಿಗೆ ಕೌಶಲಾಭಿವೃದ್ಧಿ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿದೆ. ಟ್ರಸ್ಟ್‌ನ ಪ್ರಯತ್ನದಿಂದಾಗಿ ತಾಲ್ಲೂಕಿನ 48 ಹಳ್ಳಿಗಳಲ್ಲಿ ಚೆರಿಷ್ ಟ್ರಸ್ಟ್‌ನಿಂದ ಬದುಕು ಕಟ್ಟಿಕೊಂಡು ಸಾರ್ಥಕಗೊಂಡವರ ಕಥೆಗಳು ಸುರಳಿಯಂತೆ ಬಿಚ್ಚಿಕೊಳ್ಳುತ್ತಲೇ ಸಾಗುತ್ತವೆ.

ಐದು ವರ್ಷಗಳ ಹಿಂದೆ ಟ್ರಸ್ಟ್ ಆರಂಭಿಸಿದ ಶಿಕ್ಷಾ ಎಂಬ 'ಕಲಿಯುವ ಮನೆ' ಯೋಜನೆಯಡಿ, ಕೋವಿಡ್ ನಂತರದಲ್ಲಿ ಆರಂಭಿಸಲಾದ ಇ-ಶಿಕ್ಷಾ ಎಂಬ ಡಿಜಿಟಲ್ ಕಲಿಕಾ ವೇದಿಕೆ ಮೂಲಕ ಗ್ರಾಮೀಣ ಭಾಗದ ಮಕ್ಕಳನ್ನು ನಗರ ಪ್ರದೇಶದ ಮಕ್ಕಳ ಸಮಾನಕ್ಕೆ ತರುವ ಪ್ರಯತ್ನ ಒಂದೆಡೆಯಾದರೆ, ಗ್ರಾಮೀಣ ಭಾಗದಲ್ಲಿನ ಅವಕಾಶ ವಂಚಿತ ಮಹಿಳೆಯರಿಗೆ ಉದ್ಯೋಗ ಕಲ್ಪಿಸಿಕೊಡುವ ಕೆಲಸ ಇನ್ನೊಂದೆಡೆ.

ಅರ್ಲವಾಡ ಗ್ರಾಮದ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ 147. 5ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ ಇಲ್ಲಿ ಕಂಪ್ಯೂಟರ್ ಪ್ರೋಗ್ರಾಮಿಂಗ್ ಶಿಕ್ಷಣ ನೀಡಲಾಗುತ್ತಿದೆ. ಚೆರಿಷ್ ಟ್ರಸ್ಟ್ ಇದಕ್ಕಾಗಿ ಸಂಯೋಜಕಿಯರನ್ನು ನೇಮಿಸಿದೆ. ಶಾಲಾ ದಿನಗಳಲ್ಲಿ ನಿತ್ಯ ಎರಡು ಗಂಟೆ ಕೆಲಸ ಮಾಡುವ ಇವರು, ಪ್ರೋಗ್ರಾಮಿಂಗ್ ಕೌಶಲವನ್ನು ಮಕ್ಕಳು ಕಲಿಸುತ್ತಿದ್ದಾರೆ.

'ಈ ಪ್ರೋಗ್ರಾಮಿಂಗ್ ಮೂಲಕ ಕೆಲವೇ ನಿಮಿಷಗಳಲ್ಲಿ ನಾವು ಬಗೆಬಗೆಯ ಕಂಪ್ಯೂಟರ್ ಗೇಮ್, ಮೈಕ್ರೊಪ್ರೊಸೆಸರ್ ಬಳಸಿ ಹಾರ್ಡ್‌ವೇರ್ ನಿಯಂತ್ರಣ ಸೇರಿದಂತೆ ಹಲವು ಕೌಶಲಗಳನ್ನು ಕಲಿತಿದ್ದೇವೆ. ಇದರಿಂದ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಹೊಸತನ್ನು ಮಾಡುವ ಹುಮ್ಮಸ್ಸು ಮೂಡಿದೆ. ಮುಂದಿನ ಹಂತವನ್ನು ಕಲಿಯುವ ತುಡಿತ ಹೆಚ್ಚಾಗಿದೆ' ಎನ್ನುವುದು ವಿದ್ಯಾರ್ಥಿನಿ ಸೌಮ್ಯಾ ಅನಿಸಿಕೆ.

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಅರ್ಲವಾಡ ಗ್ರಾಮದ ಸರ್ಕಾರಿ ಶಾಲೆ ಮಕ್ಕಳಿಗೆ ಕಂಪ್ಯೂಟರ್ ಪ್ರೋಗ್ರಾಮಿಂಗ್ ಶಿಕ್ಷಣ ನೀಡುತ್ತಿರುವ ಚೆರಿಷ್ ಟ್ರಸ್ಟ್‌ನ ಸಂಯೋಜಕಿ

'ನಿತ್ಯ ಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ಪ್ರೋಗ್ರಾಮಿಂಗ್ ಕೌಶಲ, ಎಲೆಕ್ಟ್ರಿಕ್ ಹಾಗೂ ಎಲೆಕ್ಟ್ರಾನಿಕ್ ಬಿಡಿಭಾಗಗಳ ಪರಿಚಯ ಹಾಗೂ ಅವುಗಳ ಬಳಕೆ ಕುರಿತು ಹೇಳುತ್ತಿದ್ದೇನೆ. ಇದರಿಂದ ಕಲಿಯುವ ಹಾಗೂ ಕಲಿಸುವ ಕೌಶಲ ಕರಗತವಾಗುತ್ತಿದೆ. ಜತೆಗೆ ಜೀವನ ನಿರ್ವಹಣೆಗೂ ಟ್ರಸ್ಟ್‌ನ ಕಾರ್ಯಕ್ರಮ ನೆರವಾಗಿದೆ' ಎಂದು ಸಂಯೋಜಕಿ ಪೂರ್ಣಿಮಾ ಹೇಳುತ್ತಾರೆ.

ಇದರ ಜತೆಯಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣ ಯೋಜನೆಯ ಭಾಗವಾಗಿ ಮುಂಡವಾಡ ಶಾಲು ಈಗ ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಜನಪ್ರಿಯ ಉತ್ಪನ್ನವಾಗಿದೆ. ಲೂಧಿಯಾನದಿಂದ ಕಚ್ಚಾ ಪದಾರ್ಥ ಖರೀದಿಸಿ, ಗ್ರಾಮದ ಸುಮಾರು 20 ಮಹಿಳೆಯರು ಸೇರಿ ಶಾಲುಗಳನ್ನು ಸಿದ್ಧಪಡಿಸುತ್ತಿದ್ದಾರೆ. ತಂಡವಾಗಿ ರಾಜ್ಯ ಹಾಗೂ ಹೊರರಾಜ್ಯಗಳ ಪ್ರವಾಸ ಮಾಡಿ, ಉತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಳ್ಳುತ್ತಿದ್ದಾರೆ. ಇದರ ಜತೆಯಲ್ಲೇ ಇ-ಮಾರುಕಟ್ಟೆ ಮೂಲಕವೂ ಮುಂಡವಾಡ ಶಾಲು ಜನಪ್ರಿಯಗೊಳಿಸಲು ಚೆರಿಷ್ ಟ್ರಸ್ಟ್ ನೆರವಾಗಿದೆ ಎನ್ನುತ್ತಾರೆ ಈ ತಂಡದ ಸೈನಾಜ್ ಬೇಗಂ ಖತಾರ್.

ಇಷ್ಟು ಮಾತ್ರವಲ್ಲ, ಇದೇ ಗ್ರಾಮದಲ್ಲಿ ಕಬ್ಬಿನ ಸಸಿಗಳನ್ನು ಬೆಳೆಸುವ ಮತ್ತೊಂದು ಮಹಿಳಾ ಗುಂಪಿಗೂ ಚೆರಿಷ್ ನೆರವಾಗಿದೆ. ಫೇಸ್‌ಬುಕ್ ಹಾಗೂ ಇನ್ನಿತರ ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಂಡು ಇವರು ಯಶಸ್ಸಿನ ಹಾದಿಯಲ್ಲಿ ಸಾಗಿದ್ದಾರೆ.

ತಾಲ್ಲೂಕಿನ ಜೋಗನಕೊಪ್ಪ ಗ್ರಾಮದಲ್ಲಿ ಹತ್ತು ಜನ ಮಹಿಳೆಯರ ತಂಡ ಸಿದ್ಧಪಡಿಸುತ್ತಿರುವ ಚಟ್ನಿಪುಡಿ, ಉಪ್ಪಿನಕಾಯಿ ತಿಂದವರು ನಾಲಿಗೆ ಚಪ್ಪರಿಸದೇ ಇರಲಾರರು. ಹುಬ್ಬಳ್ಳಿಯಲ್ಲಿರುವ ದೇಶಪಾಂಡೆ ಪ್ರತಿಷ್ಠಾನದ ಮಳಿಗೆ ಸೇರಿದಂತೆ ಮಹಾನಗರಗಳಲ್ಲಿ ನಡೆಯುವ ಮೇಳಗಳಲ್ಲಿ ಈ ತಂಡದ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ. ಪ್ರತಿ ಹಳ್ಳಿಗೂ ಭೇಟಿ ನೀಡಿ ಮಹಿಳೆಯರ ಆಸಕ್ತಿಯನ್ನು ಅರಿತು, ಅವರಿಗೆ ಕೌಶಲ ತರಬೇತಿ, ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಮೂಲಕ ಅವರನ್ನು ಸಬಲರನ್ನಾಗಿಸುವ ಕಾರ್ಯ ನಿರಂತರವಾಗಿ ಸಾಗಿದೆ ಎಂದು ಚೆರಿಷ್ ಟ್ರಸ್ಟ್‌ನ ಕ್ಷೇತ್ರ ಮುಖ್ಯಸ್ಥ ನಾಗರಾಜ ಕುಲಕರ್ಣಿ ಹೇಳುತ್ತಾರೆ.

ಒಂದು ತಾಲ್ಲೂಕಿನ ಅಷ್ಟೂ ಗ್ರಾಮಗಳಲ್ಲಿ ಎಲ್ಲಾ ವಿಭಾಗಗಳಲ್ಲೂ ಕೆಲಸ ಮಾಡುವ ಮೂಲಕ ಆ ಭಾಗದ ಸಮುದಾಯದಲ್ಲಿ ಸಂಪೂರ್ಣ ಬದಲಾವಣೆ ತರಲು ಸಾಧ್ಯ. ಈ ಮಾದರಿ ಯಶಸ್ವಿ ಮಾರ್ಗದಲ್ಲಿದ್ದು, ಇದನ್ನು ಇತರ ಭಾಗಗಳಲ್ಲೂ ಅಳವಡಿಸುವ ಯೋಜನೆ ಇದೆ. ಡಿಜಿಟಲ್ ಕಲಿಕೆಯು ಸರ್ಕಾರಿ ಶಾಲೆಗಳ ಪಠ್ಯಕ್ರಮದ ಭಾಗವಾಗಬೇಕು. ಆ ಮೂಲಕ ನಗರ ಮತ್ತು ಗ್ರಾಮೀಣ ಭಾಗದ ಅಂತರ ಕಡಿಮೆಯಾಗಬೇಕು ಎನ್ನುವುದು ಟ್ರಸ್ಟ್‌ನ ಉದ್ದೇಶ ಎನ್ನುತ್ತಾರೆ ಸಿಇಒ ಕ್ರಿಸ್ಟಿನಾ ಘೋಷ್.

ಮೂನ್ ಲೈಟಿಂಗ್

10ನೇ ಪುಟದಿಂದ...

ಭಾರತದಲ್ಲಿ ಮಾತ್ರ ಈ ರೀತಿ ನಿರ್ಬಂಧ ಹೇರುವುದು ಎಷ್ಟು ಸರಿ? ಇದು ಭಾರತದಲ್ಲಿನ ದುರ್ಬಲ ಕಾರ್ಮಿಕ ಕಾನೂನು ಮತ್ತು ಉದ್ಯೋಗಿಗಳ ಅಭದ್ರತೆಯನ್ನು ಬಳಸಿಕೊಂಡು ಅವರಿಂದ ದಿನಕ್ಕೆ ಎರಡು ಪಟ್ಟು ದುಡಿಸಿಕೊಂಡು ಶೋಷಿಸುವ ಹುನ್ನಾರವಷ್ಟೆ ಎಂದೂ ವಿಶ್ಲೇಷಿಸಲಾಗುತ್ತದೆ. ಎಲ್ಲಿಯವರೆಗೆ ನಾವು ನಮ್ಮ ಡೆಡ್‌ಲೈನ್‌ಗಳನ್ನು ಮುಟ್ಟುತ್ತೇವೋ ಎಲ್ಲಿಯವರೆಗೆ ನಮ್ಮ ಹೊರಗಿನ ಉದ್ಯೋಗವು ಕಂಪನಿಯ ಉದ್ಯೋಗದ ವೇಗಕ್ಕೆ ಧಕ್ಕೆ ತರುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಎರಡನೆಯ ಉದ್ಯೋಗವನ್ನು ಪ್ರಶ್ನಿಸಬಾರದು ಎಂಬುದು ಐ.ಟಿ. ಕಂಪನಿ ಉದ್ಯೋಗಿಗಳ ಅಂಬೋಣ.

ಕಾನೂನು ಏನು ಹೇಳುತ್ತದೆ?

ವಿಶ್ವದ ಬಹುತೇಕ ದೇಶಗಳಲ್ಲಿ ದ್ವಿ ಉದ್ಯೋಗ ಎಂಬುದು ಕಾನೂನುಬದ್ಧವಾಗಿದೆ. ಭಾರತದಲ್ಲಿ ಇದರ ಬಗ್ಗೆ ಕಾನೂನಿನಲ್ಲಿ ಸ್ಪಷ್ಟ ನಿರ್ದೇಶನಗಳಿಲ್ಲ. ಆದರೆ, 1948ರ ಫ್ಯಾಕ್ಟರಿಗಳ ಕಾಯ್ದೆ ಅನುಚ್ಛೇದ 60ರಲ್ಲಿ ಒಂದು ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಯು ಒಂದೇ ದಿನ ಎರಡು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಬಾರದು ಎಂದು ನಿರ್ದೇಶಿಸುತ್ತದೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬುದು ಬೇರೆಯೇ ಚರ್ಚೆಯ ವಿಷಯ. ಆದರೆ ಈ ನಿರ್ದೇಶನ ಐ.ಟಿ. ಕಂಪನಿಯ ಉದ್ಯೋಗಿಗಳಿಗೆ ಅನ್ವಯವಾಗುವುದಿಲ್ಲ.

ಹಾಗಿದ್ದರೆ ಮೂನ್ ಲೈಟಿಂಗ್ ಯಾವಾಗ ಸರಿ, ಯಾವಾಗ ತಪ್ಪು? ಮೂನ್ ಲೈಟಿಂಗ್ ಬಗ್ಗೆ ಐಪಿಸಿಯಲ್ಲಿ ಸ್ಪಷ್ಟವಾದ ಯಾವುದೇ ನಿರ್ದೇಶನ ಇಲ್ಲದಿರುವುದರಿಂದ ಕಂಪನಿ ಮತ್ತು ಉದ್ಯೋಗಿಗಳ ನಡುವಿನ ಒಪ್ಪಂದವೇ ಇದರ ಸಂವಿಧಾನ. ಉದ್ಯೋಗಿಗಳು ಕೆಲಸವನ್ನು ಒಪ್ಪಿಕೊಳ್ಳುವ ಮುನ್ನ ಕಂಪನಿಯು ಒದಗಿಸುವ ಔದ್ಯೋಗಿಕ ಒಪ್ಪಂದದ ಪ್ರತಿಯನ್ನು ಒಮ್ಮೆ ವಿವರವಾಗಿ ಓದಿಕೊಂಡು ಸಾಧ್ಯವಾದರೆ ಕಾನೂನು ತಜ್ಞರ ಸಲಹೆ ಪಡೆದು ಮುಂದುವರಿಯುವುದು ಸೂಕ್ತ. ಒಪ್ಪಂದದಲ್ಲಿ ಕಂಪನಿಯು ತನ್ನಲ್ಲಿ ಬಿಟ್ಟು ಬೇರೆಡೆಗೆ ಕೆಲಸ ಮಾಡುವಂತಿಲ್ಲ ಎಂಬ ಅನುಬಂಧವನ್ನು ಸೇರಿಸಿದ್ದು, ಅದಕ್ಕೆ ನೀವು ಸಹಿ ಹಾಕಿದ್ದರೆ, ಅದನ್ನು ಪಾಲಿಸಬೇಕಾಗುತ್ತದೆ. ತಪ್ಪಿ ಕಂಪನಿಯ ಅನುಮತಿ ಪಡೆಯದೇ ಮತ್ತೊಂದು ಉದ್ಯೋಗದಲ್ಲಿ ತೊಡಗಿಕೊಂಡರೆ ಕಂಪನಿಯು ಅವರ ಮೇಲೆ ಕಾನೂನು ಕ್ರಮ ಜರುಗಿಸಬಹುದು. ಕಂಪನಿಯು ಮೂನ್ ಲೈಟಿಂಗ್ ಬಗ್ಗೆ ಯಾವುದೇ ನಿಯಮಗಳನ್ನು ಒಪ್ಪಂದದಲ್ಲಿ ನೀಡಿಲ್ಲವೆಂದರೆ ಹೆಚ್ಚುವರಿ ಉದ್ಯೋಗಗಳಲ್ಲಿ ನಿರಾತಂಕವಾಗಿ ತೊಡಗಿಕೊಳ್ಳಬಹುದು. ಕೆಲ ಕಂಪನಿಗಳು ಭಾಗಶಃ ಮೂನ್ ಲೈಟಿಂಗ್‌ಗೆ ಅನುಮತಿ ನೀಡುತ್ತವೆ. ಅಂದರೆ ಒಪ್ಪಂದದಲ್ಲಿ ಇಂತಿಂಥ ಕಂಪನಿಗಳ ಪರವಾಗಿ ಕೆಲಸ ಮಾಡುವ ಹಾಗಿಲ್ಲ ಅಥವಾ ಇಂತಿಂಥ ಕ್ಷೇತ್ರಗಳಲ್ಲಿ ಕೆಲಸ ಮಾಡುವಂತಿಲ್ಲ ಎಂಬ ನಿಬಂಧನೆಗಳನ್ನು ಒಡ್ಡುತ್ತವೆ.

ಇನ್ನೊಂದು ನೈತಿಕ ಪ್ರಶ್ನೆಯೂ ಇಲ್ಲಿ ಏಳುತ್ತದೆ. ಸಾಫ್ಟ್‌ವೇರ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದವನು ಸಂಗೀತ ಕಛೇರಿ ಮಾಡುವ ಮೂಲಕ ಹಣ ಸಂಪಾದಿಸುತ್ತಿದ್ದರೆ ಅಥವಾ ಕಾರ್‌ಗಳನ್ನು ಪ್ರವಾಸೋದ್ಯಮಿಗಳಿಗೆ ಬಾಡಿಗೆ ಕೊಡುವ ವ್ಯಾಪಾರ ಮಾಡುತ್ತಿದ್ದರೆ ಮೂನ್ ಲೈಟಿಂಗ್ ಅನ್ನು ನಿರಾಕರಿಸಲು ಕಾರಣವಾಗುವ ಮೇಲೆ ವಿವರಿಸಿದ ಯಾವುದೇ ಭೀತಿ ಕಂಪನಿಗಳಿಗೆ ಇರುವುದಿಲ್ಲವಲ್ಲ. ಆಗ ಮೂನ್ ಲೈಟಿಂಗ್ ಮಾಡಬಹುದೇ? ಈ ಬಗ್ಗೆ ಇತ್ತೀಚಿಗಿನ ಚರ್ಚೆಯಲ್ಲಿ ಇನ್ಫೋಸಿಸ್ ನಿರ್ದೇಶಕರು ಈ ರೀತಿಯ ಕೆಲಸಗಳನ್ನು ಕಂಪನಿಯ ಅನುಮತಿ ಪಡೆದು ಮಾಡಬಹುದು. ಆದರೆ ಕಂಪನಿಯು ಯಾವುದೇ ಸಮಯದಲ್ಲಿ ಈ ಅನುಮತಿಯನ್ನು ಹಿಂಪಡೆಯಬಹುದು ಎಂದು ಹೇಳಿದ್ದು ಮತ್ತೆ ಚರ್ಚೆಗೆ ಕಾರಣವಾಗಿತ್ತು.

ಕಡೆಗೆ ಮೂನ್ ಲೈಟಿಂಗ್ ಎಂಬುದು ನೈತಿಕವಾಗಿ ಎಷ್ಟು ಸರಿ ಎಂಬುದರ ಬಗ್ಗೆಯೇ ಚರ್ಚೆ ಸುತ್ತುವರಿಯುತ್ತದೆ. ಉದ್ಯೋಗಿಗಳ ದುಡಿಯುವ ಹಕ್ಕನ್ನು ನಿಯಂತ್ರಿಸುವುದು ಮಾನವ ಹಕ್ಕುಗಳ ಉಲ್ಲಂಘನೆಯೋ ಅಥವಾ ಹೆಚ್ಚುವರಿಯಾಗಿ ದುಡಿಯುವುದು ತನ್ನನ್ನು ನಂಬಿದ ಕಂಪನಿಗೆ ದ್ರೋಹ ಮಾಡಿದಂತೆಯೋ ಎಂಬುದು ಇನ್ನೂ ಚರ್ಚೆಯಾಗುತ್ತದೆ. ಆದರೆ ಕೊನೆಗೆ ಈ ಚರ್ಚೆಗಳು ರೂಪಿಸಲಿರುವ ಕಾನೂನು ಬಂಡವಾಳಶಾಹಿ ಕಂಪನಿಗಳ ಪರವಾಗಿ ಇರುವುದೋ ಅಥವಾ ಉದ್ಯೋಗಿಗಳ ಪರವಾಗಿರುವುದೋ?



ಐತಿಹಾಸಿಕ ಐವಾನ್-ಇ-ಶಾಹಿ ಕಟ್ಟಡ ಇದೀಗ ಸರ್ಕಾರಿ ಅತಿಥಿ ಗೃಹ

ಕಥೆ ಹೇಳುತಾದ ಕಟ್ಟಡ!

10ನೇ ಪುಟದಿಂದ...

ಇಂಥ ರಚನೆಗಳನ್ನು ಆರನೇ ಅಸಫ್ ಜಾಹಿ ಅವರ ಆಳ್ವಿಕೆಯಲ್ಲಿ ನಿರ್ಮಿಸಲಾಯಿತು. ಸರ್ ಮೀರ್ ಮೆಹಬೂಬ್ ಅಲಿ ಖಾನ್ ಬಹದ್ದೂರ್ (1866-1911) ಮತ್ತು ಅವನ ಮಗ ಮೀರ್ ಓಸ್ಮಾನ್ ಅಲಿ ಖಾನ್ ಬಹದ್ದೂರ್ ಕೊನೆಯ ಮತ್ತು ಏಳನೇ ನಿಜಾಮ್ ಅವರನ್ನು ಹೈದರಾಬಾದ್ ಆಧುನಿಕ ವಾಸ್ತುಶಿಲ್ಪಿ ಎಂದು ಕರೆಯುತ್ತಾರೆ. ಅವರು ಅಸಫ್ ಜಾಹಿ ರಾಜವಂಶದ ಕೊನೆಯ ಆಡಳಿತಗಾರರಾಗಿದ್ದರು. 1948ರ ಸೆಪ್ಟೆಂಬರ್ 17ರಂದು ಹೈದರಾಬಾದ್‌ನ ಸ್ವತಂತ್ರ ಮತ್ತು ಅತಿದೊಡ್ಡ ರಾಜಪ್ರಭುತ್ವದ ಭಾಗವಾಗಿದ್ದ ಈ ಪ್ರದೇಶವನ್ನು ಸ್ವತಂತ್ರ ಭಾರತೀಯ ಒಕ್ಕೂಟವು ಸ್ವಾಧೀನಪಡಿಸಿಕೊಂಡಿತು.

ಸಂಸ್ಕೃತಿ, ಪಾಕಪದ್ಧತಿ, ಸೌಂದರ್ಯಶಾಸ್ತ್ರ, ಕಟ್ಟಡ, ವಾಸ್ತುಶಿಲ್ಪ, ಶಿಕ್ಷಣ, ಆರೋಗ್ಯ ರಕ್ಷಣೆ, ಬ್ಯಾಂಕಿಂಗ್, ರಸ್ತೆ, ರೈಲು ಮಾರ್ಗ, ವಿದ್ಯುತ್ ಶಕ್ತಿ ಸ್ಥಾಪನೆ, ದೂರವಾಣಿ ಮಾರ್ಗ ಮತ್ತು ಅಂಚೆ ಸೇವೆಗೆ ಸಂಬಂಧಿಸಿದಂತೆ ಹೆಚ್ಚಿನ ಅಭಿವೃದ್ಧಿಯು ಮೀರ್ ಮೆಹಬೂಬ್ ಅಲಿ ಖಾನ್ ಆಳ್ವಿಕೆಯಲ್ಲಿ ನಡೆದಿದೆ. ಕೊನೆಯ ಇಬ್ಬರು ನಿಜಾಮರು ಇಲ್ಲಿ ಆಳ್ವಿಕೆ ನಡೆಸಿದರು ಮತ್ತು ಅವರ ಆಡಳಿತದ ಪುರಾವೆಗಳನ್ನು ಇಂದಿಗೂ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕಾಣಬಹುದು. ಅವರು ಸ್ವತಂತ್ರವಾಗಿ 'ಹಲಿ ಸಿಕ್ಕಾ' ಎಂದು ಕರೆಯಲಾಗುವ ಹೊಸ ನಾಣ್ಯಗಳನ್ನು ಟಂಕಿಸಿದರು. ಕಾಗದದ ನೋಟುಗಳನ್ನು ಉರ್ದು, ಕನ್ನಡ, ತೆಲುಗು, ಮರಾಠಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮುದ್ರಿಸಿದರು. 1918 ರಿಂದ 1926ರ ನಡುವೆ ಉಸ್ಮಾನಿಯಾ ಸಿಕ್ಕಾ ಎಂದು ಗುರುತಿಸುವ ನೋಟುಗಳನ್ನು 1, 5, 10, 100 ಮತ್ತು 1,000 ರೂಪಾಯಿ ಮುಖಬೆಲೆಯಲ್ಲಿ ನೀಡಲಾಯಿತು. ಅಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಲಾಗುತ್ತಿತ್ತು. ಇತರ ರಾಜ್ಯಗಳ ಮರುಸಂಘಟನೆಯ ಹಿನ್ನೆಲೆಯಲ್ಲಿ 1959ರಲ್ಲಿ ಉಸ್ಮಾನಿಯಾ ಸಿಕ್ಕಾವನ್ನು ರದ್ದುಗೊಳಿಸಲಾಯಿತು. ನೋಟುಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಮುದ್ರಿಸುತ್ತಿತ್ತು. ಈ ಬ್ಯಾಂಕ್ 2017ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಜೊತೆಗೆ ವಿಲೀನವಾಯಿತು.

ಕಲಬುರಗಿ, ರಾಯಚೂರು, ಬೀದರ್, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಇಂದಿಗೂ ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯತ್ ಕಚೇರಿ, ತಹಶೀಲ್ದಾರ್ ಕಚೇರಿ, ಪೊಲೀಸ್ ಠಾಣೆ, ಶಾಲೆ ಮತ್ತು ಕಾಲೇಜು ನಿಜಾಮರ ಕಾಲದಲ್ಲಿ ನಿರ್ಮಿಸಲಾದ ಅನೇಕ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಕಲಬುರಗಿಯಲ್ಲಿ ನಿಜಾಮರ ಆಳ್ವಿಕೆಯಲ್ಲಿ ನಿರ್ಮಿಸಲಾದ ರಚನೆಯ ಅವಶೇಷಗಳೆಂದರೆ ವಿಕಾಸ ಭವನದ ಪ್ರವೇಶ ದ್ವಾರ (ಮಿನಿ ವಿಧಾನ ಸೌಧ), ಎಂಎಸ್‌ಕೆ ಮಿಲ್, ಮೆಹಬೂಬ್ ಗುಲ್ಶನ್ ಸಾರ್ವಜನಿಕ ಉದ್ಯಾನವನದ ಪ್ರವೇಶ ದ್ವಾರ ಮತ್ತು ಛತ್ರಿ, ಮೆಹಬೂಬ್ ಸಾಗರ್ (ಈಗ ಶರಣಬಸವೇಶ್ವರ ಕೆರೆ), ಟೌನ್ ಹಾಲ್, ಎಂಪಿಎಚ್‌ಎಸ್ ಶಾಲೆ, ಅಸಫ್ ಗುಂಜ್ ಶಾಲೆ, ತಹಶೀಲ್ದಾರ್ ಕಚೇರಿ.

ಮೀರ್ ಮೆಹಬೂಬ್ ಅಲಿಖಾನ್ ಬಹದ್ದೂರ್ ಅವರ ಅರಮನೆಯು ಕಲಬುರಗಿಯ ವಾಸ್ತುಶಿಲ್ಪ ಪರಂಪರೆಯ ಅತ್ಯಂತ ಪ್ರಮುಖ ಭಾಗವಾಗಿದೆ. ರಾಜ್ಯ ಪುರಾತತ್ವ ಅಥವಾ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಇದನ್ನು ವಹಿಸಿಕೊಳ್ಳಬೇಕು ಮತ್ತು ಇದನ್ನು ಸಂರಕ್ಷಿತ ಸ್ಮಾರಕ ಎಂದು ಘೋಷಿಸಬೇಕು. ಇದನ್ನು ವಸ್ತು ಸಂಗ್ರಹಾಲಯವಾಗಿಯೂ ಪರಿವರ್ತಿಸಬಹುದು ಎನ್ನುವುದು ಕಲಬುರಗಿ ಭಾಗದ ಇತಿಹಾಸ ಪ್ರಿಯರ ಆಶಯವಾಗಿದೆ.

ಮುನ್ನೋಟ 18-09-2022 ರಿಂದ 24-09-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವಿದೇಶಿ ವ್ಯವಹಾರ ಮಾಡುವವರಿಗೆ ಹೆಚ್ಚು ಸಂಪಾದನೆ ಆಗುವ ಯೋಗವಿದೆ. ಕ್ರೀಡಾಪಟುಗಳಿಗೆ ಅವರ ಇಲಾಖೆಯಲ್ಲಿ ಮುಂಬಡ್ತಿ ಸಿಗುವ ಯೋಗವಿದೆ. ಸಹೋದರಿಯರು ಮತ್ತು ತಾಯಿಯಿಂದ ಹೆಚ್ಚಿನ ಸಹಕಾರ ದೊರೆಯುತ್ತದೆ. ಸರ್ಕಾರಿ ಕಚೇರಿಯ ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ನಿಧಾನಗತಿಯನ್ನು ಕಾಣಬಹುದು. ಮಾತುಕತೆಯಿಂದ ಕುಟುಂಬದಲ್ಲಿನ ಭಿನ್ನಾಭಿಪ್ರಾಯಗಳನ್ನು ದೂರಮಾಡಿಕೊಳ್ಳಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಹಿರಿಯರ ಆರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ಬೇಡ. ಕರಕುಶಲ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವವರಿಗೆ ವ್ಯಾಪಾರ ವೃದ್ಧಿಸಿ ಆದಾಯ ಬರುತ್ತದೆ. ಕಾರ್ಯಸಾಧನೆಗೆ ಅಕ್ಕಪಕ್ಕದವರಿಂದ ಅಡ್ಡಿ ಅಥವಾ ಸಹೋದ್ಯೋಗಿಗಳಿಂದ ಅಡ್ಡಿ ಇರುತ್ತದೆ. ಉದ್ಯೋಗದ ಹುಡುಕಾಟದಲ್ಲಿ ಇರುವವರಿಗೆ ಯಾವುದಾದರೊಂದು ಉದ್ಯೋಗ ದೊರೆಯುತ್ತದೆ. ನ್ಯಾಯಾಲಯದ ವಿಚಾರಗಳಲ್ಲಿ ಮುನ್ನಡೆ ಇರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮನ್ನು ಮೋಸ ಮಾಡಲು ಕಾಯುತ್ತಿರುವ ಜನರಿದ್ದಾರೆ ಎಚ್ಚರವಾಗಿರಿ. ಉನ್ನತ ವ್ಯಾಸಂಗಕ್ಕಾಗಿ ವಿದೇಶಯಾನ ಮಾಡುವವರಿಗೆ ಅವಕಾಶಗಳು ಈಗ ದೊರೆಯುತ್ತವೆ. ಬಹಳ ದೊಡ್ಡಮಟ್ಟದ ಹೂಡಿಕೆಗಳನ್ನು ಈಗ ಮಾಡುವುದು ಅಷ್ಟು ಒಳಿತಲ್ಲ. ನಿಮ್ಮ ಕೆಲವೊಂದು ವಿಚಾರಗಳಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲಾಗದೆ ಗೊಂದಲಕ್ಕೆ ಸಿಲುಕುವಿರಿ. ಭೂ ವ್ಯವಹಾರ ಮಾಡುವವರಿಗೆ ಹಿನ್ನಡೆ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯದಷ್ಟೇ ಖರ್ಚು ಇರುತ್ತದೆ. ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡಿರಿ. ಸೋದರರೊಳಗೆ ಆಸ್ತಿ ವಿಷಯದಲ್ಲಿ ಮುಸುಕಿನ ಗುದ್ದಾಟ ಇರುತ್ತದೆ. ನೀವು ಆಸೆ ಪಡುತ್ತಿದ್ದ ಆಸ್ತಿಯನ್ನು ಬೇರೆಯವರು ಖರೀದಿಸಬಹುದು. ಕೃಷಿಭೂಮಿ ಕೊಳ್ಳುವ ಯೋಗವಿದೆ. ಸಾಂಪ್ರದಾಯಿಕ ಕೃಷಿಯನ್ನು ಮಾಡುವ ರೈತರ ಬೆಳೆಗೆ ಬೇಡಿಕೆ ಹೆಚ್ಚುತ್ತದೆ. ತಂದೆಯ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ದಾಯಾದಿಗಳಲ್ಲಿ ಬಂದ ವ್ಯಾಜ್ಯಗಳನ್ನು ನಿವಾರಿಸಿಕೊಳ್ಳಲು ನ್ಯಾಯಾಲಯದ ಮೆಟ್ಟಿಲನ್ನೂ ಹತ್ತಬೇಕಾಗಬಹುದು. ಕೆಲಸ ಮಾಡುವ ಸ್ಥಳದಲ್ಲಿ ಸಹೋದ್ಯೋಗಿಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅನಿವಾರ್ಯವಿದೆ. ಸುಗಂಧ ದ್ರವ್ಯಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಸರ್ಕಾರಿ ಸಂಸ್ಥೆಗಳಿಗೆ ಕಚ್ಚಾ ವಸ್ತು ಪೂರೈಕೆದಾರರಿಗೆ ಹೆಚ್ಚಿನ ಮಾಲು ಪೂರೈಕೆಗೆ ಆದೇಶ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸರ್ಕಾರಿ ಉನ್ನತ ಹುದ್ದೆಯಲ್ಲಿರುವವರಿಗೆ ಮೇಲ್ದರ್ಜೆಗೇರುವ ಅವಕಾಶವಿದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ವ್ಯವಹಾರಗಳಲ್ಲಿ ನಿಮ್ಮ ಸ್ಥಾನಮಾನವನ್ನು ಹೋರಾಟ ಮಾಡಿ ಉಳಿಸಿಕೊಳ್ಳಬೇಕಾಗುತ್ತದೆ. ಕೊಟ್ಟ ಸಾಲದ ವಸೂಲಾತಿಗಾಗಿ ಸಂಗಾತಿಯ ಸಹಚರರು ಬರಬಹುದು. ಉನ್ನತ ವಿದ್ಯಾಭ್ಯಾಸವನ್ನು ಮಾಡುತ್ತಿರುವವರ ಸೌಲಭ್ಯಗಳಲ್ಲಿ ಕುಂಠಿತವಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಕೃಷಿಕರಿಗೆ ಉತ್ತಮ ಬೆಳೆಯ ಜೊತೆಗೆ ಉತ್ತಮ ಧನಲಾಭವಿರುತ್ತದೆ. ಹಣದ ಒಳಹರಿವು ಉತ್ತಮವಾಗಿದ್ದರೂ ಅದಕ್ಕಿಂತ ಮೀರಿದ ಖರ್ಚು ಇರುತ್ತದೆ. ನಿಮ್ಮ ಒಡೆದು ಆಳುವ ನೀತಿ ಎಲ್ಲರಿಗೂ ತಿಳಿಯುತ್ತದೆ. ಅದರಲ್ಲೂ ರಾಜಕಾರಣಿಗಳು ಮಾಡುವ ಒಳಸಂಚುಗಳು ಜನರಿಗೆ ತಿಳಿದು ಛೀಮಾರಿ ಹಾಕುವ ಸಂದರ್ಭ ಬರಬಹುದು. ಬಹಳ ಹಿಂದೆ ಕೊಟ್ಟ ಸಾಲ ಈಗ ವಾಪಸ್ ಬರುವ ಸಾಧ್ಯತೆ ಇದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಶ್ರಮಜೀವಿಗಳಾದ ನಿಮಗೆ ಗುರು-ಹಿರಿಯರ ಆಶೀರ್ವಾದದಿಂದ ಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ. ಸಾಮಾಜಿಕ ಕೆಲಸಗಳ ಜೊತೆಗೆ ಊರಿನ ಅಭಿವೃದ್ಧಿ ಕೆಲಸಗಳನ್ನು ಮಾಡಲೆತ್ನಿಸುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಓದಿನಿಂದಾಗಿ ಸ್ವಲ್ಪ ಬದಲಾವಣೆ ಬೇಕೆನಿಸುತ್ತದೆ. ತೈಲ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭ ಹೆಚ್ಚುತ್ತದೆ. ವಿವಾಹ ಆಕಾಂಕ್ಷಿಗಳಿಗೆ ಸಂಬಂಧ ಒದಗುವ ಸಾಧ್ಯತೆ ಇದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬಂಧುಗಳ ಕುಟುಂಬ ಕಲಹಗಳನ್ನು ರಾಜಿಮಾಡಿಸಿ ವಾತಾವರಣವನ್ನು ತಿಳಿಗೊಳಿಸುವಿರಿ. ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಆಸಕ್ತಿ ಬರುತ್ತದೆ. ವೃತ್ತಿಯಲ್ಲಿ ಹಿತಶತ್ರುಗಳ ಬಾಧೆಯನ್ನು ಕಾಣಬಹುದು. ಷೇರು ಮಾರುಕಟ್ಟೆ ವ್ಯವಹಾರಗಳು ಅಂತಹ ಲಾಭವನ್ನು ತರುವುದಿಲ್ಲ. ಕುಟುಂಬದ ವ್ಯವಹಾರಗಳಲ್ಲಿ ಅಂತಃಕಲಹ ಜಾಸ್ತಿಯಾಗಬಹುದು. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಉದ್ದಿಮೆದಾರರು ತಮ್ಮ ಕೆಲಸಗಾರರ ಕೆಲಸದ ಅವಧಿಯನ್ನು ಹೆಚ್ಚಿಸಬಹುದು. ಹಣ್ಣು ಮತ್ತು ತರಕಾರಿ ವ್ಯಾಪಾರಗಾರರಿಗೆ ಉತ್ತಮ ವ್ಯವಹಾರವಿರುತ್ತದೆ. ಧಾರ್ಮಿಕ ದತ್ತಿ ಇಲಾಖೆಗಳಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಜವಾಬ್ದಾರಿಗಳು ಬರುತ್ತವೆ. ಸರ್ಕಾರಿ ವ್ಯವಹಾರಗಳ ಒಪ್ಪಂದಗಳಿಂದ ನಿಮಗೆ ಲಾಭವಾಗುತ್ತದೆ. ಎಲೆಕ್ಟ್ರಾನಿಕ್ ಉಪಕರಣಗಳನ್ನು ತಯಾರಿಸುವವರಿಗೆ ಅಭಿವೃದ್ಧಿ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುವುದು ಅಗತ್ಯವಿರುತ್ತದೆ. ಪ್ರವೃತ್ತಿಯಿಂದ ಹೆಚ್ಚು ಸಂಪಾದನೆಯಾದರೂ ವೃತ್ತಿಯ ಬಗ್ಗೆ ಹೆಚ್ಚಿನ ಗಮನವಿರಲಿ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ನಿಮ್ಮ ಬೆಳವಣಿಗೆಗಳ ಬಗ್ಗೆ ಕೆಲವರಿಗೆ ಅಸೂಯೆ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಉದ್ದಿಮೆದಾರರಿಗೆ ವಿದೇಶಿ ಕಂಪನಿಗಳ ಸಹಕಾರ ದೊರೆಯುತ್ತದೆ. ಕೆಲಸಗಳನ್ನು ಪೂರ್ಣಗೊಳಿಸಲು ಕಾಲಮಿತಿಯನ್ನು ಹಾಕಿಕೊಳ್ಳುವುದು ಅತಿ ಅಗತ್ಯ. ವೈಯಕ್ತಿಕ ಕೆಲಸಗಳನ್ನು ಅಡೆತಡೆಯಿಲ್ಲದೇ ಮಾಡಿಕೊಳ್ಳುವಿರಿ. ಆಮದು ರಫ್ತು ವ್ಯವಹಾರ ಮಾಡುವವರಿಗೆ ಸಾಕಷ್ಟು ಪ್ರಗತಿ ಇರುತ್ತದೆ.

ಪದಬಂಧ 2756



ಮೇಲಿನಿಂದ ಕೆಳಕ್ಕೆ

1. ಗಂಗಾತೀರದ ಘಟ್ಟದಲ್ಲಿ ಸಿಗುವ ಅಮೂಲ್ಯ ಹರಳು ಕಿವಿಗೆ ಅಲಂಕಾರ 5
2. ಚಂದ್ರಮತಿಯಿಂದ ತ್ಯಜಿಸಲ್ಪಟ್ಟ ಖ್ಯಾತ ಅರಸ 4
3. ಸುಂದರ ಕಣ್ಣುಗಳುಳ್ಳ ಚೆಲುವೆ ಧರ್ಮಸ್ಥಳದಲ್ಲಿ ನದಿಯಾಗಿ ಹರಿಯುತ್ತಾಳೆ 4
4. ಪುರಾತನ ಕತೆ 3
6. ಕೆನೆ ತುಂಬಿದ ಉತ್ತರಭಾರತದ ಸಿಹಿ ಕ್ಷೀರ 3
7. ಹೂಗಳ ಮಧು ಸೇವಿಸುವ ಭ್ರಮರ 4
9. ಆಡಳಿತ ವ್ಯವಸ್ಥೆಯಲ್ಲಿ ಪಂಚಾಯಿತಿ ಪ್ರಮುಖ 3
10. ಎಣ್ಣೆ ತೆಗೆಯುವ ದುಡಿಮೆಯಲ್ಲಿ ತೊಡಗಿರುವ ಹೋರಿ 4
11. ಯಾವುದಕ್ಕೂ ಅಲುಗಾಡದ ಬಲವುಳ್ಳವ 3
14. ರಜದಿಂದ ಆರಂಭವಾಗುವ ಚಂದ್ರನಂತಹ ಚೆಲುವೆ 3
16. ಗುಂಡೆಸೆತದಂತೆ ಕೋಳಿ ಕೊಡುವ ಸೊನ್ನೆಯನ್ನು ದೂರದಿಂದ ಬೀಸುವಿಕೆ 5
17. ಯಾವ ವಿಧವಾದ ದೋಷವೂ ಇಲ್ಲದವ 4
18. ಅರಣ್ಯದಲ್ಲಿ ಆರಾಧಿಸಬಹುದಾದ ಸುಂದರಿ 4
19. ಹಾಸಕ್ಕೆ ಹೆಸರಾದ ಜಿಲ್ಲೆಯೇ ಇದು 3

ಎಡದಿಂದ ಬಲಕ್ಕೆ

1. ಈ ಬೃಹತ್ ಅಮಾವಸ್ಯೆ ಆಶ್ವಯುಜದಲ್ಲಿ ಮನೆ ಮಾಡುತ್ತದೆ 4
3. ಸಂಧ್ಯಾಕಾಲದ ರವಿಯ ರಂಗು 5
5. ಮಾಟ ಮಂತ್ರದಿಂದ ಸಮ್ಮೋಹನಕ್ಕೆ ಒಳಪಡಿಸಿ ತನ್ನವರನ್ನಾಗಿ ಮಾಡುವ ಕಲೆ 5
7. ಆಟಕ್ಕೆ ವೃಕ್ಷವನ್ನೇರಿದ ಮಂಗ 4
9. ಬರಹಗಳನ್ನು ಮುದ್ರಿಸಿ ಬೆಳಕು ತೋರುವವ 4
10. ಸಮ್ಮೋಹನದ ಜಾದುಗಾರ ಕೃಷ್ಣ ಗಾಡಿಯಲ್ಲಿ ಬರುತ್ತಾನೆ 4
12. ಕೊನೆಯಲ್ಲಿ ಆಭರಣದಂತೆ ಕಾಣುವ ನಾಟಕ ವೇದಿಕೆ 5
13. ಮಾನವ ಶಕ್ತಿ ಕಡಿಮೆಯಾಗುವ ಗದಗದ ಊರು 4
15. ವಿಜಯದ ಚಹರೆ 4
17. ಅರಿವು ಒತ್ತು ಪಡೆದ ಆರು ದಶಮಾನಗಳು 4
19. ಕೆಡುಕು ಉಂಟು ಮಾಡುವಂಥದ್ದು 5
20. ಹೊಸದಾಗಿ ತೆರೆಯ ಮೇಲೆ ಕಾಣಿಸಿಕೊಂಡ ಹೀರೊ 5
21. ಅರಳಿದ್ದು ಇದು.. ಸುಮವೋ ಮನಸ್ಸೋ . . . 4

ಪದಬಂಧ ಉತ್ತರ -2755

ಮೇಲಿಂದ ಕೆಳಕ್ಕೆ

1. ಜನಹಾನಿ 2.ತರಕಾರಿ 3.ಮಳೆರಾಯ 4.ರಸಬಾಳೆ 8.ರಾಜೋಪಚಾರ 9.ಸುಲಭೋಪಾಯ 10.ಮಾರಜನಕ 11.ಮನೆಗೆಮಾರಿ 14.ಹರಿನಾಮ 15.ಮದನಿಕೆ 17.ನಿರ್ಣಾಯಕ 18.ಸುರಿಮಳೆ

ಎಡದಿಂದ ಬಲಕ್ಕೆ

1.ಜಲಾವೃತ 3.ಮಹಾಪೂರ 5.ರಣಕಹಳೆ 7.ನಿರಾಕರಿಸು 10.ಮಾಯದಮಳೆ 12.ಲಸಾರ 13.ಪಾವನ 14.ಹರಸಮಯ 16.ಕನಿಕರಿಸು 19.ನಿತ್ಯಪ್ರಳಯ 20.ಮರೀಚಿಕೆ 21.ಕರಿಬಳೆ

ರಂಗದಿಗ್ಗಜನ ಮಹಾಪ್ರಸ್ಥಾನ

86 ವರ್ಷಗಳ ತುಂಬು ಜೀವನ ನಡೆಸಿ ಅದರಲ್ಲಿ ಎಪ್ಪತ್ತು ವರ್ಷಗಳನ್ನು ರಂಗ ಕಾಯಕದಲ್ಲೇ ತೇಯ್ದು, ರಂಗಭೂಮಿಯ ಸರಿಸುಮಾರು ಎಲ್ಲ ವಿಭಾಗಗಳಲ್ಲೂ ತೊಡಗಿಕೊಂಡು ಕೊಡುಗೆ ನೀಡಿ, ಇತ್ತೀಚೆಗೆ (ಸೆಪ್ಟೆಂಬರ್ 12) ನಮ್ಮನ್ನಗಲಿದ, ಹಂಪಾಪುರ ವೆಂಕಟರಾಮಯ್ಯ ವೆಂಕಟಸುಬ್ಬಯ್ಯ ಅವರದು ಅಪರಿಮಿತ ಸಾಧನೆಯ ಅಪರೂಪದ ವ್ಯಕ್ತಿತ್ವ



ನಾರಾಯಣ ರಾಯಚೂರ್

ಸ್ಮರಣೆ

'ಶ್ರೀರಂಗ-ಸಂಪದ' ಆರುನೂರು ಪುಟಗಳ ಸತ್ವ-ಸಮೃದ್ಧ, ಸಂಗ್ರಹಯೋಗ್ಯ ಬೃಹದ್- ಗ್ರಂಥ. ವಿಶ್ವವಿದ್ಯಾಲಯಗಳೋ, ಅಕಾಡೆಮಿಗಳೋ ವರ್ಷಾನುಗಟ್ಟಲೆ ತಿಣುಕಾಡಿ ಪ್ರಕಟಿಸಬಲ್ಲ ಗ್ರಂಥ! ರಂಗಭೂಮಿಯನ್ನು 'ಹವ್ಯಾಸ'ವಾಗಿ ಸ್ವೀಕರಿಸಿದ ವ್ಯಕ್ತಿಯೊಬ್ಬ ಇಂತಹ ಸಾಹಸಕ್ಕೆ ಕೈಹಾಕುವುದು ಹುಚ್ಚು ಸಾಹಸವೇ ಸರಿ. ತಾರುಣ್ಯದಿಂದಲೇ ನಾಟಕದ ಹುಚ್ಚಿದ್ದ ಎಚ್.ವಿ. ವೆಂಕಟಸುಬ್ಬಯ್ಯನವರಿಗೆ ಇಂತಹ ಸಾಹಸ, ಸವಾಲುಗಳೇ ಅಚ್ಚುಮೆಚ್ಚು! ಅಂತೆಯೇ ತಮ್ಮ ಪರಮಗುರು ಶ್ರೀರಂಗರಿಗೆ ಅರ್ಪಿಸಿದ ಅನುಪಮ ಗುರುಕಾಣಿಕೆ ಕೃತಿಯೇ 'ಶ್ರೀರಂಗ-ಸಂಪದ'.

ನನ್ನ-ಅವರ ಒಡನಾಟ ನಾಲ್ಕು ದಶಕದ್ದು. 'ಗುಲಾಮನ ಸ್ವತಂತ್ರ ಯಾತ್ರೆ' ನಾಟಕವನ್ನು ಅವರು ರಂಗಸಂಪದಕ್ಕಾಗಿ ನಿರ್ದೇಶಿಸುತ್ತಿದ್ದ ದಿನಗಳವು. ನಾನು ಅವರಿಗೆ ಪ್ರಾಂಪ್ಟ್-ಅಸಿಸ್ಟೆಂಟ್; ಕಲಿಯಲು ಸಾಕಷ್ಟು ಅವಕಾಶವಿರುವ ಕೆಲಸವದು. ಸುಬ್ಬಣ್ಣನವರ ನಿರ್ದೇಶನದ ವೈಖರಿ, ಶಿಸ್ತು, ಪರಿಕಲ್ಪನೆ ಹಾಗೂ ಒಟ್ಟು ಪ್ರಯೋಗದ ಪರಿಣಾಮದ ಹಿಂದಿನ ಅವರ ಶ್ರಮ-ಕೌಶಲ್ಯದ ಪರಿಚಯವಾದದ್ದು ಅಲ್ಲಿಯೇ. ಮುಂದೆ ಮಹಾ ಬೆರಗಿನ 'ಡಾ.ಫಾಸ್ಟೆಸ್' ನಾಟಕಕ್ಕೆ ಅವರು ಮಾಡಿದ್ದ ಅದ್ಭುತ ರಂಗವಿನ್ಯಾಸ, ಕಲಾಕ್ಷೇತ್ರದ ಗೋಡೆ-ಚಾವಣಿಗಳನ್ನೆಲ್ಲ ಆವರಿಸಿ ಎಲ್ಲರನ್ನೂ ದಂಗುಗೊಳಿಸಿದ್ದು ಐತಿಹಾಸಿಕ ದಾಖಲೆ.

ಆಧುನಿಕ ನಾಟಕಗಳ ಆದ್ಯ ಪ್ರವರ್ತಕರಲ್ಲೊಬ್ಬರಾದ ಶ್ರೀರಂಗರು ಬಲು ಕಟ್ಟುನಿಟ್ಟಿನ ನಾಟಕಕಾರ. ಅವರ ಸ್ಕ್ರಿಪ್ಟ್ ಹಾಗೂ ಅವರೇ ನೀಡಿರುತ್ತಿದ್ದ ನಿರ್ದೇಶನಗಳನ್ನು ಚಾಚೂ ತಪ್ಪಿಸುವಂತಿರಲಿಲ್ಲ. ಅಂತೆಯೇ ಅವರು ವಿಶ್ವಾಸದಿಂದ ರಂಗ ಪ್ರಯೋಗದನುಮತಿ ನೀಡುತ್ತಿದ್ದುದು ಕೆಲವರಿಗೆ ಮಾತ್ರ. ಇನ್ನು ಆಪ್ತವಲಯದ ಪ್ರವೇಶವಂತೂ ದುರ್ಲಭವೇ. ಸುಬ್ಬಣ್ಣ ಸೌಭಾಗ್ಯವಂತರು. ಶ್ರೀರಂಗರ ಪರಮಾಪ್ತರಾಗಿ, ಸಮಗ್ರ ಮಂಥನ, ಅಗ್ನಿಸಾಕ್ಷಿ, ಉತ್ತಮ ಪ್ರಭುತ್ವ, ಶೋಕಚಕ್ರದಂತಹ ಅನೇಕ ನಾಟಕಗಳನ್ನು ರಂಗ ಸಾಕ್ಷಾತ್ಕಾರಗೊಳಿಸಿ ಹೆಸರಾದವರು.

ತುರ್ತು ಪರಿಸ್ಥಿತಿಯ ನಂತರ ಚಿಕ್ಕಮಗಳೂರು ಲೋಕಸಭಾ ಚುನಾವಣಾ ಸಂದರ್ಭದಲ್ಲಿ (ಇಂದಿರಾ ಗಾಂಧಿ ಸ್ಪರ್ಧಿಸಿದ್ದರು) ಜನಜಾಗೃತಿಗಾಗಿ ರಂಗ ಸಂಪದ ತಂಡಕ್ಕಾಗಿ ವೆಂಕಟಸುಬ್ಬಯ್ಯ ಶ್ರೀರಂಗರ 'ಸಮಗ್ರ ಮಂಥನ' ನಾಟಕವನ್ನು ಕೈಗೆತ್ತಿಕೊಂಡು ಯಶಸ್ವಿಯಾಗಿ ಪ್ರಯೋಗಿಸಿದ್ದರು. ಪೊಲೀಸರ ಕೆಂಗಣ್ಣಿಗೆ ಗುರಿಯಾಗುವ ಭೀತಿಯಿದ್ದರೂ ಉಪಾಯದಿಂದ ಕಣ್ತಪ್ಪಿಸಿ ರಂಗ ಸಂಚಾರ ಮಾಡಿಕೊಂಡು ಬಂದು, ನಾಟಕದ ಸಂದೇಶವನ್ನು ತಲುಪಿಸಿ ಗೆದ್ದರು.

ನ.ಕಸ್ತೂರಿ, ಕೈಲಾಸಂ, ಲಂಕೇಶ, ನ.ರತ್ನ ಹೀಗೆ ವಿಭಿನ್ನ ಬಗೆಯ ನಾಟಕಕಾರರ ನಾಟಕಗಳನ್ನು ಸುಬ್ಬಣ್ಣ ಪ್ರಯೋಗಿಸಿ ಪಕ್ವಗೊಂಡರು. ಬೆಳಕು ಮತ್ತು ವಸ್ತ್ರವಿನ್ಯಾಸದ ಹೊಣೆಹೊತ್ತು ಸುಬ್ಬಣ್ಣ ನಿರ್ದೇಶಿಸಿದ, ಎಂ.ಎಸ್.ಕೆ. ಪ್ರಭು ಅವರ 'ಮಹಾ ಪ್ರಸ್ಥಾನ' ನಾಟಕ ಸ್ಮರಣಾರ್ಹ ರಂಗ ಪ್ರಯೋಗಗಳಲ್ಲೊಂದಾಗಿ ರಂಗಪ್ರಿಯರ ಮೆಚ್ಚುಗೆಗೆ ಪಾತ್ರವಾಗಿದೆ.

ಆರ್.ನಾಗೇಶ್, ಜೆ.ಲೋಕೇಶ್, ಸಿ.ಜಿ.ಕೆ. ಮೊದಲಾದ ತಮ್ಮ ಸಮಕಾಲೀನರ ಜೊತೆ ಯಯಾತಿ, ರಂಗ ಭಾರತ, ತಾಯಿ, ಸೂರ್ಯ ಶಿಕಾರಿ ನಾಟಕಗಳಲ್ಲಿ ಹಿನ್ನೆಲೆಯ ವಿಭಾಗಗಳನ್ನು ಯಶಸ್ವಿಯಾಗಿ ನಿಭಾಯಿಸಿದವರು. 'ಕರ್ನಾಟಕ ವೈಜಯಂತ' ಮತ್ತು 'ಚಂದ್ರಗುಪ್ತ' ನಾಟಕಗಳನ್ನೂ ಸಮರ್ಥವಾಗಿ ಪ್ರದರ್ಶನಕ್ಕೆ ತಂದ ಸುಬ್ಬಣ್ಣ ಅನೇಕ ಬಾನುಲಿ ನಾಟಕಗಳನ್ನೂ ಸಿದ್ಧಗೊಳಿಸಿ, ಸೈ ಎನಿಸಿಕೊಂಡವರು. ದಶಕದ ಹಿಂದೆ ಸುಬ್ಬಣ್ಣ ಅಮೆರಿಕ ಪ್ರವಾಸ ಕೈಗೊಂಡಾಗ ಕ್ಯಾಲಿಫೋರ್ನಿಯಾದ ಕನ್ನಡ ಕೂಟ ಆಯೋಜಿಸಿದ ಶ್ರೀರಂಗರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಕೂಟದ ಕಲಾವಿದರಿಂದಲೇ ಶ್ರೀರಂಗರ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ನಾಟಕವನ್ನು ಯಶಸ್ವಿಯಾಗಿ ಪ್ರಯೋಗಿಸಿದ್ದುಂಟು.

ಚಿತ್ರಕಲೆ, ಸಂಗೀತ, ಫೋಟೊಗ್ರಫಿ, ರಂಗ ಮಾಹಿತಿ ಸಂಗ್ರಹಣೆ... ಹೀಗೆ ಅವರ ಹವ್ಯಾಸಗಳು ಒಂದೇ-ಎರಡೇ! ಸಾಹಿತ್ಯ ಕೃಷಿಯಲ್ಲೂ ತೊಡಗಿಸಿಕೊಂಡಿದ್ದ ಅವರು ಚುಟುಕುಗಳನ್ನು ಬರೆಯುತ್ತಿದ್ದರು. ಇಂತಹ ಸುಬ್ಬಣ್ಣ ಬಣ್ಣ ಕಳಚಿ 'ಮಹಾ-ಪ್ರಸ್ಥಾನ'ಗೈದಿದ್ದಾರೆ. ದಾಖಲೆಯ ಸಂಗ್ರಹವನ್ನೇ ಕೊಟ್ಟು ಹೋಗಿದ್ದಾರೆ. ಕಾಪಿಟ್ಟು, ಮುನ್ನಡೆಸುವ ಕೆಲಸವನ್ನು ರಂಗಕರ್ಮಿಗಳಿಗೆ ಬಿಟ್ಟು ಹೋಗಿದ್ದಾರೆ!

ಗಡಿ ಮೀರಿ ಹರಿದ ನದಿ

ಇಂಗ್ಲಿಷ್ ಪ್ರಾಧ್ಯಾಪಕ ವೃತ್ತಿಯ ಜೊತೆ ಜೊತೆಗೇ ರಂಗಭೂಮಿ, ದುಡಿಯುವ ವರ್ಗದ ಚಳವಳಿ, ಬಂಡಾಯ ಸಾಹಿತ್ಯ ಚಳವಳಿ, ಜೀತವಿಮುಕ್ತಿ, ದಲಿತರ ಭೂ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದ ಬಿ. ಗಂಗಾಧರ ಮೂರ್ತಿ ಎಂಬ ಜನಶಕ್ತಿ ಇನ್ನು ಬರೀ ನೆನಪು

ಡಾ. ಎಚ್. ಎಸ್. ಅನುಪಮಾ

ದೇಹದ ಕಣಕಣದಲ್ಲಿಯೂ ಪ್ರೀತಿಯನ್ನು ಹೊರಸೂಸುತ್ತಿದ್ದ, ಪ್ರತಿ ಮಾತಿನಲ್ಲೂ ಭರವಸೆಯನ್ನು ತುಳುಕಿಸುತ್ತಿದ್ದ, ಪ್ರತಿ ನಡೆಯಲ್ಲೂ ಜೊತೆಗಾರಿಕೆಯನ್ನೇ ಬಯಸುತ್ತಿದ್ದ ಹಿರಿಯರೊಬ್ಬರನ್ನು ಹತ್ತು ವರ್ಷ ಕೆಳಗೆ ಧಾರವಾಡದ ಮೇ ಸಾಹಿತ್ಯ ಮೇಳದಲ್ಲಿ ಮೊದಲ ಬಾರಿ ಭೇಟಿಯಾದೆ. ನಾನಾಗ ಚೆಗೆವಾರನ 'ಮೋಟಾರ್ ಸೈಕಲ್ ಡೈರಿ' ಅನುವಾದಿಸುತ್ತಿದ್ದೆ. ಹತ್ತಾರು ಯೋಜನೆಗಳು ಮೊಳೆತು, ಪುಟಿಯುತ್ತಿದ್ದ ಕಾಲ. ನನ್ನ ಓದು, ಬರವಣಿಗೆ, ಚಟುವಟಿಕೆಗಳ ಬಗೆಗೆ ಸವಿವರವಾಗಿ ಕೇಳಿಕೊಂಡ ಅವರು ಬಲುಬೇಗ ಆಪ್ತರಾದರು. ನಾಲ್ಕು ದಶಕಗಳಿಂದ ಹೋರಾಟದಲ್ಲಿ ಮಾಗಿದ್ದ ಅವರು ಕಿರಿಯಳ ಹಿಂಜರಿಕೆ, ಸಂಕೋಚಗಳನ್ನು 'ನೋಡ್ ಅನ್ಪಮಾ..' ಎಂದು ಕರಗಿಸಿಬಿಟ್ಟಿದ್ದರು.

ಸಾಹಿತ್ಯ ಮೇಳಕ್ಕೆ ಅತಿಥಿಯಾಗಿ ಬಂದಿದ್ದ ತೆಲುಗು ಕವಿ ನಗ್ನಮುನಿಯವರನ್ನು ಸಂದರ್ಶಿಸಿ, ಅವರ 'ಕೊಯ್ಯಗುರ್ರಂ' ಅನ್ನು ಅನುವಾದಿಸುವ ಹಂಬಲವನ್ನು ಹಿರಿಯರಲ್ಲಿ ಹೇಳಿದ್ದೇ ತಡ, ದುಭಾಷಿಯಾಗಿ ತೆಲುಗು, ಇಂಗ್ಲಿಷ್, ಕನ್ನಡದ ಗಡಿಗಳನ್ನು ಸುಲಲಿತವಾಗಿ ದಾಟುತ್ತ ನಗ್ನಮುನಿಯವರ ಸಂದರ್ಶನ ಮಾಡಿಸಿ, 'ಕೊಯ್ಯಗುರ್ರಂ' ಅನ್ನು ಅರ್ಥ ಮಾಡಿಸಿದರು. 'ಕವಿಯ ಮನಸು, ಕ್ರಾಂತಿಯ ಕನಸು ನಿಂದು. ಬಾಳ ಫಾಸ್ಟ್ ಇದೀಯ. ಬರಿಬರಿ' ಎಂದು ಬೆನ್ನು ತಟ್ಟಿದ ಹರಸಿದ ಅವರ ಬೇಷರತ್ ಪ್ರೀತಿ, ಭರವಸೆಗಳು ಅಬಾಧಿತವಾಗಿ ಮುಂದುವರಿದುಬಂದವು.

ಅವರು ಗೌರಿಬಿದನೂರಿನ ಪ್ರೊ. ಬಿ. ಗಂಗಾಧರ ಮೂರ್ತಿ. ಸಮಾನಮನಸ್ಕ ಬಳಗದವರ ಬಿಜಿಎಂ. ಇಂಗ್ಲಿಷ್ ಪ್ರಾಧ್ಯಾಪಕ ವೃತ್ತಿಯ ಜೊತೆಜೊತೆಗೇ ರಂಗಭೂಮಿ, ದುಡಿಯುವ ವರ್ಗದ ಚಳವಳಿ, ಬಂಡಾಯ ಸಾಹಿತ್ಯ ಚಳವಳಿ, ವಿಚಾರವಾದ, ಜೀತವಿಮುಕ್ತಿ, ದಲಿತರ ಭೂ ಹೋರಾಟಗಳಲ್ಲಿ ಪಾಲ್ಗೊಂಡು ಜನಸ್ನೇಹಿ ಬದುಕು ರೂಪಿಸಿಕೊಂಡ ಒಡನಾಡಿ. 77ನೇ ವರ್ಷದಲ್ಲಿ ಅವರು ಭೌತಿಕವಾಗಿ ನಮ್ಮನ್ನಗಲಿದ್ದಾರೆ. ಕೊನೆಯುಸಿರಿರುವವರೆಗೂ ಕ್ರಿಯಾಶೀಲತೆ, ಬದ್ಧತೆಗಳನ್ನು ಬಿಟ್ಟುಕೊಡದೆ 'ಶರಣ' ಗುಣದ ಮಾದರಿಯಾಗಿದ್ದಾರೆ.

ಸಮಸಮಾಜದ ಕನಸು: ಹಾಸನ ಜಿಲ್ಲೆಯ ಹೊಳೆನರಸೀಪುರದ ಬಿಜಿಎಂ ಬಡಕುಟುಂಬದ ಹಿನ್ನೆಲೆಯಿಂದ ಬಂದವರು. ತಂದೆ ಬೋರಯ್ಯನವರ ಸಲೂನಿನ ಆದಾಯವು ಶಾಲಾ ಶುಲ್ಕ ಕಟ್ಟಲು ಸಾಲುತ್ತಿರಲಿಲ್ಲ. ತಂದೆ ತಮ್ಮಲ್ಲಿದ್ದ ಏಕೈಕ ಚಿನ್ನದ ಉಂಗುರ ಅಡವಿಟ್ಟು ಓದಿಸುತ್ತಿದ್ದರು. ಪ್ರೌಢಶಾಲೆಯ ಬಳಿಕ ಶಿವಮೊಗ್ಗಕ್ಕೆ ಹೋಗಿ ನೆಂಟರ ಮನೆಯಲ್ಲಿದ್ದು ಪಿಯುಸಿ ಶಿಕ್ಷಣ ಪಡೆಯುತ್ತಿರುವಾಗ ಹುಡುಗನಿಗೆ ಎಚ್.ಜೆ. ಲಕ್ಕಪ್ಪಗೌಡರ ಪರಿಚಯವಾಯಿತು. ಅವರ ಗ್ರಂಥಾಲಯವು ಓದಿನ ಲೋಕದ ಬಾಗಿಲು ತೆರೆಯಿತು.

ಮುಂದೆ ಓದುವ ಬಯಕೆಯಿದ್ದರೂ ಹಣಕಾಸು ಮುಗ್ಗಟ್ಟಿನಿಂದಾಗಿ ಬಿಜಿಎಂ ರೈಲ್ವೆ ಮೇಲ್ ಸರ್ವೀಸ್ (ಆರ್‌ಎಂಎಸ್) ನೌಕರಿ ಸೇರಿ ಬೆಳಗಾವಿಗೆ ಹೋದರು. ರಾತ್ರಿಪಾಳಿಯಲ್ಲಿ ಕೆಲಸ ಮಾಡುತ್ತ ದೂರಶಿಕ್ಷಣದ ಮೂಲಕ ಬಿಎ ಪದವಿ ಪಡೆದರು. ಅಲ್ಲಿಂದ ಮೈಸೂರಿಗೆ ವರ್ಗವಾದಾಗ ಕನ್ನಡದ ಉದಯೋನ್ಮುಖ ಸಾಹಿತಿ-ಆ್ಯಕ್ಟಿವಿಸ್ಟ್‌ಗಳ ಪರಿಚಯವಾಯಿತು. ಬರವಣಿಗೆ, ಚಿಂತನೆ, ಸಂಘಟನೆ, ಹೋರಾಟದ ಒಡನಾಡಿಗಳು ದೊರೆತರು.

ಉತ್ಸಾಹಿ ಬಳಗದ ಚಿಂತನೆಗಳಲ್ಲೇ 'ಸಮುದಾಯ' ಹುಟ್ಟಿತು. 'ಒಡನಾಡಿ' ಪತ್ರಿಕೆ ಆರಂಭವಾಯಿತು. ಮಾರ್ಕ್ಸ್‌ವಾದದ ಪರಿಚಯವಾಯಿತು. ಮಾರ್ಕ್ಸ್‌ವಾದಿ ಗ್ರಂಥಾಲಯ ಮೈದಳೆಯಿತು. ಆರ್‌ಎಂಎಸ್ ಕಾರ್ಮಿಕ ಸಂಘಟನೆಯನ್ನು ಮುನ್ನಡೆಸಿದ ಬಿಜಿಎಂ, ಅನಂತಮೂರ್ತಿಯವರ ಸಲಹೆಯಂತೆ ಇಂಗ್ಲಿಷ್ ಎಂಎ ಮಾಡಿದರು. ಸುತ್ತೂರು ಮಠದ ಕಾಲೇಜಿನಲ್ಲಿ ಬೋಧಕರಾಗಿ ವೃತ್ತಿಬದುಕು ಆರಂಭಿಸಿದರು. ಅನಂತರ ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದರು.

ಒಂದು ಸರ್ಕಾರಿ ನೌಕರಿ ಸಿಕ್ಕಿದ್ದೇ ತಡ, ವೇತನ, ಬಡ್ತಿ, ಭತ್ಯೆ, ರಜೆ, ವರ್ಗಾವಣೆಗಳ ಲೋಕದಲ್ಲಿ ಮುಳುಗಿ ಸಾಮಾಜಿಕ ಜವಾಬ್ದಾರಿಯನ್ನು ಮರೆತುಬಿಡುವವರ ನಡುವೆ ಬಿಜಿಎಂ ಭಿನ್ನರಾಗಿದ್ದರು. ತೆಲುಗುಸೀಮೆಯ ಗಡಿಭಾಗ ಗೌರಿಬಿದನೂರಿನ ಊಳಿಗಮಾನ್ಯ ಸಮಾಜ ಅವರನ್ನು ಬಡಿದೆಬ್ಬಿಸಿತು. ಸ್ವಾತಂತ್ರ್ಯ ಬಂದು ದಶಕಗಟ್ಟಲೆ ಕಳೆದರೂ ಅಸಮವಾಗಿರುವ ನೆಲವನ್ನು ಸಮಸಮಾಜದ ಬಯಲಾಗಿಸುವುದು ಹೇಗೆಂದು ಹಗಲಿರುಳು ಚಿಂತಿಸಿದರು. ಸಂಘಟಿತ ಪ್ರಯತ್ನ ಆರಂಭಿಸಿದರು.

ಪಿನಾಕಿನಿ ನದಿಯಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ದಂಧೆಯನ್ನು ಕಂಡು ಸುಮ್ಮನಿರಲಾರದ ಮೇಷ್ಟರು ಶಿಷ್ಯಗಣದೊಡನೆ ಸಾಕ್ಷ್ಯ ಕಲೆ ಹಾಕಿ ಪತ್ರಿಕೆಯಲ್ಲಿ ಬರೆದರು. ಗೂಂಡಾಗಳಿಂದ ಹಲ್ಲೆಯಾಗಿ ತಲೆಗೆ ಪೆಟ್ಟಾಯಿತು. ರಾಜ್ಯದಾದ್ಯಂತ ಪ್ರಕರಣ ಸದ್ದು ಮಾಡಿತು. ನಾಗಸಂದ್ರವೆಂಬ ಹಳ್ಳಿಯಲ್ಲಿ ಮೂರ್ನಾಲ್ಕು ತಲೆಮಾರುಗಳಿಂದ ಜೀತಕ್ಕೆ ಸಿಲುಕಿಕೊಂಡಿದ್ದ ದಲಿತ ಕುಟುಂಬಗಳಿರುವುದು ಗೊತ್ತಾದದ್ದೇ ಬಳಗದೊಡನೆ ಅಲ್ಲಿಗೆ ಹೊರಟರು. ಭೂಹೀನರಾಗಿದ್ದ ದಲಿತ ಜೀತದಾಳುಗಳಿಗಾಗಿ ಸಂಘಟಿಸಿದ ಹೋರಾಟವು ಅವರ ಚಿಂತನೆಯ ದಿಕ್ಕನ್ನೇ ಬದಲಾಯಿಸಿತು. ಅಂಬೇಡ್ಕರರ ಹೋರಾಟ, ಚಿಂತನೆಗಳ ಪ್ರಾಮುಖ್ಯದ ಅರಿವಾಗಿ ವರ್ಗದೊಡನೆ ಜಾತಿಯೂ ಶೋಷಣೆಯ ನೆಲೆಯೆಂದು ಗುರುತಿಸಲು ಸಾಧ್ಯ ಮಾಡಿತು. ಆ ಭಾಗದಲ್ಲಿ ತೀವ್ರಗೊಳ್ಳುತ್ತಿದ್ದ ದಲಿತ ಚಳವಳಿಯಲ್ಲಿ ಸಂಪೂರ್ಣ ತೊಡಗಿಸಿಕೊಂಡ ಬಿಜಿಎಂ ಕೋಲಾರದ ಉದ್ದಗಲ ಓಡಾಡಿದರು.

ಸರ್ಕಾರಿ ಕೆಲಸದ ಜೊತೆಜೊತೆಗೇ ಬರಹ, ಓದು, ಸಂಘಟನೆ, ಹೋರಾಟಗಳನ್ನೂ ಬಿಜಿಎಂ ನಿಭಾಯಿಸಿದರೆಂಬುದನ್ನು ಗಮನಿಸಬೇಕು. ರಜೆಯ ದಿನಗಳಲ್ಲಿ ಹಳ್ಳಿಗೆ ಹೋಗುತ್ತಿದ್ದರು. ಮೌಢ್ಯವಿರೋಧಿ ಹೋರಾಟ ಮುನ್ನಡೆಸಿದರು. ಹೊಸತಲೆಮಾರಿನ ಜೊತೆ ಸದಾ ಒಡನಾಡುತ್ತ, ಮಾರ್ಗದರ್ಶನ ಮಾಡುತ್ತ, ಲೆಕ್ಕವಿಲ್ಲದಷ್ಟು ವಿದ್ಯಾರ್ಥಿಗಳಿಗೆ ತನುಮನಧನದಿಂದ ಸಹಾಯ ನೀಡಿದರು. ಚುನಾವಣೆಯಲ್ಲಿ ಸ್ಪರ್ಧಿಸಲೆಂದು ಒಮ್ಮೆ ಸರ್ಕಾರಿ ಕೆಲಸ ಬಿಟ್ಟರೂ, ಸೋಲಿನ ಬಳಿಕ ಮತ್ತೆ ಬೋಧನೆಯ ಕೆಲಸಕ್ಕೆ ಮರಳಿದರು. ಸೇವಾವಧಿ ನಷ್ಟವಾಯಿತು. ಕೆಲಸ ಸಿಗುವುದು ಕಷ್ಟವಾಯಿತು. ಕಷ್ಟನಷ್ಟಗಳಿಗೆಲ್ಲ ಕ್ಯಾರೇ ಎನ್ನದೆ ಒಂದೇಸಮ ಚಟುವಟಿಕೆಗಳನ್ನು ಮುಂದುವರೆಸಿದರು.

'ಟೀಚರ್' ಮಾಸಪತ್ರಿಕೆಗೆ ಹತ್ತುವರ್ಷಕ್ಕೂ ಮೀರಿ ಸಂಪಾದಕರಾಗಿ ಕೆಲಸ ನಿರ್ವಹಿಸಿದ ಅವರು ಅಂದಂದಿನ ಅಗತ್ಯಕ್ಕೆ ತಕ್ಕಂತೆ ಬರಹ, ಅನುವಾದಗಳನ್ನೂ ಮಾಡಿದರು. ವೈಚಾರಿಕತೆಯನ್ನು ಪ್ರಚೋದಿಸುವಂತಹ ಒಟ್ಟು 26 ಪುಸ್ತಕಗಳನ್ನು ಪ್ರಕಟಿಸಿದರು. ಬಾಬಾಸಾಹೇಬ್ ಅಂಬೇಡ್ಕರ್, ವಿ.ಆರ್. ನಾರ್ಲಾ, ಆನಂದ್ ತೇಲ್ತುಂಬ್ಡೆ, ಬ್ರಜೇಶ್ ಮಿಶ್ರಾ, ಅರುಂಧತಿ ರಾಯ್, ಸೂಫಿ ಕತೆಗಳನ್ನು ಕನ್ನಡಕ್ಕೆ ತಂದರು. ಎರಡು ಕನ್ನಡ ಕೃತಿಗಳನ್ನು ಇಂಗ್ಲಿಷಿಗೂ ಒಯ್ದರು.

2003ರಲ್ಲಿ ನಿವೃತ್ತರಾದ ಬಳಿಕ ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಖ್ಯಾತವಾದ ವಿದುರಾಶ್ವತ್ಥದ 'ವೀರಸೌಧ' ಸ್ಮಾರಕದಲ್ಲಿ 'ಸ್ವಾತಂತ್ರ್ಯ ಹೋರಾಟದ ವಿರಾಟ್ ಚಿತ್ರ-ಇತಿಹಾಸ'ದ ಪರಿಕಲ್ಪನೆ ಮತ್ತು ಸಂಯೋಜನೆಯ ಜವಾಬ್ದಾರಿ ನಿರ್ವಹಿಸಿದರು. ಗೌರಿಬಿದನೂರಿನಲ್ಲಿ ಅಂಬೇಡ್ಕರ್ ಸ್ಮಾರಕ 'ಸಮಾನತಾ ಸೌಧ' ರೂಪಿಸುವಲ್ಲಿಯೂ ಅವರ ಪಾತ್ರ ಹಿರಿದು.

ನಿಸ್ವಾರ್ಥ, ಲೋಕಹಿತದ ಕೆಲಸ ಎಲ್ಲೇ ನಡೆಯುತ್ತಿದ್ದರೂ ಅದನ್ನು ಗುರುತಿಸಿ ತನುಮನಧನ ಬೆಂಬಲ ನೀಡುತ್ತಿದ್ದ ಬಿಜಿಎಂ ತಮ್ಮೊಡನೆ ಬಳಗವನ್ನು ಕರೆದೊಯ್ಯುತ್ತಿದ್ದರು. ಶೋಷಕರ ಮನವೊಲಿಸಿ ಶೋಷಿತರ ಹೋರಾಟದಲ್ಲಿ ಅವರನ್ನೂ ತೊಡಗಿಸಬೇಕೆಂಬ ಪರಿವರ್ತನಾ ಅಧ್ಯಾತ್ಮ ನಂಬಿ ತಾವು ಯಾರ ವಿರುದ್ಧ ಭೂ ಹೋರಾಟ ಮಾಡಿದ್ದರೋ ಆ ವ್ಯಕ್ತಿಯ ಮಗನೊಡನೆ ನಿರಂತರ ಒಡನಾಡಿದರು. ಆತನ ಯೋಚನಾ ವಿಧಾನವನ್ನು ಪ್ರಭಾವಿಸಿ, ತನ್ನ ಜಾತಿ-ವರ್ಗ ಚಹರೆಯಾಚೆಗೆ ನಡೆದು ಬರಲು, ಜನಪ್ರಿಯ ರಾಜಕಾರಣಿಯಾಗಲು ಸ್ಫೂರ್ತಿಯಾದರು.

ನದಿತನ: ಬಿಜಿಎಂ ಗಡಿಭಾಗದ ನದಿಯಂತೆ ಇದ್ದವರು. ಅವರ ನದಿತನ ಭಾಷಿಕ ಗಡಿಯನ್ನಷ್ಟೇ ಅಲ್ಲ, ಸೈದ್ಧಾಂತಿಕ ಗಡಿ ಮೀರಲೂ ಕಾರಣವಾಯಿತು. ಮೊದಲು ಮಾರ್ಕ್ಸ್‌ವಾದಿಯಾಗಿದ್ದವರು ಬರಬರುತ್ತ ಅಂಬೇಡ್ಕರ್‌ವಾದಿಯಾದರು. ಬಳಿಕ ಗಾಂಧಿಯನ್ನು ಹೊರಗಿಟ್ಟು ಭಾರತೀಯ ಸಮಾಜವನ್ನು ಕಟ್ಟಲು ಸಾಧ್ಯವೇ ಇಲ್ಲವೆಂದು ಗಾಢವಾಗಿ ನಂಬಿದರು. ಜನಹಿತ ಬಯಸುವ ಎಲ್ಲ ಚಿಂತನಾಧಾರೆಗಳೂ ಒಗ್ಗೂಡುವುದು ಅಗತ್ಯವೆಂದು ಅನುಭವದಿಂದ ಅರಿತರು.

ಆದರೆ ಇತ್ತೀಚಿನ ಸಾಮಾಜಿಕ ಪರಿಸ್ಥಿತಿ ಅವರನ್ನು ಕಳವಳಕ್ಕೆ ಈಡುಮಾಡುತ್ತಿತ್ತು. ಪ್ರಶ್ನಿಸುವವರನ್ನು ಬಾಯಿ ಮುಚ್ಚಿಸುತ್ತಿರುವ ಪ್ರಭುತ್ವ, ತಮ್ಮ ಹಿತೈಷಿಗಳಾರೆಂಬುದನ್ನೇ ಗುರುತಿಸಲಾಗದ ಜನತೆ, ಕೇಡು ತಂದುತಂದು ಸುರಿಯುವ ಕೋಮುವಾದಿ ದುಷ್ಟನಡೆಗಳು ಅವರನ್ನು ಚುಚ್ಚುತ್ತಿದ್ದವು. ವೀರಸೌಧದ ಕೆಲವು ಚಿತ್ರಪಟಗಳ ಔಚಿತ್ಯ ಪ್ರಶ್ನಿಸಿ ಬಲಪಂಥೀಯ ಸಂಘಟನೆಗಳು ವಿದುರಾಶ್ವತ್ಥದಲ್ಲಿ ದಾಂದಲೆಯೆಬ್ಬಿಸಿದಾಗ ವಿಚಲಿತಗೊಂಡಿದ್ದರು. ಆದರೆ ಸ್ಮಾರಕದ ಉಳಿವಿಗೆ ಬಂಡೆಕಲ್ಲಿನಂತೆ ಎದೆಕೊಟ್ಟು ನಿಂತರು. ಇತಿಹಾಸ ತಿರುಚುವ ಪ್ರಯತ್ನಗಳನ್ನು ತಡೆಗಟ್ಟಬೇಕೆಂದು ಹೊಸತಲೆಮಾರನ್ನು ಎಚ್ಚರಿಸಿದರು. ಹೊಸಪ್ರಯತ್ನಗಳೊಂದಿಗೆ ತಮ್ಮನ್ನು ಸದಾ ಗುರುತಿಸಿಕೊಳ್ಳುತ್ತಿದ್ದ ಅವರು ಹತಾಶೆಗೊಳಗಾದದ್ದಿಲ್ಲ. ಲೋಕಹಿತವಾದಿ ಬಳಗವನ್ನು ಕಂಡು, 'ನಿಮ್ಮನ್ನೆಲ್ಲ ನೋಡಿ ನಂಗೆ ಸಮಾಧಾನ ಅನಿಸ್ತಿದೆ, ನೆಮ್ಮದಿಯಿಂದ ಸಾಯ್ತೋದು ಅನಿಸ್ತಿದೆ' ಎಂದೇ ಹೇಳುತ್ತಿದ್ದರು.

ಇದೇ ಸೆ. 4ರಂದು ಬೆಂಗಳೂರಿನಲ್ಲಿ ಅವರನ್ನು ಭೇಟಿಯಾದೆ. 'ನಾಯೇನು ಇನ್ನು ಹೆಚ್ಚು ದಿವ್ಸ ಇರಲ್ಲ ಅನ್ಸುತ್ತೆ ಕಣಮ್ಮಾ, ಒಂದ್ಸಲ ಬಾಮ್ಮಾ ಗೌರಿಬಿದನೂರಿಗೆ. ಈ ಸರ್ತಿ ಮಾತ್ರ ತುಂಬಾ ಸುಸ್ತಾಗ್ಬಿಟ್ಟಿದಿನಿ, ಜಾಸ್ತಿ ದಿವ್ಸ ಇಲ್ಲ' ಎಂದು ದಿಟ್ಟಿಸಿದ್ದರು. ಅವರನ್ನು ಉತ್ತೇಜಿಸಲು, 'ಆತ್ಮಕತೆ ಬರೀರಿ ಸರ್' ಅಂದಾಗ, 'ಅದೆಲ್ಲ ಟೈಂ ವೇಸ್ಟು, ಮಾಡಕ್ಕೆ ತುಂಬ ಕೆಲ್ಸ ಇದೆ. ಬೇಕಾದ್ರೆ ನೀ ಬಾಮ್ಮಾ, ಹೇಳ್ತಿನಿ, ಬರ್ಕೋಳಿಯಂತೆ' ಎಂದಿದ್ದರು. ದಣಿದ ಅವರ ಕಣ್ಣುಗಳಲ್ಲಿ ಕಂಡ ಒಂದುಗೆರೆ ನೀರು ನನ್ನೊಳಗನ್ನು ಕಲಕಿಹಾಕಿತ್ತು.

'ಜಾಸ್ತಿ ದಿವ್ಸ ಇಲ್ಲ'ವೆಂಬ ಅವರ ಊಹೆ ಸೆ.10ರಂದು ನಿಜವಾಯಿತು. ಕರಾವಳಿಯ ಸಣ್ಣ ಊರಿನಲ್ಲಿ ವೃತ್ತಿ, ಪ್ರವೃತ್ತಿ, ಸಂಸಾರ ನಿಭಾವಣೆಯು ಸೃಷ್ಟಿಸಿದ ಸಮಯದ ಅಭಾವದಿಂದ ಗೌರಿಬಿದನೂರಿಗೆ ಹೋಗಿ ಅವರೊಡನೆ ಕೆಲಕಾಲ ಕಳೆಯುವ ನನ್ನ ಕನಸು ಕರಗೇ ಹೋಯಿತು.

ಪ್ರಿಯ ಸರ್, ನಿಮ್ಮೊಡನಾಟಕ್ಕೆ ಸಮಯ ಹೊಂದಿಸಿಕೊಳ್ಳದ ಬಡವಿ ನಾನು. ಆದರೆ ವಿದುರಾಶ್ವತ್ಥ, ಗೌರಿಬಿದನೂರು, ಪಿನಾಕಿನಿ ನದಿ, ನಂದಿಬೆಟ್ಟ ಇರುವತನಕ ನೀವು ನಮ್ಮೊಡನಿದ್ದೇ ಇರುವಿರಿ. ಸಿಗುತ್ತಾ ಇರೋಣ.



ಕುರ್ಚಿ ಬಿಡದ ಮುಖ್ಯಮಂತ್ರಿಯ ಕಥೆ

ಅಭಿಲಾಷ್ ಪಿ.ಎಸ್.

ಒಳನೋಟ

ನರಸಪ್ಪ ಉರೂಫ್ ನರಸೇಗೌಡ ಉರೂಫ್ ಹೊನ್ನಸಂದ್ರ ನರಸಿಂಹಯ್ಯ ಚಂದ್ರಶೇಖರ ಎಂದರೆ ಯಾರು ಎಂದು ನಿಮಗೆ ಗೊತ್ತೇ? ಹೀಗೆಂದರೆ ತಕ್ಷಣ ಯಾರಿಗೂ ಇವರ ಪರಿಚಯ ಸಿಗದು. ಇದು ಕರುನಾಡಿಗೆ ಕಳೆದ ನಾಲ್ಕು ದಶಕಗಳಿಂದ ನಿರಂತರವಾಗಿ 'ಮುಖ್ಯಮಂತ್ರಿ'ಯಾಗಿರುವವರ ಮೂಲ ಹೆಸರು. ಕರ್ನಾಟಕದ ಜನರಿಗೆ 'ಮುಖ್ಯಮಂತ್ರಿ' ಚಂದ್ರು ಎಂದೇ ಇವರು ಪರಿಚಿತರು.

1980ರ ಡಿಸೆಂಬರ್ 4ರಂದು, ತಮ್ಮ 27ನೇ ವಯಸ್ಸಿಗೆ 'ಮುಖ್ಯಮಂತ್ರಿ'ಯಾಗಿ ಗದ್ದುಗೆ ಏರಿದ ಇವರು ಇಂದಿಗೂ ಆ ಕುರ್ಚಿ ಬಿಟ್ಟು ಕೆಳಗಿಳಿದಿಲ್ಲ! ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಹೊನ್ನಸಂದ್ರ ಗ್ರಾಮದಲ್ಲಿ ಹುಟ್ಟಿದ ಹೊನ್ನಸಂದ್ರ ಚಂದ್ರಶೇಖರ, ಈ ಮಟ್ಟದಲ್ಲಿ 'ಮುಖ್ಯಮಂತ್ರಿ ಚಂದ್ರು'ವಾಗಿ ಹೇಗೆ ಬೆಳೆದರು ಎಂಬ ಕಥೆಯೇ ಈ ಕೃತಿ. ಹೌದು, ಈ ಹೊತ್ತಿಗೆ ಚಂದ್ರು ಅವರ ಜೀವನ ಕಥನ.

ಈ ಬಣ್ಣದ ಬದುಕನ್ನು ಚಂದ್ರು ಅವರು ದಾಖಲಿಸಿದ್ದು ಲಾಕ್‌ಡೌನ್ ಸಂದರ್ಭದಲ್ಲಿ. ಆತ್ಮಕಥೆಯ ಚೌಕಟ್ಟಿನಂತೆ ಬಾಲ್ಯ, ಕಾಲೇಜು ಜೀವನದಿಂದಲೇ ತಮ್ಮ ಬದುಕಿನ ಹೆಜ್ಜೆಗಳನ್ನು ದಾಖಲಿಸುತ್ತಾ ಹೊರಟಿದ್ದಾರೆ ಅವರು. ಪ್ರಸ್ತುತ ಮಾತಿನಲ್ಲಿ ಇರುವ ತುಂಟತನ ಬಾಲ್ಯ ಹಾಗೂ ಹದಿಹರೆಯದಲ್ಲಿ ತಮ್ಮ ನಡವಳಿಕೆಯಲ್ಲೂ ಇತ್ತು ಎನ್ನುವುದನ್ನು ಚಂದ್ರು ಅವರು ಇಲ್ಲಿ ಹಲವು ಘಟನೆಗಳ ಮೂಲಕ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಪುಟ ತಿರುವಿದಂತೆ ರಂಗಾನುಭವವೂ ಬಿಚ್ಚಿಕೊಳ್ಳುತ್ತದೆ.

ರಂಗಾನುಭವದ ಬಳಿಕ ಬರುವ ಅಧ್ಯಾಯ ಓದುಗರಲ್ಲಿ ಹೆಚ್ಚಿನ ಕುತೂಹಲ ಮೂಡಿಸುತ್ತದೆ. ಅದೇ ಆಕಸ್ಮಿಕವಾಗಿ ಮುಖ್ಯಮಂತ್ರಿಯಾದ ಎಚ್.ಎನ್.ಚಂದ್ರಶೇಖರ ಕಥೆ. ಕಲಾಗಂಗೋತ್ರಿಯ ವೇದಿಕೆಯಲ್ಲಿ ತಾವು ಆಕಸ್ಮಿಕವಾಗಿ ಮುಖ್ಯಮಂತ್ರಿಯಾದ ಘಟನೆ, ಮುಖ್ಯಮಂತ್ರಿ ನಾಟಕದ ದಾಖಲೆ, ನಾಟಕ ಪ್ರದರ್ಶನದ ವೇಳೆ ನಡೆದ ಸ್ವಾರಸ್ಯಕರ ಘಟನೆಗಳನ್ನು ಬಹಳ ವಿಸ್ತೃತವಾಗಿ ಚಂದ್ರು ಅವರು ದಾಖಲಿಸಿದ್ದಾರೆ. ವರನಟ ಡಾ.ರಾಜ್‌ಕುಮಾರ್ ಅವರಿಗೆ ಮುಖ್ಯಮಂತ್ರಿ ನಾಟಕ ಅರ್ಥವಾಗದೇ ಇದ್ದಿರುವುದನ್ನೂ, ಇದನ್ನು ಸ್ವತಃ ರಾಜ್‌ಕುಮಾರ್, ತಮ್ಮ ಬಳಿ ಹೇಳಿಕೊಂಡಿದ್ದನ್ನೂ ಅವರು ದಾಖಲಿಸಿದ್ದಾರೆ.



ಪು: 244 ₹250

ರಂಗವನದ 'ಚಂದ್ರ'ತಾರೆ
ಡಾ.ಮುಖ್ಯಮಂತ್ರಿ ಚಂದ್ರು ಜೀವನ ಕಥನ
ಪ್ರ: ಕವಿತಾ ಪ್ರಕಾಶನ, ಮೈಸೂರು
ಸಂ: 9880105526

ಚಂದ್ರು ಅವರ ರಂಗಪಯಣ ಎಷ್ಟು ಸ್ವಾರಸ್ಯಕರ, ಆಸಕ್ತಿದಾಯಕವಾಗಿದೆಯೋ ಅವರ ರಾಜಕೀಯ ಜೀವನ ಕಥೆಯೂ ಅಷ್ಟೇ. ಲೋಕಸಭೆ ಚುನಾವಣೆಯಲ್ಲಿ ಸೋತ ದಿನ ಪತ್ನಿ ಪದ್ಮಾ ಸಿಹಿ ಅಡುಗೆ ಮಾಡಿದ ಘಟನೆ, ಅದರ ಹಿಂದಿನ ವೃತ್ತಾಂತ, ಆಕಸ್ಮಿಕವಾಗಿ 'ಮುಖ್ಯಮಂತ್ರಿ' ಪಟ್ಟ ಒಲಿದಂತೆ ಆಕಸ್ಮಿಕವಾಗಿ ಬಂದ ವಿಧಾನಸಭೆ ಟಿಕೆಟ್, ಸಾವಿನ ಭಯ ಹುಟ್ಟಿಸಿದ್ದ ಯಡಿಯೂರಪ್ಪ ಅವರ ಜೊತೆಗಿನ ಹೆಲಿಕಾಪ್ಟರ್ ಪಯಣ ಹೀಗೆ ತಮ್ಮ ಸ್ಮೃತಿಪಟಲದಲ್ಲಿರುವ ಎಲ್ಲ ಘಟನೆಗಳನ್ನು ಚಂದ್ರು ಅವರಿಲ್ಲಿ ದಾಖಲಿಸಿದ್ದಾರೆ. ಶೂಟಿಂಗ್ ವೇಳೆ ನಡೆದ ಅವಘಡದಲ್ಲಿ ಒಂದು ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡ ವೃತ್ತಾಂತವನ್ನೂ ಬರೆದಿದ್ದಾರೆ.

ಈ ಕೃತಿಯಲ್ಲಿ ಚಂದ್ರು ಅವರ ಬಾಲ್ಯ, ಕಾಲೇಜು ಜೀವನ, ರಂಗಾನುಭವ, ಮುಖ್ಯಮಂತ್ರಿ ಪಟ್ಟ ಸಿಕ್ಕಿದ ಘಳಿಗೆ, ಸಿನಿಮಾ ಬದುಕು, ರಾಜಕೀಯ ಕ್ಷೇತ್ರದಲ್ಲಿನ ಹೆಜ್ಜೆಗಳ ಜೊತೆಗೆ ಸಂಸಾರಿಯ ಸ್ವಗತವೂ ಇದೆ. ಇಡೀ ಕೃತಿ ಕೇವಲ ಆತ್ಮಕಥೆಯಾಗದೆ, ತಮ್ಮ ಕಲಾಗಂಗೋತ್ರಿ ತಂಡದ ಹೆಜ್ಜೆಗಳು, ಇದರ ರೂವಾರಿ ಬಿ.ವಿ.ರಾಜಾರಾಂ ಒಡನಾಟವೂ ಇಲ್ಲಿ ದಾಖಲಾಗಿರುವುದು ವಿಶೇಷ. ಓದಿ ಅನುಭವಿಸುವಂತಹ ಹೂರಣದಿಂದ ಈ ಕೃತಿ ತುಂಬಿದೆ. ಚಂದ್ರು ಅವರ ಹಲವು ಆಯಾಮಗಳನ್ನು ಓದುಗರು ಇಲ್ಲಿ ತಿಳಿದುಕೊಳ್ಳಬಹುದು. ಬರವಣಿಗೆಯೂ ಓದಿನ ಓಘಕ್ಕೆ ಪೂರಕವಾಗಿರುವಂತೆ ಸರಳವಾಗಿದೆ

ದಿನೇಶ ಕೆ. ನಾಯ್ಕ್
ಅವರ
ದೈವದ ನಗ
https://www.prajavani.net/short-story
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಫಾಲ್ಗುಣ ಗೌಡ ಅಚವೆ
ಅವರ
ಮಂಗಟ್ಟೆ

https://www.prajavani.net/poetry
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮೊದಲ ಓದು

ಭಿಕ್ಷಾ ಪಾತ್ರೆಯೊಳಗಿನ ಜೀವನ ದ್ರವ್ಯ

ಕಗ್ಗತ್ತಲ ಕೂಪಗಳಿಂದಲೇ ನಾವು ಜೀವನದ ಪ್ರಕಾಶಮಾನ ಕಿರಣಗಳನ್ನು ಹಿಡಿದಿಟ್ಟುಕೊಳ್ಳಬೇಕು ಎಂಬ ಆಶಯದ ಕಾದಂಬರಿ 'ಬೌಲ್'. ಪ್ರಾಚೀನ ವ್ಯಕ್ತಿತ್ವಗಳನ್ನು ಆಧುನಿಕ ಸಂವೇದನಗಳೊಂದಿಗೆ ಇಲ್ಲಿ ಮರುಸೃಷ್ಟಿಸಲಾಗಿದೆ. ಬಿಕ್ಕು ಹಾಗೂ ಅವನ ಕೈಯಲ್ಲಿನ ಖಾಲಿ ಪಾತ್ರೆ ರೂಪಕವಾಗಿ, ಪಾತ್ರವಾಗಿಯೂ ಕಾದಂಬರಿಯಲ್ಲಿ ಮಾತನಾಡುತ್ತಲೇ ಹೋಗಿರುವುದು ವಿಶೇಷ. ಸಾಂಸಾರಿಕ ಜವಾಬ್ದಾರಿಯೆಲ್ಲವನ್ನೂ ನಿರ್ವಹಿಸಿದ ಬಿಕ್ಕು ಮೋಕ್ಷ ಸಾಧಿಸುವ ಕಥೆ, ಅಧ್ಯಾತ್ಮ, ಲೌಕಿಕದ ನಡುವಿನ ವಾಸ್ತವಕ್ಕೆ ಬದುಕು ಹತ್ತಿರವಾಗಬೇಕು ಎಂಬ ಸಮನ್ವಯವನ್ನೂ ಸಾರಿದೆ. ಬುದ್ಧ ಮಾರ್ಗದ ಈ ಪಯಣದುದ್ದಕ್ಕೂ ರೂಪಕಗಳಲ್ಲಿ ಹೇಳುವ ಕಥೆಗಳೆಲ್ಲವೂ ವಾಸ್ತವಿಕ ಬದುಕಿಗೇ ಸಂಬಂಧಿಸಿದ್ದಾಗಿವೆ. 'ಪರಭಕ್ಷಕ ಪ್ರಪಂಚ'ದ 'ಮೋಕ್ಷ' ಗಳಿಕೆಯ ಹಾದಿಯನ್ನೂ ತೋರಿವೆ.

ಬದುಕಿನಲ್ಲಿ ಎದುರಾಗುವ ಅನಿರೀಕ್ಷಿತ ಸಂದರ್ಭಗಳನ್ನು ಎದುರಿಸುವ ಬಗೆ ಹೇಗೆ, ಆಧುನಿಕ ಬದುಕು ಸೃಷ್ಟಿಸುವ ಗೊಂದಲ, ಅತಂತ್ರತೆ, ಅಸಹನೆ ಎಂತಹದ್ದು ಎಂಬುದನ್ನು ಇಲ್ಲಿನ ಪಾತ್ರಗಳು ಚರ್ಚಿಸಿವೆ. ಕಾರ್ಪೊರೇಟ್ ಜಗತ್ತಿನ ಯೋಜನೆಗಳ ಆಳವಾದ ಉದ್ದೇಶಗಳೂ ಇಲ್ಲಿ ವಿಶ್ಲೇಷಣೆಗೆ ಒಳಗಾಗಿವೆ. ಇಂತಹ ಸನ್ನಿವೇಶಕ್ಕೆ ಕಾರಣವಾದ ಪ್ರಭುತ್ವದ ವಿರುದ್ಧ ಆಕ್ರೋಶವೂ ಹರಿದಿದೆ. ಮನುಷ್ಯ ಬದುಕಿನ ಶೂನ್ಯತೆ ಮತ್ತು ಸಾತ್ವಿಕತೆ ಒಂದು ಹಂತದ ಅಮಾಯಕತೆಯನ್ನು ಬಿಕ್ಕುವಿನ ಪಾತ್ರ ವಿವರಿಸಿದಂತಿದೆ. ಮುರಿದ ಭಿಕ್ಷಾಪಾತ್ರೆ, ಅದನ್ನೂ ಜೋಪಾನವಾಗಿರಿಸಿಕೊಂಡು ಮುಂದುವರಿಯುವ ಬಿಕ್ಕು ಭೂತ, ವರ್ತಮಾನ ಮತ್ತು ಭವಿಷ್ಯದ ನೇರವಾದ ಪೂರಕ ಸಾಕ್ಷಿಯಂತೆ ಕಾಣಿಸುತ್ತಾನೆ. ಭಿಕ್ಷಾಪಾತ್ರೆ ಮನುಷ್ಯ ಬದುಕಿನ ಪಲ್ಲಟ ಹಾಗೂ ಅಸ್ಥಿರತೆಯನ್ನೂ ಪ್ರತಿಬಿಂಬಿಸಿದಂತಿದೆ.

ಪ್ರೊ. ಮನು ಚಕ್ರವರ್ತಿ ಅವರು ಮುನ್ನುಡಿಯಲ್ಲೇ ಹೇಳಿರುವಂತೆ ಇದೊಂದು ಮೂಲಭೂತವಾದ ತಾತ್ವಿಕ ವಿಚಾರಗಳನ್ನು ಅಪ್ಪಿಕೊಳ್ಳುವ ಸುಂದರ ಕಲಾಕೃತಿ. ಆದರೆ ನಿರೂಪಣೆ ಅಲ್ಲಲ್ಲಿ ತುಸು ಬಳಲಿದಂತೆ ಗೋಚರಿಸುತ್ತದೆ.



ಪು: 240 ₹250

ಬೌಲ್ (ಕಾದಂಬರಿ)
ಲೇ:ಎಂ.ಎಸ್. ಮೂರ್ತಿ
ಪ್ರ: ಕಿರಂ ಪ್ರಕಾಶನ, ಬೆಂಗಳೂರು
ಸಂ: 7090180999

ಕರ್ನಾಟಕದ ಮಾಸ್ಕೋದ ಕೆಂಪುಗಾಥೆ



ಪು: 232 ₹200

ಕಪ್ಪು ನೆಲದ ಕೆಂಪುಗಾಥೆ
ಲೇ: ಇಮ್ತಿಯಾಜ್ ಹುಸೇನ್
ಪ್ರ: ಸಹನಾ ಪ್ರಕಾಶನ, ದಾವಣಗೆರೆ
ಸಂ: 9844110454

ಪ್ರಸ್ತುತ ದೇವನಗರಿ, ಬೆಣ್ಣೆನಗರಿ, ವಿದ್ಯಾಕಾಶಿ ಮುಂತಾದ ಉಪನಾಮಗಳೊಂದಿಗೆ ಗುರುತಿಸಲ್ಪಡುತ್ತಿರುವ ದಾವಣಗೆರೆ, ನಾಲ್ಕು ದಶಕಗಳ ಹಿಂದೆ ಕರ್ನಾಟಕದ ಮ್ಯಾಂಚೆಸ್ಟರ್ ಆಗಿ ಹಾಗೂ ಶ್ರಮಿಕರ ಹೋರಾಟ, ಬಲಿದಾನದಿಂದ ಕರ್ನಾಟಕದ ಮಾಸ್ಕೋ ಆಗಿಯೂ ಗುರುತಿಸಿಕೊಂಡಿತ್ತು. ಕಾಲ ಉರುಳಿದಂತೆ ಈ ಕೆಂಪುಗಾಥೆಯನ್ನು ಮಣ್ಣು ಮರೆಯುತ್ತಿದೆ. ಇಂತಹ ಸಂದರ್ಭದಲ್ಲಿ ಕಪ್ಪುನೆಲದ ಕೆಂಪುಗಾಥೆಯನ್ನು ಮತ್ತೆ ನೆನಪಿಸುವ ಕೃತಿ ಇದು.

ಬಟ್ಟೆಗಿರಣಿ, ಕಾರ್ಮಿಕ ಹೋರಾಟ ಹಾಗೂ ಅದರ ಪರಿಣಾಮ, ಹರಿದ ರಕ್ತ, ಶಾಸನಸಭೆಯಲ್ಲಿ ಕೆಂಬಣ್ಣ ಹೀಗೆ ದಾವಣಗೆರೆಯ ಅರ್ಧಶತಮಾನದ ಚರಿತ್ರೆಯನ್ನು ಈ ಕೃತಿ ಕಟ್ಟಿಕೊಟ್ಟಿದೆ. 1970ರ ಏ.1ರಂದು ದಾವಣಗೆರೆಯಲ್ಲಿ ನಡೆದ ಎ.ಐ.ಟಿ.ಯು.ಸಿ ನಾಯಕರಾದ ಶೇಖರಪ್ಪ, ಸುರೇಶ್ ಅವರ ಕೊಲೆ, ಪಂಪಾಪತಿ ಅವರ ಮೇಲೆ ನಡೆದ ಭೀಕರ ಹಲ್ಲೆಯ ಘಟನೆಗಳಿಂದ ಅಧ್ಯಾಯವು ಆರಂಭಗೊಳ್ಳುತ್ತದೆ.

ಕಾಟನ್ ಮಿಲ್ ಆರಂಭ, ಈ ಮಿಲ್‌ನ ಕಾರ್ಮಿಕರ ಸಂಘಕ್ಕೆ ನರಸಿಂಹನ್ ಅವರು ಅಧ್ಯಕ್ಷರಾದ ನಂತರ ನಡೆದ ಘಟನೆಗಳು, ನಗರಸಭೆಯ ಸದಸ್ಯ ಸ್ಥಾನಕ್ಕೆ ಪಂಪಾಪತಿ ಅವರ ಅವಿರೋಧ ಆಯ್ಕೆ, ಕಮ್ಯೂನಿಸ್ಟ್ ಪಕ್ಷದ ರಾಜಕಾರಣಕ್ಕೆ ಅಧಿಕೃತ ಪ್ರವೇಶ, ಬಡ ಕಾರ್ಮಿಕರೂ ಜನಪ್ರತಿನಿಧಿಗಳಾದ ಬಗೆ ಹೀಗೆ ಪ್ರತಿಪುಟದಲ್ಲೂ ಕೆಂಪುಗಾಥೆಯನ್ನು ಈ ಕೃತಿ ಹಿಡಿದಿಟ್ಟಿದೆ. ಕೃತಿಗೆ ಬೆನ್ನುಡಿ ಬರೆದಿರುವ ರಹಮತ್ ತರೀಕೆರೆ ಅವರು ಉಲ್ಲೇಖಿಸುವಂತೆ ಈ ಕೃತಿ ಓದುತ್ತಾ, ದಾವಣಗೆರೆಯ ಹೋರಾಟದ ಘಟನಾವಳಿಗಳನ್ನು ಕಣ್ಣಾರೆ ಕಂಡಿದ್ದ ಕಾದಂಬರಿಕಾರ ಬಸವರಾಜ ಕಟ್ಟೀಮನಿಯವರ ಕಾದಂಬರಿ 'ಜ್ವಾಲಾಮುಖಿಯ ಮೇಲೆ' ನೆನಪಾಗುತ್ತದೆ.

ಧೀಮಂತರಾಗದ 'ಬುದ್ಧಿಜೀವಿ'ಗಳು

ಪ್ರತಿಕ್ರಿಯೆ

ಭಾನುವಾರದ ಪುರವಣಿಯಲ್ಲಿ ಪ್ರಕಟವಾದ ಪುರುಷೋತ್ತಮ ಬಿಳಿಮಲೆ ಅವರ ಲೇಖನದ ಕುರಿತು ಚರ್ಚೆ ನಡೆಯುತ್ತಿದೆ. ನಮ್ಮ ಸಂದರ್ಭದಲ್ಲಿ ಬುದ್ಧಿಜೀವಿ ಎಂಬ ಪದವೇ ವಿವಾದಾಸ್ಪದವಾಗಿದೆ. ತನ್ನ ಬುದ್ಧಿಯನ್ನೇ ಬಂಡವಾಳವನ್ನಾಗಿ ಮಾಡಿಕೊಂಡವನು ಎಂಬ ಅರ್ಥವೂ ಅದರಿಂದ ಹೊರಡುವ ಕಾರಣದಿಂದಲೋ ಏನೋ ಅಡಿಗರು ಅದರ ಬದಲಿಗೆ 'ಧೀಮಂತ' ಎಂಬ ಪದವನ್ನು ಬಳಕೆಗೆ ತಂದರು. ಆದರೆ ಇಂದಿನ ಬುದ್ಧಿಜೀವಿಗಳು ತಾವೇ ಹಾಕಿಕೊಂಡ ಲಕ್ಷ್ಮಣ ರೇಖೆಗಳಿಂದಾಗಿ ಧೀಮಂತರಾಗದೆ 'ಬುದ್ಧಿಜೀವಿ'ಗಳಾಗಿಯೇ ಉಳಿದದ್ದು ನಮ್ಮ ಸಮಾಜದ ದುರ್ದೈವವೆಂದೇ ಹೇಳಬೇಕು.

ಬಿಳಿಮಲೆ ಅವರು ಹೇಳುವ/ ತಿಳಿದಿರುವ ಬುದ್ಧಿಜೀವಿಗಳೆಂದರೆ ತಾವು ಮೆಚ್ಚುವ ರಾಜಕೀಯ ಪಕ್ಷವೊಂದರ ಜೊತೆ ಥಾಳವಾಗಿ ಗುರುತಿಸಿಕೊಂಡ, ಬಹುಸಂಖ್ಯಾತ ಜನಸಮುದಾಯ ಸರಿಯಿದ್ದಾಗಲೂ ಅದನ್ನು ಬಹಿರಂಗವಾಗಿ ಹೇಳಿದರೆ ಎಲ್ಲಿ ತಮ್ಮನ್ನು ಕೋಮುವಾದಿಗಳೆಂದು, ಪ್ರತಿಗಾಮಿಗಳೆಂದು ಬ್ರ್ಯಾಂಡ್ ಮಾಡಿಬಿಡುತ್ತಾರೋ ಎಂಬ ಆತಂಕದಲ್ಲಿರುವ, ಆ ಕಾರಣದಿಂದಾಗಿಯೇ ತಾವು ಮೆಚ್ಚಿಕೊಂಡ ಅಥವಾ ತಮ್ಮ ಒಲವಿನ, ಧೋರಣೆಯ ಪಕ್ಷದ ಆಡಳಿತದ ಪಡಸಾಲೆಯಲ್ಲಿಯೇ ವಿರಾಜಮಾನರಾಗುವುದನ್ನೇ ಧ್ಯೇಯವಾಗುಳ್ಳವರು ಎನಿಸುತ್ತದೆ. ತಮಗೆ ಮೆಚ್ಚುಗೆಯಾದ ರಾಜಕಾರಣಿಗಳು ಚುನಾವಣೆಗೆ ನಿಂತಾಗ ಅವರು ಕರುಣಿಸಿದ ಹುದ್ದೆಗೋ ಮತ್ತಿನ್ನಾವುದಕ್ಕೋ ಋಣ ತೀರಿಸುವ ಸಲುವಾಗಿಯೋ ಇಲ್ಲವೆ ಮತ್ತೆ ಅಧಿಕಾರಕ್ಕೆ ಬಂದಾಗ ತಮ್ಮನ್ನು ಮರೆಯದಿರಲೆಂದೋ ಅವರ ಪರವಾಗಿ ಪ್ರತ್ಯಕ್ಷವಾಗಿಯೇ ಚುನಾವಣಾ ಪ್ರಚಾರ ನಡೆಸುವುದರಲ್ಲಿ ಕೃತಾರ್ಥತೆಯ ಭಾವ ಅನುಭವಿಸುವವರನ್ನಷ್ಟೇ ಅವರು ದೃಷ್ಟಿಯಲ್ಲಿಟ್ಟುಕೊಂಡಂತಿದೆ.

ಈಗ ಆಡಳಿತ ನಡೆಸುತ್ತಿರುವ ಪಕ್ಷವೇನೂ ಮೇಲಿನಿಂದ ಇಳಿದುಬಂದದ್ದಲ್ಲ; ಇಲ್ಲವೇ ದೋಷರಹಿತವೂ ಅಲ್ಲ. ಆದರೆ ಹಿಂದೆ ಆಡಳಿತ ನಡೆಸಿದ ಪಕ್ಷವೂ ಥಾಳವಾಗಿಯೇ ತಪ್ಪಿ ನಡೆದಾಗಲೂ ಜಾಣಕುರುಡ ಮತ್ತು ಜಾಣಕಿವುಡರಂತಿದ್ದು ಟೀಕಿಸುವ ಗೋಜಿಗೇ ಹೋಗದೆ ತಮಗೆ ಒಪ್ಪಿಗೆಯಿಲ್ಲದ ಸರ್ಕಾರವೆಂಬ ಕಾರಣಕ್ಕೆ 'ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಎಂಬಂತೆ' ಈಗಿನ ಕೇಂದ್ರ/ರಾಜ್ಯ ಸರ್ಕಾರದ ಪ್ರತಿ ನಡೆಯಲ್ಲೂ ದೋಷ ಕಾಣುವುದು ಬುದ್ಧಿಜೀವಿಗಳ ರೀತಿಯೇ? ಹೀಗೆ ಸಮತೋಲನದ ದೃಷ್ಟಿ ಕಳೆದುಕೊಂಡ ಕಾರಣದಿಂದಲೇ ಇಂದು ಜನ ಇವರು ಹೇಳುವ 'ಬುದ್ಧಿಜೀವಿ'ಗಳ ವಿಷಯಕ್ಕೆ ಒಂದು ಬಗೆಯ ಅವಜ್ಞೆ ಅಥವಾ ಅಲರ್ಜಿ ಬೆಳೆಸಿಕೊಂಡಿದ್ದರೆ ಆಶ್ಚರ್ಯವಿಲ್ಲ. ಜನರೇ ಹೀಗಿದ್ದಾಗ ಇನ್ನು ಆಳುವ ಸರ್ಕಾರಕ್ಕೆ ಪಕ್ಷಪಾತ ಪೂರಿತರಾದವರ ಬಗ್ಗೆ ಧೂಮ್ರ ವರ್ಣ ಕವಿದಿದ್ದರೆ ಅದನ್ನು ಅಷ್ಟೊಂದು ಆಶ್ಚರ್ಯವೆನ್ನಲು ಸಾಧ್ಯವೆ?

ನವೋದಯ ಕಾಲದ, ಪ್ರಗತಿಶೀಲ ಕಾಲದ ಕುವೆಂಪು, ಕಾರಂತ, ಅನಕೃ, ನಿರಂಜನ ಇವರು ಆಡಳಿತ ನಡೆಸುವ ಪಕ್ಷದ ಸರ್ಕಾರದ ಜೊತೆ ಗುರುತಿಸಿಕೊಂಡಿರದೆ ಇದ್ದ ಕಾರಣಕ್ಕೆ ಅವರು ಯಾರನ್ನೇ ಟೀಕಿಸಿದರೂ ಅದರಲ್ಲಿ ಪಕ್ಷಪಾತತನ ಗುರುತಿಸುವಂತಿರುತ್ತಿರಲಿಲ್ಲ. ಮತ್ತು ಅವರ ಮಾತಿಗೆ ಬೆಲೆ ಇರುತ್ತಿತ್ತು. ಬಿಳಿಮಲೆಯವರು ಹೇಳುವ ಬುದ್ಧಿಜೀವಿಗಳಿಗೆ ಅಂಥ ಸಮತೋಲನ ದೃಷ್ಟಿ ಇದೆಯೆ? ಪ್ರಭುತ್ವವನ್ನು ಪ್ರಶ್ನಿಸುತ್ತಲೇ ಬಂದ ಸಾಹಿತಿಗಳು ಪ್ರಭುತ್ವದ, ಅಧಿಕಾರದ ಪಡಸಾಲೆಗಳಲ್ಲೇ ವಿರಾಜಮಾನರಾದ ಬದಲಾವಣೆ ಬಂದದ್ದು ಯಾವಾಗ ಎಂಬ ಸಂಶೋಧನೆ ಮಾಡಿದರೆ ಕುತೂಹಲಪೂರ್ಣ ಫಲಿತಾಂಶಗಳು ಹೊರಹೊಮ್ಮಬಹುದು.

–ಡಾ. ಆರ್. ಲಕ್ಷ್ಮೀನಾರಾಯಣ, ಬೆಂಗಳೂರು

ಸಾವಿತ್ರಿಬಾಯಿ ಎರಡು ರೀತಿಯಲ್ಲಿ ಸ್ಫೂರ್ತಿ. ತಾವು ಬದುಕುತ್ತಿದ್ದ ಸಂದರ್ಭದಲ್ಲಿನ 'ಸನಾತನಿ' ಮನಃಸ್ಥಿತಿಯ ವಿರುದ್ಧ ಹೋರಾಡುತ್ತ ತಮ್ಮನ್ನು ತಾವು ಗಟ್ಟಿಯಾಗಿ ನಿಲ್ಲಿಸಿಕೊಂಡದ್ದು ಒಂದಾದರೆ, ಸ್ವಂತ ಸಂಕಟಗಳ ನಡುವೆಯೂ ಸ್ತ್ರೀ ಸಮುದಾಯವನ್ನು ಅವರ ನಿರ್ಬಂಧಗಳಿಂದ ಬಿಡುಗಡೆಗೊಳ್ಳುವಂತೆ ಮಾಡುವುದಕ್ಕಾಗಿ ಶಾಲೆಗಳನ್ನು ತೆರೆದದ್ದು ಮತ್ತೊಂದು. ಅವರ ಬದುಕನ್ನು ಸಮರ್ಥವಾಗಿ ಕಟ್ಟಿಕೊಡುವಲ್ಲಿ ನಾಟಕ ಯಶಸ್ವಿಯಾಯಿತು

ಸಾವಿತ್ರಿಬಾಯಿಯಾಗಿ ಶೈಲಜಾ

ಸ್ಫೂರ್ತಿಯ ಜ್ಯೋತಿ ಬೆಳಗಿದ ಸಾವಿತ್ರಿಬಾಯಿ

ಅ.ರಾ.ಶ್ರೀನಿವಾಸ

ಮಹಾತ್ಮ ಗಾಂಧಿ ಮತ್ತು ಡಾ.ಭೀಮರಾವ್ ಅಂಬೇಡ್ಕರ್ ಈ ಇಬ್ಬರ ಜನನಕ್ಕಿಂತಲೂ ಮೊದಲೇ ಜನಿಸಿ, ಮುಂದೆ ಆ ಇಬ್ಬರೂ ಮಾಡಿದ ಕಾರ್ಯಗಳನ್ನು ಅವರಿಗೂ ಮೊದಲೇ ಮಾಡಿದವರು ಜ್ಯೋತಿಬಾ ಫುಲೆ ಮತ್ತು ಅವರ ಪತ್ನಿ ಸಾವಿತ್ರಿಬಾಯಿ ಫುಲೆ. ಹಾಗೆ ನೋಡಿದರೆ ಗಾಂಧೀಜಿ ಮಹಾತ್ಮ ಆಗುವುದಕ್ಕಿಂತ ಮೊದಲೇ ಮಹಾರಾಷ್ಟ್ರ ಮೂಲದ ಫುಲೆಯವರು 'ಮಹಾತ್ಮ' ಗೌರವಕ್ಕೆ ಪಾತ್ರರಾದವರು. ಹಿಂದುಳಿದ ವರ್ಗಕ್ಕೆ ಸೇರಿದ ಈ ದಂಪತಿ, ಅದೇ ಕಾರಣದಿಂದ ಅನೇಕ ಸೌಲಭ್ಯಗಳಿಂದ ವಂಚಿತರಾದವರು. ಹಾಗೆಯೇ ಕೊರತೆಗಳನ್ನೆಲ್ಲ ಮೀರಿ ತಾವೂ ವಿದ್ಯಾವಂತರಾಗಿ ಬೇರೆಯವರಿಗೆ ಕೂಡ ಕಲಿಸಿದವರು. ಮುಖ್ಯವಾಗಿ ಸ್ತ್ರೀ ಶಿಕ್ಷಣದ ಮಹತ್ವವನ್ನು ಅರ್ಥಮಾಡಿಕೊಂಡು ಅದರಲ್ಲೂ ಹಿಂದುಳಿತ ವರ್ಗಗಳ ಬಾಲಕಿಯರಿಗೆ ಸುಶಿಕ್ಷಿತರನ್ನಾಗಿ ಮಾಡುವುದಕ್ಕಾಗಿ ಅನೇಕ ಅಡ್ಡಿ ಆತಂಕ ಮೀರಿ ಶಾಲೆಗಳನ್ನು ಸ್ಥಾಪಿಸಿದವರು.

ಸಾವಿತ್ರಿಬಾಯಿ ಎರಡು ರೀತಿಯಲ್ಲಿ ಸ್ಫೂರ್ತಿ. ತಾವು ಬದುಕುತ್ತಿದ್ದ ಸಂದರ್ಭದಲ್ಲಿನ 'ಸನಾತನಿ' ಮನಃಸ್ಥಿತಿಯ ವಿರುದ್ಧ ಹೋರಾಡುತ್ತ ತಮ್ಮನ್ನು ತಾವು ಗಟ್ಟಿಯಾಗಿ ನಿಲ್ಲಿಸಿಕೊಂಡದ್ದು ಒಂದಾದರೆ, ಸ್ವಂತ ಸಂಕಟಗಳ ನಡುವೆಯೂ ಸ್ತ್ರೀ ಸಮುದಾಯವನ್ನು ಅವರ ನಿರ್ಬಂಧಗಳಿಂದ ಬಿಡುಗಡೆಗೊಳ್ಳುವಂತೆ ಮಾಡುವುದಕ್ಕಾಗಿ ಶಾಲೆಗಳನ್ನು ತೆರೆದದ್ದು ಮತ್ತೊಂದು. ಪತಿ ಸತ್ತ ಮೇಲೆ ಕೂದಲು ಕತ್ತರಿಸುವುದರ ವಿರುದ್ಧ, ವಿಧವೆ ಗರ್ಭವತಿಯಾದರೆ ಎದುರಾಗುವ ಸಮಸ್ಯೆಗಳ ವಿರುದ್ಧ ಶ್ರಮಿಸಿದವರೂ ಅವರು. ಒಂದು ವೈಯಕ್ತಿಕವಾದರೆ ಮತ್ತೊಂದು ಸಾಮುದಾಯಿಕ. ಅಂತಹ ಹೋರಾಟದ ಮುಂಚೂಣಿಯಲ್ಲಿದ್ದ ಮಹಾನ್ ಸಾಧಕಿ ಸಾವಿತ್ರಿಬಾಯಿ ಅವರ ಬದುಕನ್ನು ಕಟ್ಟಿಕೊಟ್ಟಿದ್ದು ಈ ಏಕವ್ಯಕ್ತಿ ರಂಗ ಪ್ರಯೋಗ. ಕೆ.ವಿ. ಸುಬ್ಬಣ್ಣ ರಂಗಸಮೂಹದ ಸಹಯೋಗದಲ್ಲಿ ಈ ನಾಟಕ ಇತ್ತೀಚೆಗೆ ಸಾಗರದಲ್ಲಿ ನಡೆಯಿತು.

ನಾಟಕದ ಹೆಸರು 'ಸಾವಿತ್ರಿಬಾಯಿ ಫುಲೆ' ಎಂದಾದರೂ ಅವರ ಪತಿ ಜ್ಯೋತಿಬಾ ಅವರ ಕಥೆಯೂ ಇದರಲ್ಲಿ ಹಾಸುಹೊಕ್ಕಾಗಿದೆ. ಅವರ ಸಾಧನೆಯ ಪ್ರಸ್ತಾಪ ಮೇಲಿಂದ ಮೇಲೆ ಬರುತ್ತಲೇ ಇರುತ್ತದೆ. 'ಜ್ಯೋತಿರಾವ್ ಜ್ವಾಲಾಮುಖಿಯ ಸ್ಫೋಟವಾಗಿದ್ದು, ನಾನದರ ಬೆಳಕು. ಆ ಮಹಾತ್ಮ ಪ್ರಚಂಡ ಆಲದ ಮರ, ನಾನು ಅದರ ತಣ್ಣನೆಯ ನೆರಳು' ಎಂಬುದಾಗಿ ಸ್ವತಃ ಸಾವಿತ್ರಿ ಈ ನಾಟಕದಲ್ಲಿ ಹೇಳಿಕೊಳ್ಳುತ್ತಾರೆ. ಅಂದರೆ ತಾವು ಏನೆಲ್ಲ ಮಾಡಿದರೂ ಅದರಲ್ಲಿ ತಮ್ಮ ಗಂಡನ ನೆರಳಿದೆ ಎಂದು. ಇದು ಅವರ ದಾಂಪತ್ಯದ ಸೊಗಸು.

ಮುಖ್ಯವಾಗಿ ಈ ನಾಟಕವನ್ನು ಆರಂಭಮಾಡಿದ ರೀತಿ ಮತ್ತು ಅದನ್ನು ಮುಗಿಸಿದ ರೀತಿ ಅರ್ಥಪೂರ್ಣವಾಗಿತ್ತು. ಒಂದು ದೊಡ್ಡ ಹಣತೆಯನ್ನು ಕೈಲಿ ಹಿಡಿದು ಸಾವಿತ್ರಿಬಾಯಿ ರಂಗಕ್ಕೆ ಪ್ರವೇಶ ಕೊಡುತ್ತಾರೆ ಮತ್ತು ಅದನ್ನು ರಂಗದ ಮುಂಭಾಗದಲ್ಲಿ ತಂದಿಡುತ್ತಾರೆ. ಅವರ ಪತಿಯ ಹೆಸರೂ ಜ್ಯೋತಿ, ಆಕೆಯು ಕೈಕೊಂಡ ಕಾರ್ಯವೂ ವಿದ್ಯೆ ಎಂಬ ಜ್ಯೋತಿ. ಹಾಗೆಯೇ ಮುಕ್ತಾಯವಾಗುವಾಗ ಒಂದು ಹಣತೆ ಹತ್ತಾರು ಚಿಕ್ಕ ಚಿಕ್ಕ ಹಣತೆಗಳನ್ನು ಬೆಳಗಿ ರಂಗದ ತುಂಬೆಲ್ಲ ಇರಿಸುವುದರೊಂದಿಗೆ ನಾಟಕ ಮುಗಿಯುತ್ತದೆ. ಆ ಹೊತ್ತಿಗೆ ಸಾವಿತ್ರಿಬಾಯಿ ಅವರು ಪ್ಲೇಗ್ ರೋಗದಿಂದ ಸಾವನ್ನಪ್ಪಿರುತ್ತಾರೆ. ಆಗ ಸ್ವತಃ ಅವರೇ ಜ್ಯೋತಿ. ಅಲ್ಲಿ ಅನೇಕ ಜ್ಯೋತಿಗಳಾಗಿ ಹರಡಿಕೊಂಡಿದ್ದಾರೆ ಎಂಬ ಅರ್ಥವನ್ನು ನಾಟಕ ಧ್ವನಿಸುತ್ತದೆ. ಸರಳ ರಂಗಪರಿಕರಗಳನ್ನೇ ಬಳಸಲಾಗಿದೆ. ಸಾವಿತ್ರಿ ತಮ್ಮ ತಂದೆ-ತಾಯಿ, ಬಾಲ್ಯದ ಕುರಿತು ಹೇಳುವಾಗ ಕೆಲವು ಗೊಂಬೆಗಳನ್ನು ಬಳಸಿಕೊಳ್ಳಲಾಗಿದೆ. ರಂಗದ ಮಧ್ಯೆ ಜ್ಯೋತಿಬಾ ಫುಲೆಯವರನ್ನು ಸಂಕೇತಿಸುವ ಕೆಂಪುಬಣ್ಣದ ಮುಂಡಾಸು ಸುತ್ತಿದ ಮನುಷ್ಯಾಕಾರದ ಆಕೃತಿ. ಅದರ ಒಂದು ಪಕ್ಕದಲ್ಲಿ ಬಸುರಿಯೊಬ್ಬಳ ರೇಖಾಚಿತ್ರ, ಮತ್ತೊಂದು ಪಕ್ಕ ಉರಿಯ ನಡುವೆ ಇರುವ ಸ್ತ್ರೀಯ ರೇಖಾಚಿತ್ರದ ಪರದೆ – ರಂಗದ ಸಾಧ್ಯತೆಯನ್ನು ಸೃಜನಾತ್ಮಕವಾಗಿ ಬಳಸಿಕೊಂಡಿದ್ದಕ್ಕೆ ಸಾಕ್ಷಿಯಾಗಿದ್ದವು.

ಈ ಪ್ರದರ್ಶನದ ಒಂದು ಮುಖ್ಯ ಸಮಸ್ಯೆ ಏನೆಂದರೆ ಕಥನ ಮುಂದೆ ಬಂತು, ಆದರೆ ಸಂಕಥನ ಹಿಂದಾಯಿತು. ಸಾವಿತ್ರಿ ಎಂಬ ಅನುಭವವು ಪಡೆದುಕೊಳ್ಳುವ ರೂಪಕದ ಕಡೆ ಗಮನ ಕೊಟ್ಟಿದ್ದರೆ ನಾಟಕ ರೂಪಕವಾಗಿ ಇನ್ನಷ್ಟು ಅರ್ಥಪೂರ್ಣವಾಗುತ್ತಿತ್ತು. ಈ ನಾಟಕದಲ್ಲಿ ಬೇರೆ ಬೇರೆ ಹಾಡುಗಳನ್ನು ಬಳಸಿಕೊಂಡಿದ್ದಾರೆ. ಆದರೆ, ಈ ಹಾಡುಗಳು ಮೊದಲೇ ಹೆಚ್ಚು ಜನಪ್ರಿಯವಾದಂಥವು ಮತ್ತು ಅವುಗಳಿಗೆ ಈಗಾಗಲೇ ಪ್ರತ್ಯೇಕ ಸಂದರ್ಭ ಸ್ಥಾಪಿತವಾಗಿದ್ದರಿಂದ ಇಲ್ಲಿ ಪರಿಪೂರ್ಣ ಹೊಂದಿಕೆ ಆಗಲಿಲ್ಲ. ಆದರೆ ಸರ್ವಜ್ಞ ಕವಿಯ 'ಜ್ಯೋತಿ ಹೀನನ ಮನೆಯ..' ಎಂಬ ಪದ ಚೆನ್ನಾಗಿ ಹೊಂದಿಕೊಂಡಿತ್ತು. ನಟಿ ಶೈಲಜಾ ಅವರದು ಕೊರತೆಯಿಲ್ಲದ ಅಭಿನಯ. ಡಿ.ಎಸ್. ಚೌಗಲೆ ಅವರು ಸಾವಿತ್ರಿಬಾಯಿ ಅವರ ಈ ಕಥೆಯನ್ನು ರಂಗಕ್ಕೆ ತರುವಲ್ಲಿ ಸಾಕಷ್ಟು ಶ್ರಮ ಹಾಕಿದ್ದಾರೆ. ಕೆಲವು ಕೊರತೆಗಳು ಏನೇ ಇದ್ದರೂ ಈ ನಾಟಕದ ಉಪಯುಕ್ತತೆಯೇನೂ ಕಮ್ಮಿಯಾಗುವುದಿಲ್ಲ. ❖



ಚಿತ್ರ: ಶಂಕರಭಟ್ಟ ಜೋಶಿ

ಬೆಟ್ಟದಲ್ಲಿ ವಿಶ್ರಮಿಸುತ್ತಿರುವ 'ಸುಗತ'

ಜಿ.ಎಂ. ಶಿರಹಟ್ಟಿ

'ಪ್ರತಿಯೊಂದರಲ್ಲಿ ಪರಿಪೂರ್ಣತೆಯ ಅರಿವು ನಿನಗೆ ಆದಾಗ ನೀನು ಒಮ್ಮೆ ತಲೆ ಎತ್ತಿ ಆಕಾಶದತ್ತ ನೋಡಿ ನಕ್ಕು ಬಿಡುತ್ತಿ.'

ಭಗವಾನ ಬುದ್ಧ

ಭಗವಾನ್ ಬುದ್ಧ ಮಹಾಪರಿನಿರ್ವಾಣವಾದ ಮೇಲೆ ಅವರ ಶಿಷ್ಯರು ಅವರ ಅಂಗ ವಿನ್ಯಾಸದ ಅನೇಕ ಪ್ರತಿಮೆಗಳನ್ನು ಕಾಣತೊಡಗಿದರು. ಬುದ್ಧ ನಡೆಯುವಾಗ, ನಿಂತಿರುವಾಗ, ವಿಶ್ರಮಿಸುತ್ತಿರುವಾಗ ಹಾಗೂ ಧ್ಯಾನದಲ್ಲಿರುವಾಗಿನ ಅವರ ದೇಹ ಸ್ಥಿತಿಯನ್ನು ವಿವಿಧ ರೂಪಗಳಲ್ಲಿ ರಚಿಸತೊಡಗಿದರು. ಅವುಗಳಲ್ಲಿ ಬಹು ವಿಶಿಷ್ಟವಾದುದು ಭಗವಾನ್ ಬುದ್ಧ ವಿಶ್ರಮಿಸುತ್ತಿರುವ ರೂಪ. ಅದಕ್ಕೆ ಅನೇಕರು ಮಲಗಿರುವ ಬುದ್ಧ ಎಂದೇ ಕರೆಯುತ್ತಾರೆ.

ಆದರೆ ಭಗವಾನ್ ಬುದ್ಧ ನಮ್ಮ ನಿಮ್ಮೆಲ್ಲರ ಹಾಗೆ ನಿದ್ರಿಸುತ್ತಿರಲಿಲ್ಲವೆಂದು ಮಹಾಬೋಧಿ ಸೊಸೈಟಿಯ ಭಿಕ್ಷು ಆನಂದ ಹೇಳುತ್ತಾರೆ. 'ಭಗವಾನ್ ಬುದ್ಧ ಅಡ್ಡ ಮಲಗಿ ಸಂಪೂರ್ಣ ಜಾಗೃತ ಭಾವ ಮತ್ತು ಪ್ರಜ್ಞೆಯಿಂದ ತಲೆಗೆ ಕೈ ಇಟ್ಟುಕೊಂಡು ಅಥವಾ ಹಣೆಯ ಮೇಲೆ ಕೈ ಇಟ್ಟುಕೊಂಡು ವಿಶ್ರಮಿಸುತ್ತಿದ್ದರು. ಅವರು ಮನಸ್ಸಿಗೆ ವಿಶ್ರಾಂತಿ ಕೊಡುತ್ತಿರಲಿಲ್ಲ. ಕೇವಲ ದೇಹಕ್ಕೆ ವಿಶ್ರಾಂತಿ ಕೊಡುತ್ತಿದ್ದರು. ಅವರು ಕೇವಲ ವಿಶ್ರಮಿಸುತ್ತಿದ್ದರು' ಎಂದು ಭಿಕ್ಷು ಆನಂದ ಹೇಳುತ್ತಾರೆ.

ಜಗತ್ತಿನ ಅನೇಕ ದೇಶಗಳಲ್ಲಿ ಭಗವಾನ ಬುದ್ಧರು ವಿಶ್ರಮಿಸುತ್ತಿರುವ ಪ್ರತಿಮೆಗಳು ಇವೆ. ಬಲಬದಿಯಲ್ಲಿ ಬಲಗೈಯಿಂದ ತಲೆಯನ್ನು ಹಿಡಿದು ವಿಶ್ರಮಿಸುತ್ತಿರುವ ಬುದ್ಧರ ಪ್ರತಿಮೆ ಬೌದ್ಧಕಲೆಯ ಒಂದು ಅಪ್ರತಿಮ ಪ್ರಕಾರವಾಗಿದೆ. ಬುದ್ಧರ ಈ ವಿಗ್ರಹಗಳು ಅವರ ಶಿಷ್ಯರು ನಿರ್ಮಿಸಿದ ಕಲಾಕೃತಿಗಳಾಗಿದ್ದರೆ ಒಂದು ಬೆಟ್ಟದಲ್ಲಿ ಬುದ್ಧರು ವಿಶ್ರಮಿಸುತ್ತಿರುವ ಸ್ವಾಭಾವಿಕವಾಗಿ ರೂಪುಗೊಂಡಿರುವ ದೃಶ್ಯವನ್ನೂ ಕಾಣಬಹುದು.

ಯಾದಗಿರಿ ಜಿಲ್ಲೆಯ ಶಹಪುರ ಪಟ್ಟಣದ ಹೊರವಲಯದ ಬೆಟ್ಟಗಳ ಸಾಲಿನಲ್ಲಿ ಮಲಗಿರುವ ಬುದ್ಧರ ಆಕೃತಿ ನಿಸರ್ಗಮಯ ವಾತಾವರಣದಲ್ಲಿ ಕಾಣುತ್ತದೆ. ಶಹಪುರದಿಂದ ಕಲಬುರಗಿಗೆ ತೆರಳುವ ರಸ್ತೆಯ ಎಡಭಾಗದಲ್ಲಿ ಗುಡ್ಡಗಳ ಸಾಲಿನಲ್ಲಿ ಈ ವಿಶಿಷ್ಟ ದೃಶ್ಯವನ್ನು ಕಾಣಬಹುದು. ವಿಶಾಲವಾದ ಬೆಟ್ಟದಲ್ಲಿ ಮುಖ ಮೇಲೆ ಮಾಡಿ ಮಲಗಿರುವ ಬುದ್ಧರ ಪ್ರತಿಮೆ ಮೂರು ಬೆಟ್ಟಗಳಿಂದ ಕೂಡಿ ಪ್ರಾಕೃತಿಕವಾಗಿ ರಚನೆ ಆಗಿದೆ. ಮಲಗಿದ ಬುದ್ಧರ ಮುಖ ಸ್ಪಷ್ಟವಾಗಿ ಮೂಗು, ಹೊಟ್ಟೆ ದೇಹದ ಆಕೃತಿಯೂ ಕಾಣುತ್ತದೆ. ಪ್ರಕೃತಿಯ ರಚನೆಯಲ್ಲಿ ಇಷ್ಟೊಂದು ಬೃಹತ್ ಗಾತ್ರದಲ್ಲಿ ಬುದ್ಧರ ಆಕಾರ ತಾಳಿದ್ದು ಆಶ್ಚರ್ಯವಾಗುತ್ತದೆ.

ಶಹಪುರದ ತಹಶೀಲ್ದಾರರಾಗಿದ್ದ ರಂಗರಾವ್ ಬಡಶೇಶಿ (ಅವರು ಕವಿಗಳೂ ಸಾಹಿತಿಗಳೂ ಆಗಿದ್ದರು) 1980ರ ಸುಮಾರಿಗೆ ಈ ವಿಸ್ಮಯವನ್ನು ಗಮನಿಸಿ ಅಂದಿನ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ಆಗ ಎಲ್ಲರ ಗಮನ ಅತ್ತ ಹರಿಯಿತು. ಜನ ತಂಡೋಪತಂಡವಾಗಿ ಈ ವಿಹಾರ ಸ್ಥಳಕ್ಕೆ ಬರತೊಡಗಿದರು. ಶಿಲ್ಪಿ ಒಬ್ಬ ಕಟೆದಂತೆ ಮಲಗಿರುವ ಬುದ್ಧರ ಬೆಟ್ಟ ನಿಜವಾಗಿಯೂ ಒಂದು ಅದ್ಭುತ ನೈಸರ್ಗಿಕ ರಚನೆ. ಬೆಟ್ಟದ ಕೆಳಗೆ ಮಾವಿನ ಕೆರೆ ಇದೆ. ಸಮುದ್ರ ಮಟ್ಟಕ್ಕಿಂತ 120 ಅಡಿ ಎತ್ತರವಿರುವ ಈ ಬೆಟ್ಟಗಳು ಎರಡು ಎಕರೆ ಪ್ರದೇಶದಲ್ಲಿ ಹರಡಿವೆ.

ಭಗವಾನ ಬುದ್ಧರು ಪರಿನಿರ್ವಾಣ ಸಮಯದಲ್ಲಿ ಮಲಗಿದ್ದು ಯಾವ ರೀತಿ ಎಂಬ ವಿಷಯ ಅಧ್ಯಯನಕ್ಕೆ ಯೋಗ್ಯವಾದುದು. ಅವರು ಇಡೀ ಜೀವನ ತುಂಬ ರಾತ್ರಿ ಹೊತ್ತು ಚೈತ್ಯಾಲಯಗಳಲ್ಲಿ ಒರಗಿಕೊಂಡೇ ವಿಶ್ರಾಂತಿ ಪಡೆಯುತ್ತಿದ್ದರು. ಕೊನೆಯ ದಿನಗಳಲ್ಲಿ ಅವರು 80 ವರುಷದವರಾಗಿದ್ದು ತಮ್ಮ ಕೊನೆ ಸಮೀಪಿಸುತ್ತಿದೆ ಎಂದು ಅವರಿಗೆ ತಿಳಿದಿತ್ತು. ಮಾನವ ಸಹಜಜೀವಿಯಂತೆ ಈ ಜಗತ್ತಿಗೆ ವಿದಾಯ ಹೇಳಬೇಕೆಂದು ಅರಿತು ಒರಗಿಕೊಂಡೇ ಪರಿನಿರ್ವಾಣ ಹೊಂದಿದರು. ಪರಿನಿರ್ವಾಣ ಪಡೆದಾಗ ಅವರನ್ನು ಕಂಡ ಅವರ ಶಿಷ್ಯಂದಿರು ಬುದ್ಧರ ನಗು ಮುಖ ಶಾಂತಭಾವಗಳಿಂದ ಆಕರ್ಷಿತರಾಗಿ ಅವರು ಒರಗಿಕೊಂಡ ಅನೇಕ ಮೂರ್ತಿಗಳನ್ನು ರಚಿಸಿದ್ದರು. ❖

ಚಿತ್ರ: ಮೇಘನಾಥ ಅಬ್ರಹಾಂ ಬೆಳ್ಳಿ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ದಶ್ಯಾಗ ಚಕ್ಕು ಕೇಳ್ರಪ್ಪ ಕಥೆಯ — ಭಿಕ್ಷುಕ ಮತ್ತು ಮಹಾರಾಜ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಂದು ಊರಿನಲ್ಲಿ ಸುಬ್ಬ ಅನ್ನುವ ಹೆಸರಿನ ಭಿಕ್ಷುಕ ಇದ್ದ. ತುಂಬಾ ಬುದ್ಧಿವಂತನಾಗಿದ್ದ ಆತ ಊರಿನ ಯಾವ ಸಮಸ್ಯೆಗೂ ಪರಿಹಾರ ಹೇಳಬಲ್ಲವನಾಗಿದ್ದ. ಈ ವಿಷಯ ಊರಿನ ಮಹಾರಾಜನಿಗೂ ಗೊತ್ತಾಯಿತು

ಮಹಾರಾಜ ಸುಬ್ಬನನ್ನು ತನ್ನ ಮಂತ್ರಿಯಾಗಿ ನೇಮಿಸಿ, ಸುಬ್ರಾಯ ಶರ್ಮ ಎಂದು ಹೆಸರಿಸಿದ. ಆದರೆ ಇದರಿಂದ ಅಲ್ಲಿದ್ದ ಇತರ ಮಂತ್ರಿ, ಆಸ್ಥಾನಿಕರಿಗೆ ಅಸೂಯೆ ಉಂಟಾಯಿತು. ಸುಬ್ಬನ ವಿರುದ್ಧ ದೂರು ಹೇಳಲು ತೊಡಗಿದರು



ಸುಬ್ರಾಯ ಪ್ರತಿದಿನ ತನ್ನ ಮನೆಯ ಪಕ್ಕದ ಗುಡಿಸಲಿನೊಳಗೆ ಹೋಗಿ ಬರುತ್ತಿರುವುದನ್ನು ಗುಪ್ತಚರರು ಗಮನಿಸಿದರು. ಸುಬ್ರಾಯ ಶರ್ಮ ಶತ್ರುರಾಜ್ಯದ ಗೂಢಚಾರಿ ಇರಬೇಕು ಎಂದು ಅನುಮಾನಿಸಿ ರಾಜನಿಗೆ ವರದಿ ಮಾಡಿದರು. ಒಂದು ದಿನ ರಾಜ ಸುಬ್ರಾಯನ ಗುಡಿಸಲಿಗೆ ಭೇಟಿ ಕೊಟ್ಟ

ಗುಡಿಸಲಿನೊಳಗೆ ಭಿಕ್ಷುಕನ ಉಡುಪು, ಭಿಕ್ಷಾಪಾತ್ರೆಯಷ್ಟೇ ಇತ್ತು. ಇದೇಕೆ ಎಂದು ರಾಜ ಕೇಳಿದ. 'ನಾನು ಎಲ್ಲಿದ್ದೆ ಎಂಬುದನ್ನು ಮರೆಯಬಾರದು. ಅದಕ್ಕಾಗಿ ನಾನು ಪ್ರತಿದಿನ ನನ್ನ ಪೂರ್ವಜೀವನವನ್ನು ಇಲ್ಲಿ ನೆನಪಿಸಿಕೊಳ್ಳುತ್ತೇನೆ' ಎಂದ ಸುಬ್ರಾಯ. ಸುಬ್ರಾಯನ ಮೇಲೆ ಶಂಕೆ ಪಟ್ಟಿದ್ದಕ್ಕೆ ರಾಜನಿಗೆ ನಾಚಿಕೆಯಾಯಿತು

ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಿಸಿದ ಮಕ್ಕಳ ಹೆಸರು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಹೊಂದಿಸು ಆನಂದಿಸು

1ರಿಂದ 6 = 9

ಇಲ್ಲಿ ಕೊಟ್ಟಿರುವ 6 ವೃತ್ತಗಳಲ್ಲಿ 1ರಿಂದ 6ರವರೆಗಿನ ಅಂಕೆಗಳನ್ನು ತುಂಬಿ. ಒಂದು ಅಂಕೆಯನ್ನು ಒಮ್ಮೆ ಮಾತ್ರ ಬಳಸಿ. ನಂತರ ತ್ರಿಕೋನದ ಬಾಹುಗಳ ಮೇಲಿನ ಮೂರು ವೃತ್ತಗಳ ಮೊತ್ತ 9 ಆಗಬೇಕು. ಪ್ರಯತ್ನಿಸಿ.



ಪದ–ಆಟ

ಸರ ಅಕ್ಷರಕ್ಕೆ ಖಾಲಿ ಬಿಟ್ಟ ಜಾಗದಲ್ಲಿ ಒಂದು ಅಕ್ಷರ ತುಂಬಿ ಮೂರು ಅಕ್ಷರಗಳ ಪದ ರಚಿಸಿ

1 __ಸರ	1 ಸರ__	1 ಸ__ರ
2 __ಸರ	2 ಸರ__	2 ಸ__ರ
3 __ಸರ	3 ಸರ__	3 ಸ__ರ
4 __ಸರ	4 ಸರ__	4 ಸ__ರ
5 __ಸರ	5 ಸರ__	5 ಸ__ರ

ಶಬ್ದಗಳಿಗೆ ಅರ್ಥ ಹೊಂದಿಸಿರಿ

1	ದಿಸೆ	A	ಮೂಗು
2	ಮರಳು	B	ಹಲ್ಲು
3	ಕಾನನ	C	ರೊಟ್ಟಿ
4	ಸಂಕ	D	ಅಡವಿ
5	ದಡ	E	ಕಣ್ಣು
6	ಬಿಟ್ಟಿ	F	ಸೇತುವೆ
7	ಚಕ್ಷು	G	ದಿಕ್ಕು
8	ರಾಡಿ	H	ಉಸುಕು
9	ದಂತ	I	ಪುಕ್ಕಟೆ
10	ನಾಸಿಕ	J	ದಂಡೆ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳನ್ನು ಗಮನಿಸಿ ಪಕ್ಕದಲ್ಲಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಪದ ರಚಿಸಿ.

	ಕ	ರ	ಸುಳಿವು
1			ಹಸನು ಮಾಡು
2			ತುರಿಸು
3			ಸಣ್ಣ
4			ಒಂದು ಪ್ರಾಣಿ
5			ಒಂದು ವಾಹನ

ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಪದ ಮಾಡಿ

1. ಮಾಡಿಕೊಂಡು
2. ಸಮಾನಜನ
3. ಮರದಡಿ
4. ಮೊಲದಹುರುಕು

ಟ್ವೆಂಟಿ – 20 ಮ್ಯಾಚ್

ಎಡಭಾಗದ ಸಂಗತಿಗಳಿಗೆ ಬಲಭಾಗದ ಸಂಗತಿ ಹೊಂದಿಸಿರಿ

1 ಭಾರತದಲ್ಲಿ ಉಪಗ್ರಹ ವಾಹಕಗಳನ್ನು ಹಾರಿ ಬಿಡುವ ಉಡ್ಡಯನ ಕೇಂದ್ರ	A ರಿಕ್ಟರ್
2 ತಾರಾಪುರದ ಪರಮಾಣು ಶಕ್ತಿ ಸ್ಥಾವರದಲ್ಲಿ ಉಪಯೋಗಿಸುವ ಇಂಧನ	B ಯಕೃತ್
3 ಸಸ್ಯಗಳಿಗೆ ಹೆಚ್ಚು ಉಪಯೋಗವಾಗುವ ಗೊಬ್ಬರ	C ಪ್ಲಿಸ್ಟೆ
4 ಭೂಕಂಪ ಅಳೆಯುವ ಮಾಪನ	D ಆರ್ಯಭಟ
5 ಪ್ಯಾರಾಮೀಸಿಯಾ ಯಾವ ಜೀವಿ	E ಕಾಂಪೋಸ್ಟ್
6 ಗ್ರಂಥಿಗಳಲ್ಲಿ ಅತಿ ದೊಡ್ಡದು	F ಮೈಕಲ್ ಪ್ಯಾರಡೆ
7 ಭಾರತದ ಪ್ರಥಮ ಉಪಗ್ರಹ	G ಹರಿಕೋಟ
8 ವಿದ್ಯುತ್ ಬಲ್ಬ್ ಕಂಡು ಹಿಡಿದವರು	H ಯುರೇನಿಯಂ
9 ಆಮ್ಲಜನಕವನ್ನು ಕಂಡು ಹಿಡಿದವರು	I ಥಾಮಸ್ ಆಲ್ವಾ ಎಡಿಸನ್
10 ಡೈನಮೋ ಕಂಡು ಹಿಡಿದವರು	J ಏಕಕೋಶಜೀವಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ – 20 ಮ್ಯಾಚ್

A. 1-H 2-M 3-E 4-J 5-L 6-C 7-F 8-I 9-N 10-K 11-O 12-D 13-B 14-A 15-G

B. 1-D 2-B 3-E 4-C 5-A

ಪದ ಸಂಕಲನ

1 ರಸಭರಿತ 2 ಕನವರಿಸು 3 ಆಕಾಶಯಾನ 4 ಮಾವಿನಗಿಡ 5 ಹುರಿದುಂಬಿಸು 6 ಮಾನವಜೀವಿ 7 ನಸುಹಳದಿ

ಜಾಣಪದ ಆಟ

1 ಬಗೆ 2 ಬೀಗು 3 ಬಾಗು 4 ಬೇಗೆ 5 ಬಿಗು

ಕೀಟಲೆ ಪ್ರಶ್ನೆ: ಚಿಕ್ಕಾಡು (ತಿಗಣೆ)

ಧನುಷ್ ಜಿ.ಆರ್. ತುಮಕೂರು

ಸ್ನೇಹಾ ಟಿ.ಆರ್. ಹೊಸಪೇಟೆ



ಸಂಪ್ರೀತ್ ಹುಗಲೆ ಕೊಪ್ಪಳ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕ್ರಿಕೆಟ್: ರಜತ್ ಶತಕದ ಅಬ್ಬರ; ನ್ಯೂಜಿಲೆಂಡ್ ಎ ತಂಡಕ್ಕೆ ಕಠಿಣ ಗುರಿ

ಜಯದತ್ತ ಪ್ರಿಯಾಂಕ್ ಬಳಗ

ಪ್ರಜಾವಾಣಿ ವಾರ್ತೆ

ರಜತ್ ಪಾಟೀದಾರ್ ಬ್ಯಾಟಿಂಗ್ ಸೊಬಗು –ಪ್ರಜಾವಾಣಿ ಚಿತ್ರ/ಎಸ್‌ಕೆ. ದಿನೇಶ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣವೆಂದರೆ ರಜತ್ ಪಾಟೀದಾರ್‌ಗೆ ಅಚ್ಚುಮೆಚ್ಚು ಎಂಬುದು ಶನಿವಾರ ಮತ್ತೊಮ್ಮೆ ಸಾಬೀತಾಯಿತು.

ಈ ಅಂಗಳದಲ್ಲಿ 15 ದಿನಗಳ ಅಂತರದಲ್ಲಿ ನಡೆದ ಎರಡನೇ ಪಂದ್ಯದಲ್ಲಿಯೂ ರಜತ್ ಶತಕ (ಔಟಾಗದೆ 109; 135ಎ, 4X13, 6X2) ಗಳಿಸಿದರು. ಇದರಿಂದಾಗಿ ನ್ಯೂಜಿಲೆಂಡ್ ಎ ತಂಡಕ್ಕೆ ಆತಿಥೇಯ ಬಳಗವು 416 ರನ್‌ಗಳ ಗೆಲುವಿನ ಗುರಿಯೊಡ್ಡಿತು.

ಮೂರನೇ ದಿನದಾಟದಲ್ಲಿ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 85 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 359 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಗುರಿ ಬೆನ್ನಟ್ಟಿರುವ ಪ್ರವಾಸಿ ಬಳಗವು 14 ಓವರ್‌ಗಳಲ್ಲಿ 1 ವಿಕೆಟ್‌ಗೆ 20 ರನ್ ಗಳಿಸಿದೆ. ಜೋ ಕಾರ್ಟರ್ (ಬ್ಯಾಟಿಂಗ್ 6) ಹಾಗೂ ಜೋ ವಾಕರ್ ಕ್ರೀಸ್‌ನಲ್ಲಿದ್ದಾರೆ. ಜಯಿಸಬೇಕಾದರೆ ಪಂದ್ಯ ಕೊನೆಯ ದಿನವಾದ ಭಾನುವಾರ 396 ರನ್‌ಗಳನ್ನು ಗಳಿಸಬೇಕು.

ಸರಣಿಯ ಮೊದಲ ಪಂದ್ಯದಲ್ಲಿಯೂ ಅವರು ಶತಕ (ಸೆ 3) ದಾಖಲಿಸಿದ್ದರು. ಈ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಋತುರಾಜ್ (94; 164ಎ, 4X11) ಹಾಗೂ ನಾಯಕ ಪ್ರಿಯಾಂಕ್ ಪಾಂಚಾಲ್ ಎರಡನೇ ವಿಕೆಟ್‌ಗೆ 122 ರನ್ ಸೇರಿಸಿದರು. 37ನೇ ಓವರ್‌ನಲ್ಲಿ ಪಾಂಚಾಲ್ ವಿಕೆಟ್ ಗಳಿಸಿದ ಜೋ ವಾಕರ್ ಸಂಭ್ರಮಿಸಿದರು. ಆದರೆ ಇದರ ನಂತರವೇ ಬೌಲರ್‌ಗಳ ಸಂಕಷ್ಟ ಹೆಚ್ಚಿತು!

ಮುಖ್ಯಾಂಶಗಳು

- ನ್ಯೂಜಿಲೆಂಡ್ ಎ ತಂಡದ ಗೆಲುವಿಗೆ 416 ರನ್‌ಗಳ ಗುರಿ
- ಸರಣಿಯ ಮೊದಲ ಪಂದ್ಯದಲ್ಲಿಯೂ ಶತಕ ದಾಖಲಿಸಿದ್ದ ರಜತ್
- ಅರ್ಧಶತಕ ಗಳಿಸಿದ ಸರ್ಫರಾಜ್ ಖಾನ್

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ರಜತ್ ಕ್ರೀಸ್‌ಗೆ ಬಂದವರೇ ಬೌಲರ್‌ಗಳನ್ನು ದಂಡಿಸಿದರು. ಅವರು ಶತಕ ಗಳಿಸಿದರು. ಅಲ್ಲದೇ ಎರಡು ಶತಕದ ಜೊತೆಯಾಟಗಳಲ್ಲಿ ಭಾಗಿಯಾದರು.

ಐಪಿಎಲ್‌ನಲ್ಲಿ ಆಡುವ ಚೆನ್ನೈ ಸೂಪರ್ ಕಿಂಗ್ಸ್ ಬ್ಯಾಟರ್ ಋತುರಾಜ್ ಹಾಗೂ ರಜತ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 102 ರನ್ ಸೇರಿಸಿದರು. ಊಟದ ನಂತರದ ಅವಧಿಯಲ್ಲಿ ಋತುರಾಜ್ ಔಟಾದರು. ಕೇವಲ ಆರು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರು.

ಕ್ರೀಸ್‌ಗೆ ಬಂದ ಸರ್ಫರಾಜ್ ಖಾನ್ ಕೂಡ ರನ್ ಗಳಿಕೆಗೆ ವೇಗ ನೀಡಿದರು. ರಜತ್ ಮತ್ತು ಖಾನ್ ಇಬ್ಬರೂ ಸೇರಿ 'ಚುಟುಕು ಕ್ರಿಕೆಟ್' ಮಾದರಿಯ ಬ್ಯಾಟಿಂಗ್ ಮಾಡಿದರು. ಸರ್ಫರಾಜ್ 74 ಎಸೆತಗಳಲ್ಲಿ 63 ರನ್ ಗಳಿಸಿದರು. ಅದರಲ್ಲಿ ಚೆಂಡನ್ನು ಏಳು ಬಾರಿ ಬೌಂಡರಿಗಟ್ಟಿದರು. ಎರಡು ಬಾರಿ ಖಾಲಿ ಗ್ಯಾಲರಿಗೂ ಕಳಿಸಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 108 ರನ್ ಸೇರಿದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಎ: 86.4 ಓವರ್‌ಗಳಲ್ಲಿ 293, ನ್ಯೂಜಿಲೆಂಡ್ ಎ:71.2 ಓವರ್‌ಗಳಲ್ಲಿ 237. ಎರಡನೇ ಇನಿಂಗ್ಸ್: ಭಾರತ ಎ: 85 ಓವರ್‌ಗಳಲ್ಲಿ 7ಕ್ಕೆ359 ಡಿಕ್ಲೆರ್ಡ್ (ಪ್ರಿಯಾಂಕ್ ಪಾಂಚಾಲ್ 62, ಋತುರಾಜ್ ಗಾಯಕವಾಡ 94, ರಜತ್ ಪಾಟೀದಾರ್ ಔಟಾಗದೆ 109, ಸರ್ಫರಾಜ್ ಖಾನ್ 63, ಜೋ ವಾಕರ್ 64ಕ್ಕೆ2, ರಚಿನ್ ರವೀಂದ್ರ 65ಕ್ಕೆ3) ನ್ಯೂಜಿಲೆಂಡ್ ಎ: 14 ಓವರ್‌ಗಳಲ್ಲಿ 1 ವಿಕೆಟ್‌ಗೆ 20 (ರಚಿನ್ ರವೀಂದ್ರ 12, ಜೋ ಕಾರ್ಟರ್ ಬ್ಯಾಟಿಂಗ್ 6) .

ಟೆನಿಸ್: ಫೈನಲ್‌ಗೆ ಲಿಂಡಾ

ಲಿಂಡಾ

ಚೆನ್ನೈ (ಪಿಟಿಐ): ಜೆಕ್ ಗಣರಾಜ್ಯದ ಲಿಂಡಾ ಫ್ರುವಿರ್ಟೋಟಾ ಅವರು ಚೆನ್ನೈ ಓಪನ್ ಟೆನಿಸ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಶನಿವಾರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಲಿಂಡಾ 5-7, 6-2, 6-4ರಿಂದ ಅರ್ಜೆಂಟೀನಾದ ನಾದಿಯಾ ಪೊದೊರೊಸ್ಕಾ ಅವರನ್ನು ಸೋಲಿಸಿದರು. ಡಬ್ಲ್ಯುಟಿಎ ಟೂರ್‌ನಲ್ಲಿ ಇದು ಅವರಿಗೆ ಮೊದಲ ಫೈನಲ್ ಆಗಿದೆ.

ಸುಧಾ, ಮಯೂರ ಓದಿರಿ

ವಿನಯ್ ಬೌಲಿಂಗ್ ಕೋಚ್

ವಿನಯ್

ಬೆಂಗಳೂರು: ಕರ್ನಾಟಕ ರಣಜಿ ತಂಡದ ಮಾಜಿ ನಾಯಕ ಆರ್.ವಿನಯ್ ಕುಮಾರ್ ಅವರು ಇಂಟರ್‌ನ್ಯಾಷನಲ್ ಲೀಗ್ ಟಿ20 ಟೂರ್ನಿಯಲ್ಲಿ (ಐಎಲ್ ಟಿ20) ಪಾಲ್ಗೊಳ್ಳಲಿರುವ ಮುಂಬೈ ಇಂಡಿಯನ್ಸ್ ಎಮಿರೇಟ್ಸ್ ತಂಡದ ಬೌಲಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ.

ನ್ಯೂಜಿಲೆಂಡ್‌ನ ವೇಗದ ಬೌಲರ್ ಶೇನ್ ಬಾಂಡ್ ಅವರು ತಂಡದ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದಾರೆ. ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಬೌಲಿಂಗ್ ಕೋಚ್ ಆಗಿರುವ ಬಾಂಡ್ ಅವರಿಗೆ ಹೆಚ್ಚುವರಿ ಹೊಣೆ ನೀಡಲಾಗಿದೆ.

ಪಾರ್ಥಿವ್ ಪಟೇಲ್ ಮತ್ತು ಜೇಮ್ಸ್ ಫ್ರಾಂಕ್ಲಿನ್ ಅವರನ್ನು ಕ್ರಮವಾಗಿ ಬ್ಯಾಟಿಂಗ್, ಹಾಗೂ ಫೀಲ್ಡಿಂಗ್ ಕೋಚ್ ಆಗಿ ನೇಮಕ ಮಾಡಲಾಗಿದೆ. ಭಾರತ ತಂಡದ ಮಾಜಿ ಆಲ್‌ರೌಂಡರ್ ರಾಬಿನ್ ಸಿಂಗ್ ಅವರು ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ವಿನಯ್ ಮತ್ತು ಪಾರ್ಥಿವ್, ಈ ಹಿಂದೆ ಮುಂಬೈ ತಂಡದ ಪರ ಆಡಿದ್ದರು. 2015 ಮತ್ತು 2017ರಲ್ಲಿ ಐಪಿಎಲ್‌ನಲ್ಲಿ ಚಾಂಪಿಯನ್ ಆದಾಗ ತಂಡದ ಭಾಗವಾಗಿದ್ದರು. ಪಾರ್ಥಿವ್, 2020ರಿಂದಲೂ ಮುಂಬೈ ಫ್ರಾಂಚೈಸಿಯ ಟ್ಯಾಲೆಂಟ್ ಸ್ಕೌಟಿಂಗ್ ತಂಡದ ಭಾಗವಾಗಿದ್ದರೆ, ವಿನಯ್ 2021ರಲ್ಲಿ ಸ್ಕೌಟಿಂಗ್ ತಂಡ ಸೇರಿಕೊಂಡಿದ್ದರು

ಯೂರೋಪಾ ಲೀಗ್: ರೊನಾಲ್ಡೊ ಮೊದಲ ಗೋಲು



ರೊನಾಲ್ಡೊ

ಮ್ಯಾಂಚೆಸ್ಟರ್ (ಎಪಿ): ಯೂರೋಪಾ ಫುಟ್‌ಬಾಲ್ ಲೀಗ್‌ನಲ್ಲಿ ತಮ್ಮ ಮೊದಲ ಗೋಲು ದಾಖಲಿಸಿದ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಮ್ಯಾಂಚೆಸ್ಟರ್ ಯುನೈಟೆಡ್ ತಂಡಕ್ಕೆ ಗೆಲುವು ತಂದುಕೊಟ್ಟರು.

ಪಂದ್ಯದಲ್ಲಿ ಮ್ಯಾಂಚೆಸ್ಟರ್ ಯುನೈಟೆಡ್ 2–0ಯಿಂದ ಶೆರಿಫ್ ಟಿರಸ್ಪೋಲ್ ಎದುರು ಗೆದ್ದಿತು.

ಟೆನಿಸ್: ನಾರ್ವೆಗೆ ಮಣಿದ ಭಾರತ

ಲಿಲ್‌ಹ್ಯಾಮರ್, ನಾರ್ವೆ (ಪಿಟಿಐ): ಭಾರತ ತಂಡ ಡೇವಿಡ್ ಕಪ್ ಟೆನಿಸ್ ಟೂರ್ನಿಯ ಗುಂಪು–1ರ ಮೊದಲ ಸುತ್ತಿನಲ್ಲಿ ನಾರ್ವೆ ಎದುರು ಪರಾಭವಗೊಂಡಿತು.

ಶುಕ್ರವಾರ ನಡೆದ ಮೊದಲ ಎರಡೂ ಸಿಂಗಲ್ಸ್ ಪಂದ್ಯಗಳಲ್ಲಿ ಗೆದ್ದಿದ್ದ ನಾರ್ವೆ, ಶನಿವಾರ ನಡೆದ ಡಬಲ್ಸ್ ಪಂದ್ಯವನ್ನೂ ಜಯಿಸಿ 3–0 ರಲ್ಲಿ ಗೆಲುವಿನ ನಗು ಬೀರಿತು.

ಮೊದಲ ದಿನದ ಪಂದ್ಯಗಳ ಬಳಿಕ 0–2 ರಲ್ಲಿ ಹಿನ್ನಡೆಯಲ್ಲಿದ್ದ ಭಾರತ, ಡಬಲ್ಸ್‌ನಲ್ಲಿ ಗೆಲ್ಲಲೇಬೇಕಾಗಿತ್ತು. ಆದರೆ ಯೂಕಿ ಭಾಂಬ್ರಿ– ಸಾಕೇತ್ ಮೈನೇನಿ ಜೋಡಿ 3–6, 6–3, 3–6 ರಲ್ಲಿ ಕ್ಯಾಸ್ಪರ್ ರೂಡ್ ಮತ್ತು ವಿಕ್ಟರ್ ದುರಸೊವಿಚ್ ಎದುರು ಪರಾಭವಗೊಂಡಿತು.

ಮೊದಲ ಸಿಂಗಲ್ಸ್‌ನಲ್ಲಿ ಭಾರತದ ಪ್ರಜ್ಞೇಶ್ ಗುಣೇಶ್ವರನ್ 1–6, 4–6 ರಲ್ಲಿ ಕ್ಯಾಸ್ಪರ್ ರೂಡ್ ಎದುರು ಸೋತಿದ್ದರು. ಅಮೆರಿಕ ಓಪನ್ ಟೂರ್ನಿಯ 'ರನ್ನರ್ ಅಪ್' ಆಗಿರುವ ವಿಶ್ವದ ಎರಡನೇ ರ್‍ಯಾಂಕ್‌ನ ಆಟಗಾರ ರೂಡ್ ವಿರುದ್ಧ ಪ್ರಜ್ಞೇಶ್ ಸೋಲು ನಿರೀಕ್ಷಿತವೇ ಆಗಿತ್ತು.ಎರಡನೇ ಸಿಂಗಲ್ಸ್‌ನಲ್ಲಿ ರಾಮಕುಮಾರ್ ರಾಮನಾಥನ್ 1–6, 4–6 ರಲ್ಲಿ ವಿಕ್ಟರ್ ದುರಸೊವಿಚ್ ಎದುರು ಪರಾಭವಗೊಂಡರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 276ನೇ ಸ್ಥಾನದಲ್ಲಿರುವ ರಾಮಕುಮಾರ್, ತಮಗಿಂತ ಕೆಳಗಿನ ರ್‍ಯಾಂಕ್‌ನಲ್ಲಿರುವ (325) ಆಟಗಾರನ ಎದುರು ಸೋತದ್ದು ಭಾರತಕ್ಕೆ ಮುಳುವಾಗಿ ಪರಿಣಮಿಸಿತು.

ಕುಸ್ತಿ: ರಿಪೇಚ್ ಸುತ್ತಿಗೆ ಬಜರಂಗ್

ಬಜರಂಗ್

ಬೆಲ್‌ಗ್ರೇಡ್, (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ, ಭಾರತದ ಬಜರಂಗ್ ಪೂನಿಯಾ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ರಿಪೇಚ್ ಸುತ್ತು ತಲುಪಿದ್ದಾರೆ.

ಬಜರಂಗ್, ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 65 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ 0–10ರಿಂದ (ತಾಂತ್ರಿಕ ಶ್ರೇಷ್ಠತೆ) ಅಮೆರಿಕದ ಯಿಯಾನ್ನಿ ಡೈಕೊಮಿಹಾಲಿಸ್ ಎದುರು ಪರಾಭವಗೊಂಡಿದ್ದರು. ಆದರೆ ಯಿಯಾನ್ನಿ ಫೈನಲ್ ತಲುಪಿದ್ದರಿಂದ ಭಾರತದ ಕುಸ್ತಿಪಟುವಿಗೆ ರಿಪೇಚ್ ಸುತ್ತಿನಲ್ಲಿ ಆಡುವ ಅವಕಾಶ ಲಭಿಸಿದೆ. ಭಾರತದ ಇನ್ನೋರ್ವ ಕುಸ್ತಿಪಟು ಸಾಗರ್ ಜಗ್ಲಾನ್, 74 ಕೆಜಿ ವಿಭಾಗದಲ್ಲಿ 7–3ರಿಂದ ಮಂಗೋಲಿಯಾದ ಸುಲ್ದ್‌ಖು ಅವರನ್ನು ಮಣಿಸಿ ಕಂಚಿನ ಪದಕದ ಪ್ಲೇ ಆಫ್ ತಲುಪಿದ್ದರು. ಆದರೆ ಕಂಚಿನ ಪದಕದ ಬೌಟ್‌ನಲ್ಲಿ ಅವರು ನಿರಾಸೆ ಅನುಭವಿಸಿದರು. ಸಾಗರ್ 0–6ರಿಂದ ಇರಾನ್‌ನ ಯೊನೇಸ್ ಅಲಿಅಕ್ಬರ್ ಎದುರು ಸೋತರು.

ದುಲೀಪ್ ಟ್ರೋಫಿ ಕ್ರಿಕೆಟ್: ಸಾಯಿ ಕಿಶೋರ್ ಕೈಚಳಕ

ದಕ್ಷಿಣ, ಪಶ್ಚಿಮ ವಲಯ ಬಿಗಿಹಿಡಿತ

ಸೇಲಂ, ತಮಿಳುನಾಡು (ಪಿಟಿಐ): ದಕ್ಷಿಣ ವಲಯ ಮತ್ತು ಪಶ್ಚಿಮ ವಲಯ ತಂಡಗಳು ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯಗಳಲ್ಲಿ ತಮ್ಮ ಎದುರಾಳಿಗಳ ಮೇಲೆ ಬಿಗಿ ಹಿಡಿತ ಸಾಧಿಸಿದ್ದು, ಫೈನಲ್‌ನತ್ತ ದಿಟ್ಟ ಹೆಜ್ಜೆಯಿಟ್ಟಿವೆ.

ಸೇಲಂನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಎಡಗೈ ಸ್ಪಿನ್ನರ್ ಆರ್.ಸಾಯಿ ಕಿಶೋರ್ (70ಕ್ಕೆ 7) ಅವರ ಕೈಚಳಕದ ನೆರವಿನಿಂದ ದಕ್ಷಿಣ ವಲಯ ತಂಡ, ಉತ್ತರ ವಲಯ ವಿರುದ್ಧ ಭಾರಿ ಮುನ್ನಡೆ ಗಳಿಸಿದೆ.

ವಿಕೆಟ್ ನಷ್ಟವಿಲ್ಲದೆ 19 ರನ್‌ಗಳಿಂದ ಶನಿವಾರ ಆಟ ಮುಂದುವರಿಸಿದ ಉತ್ತರ ವಲಯ ಮೊದಲ ಇನಿಂಗ್ಸ್‌ನಲ್ಲಿ 207 ರನ್‌ಗಳಿಗೆ ಆಲೌಟಾಯಿತು. ಎದುರಾಳಿಗೆ ಫಾಲೋಆನ್ ನೀಡದೆ ಎರಡನೇ ಇನಿಂಗ್ಸ್ ಆರಂಭಿಸಿದ ದಕ್ಷಿಣ ವಲಯ ದಿನದಾಟದ ಅಂತ್ಯಕ್ಕೆ 1 ವಿಕೆಟ್‌ಗೆ 157 ರನ್ ಗಳಿಸಿದೆ. ಹನುಮ ವಿಹಾರಿ ನೇತೃತ್ವದ ತಂಡ ಒಟ್ಟಾರೆ 580 ರನ್‌ಗಳ ಮುನ್ನಡೆ ಸಾಧಿಸಿದೆ.

ಕೊಯಮತ್ತೂರಿನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಪಶ್ಚಿಮ ವಲಯ ತಂಡ, ಕೇಂದ್ರ ವಲಯದ ಗೆಲುವಿಗೆ 501 ರನ್ ಗುರಿ ನೀಡಿದೆ. ಕಠಿಣ ಸವಾಲು ಬೆನ್ನಟ್ಟಿರುವ ಕೇಂದ್ರ ವಲಯ, 3ನೇ ದಿನವಾದ ಶನಿವಾರದ ಆಟದ ಅಂತ್ಯಕ್ಕೆ 2 ವಿಕೆಟ್‌ಗೆ 33 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ವಲಯ 8 ವಿಕೆಟ್‌ಗೆ 630 ಡಿಕ್ಲೇರ್ಡ್. ಉತ್ತರ ವಲಯ 67 ಓವರ್‌ಗಳಲ್ಲಿ 207 (ಯಶ್ ಧೂಲ್ 39, ನಿಶಾಂತ್ ಸಿಂಧು 40, ಆರ್. ಸಾಯಿ ಕಿಶೋರ್ 70ಕ್ಕೆ 7, ಕೆ.ಗೌತಮ್ 68ಕ್ಕೆ 2) ಎರಡನೇ ಇನಿಂಗ್ಸ್: ದಕ್ಷಿಣ ವಲಯ 28 ಓವರ್‌ಗಳಲ್ಲಿ 1 ವಿಕೆಟ್‌ಗೆ 157 (ರೋಹನ್ ಕುನ್ನುಮಲ್ 77, ಮಯಂಕ್ ಅಗರವಾಲ್ ಬ್ಯಾಟಿಂಗ್ 53, ರವಿ ತೇಜ ಬ್ಯಾಟಿಂಗ್ 19)

ಕೊಯಮತ್ತೂರಿನ ಪಂದ್ಯ: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 257. ಕೇಂದ್ರ ವಲಯ: 128. ಎರಡನೇ ಇನಿಂಗ್ಸ್: ಪಶ್ಚಿಮ ವಲಯ 104.4 ಓವರ್‌ಗಳಲ್ಲಿ 371 (ಪೃಥ್ವಿ ಶಾ 142, ಅರ್ಮಾನ್ ಜಾಫರ್ 49, ಹೇತ್ ಪಟೇಲ್ 67, ಕುಮಾರ ಕಾರ್ತಿಕೇಯ 105ಕ್ಕೆ 3, ಅಂಕಿತ್ ರಜಪೂತ್ 63ಕ್ಕೆ 2). ಕೇಂದ್ರ ವಲಯ 9.2 ಓವರ್‌ಗಳಲ್ಲಿ 2 ವಿಕೆಟ್‌ಗೆ 33

ಮಾಜಿ ಕೋಚ್ ಮರೈನಾ ವಿರುದ್ಧ ಹಾಕಿ ಆಟಗಾರರ ಕಾನೂನು ಸಮರ

ಬೆಂಗಳೂರು(ಪಿಟಿಐ): ಭಾರತ ಪುರುಷ ಹಾಗೂ ಮಹಿಳಾ ತಂಡಗಳು ತಮ್ಮ ಮಾಜಿ ಕೋಚ್ ಶೊಡ್ ಮರೈನಾ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಲು ನಿರ್ಧರಿಸಿವೆ.

ಮರೈನಾ ಅವರು ಬರೆದಿರುವ 'ವಿಲ್ ಪವರ್ – ದ ಇನ್‌ಸೈಡ್ ಸ್ಟೋರಿ ಆಫ್ ಇನ್‌ಕ್ರೆಡಿಬಲ್ ಟರ್ನ್‌ಆರೌಂಡ್ ಇನ್ ಇಂಡಿಯನ್ ವುಮೆನ್ಸ್ ಹಾಕಿ' ಕೃತಿಯಲ್ಲಿ ಅವರು ಹಾಕಿ ತಂಡದ ಮನಪ್ರೀತ್ ಸಿಂಗ್ ಅವರ ವಿರುದ್ಧ ಬರೆದಿರುವ ಆರೋಪದಿಂದಾಗಿ ಭಾರತ ತಂಡಗಳು ಆಕ್ರೋಶಗೊಂಡಿವೆ.

2018ರ ಕಾಮನ್‌ವೆಲ್ತ್ ಕೂಟದ ಪಂದ್ಯದಲ್ಲಿ ಭಾರತದ ಯುವ ಆಟಗಾರೊಬ್ಬನಿಗೆ ಕಳಪೆ ಆಟವಾಡುವಂತೆ ಮನಪ್ರೀತ್ ಸಿಂಗ್ ಸೂಚಿಸಿದ್ದರಂತೆ. ಇದರಿಂದಾಗಿ ತಮ್ಮ ಮಿತ್ರರಿಗೆ ತಂಡದಲ್ಲಿ ಅವಕಾಶ ನೀಡುವ ಇರಾದೆ ಅವರದ್ದಾಗಿತ್ತು ಎಂದು ಕೃತಿಯಲ್ಲಿ ಮರೈನಾ ಬರೆದಿದ್ದಾರೆ.

ಈ ಕುರಿತು ಜಂಟಿಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಆಟಗಾರರು, 'ಮರೈನಾ ಅವರದ್ದು ನಂಬಿಕೆದ್ರೋಹದ ನಡೆ. ಇದರಿಂದ ನಮಗೆಲ್ಲರಿಗೂ ಅತೀವ ಬೇಸರವಾಗಿದೆ. ನಮ್ಮ ಖಾಸಗಿ ಮಾಹಿತಿಗಳನ್ನು ಅವರು ಬಳಸಿಕೊಂಡಿದ್ದಾರೆ. ಅಲ್ಲದೇ ಸುಳ್ಳು ಮಾಹಿತಿಗಳನ್ನೂ ಪುಸ್ತಕದಲ್ಲಿ ಬರೆದಿದ್ದಾರೆ. ಭಾರತದ ಅಥ್ಲೀಟ್‌ಗಳು ಇವರ ಹುನ್ನಾರಗಳಿಗೆ ಗುರಿಯಾಗುತ್ತಿದ್ದಾರೆ. ಮರೈನಾ ಹಾಗೂ ಪುಸ್ತಕ ಪ್ರಕಾಶನ ಸಂಸ್ಥೆ ಹಾರ್ಪರ್ ಕಾಲಿನ್ಸ್ ವಿರುದ್ಧ ಕಾನೂನು ಸಮರಕ್ಕೆ ಸಿದ್ಧರಾಗಿದ್ದೇವೆ' ಎಂದು ತಿಳಿಸಿದ್ದಾರೆ.